ಸೋಮವಾರ, ಜೂನ್ 15, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 165 | ಪುಟ 14
prajavani.net prajavani
www.prajavani.net

ಪ್ರತಿಭಟನೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಸಿಜೆಪಿ ಕಾರ್ಯಕರ್ತರು ಹೈದರಾಬಾದ್‌ನಲ್ಲಿ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

18 ಸಾವಿರ ಮಂದಿಗೆ 'ಹೃದಯ ಜ್ಯೋತಿ' 9

8 ಕಂಪನಿಗಳಿಗೆ ಎಫ್‌ಎಸ್‌ಎಸ್‌ಎಐ ನೋಟಿಸ್

ನವದೆಹಲಿ (ಪಿಟಿಐ): 'ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006' ಇದರ ಆಶಯಕ್ಕೆ ವಿರುದ್ಧವಾಗಿ, ತಪ್ಪುದಾರಿಗೆ ಎಳೆಯುವಂತಹ ಬ್ರ್ಯಾಂಡ್ ಹೆಸರುಗಳನ್ನು ಹೊಂದಿದ ಆರೋಪದ ಅಡಿ ಎಂಟು ಸಂಸ್ಥೆಗಳಿಗೆ ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಭಾನುವಾರ ನೋಟಿಸ್ ಜಾರಿಗೊಳಿಸಿದೆ.

ಈ ಸಂಸ್ಥೆಗಳು ತಪ್ಪುದಾರಿಗೆ ಎಳೆಯುವ ಬಗೆಯಲ್ಲಿ ತಮ್ಮ ಉತ್ಪನ್ನಗಳ ಕುರಿತಾಗಿ ಹೇಳಿಕೆಗಳನ್ನು ನೀಡುತ್ತಿವೆ ಎಂದು ಎಫ್‌ಎಸ್‌ಎಸ್‌ಎಐ ಹೇಳಿದೆ.

ಇಮಾಮಿ ಹೆಲ್ತಿ ಆ್ಯಂಡ್ ಟೇಸ್ಟಿ, ಹೆಲ್ತ್ ಏಡ್, ಟ್ರೂವಿ, ದಿ ಹೆಲ್ತಿ ಫ್ಯಾಕ್ಟರಿ, ಹೆಲ್ತಿ ಮಾಸ್ಟರ್, ಹೆಲ್ತಿ ಚಾಯ್ಸ್, ಪ್ಲ್ಯಾನ್ ಬಿ ಮತ್ತು ನಿಯುಹರ್ಬ್ಸ್ ಕಂಪನಿಗೆ ಸಾಮಾಜಿಕ ಜಾಲತಾಣ ಖಾತೆಯ ಮೂಲಕವೇ ಎಫ್‌ಎಸ್‌ಎಸ್‌ಎಐ ನೋಟಿಸ್ ಜಾರಿಯಾಗಿದೆ.

ಕೋಲ್ಕತ್ತ ಮೂಲದ ಇಮಾಮಿ ಸಮೂಹದ ಅಡುಗೆ ಎಣ್ಣೆ ತಯಾರಿಕಾ ಕಂಪನಿಯಾದ ಇಮಾಮಿ ಹೆಲ್ತಿ ಆ್ಯಂಡ್ ಟೇಸ್ಟಿಯು ವ್ಯಾಪಾರ ಉದ್ದೇಶಕ್ಕಾಗಿ ಬಳಸುತ್ತಿರುವ ಹೆಸರು 'ಗ್ರಾಹಕರನ್ನು ತಪ್ಪುದಾರಿಗೆ ಎಳೆಯುವ ಸಾಧ್ಯತೆ ಇದೆ', ಈ ಹೆಸರು 'ನಿಯಮಗಳಿಗೆ ವಿರುದ್ಧವಾಗಿ ಇರುವಂತೆ ಕಾಣುತ್ತಿದೆ' ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

ಪ್ಲ್ಯಾನ್ ಬಿ ಕಂಪನಿಯು ತನ್ನ ಉತ್ಪನ್ನಗಳನ್ನು 'ಸಸ್ಯ ಆಧಾರಿತ ವೀಗನ್' ಎಂದು ಬಣ್ಣಿಸಿದೆ. ಇದು ಈ ಕಂಪನಿಯ ಉತ್ಪನ್ನಗಳು ವೀಗನ್ ಎಂಬ ಭಾವನೆಯನ್ನು ಗ್ರಾಹಕರಲ್ಲಿ ಮೂಡಿಸುತ್ತದೆ. ಆದರೆ ಇದಕ್ಕೆ ಎಫ್‌ಎಸ್‌ಎಸ್‌ಎಐ ಪರವಾನಗಿಯಲ್ಲಿ ಅಗತ್ಯ ಒಪ್ಪಿಗೆ ಪಡೆದಿಲ್ಲ ಎಂದು ಹೇಳಿದೆ.

ದಿ ಹೆಲ್ತಿ ಫ್ಯಾಕ್ಟರಿ ಕಂಪನಿಯು ಮಾರಾಟ ಮಾಡುವ 'ಜೀರೊ ಮೈದಾ ಹೋಲ್ ವೀಟ್ ಬ್ರೆಡ್' ಗ್ರಾಹಕರಿಗೆ ತಪ್ಪು ಮಾಹಿತಿ ನೀಡುವಂತೆ ಇದೆ ಎಂದು ಪ್ರಾಧಿಕಾರವು ಹೇಳಿದೆ. ಕಂಪನಿಯು ತಯಾರಿಸುವ ಶೂನ್ಯ ಮೈದಾ ಪಿಜ್ಜಾ ಬೇಸ್‌ನ ಬಗ್ಗೆಯೂ ಪ್ರಾಧಿಕಾರವು ಉಲ್ಲೇಖ ಮಾಡಿದೆ. ಕಂಪನಿಯ ಈ ಬ್ರೆಡ್‌ನಲ್ಲಿ ಗೋಧಿಯ ಗ್ಲುಟೆನ್ ಮತ್ತು ಚಕ್ಕಿಫ್ರೆಶ್ ಗೋಧಿಹಿಟ್ಟು ಇದೆ.

ನಿಯುಹರ್ಬ್ಸ್‌ನ 'ಟ್ರೂ ವಿಟಮಿನ್' ಉತ್ಪನ್ನಗಳು ವ್ಯಾಖ್ಯಾನ ಇಲ್ಲದ, ಮಾನ್ಯತೆ ಇಲ್ಲದ ಹೆಸರನ್ನು ಹೊತ್ತಿವೆ, ಹೀಗಾಗಿ ಇವು ಗ್ರಾಹಕರಿಗೆ ತಪ್ಪು ಮಾಹಿತಿ ನೀಡುವಂತಾಗಬಹುದು ಎಂದು ಪ್ರಾಧಿಕಾರ ಹೇಳಿದೆ.

ಟ್ರೂವಿ ಕಂಪನಿಯ ಹೆಲ್ತಿ ಮಿಕ್ಸ್ ವೆಜ್ಜಿ ಚಿಪ್ಸ್, ಹೆಲ್ತಿ ರಾಗಿ ಚಿಪ್ಸ್ ಮತ್ತು ಹೆಲ್ತಿ ಮೂಂಗ್ ದಾಲ್ ಚಿಪ್ಸ್‌ನಲ್ಲಿ ಇತರ ಹಲವು ಆಹಾರ ಪದಾರ್ಥಗಳು ಇವೆಯಾದರೂ ಈ ಉತ್ಪನ್ನಗಳು 'ಆರೋಗ್ಯಕರ' ಎಂದು ಹೇಳುವುದು ತಪ್ಪಾಗಬಹುದು ಎಂದು ಪ್ರಾಧಿಕಾರ ಹೇಳಿದೆ.

ಹೆಲ್ತಿ ಮಾಸ್ಟರ್ ಕಂಪನಿಯ ಘೋಷವಾಕ್ಯ 'ವಿಷನ್ ಟು ಸರ್ವ್ ಹೆಲ್ತಿ'ಯ ಬಗ್ಗೆ, ಹೆಲ್ತಿ ಚಾಯ್ಸ್ ಕಂಪನಿಯ 'ಹೆಲ್ತಿ ಫುಡ್ ಫಾರ್ ಹೆಲ್ತಿ ಲೈಫ್ ಪೋಹಾ' ಬಗ್ಗೆ ಮತ್ತು ಹೆಲ್ತ್ ಏಡ್ ಕಂಪನಿಯ ಬ್ರ್ಯಾಂಡ್ ಹೆಸರಿನ ಬಗ್ಗೆ ಪ್ರಾಧಿಕಾರವು ಆಕ್ಷೇಪ ದಾಖಲಿಸಿದೆ. ಇವು ಉತ್ಪನ್ನಗಳ ಬಗ್ಗೆ ತಪ್ಪು ಮಾಹಿತಿ ನೀಡುವಂತೆ ಇರಬಹುದು ಎಂದು ಅದು ಹೇಳಿದೆ.

ಇನ್ನು ಖಾಲಿ ಹುದ್ದೆ ಭರ್ತಿ ಪರ್ವ

ಕೆಪಿಎಸ್‌ಸಿ, ಕೆಇಎಯಿಂದ 'ವೇಳಾಪಟ್ಟಿ' ಪ್ರಕಾರ ನೇಮಕಾತಿ ಪ್ರಕ್ರಿಯೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ 'ವೇಳಾಪಟ್ಟಿ' ಸಿದ್ಧಪಡಿಸಿಕೊಂಡು ನೇಮಕಾತಿ ಪ್ರಕ್ರಿಯೆ ಆರಂಭಿಸಲು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಿರ್ಧರಿಸಿದೆ. ಆ ಮೂಲಕ, ಮುಂದಿನ ದಿನಗಳಲ್ಲಿ ಹುದ್ದೆಗಳ ಭರ್ತಿ ಪರ್ವವೇ ಆರಂಭವಾಗಲಿದೆ.

ಆರ್ಥಿಕ ಇಲಾಖೆ ಅನುಮೋದನೆ ನೀಡಿರುವ ಹುದ್ದೆಗಳ ನೇಮಕಾತಿಗೆ ವೇಳಾಪಟ್ಟಿಯಂತೆ ಅಧಿಸೂಚನೆ ಹೊರಡಿಸಿ, ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ಫಲಿತಾಂಶ ಪ್ರಕಟಿಸಬೇಕು ಎಂದು ಕೆಪಿಎಸ್‌ಸಿ ಮತ್ತು ಕೆಇಎಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚನೆ ನೀಡಿದ್ದಾರೆ. ಈ ಕುರಿತಂತೆ ಜೂನ್ 6ರಂದು ಸಭೆ ನಡೆದಿತ್ತು.

'ಪ್ರಜಾವಾಣಿ' ಜೊತೆ ಮಾತನಾಡಿದ ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ಜ್ಯೋತಿ, 'ಮುಖ್ಯ ಕಾರ್ಯದರ್ಶಿ ನೀಡಿರುವ ಸೂಚನೆಯಂತೆ ನೇಮಕಾತಿ ಪ್ರಕ್ರಿಯೆ ತ್ವರಿತಗೊಳಿಸಲು ಆಯೋಗದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ವಿವಿಧ ಇಲಾಖೆಗಳಿಂದ ಈಗಾಗಲೇ ಬಂದಿರುವ ಪ್ರಸ್ತಾವಗಳನ್ನು ಒಟ್ಟು ಮಾಡಿ ಅಧಿಸೂಚನೆ ಹೊರಡಿಸುವ, ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಮತ್ತು ಫಲಿತಾಂಶ ಪ್ರಕಟಿಸುವ ತಾತ್ಕಾಲಿಕ ದಿನ ನಿಗದಿಪಡಿಸಿ ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು' ಎಂದರು.

'ಈಗಾಗಲೇ 12 ಇಲಾಖೆಗಳಿಂದ ವಿವಿಧ ವೃಂದಗಳ 440 ಹುದ್ದೆಗಳ ಭರ್ತಿಗೆ ಪ್ರಸ್ತಾವಗಳು ಬಂದಿವೆ' ಎಂದು ಹೇಳಿದರು.

9

> ಗ್ರೂಪ್ 'ಸಿ' ಖಾಲಿ ಹುದ್ದೆಗಳ ಮಾಹಿತಿ ನೀಡುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಪತ್ರ ಬರೆದಿದ್ದು, ವೇಳಾಪಟ್ಟಿಯಂತೆ ನೇಮಕಾತಿಗೆ ಸಿದ್ಧರಾಗಿದ್ದೇವೆ
>
> **ಎಚ್. ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

'ಕೆಎಎಸ್ ಹುದ್ದೆ ಭರ್ತಿಗೆ ಶೀಘ್ರ ಪ್ರಸ್ತಾವ'

ಕೆ.ಜಿ. ಜಗದೀಶ

ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ ಖಾಲಿ ಹುದ್ದೆಗಳ ಭರ್ತಿಗೆ ಒಟ್ಟು 15 ಇಲಾಖೆಗಳಿಂದ ಮಾಹಿತಿ ಬರಬೇಕಿದೆ. ಏಳು ಇಲಾಖೆಗಳಿಂದ ಈಗಾಗಲೇ ಮಾಹಿತಿ ಬಂದಿದೆ. ಉಳಿದ ಎಂಟು ಇಲಾಖೆಗಳು ವಾರದೊಳಗೆ ಮಾಹಿತಿ ಕೊಡಬೇಕೆಂದು ಆ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯ ಕಾರ್ಯದರ್ಶಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಖಾಲಿ ಹುದ್ದೆಗಳ ಪಟ್ಟಿಗೆ ವಾರದೊಳಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಕೆಪಿಎಸ್‌ಸಿಗೆ ಕಳುಹಿಸಲಾಗುವುದು, ಮುಂದಿನ 15 ದಿನಗಳ ಒಳಗೆ ಕೆಪಿಎಸ್‌ಸಿ ನೇಮಕಾತಿ ಅಧಿಸೂಚನೆ ಹೊರಡಿಸಲಿದೆ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿ ಕೆ.ಜಿ. ಜಗದೀಶ ತಿಳಿಸಿದರು.

'ಆರ್ಥಿಕ ಇಲಾಖೆ ಅನುಮೋದನೆ ನೀಡಿದ ಬಳಿಕವಷ್ಟೆ ಎಷ್ಟು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ನಡೆಸಲಾಗುವುದು ಎಂದು ತಿಳಿಸಲು ಸಾಧ್ಯ. ಆದರೆ, ದೊಡ್ಡ ಸಂಖ್ಯೆಯಲ್ಲಿ ನೇಮಕಾತಿ ನಡೆಸುವುದಂತೂ ಖಚಿತ. ಪ್ರಸ್ತಾವವನ್ನು ಕೆಪಿಎಸ್‌ಸಿಗೆ ಕಳುಹಿಸಿದ ಬೆನ್ನಲ್ಲೆ, ಮುಂದಿನ ಐದು ವರ್ಷಗಳಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿಯಾಗುವ ಹುದ್ದೆಗಳ ಮಾಹಿತಿ ಪಡೆದು ನೇಮಕಾತಿಗೆ ವೇಳಾಪಟ್ಟಿ ಸಿದ್ಧಪಡಿಸಲು ಉದ್ದೇಶಿಸಲಾಗಿದೆ. ಐದು ವರ್ಷಗಳ ಮಾಹಿತಿಯನ್ನು ಯಾವ ರೀತಿ ನೀಡಬೇಕೆಂಬ ಬಗ್ಗೆ ಎಲ್ಲ ಇಲಾಖೆಗಳಿಗೆ ಪತ್ರ ಬರೆಯಲಾಗಿದೆ' ಎಂದೂ ಅವರು ತಿಳಿಸಿದರು.

'2–3 ದಿನಗಳಲ್ಲಿ ಕೆಎಎಸ್ ಫಲಿತಾಂಶ'

'ಕೆಎಎಸ್ ಸೇರಿದಂತೆ ಒಟ್ಟು 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, 2–3 ದಿನಗಳಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿ ಸಿದ್ಧವಾಗಲಿದೆ. ಆದರೆ, ಶೇ 56 ಮೀಸಲಾತಿ ಕುರಿತ ಪ್ರಕರಣ ಹೈಕೋರ್ಟ್‌ನಲ್ಲಿ ಸೋಮವಾರ (ಜೂನ್ 15) ವಿಚಾರಣೆಗೆ ಬರಲಿದೆ. ಆಯೋಗದ ಪರ ವಕೀಲರು ಕೋರ್ಟ್‌ಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುವ ಬಗ್ಗೆ ಮಾಹಿತಿ ನೀಡಲಿದ್ದಾರೆ. ಫಲಿತಾಂಶ ಪ್ರಕಟಿಸಲು ಕೋರ್ಟ್ ಅನುಮತಿ ನೀಡಿದರೆ ವಾರದೊಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತೇವೆ. ಅಲ್ಲದೆ, ಮುಂದಿನ ಒಂದು ತಿಂಗಳ ಒಳಗೆ ಇನ್ನೂ ಕೆಲವು ನೇಮಕಾತಿಗಳ ಫಲಿತಾಂಶವನ್ನೂ ಪ್ರಕಟಿಸುತ್ತೇವೆ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ಜ್ಯೋತಿ ತಿಳಿಸಿದರು.

> ತ್ವರಿತಗತಿಯಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಸರ್ಕಾರ ಹೇಳಿದೆ. ಅದಕ್ಕೆ ನಾವು ಕೂಡಾ ಎಲ್ಲ ರೀತಿಯ ತಯಾರಿ ಮಾಡಿಕೊಂಡಿದ್ದೇವೆ
>
> **ಕೆ. ಜ್ಯೋತಿ,** ಕಾರ್ಯದರ್ಶಿ, ಕೆಪಿಎಸ್‌ಸಿ

ಭಾರತಕ್ಕೆ ಮಣಿದ ಪಾಕ್

ಬರ್ಮಿಂಗ್‌ಹ್ಯಾಮ್‌ನಲ್ಲಿ ಭಾನುವಾರ ನಡೆದ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನ ಎದುರು ಜಯಿಸಿತು.



ಸ್ಕೋರ್

ಭಾರತ
6ಕ್ಕೆ170 (20 ಓವರ್)

ಪಾಕಿಸ್ತಾನ
106 (17 ಓವರ್)

ಫಲಿತಾಂಶ
ಭಾರತಕ್ಕೆ 64 ರನ್ ಜಯ (2 ಪಾಯಿಂಟ್)

ಪಂದ್ಯದ ಆಟಗಾರ್ತಿ
ದೀಪ್ತಿ ಶರ್ಮಾ

ಸ್ಮೃತಿ ಮಂದಾನ

ರನ್	68
ಎಸೆತ	44
ಬೌಂಡರಿ	9
ಸಿಕ್ಸರ್	2

ದೀಪ್ತಿ ಶರ್ಮಾ

ಓವರ್	4
ರನ್	10
ವಿಕೆಟ್	5

ವಿವರ 12

ವಿಳಂಬಕ್ಕೆ ಇಸ್ರೇಲ್ ಕಾರಣ, ನೆತನ್ಯಾಹು ವಿರುದ್ಧ ಟ್ರಂಪ್ ಕಿಡಿ

ಶಾಂತಿ ಒಪ್ಪಂದಕ್ಕೆ ಸಹಿ ಸನ್ನಿಹಿತ

ಎಎಫ್‌ಪಿ/ಪಿಟಿಐ

ವಾಷಿಂಗ್ಟನ್ (ಎಎಫ್‌ಪಿ/ಪಿಟಿಐ): 'ಲೆಬನಾನ್ ದಕ್ಷಿಣಕ್ಕಿರುವ ಪ್ರದೇಶಗಳ ಮೇಲೆ ಇಸ್ರೇಲ್ ಪಡೆಗಳು ಭಾನುವಾರ ನಡೆಸಿದ ದಾಳಿಯಿಂದ, ಇರಾನ್ ಜತೆಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಪ್ರಕ್ರಿಯೆ ವಿಳಂಬವಾಗಿದೆ. ಆದರೆ ಅದು ಕೆಲವೇ ಗಂಟೆಗಳಲ್ಲಿ ನಡೆಯಲಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಹೇಳಿದ್ದಾರೆ.

ಇಸ್ರೇಲ್ ಹೊಸದಾಗಿ ದಾಳಿ ಮಾಡಿದ್ದರಿಂದ ಸಹಿ ಮಾಡುವುದು ಕೆಲ ಗಂಟೆಗಳ ಕಾಲ ವಿಳಂಬವಾಗಿದೆ. ಇಷ್ಟರ-ಲ್ಲಾಗಲೇ ಈ ಪ್ರಕ್ರಿಯೆ ಮುಗಿಯಬೇಕಿತ್ತು ಎಂದು ಟ್ರಂಪ್ 'ಆಕ್ಸಿಯಾಸ್' ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

'ಲೆಬನಾನ್ ಸೇರಿದಂತೆ ಪಶ್ಚಿಮ ಏಷ್ಯಾದಲ್ಲಿ ಶಾಂತಿ ತರುವ ಒಪ್ಪಂದಕ್ಕೆ ನಾವು ತುಂಬಾ ಸನಿಹದಲ್ಲಿದ್ದೇವೆ. ಎಲ್ಲ ಕಡೆಯವರೂ ಸಂಯಮ ಕಾಯ್ದುಕೊಳ್ಳಬೇಕು' ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

ಬೆಂಜಮಿನ್ ವಿರುದ್ಧ ಕಿಡಿ: 'ಇಸ್ರೇಲ್ ನಡೆಸಿದ ಹೊಸ ದಾಳಿಯಿಂದ ಆಘಾತಕ್ಕೊಳಗಾಗಿದ್ದೇನೆ. ಅದು ನನ್ನನ್ನು ಬೆಚ್ಚಿಬೀಳಿಸಿದೆ. ಇದಕ್ಕಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿರುದ್ಧ ಕೋಪಗೊಂಡಿದ್ದೇನೆ' ಎಂದು ಟ್ರಂಪ್ ಆಕ್ರೋಶ ಹೊರಹಾಕಿದ್ದಾರೆ.

'ನೀವು ಏನು ಮಾಡುತ್ತಿದ್ದೀರಿ? ಇಂತಹ ದಾಳಿ ಏಕೆ ಮಾಡಿದಿರಿ? ನಿಮ್ಮ ಈ ನಡೆಯಿಂದ ನನಗೆ ಕೋಪ ಬಂದಿದೆ. ಇದು ಸರಿಯಲ್ಲ' ಎಂದು ನೆತನ್ಯಾಹು ಅವರಿಗೆ ಕರೆ ಮಾಡಿ ಬೇಸರ ವ್ಯಕ್ತಪಡಿಸಿದ್ದಾಗಿ ಟ್ರಂಪ್ ಹೇಳಿದ್ದಾರೆ' ಎಂದು 'ಆಕ್ಸಿಯಾಸ್' ವರದಿ ಮಾಡಿದೆ. ಈ ವೇಳೆ ಟ್ರಂಪ್ ಅವರು ಅವಾಚ್ಯ ಪದಗಳನ್ನೂ ಬಳಸಿದ್ದಾರೆ ಎಂದು ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.

10

ಅಮೆರಿಕದ ಬದ್ಧತೆ ಪ್ರಶ್ನಿಸಿದ ಇರಾನ್

'ಅಮೆರಿಕದ ಮಿತ್ರ ರಾಷ್ಟ್ರ ಇಸ್ರೇಲ್, ಬೈರೂತ್ ಮೇಲೆ ದಾಳಿ ನಡೆಸಿದೆ. ಹೀಗಾಗಿ ಅಮೆರಿಕದೊಂದಿಗೆ ಶಾಂತಿ ಒಪ್ಪಂದ ಕುರಿತ ಮಾತುಕತೆ ನಡೆಸುವುದರಲ್ಲಿ ಯಾವುದೇ ಅರ್ಥ ಇಲ್ಲ' ಎಂದು ಇರಾನ್‌ನ ಮುಖ್ಯ ಮಧ್ಯಸ್ಥಿಕೆದಾರ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ತಾನು ಕೊಟ್ಟ ಭರವಸೆಗಳನ್ನು ಈಡೇರಿಸಲು ಅಮೆರಿಕಕ್ಕೆ ಇಚ್ಛಾಶಕ್ತಿ ಅಥವಾ ಸಾಮರ್ಥ್ಯ ಇಲ್ಲ ಎಂಬುದನ್ನು ಇಸ್ರೇಲ್ ಪಡೆಗಳು ನಡೆಸಿರುವ ಈ ದಾಳಿ ತೋರಿಸಿದೆ' ಎಂದು ಟೀಕಿಸಿದ್ದಾರೆ.

'ಶಾಂತಿ ಒಪ್ಪಂದಕ್ಕೆ ಭಾನುವಾರ ಸಹಿ ಹಾಕಲಾಗುತ್ತದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದರು.

ಎಸ್ಕಾಂ: ಉದ್ಯೋಗ ಕಳೆದುಕೊಳ್ಳುವ ಭೀತಿ

ಬೆಂಗಳೂರು: ರಾಜ್ಯದಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗೀಕರಣಗೊಳಿಸಿದರೆ ಎಸ್ಕಾಂಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 50 ಸಾವಿರಕ್ಕೂ ಅಧಿಕ ಸಿಬ್ಬಂದಿಯ ಸೇವಾ ಭದ್ರತೆ, ಪಿಂಚಣಿಗೆ ತೊಂದರೆಯಾಗಲಿದೆ. ಅಲ್ಲದೆ ಖಾಲಿ ಇರುವ ಹುದ್ದೆಗಳೂ ರದ್ದಾಗಲಿದ್ದು, ಯುವಕರಿಗೆ ಸರ್ಕಾರಿ ಉದ್ಯೋಗಾವಕಾಶ ಇಲ್ಲದಂತಾಗಲಿದೆ ಎಂಬ ಆತಂಕ ವ್ಯಕ್ತವಾಗಿದೆ.

ವಿವರ 8

ಚಿನಕುರುಳಿ ಪ್ರಕಾಶ್ ಶೆಟ್ಟಿ

ಬಿಡದಿ ಟೌನ್‌ಶಿಪ್ ಜಟಾಪಟಿ

ಭೂಸ್ವಾಧೀನ ಕೈಬಿಡಲು ಸೂಚಿಸಿ: ವಿಜಯೇಂದ್ರ

ಬೆಂಗಳೂರು: 'ಬಿಡದಿ ಟೌನ್‌ಶಿಪ್ ಯೋಜನೆ ವಿಚಾರದಲ್ಲಿ ತಾವು ತಕ್ಷಣವೇ ಮಧ್ಯಪ್ರವೇಶಿಸಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪತ್ರ ಬರೆದಿದ್ದಾರೆ.

ಫಲವತ್ತಾದ ಕೃಷಿ ಭೂಮಿಯಲ್ಲಿ ಇಂತಹ ಯೋಜನೆ ಅನುಷ್ಠಾನಕ್ಕೆ ತರುವುದರ ಔಚಿತ್ಯ ಕುರಿತು ಪತ್ರದಲ್ಲಿ ಹಲವು ಪ್ರಶ್ನೆಗಳನ್ನು ಇಟ್ಟು, ಉತ್ತರಿಸುವಂತೆ ರಾಹುಲ್ ಗಾಂಧಿ ಅವರನ್ನು ಒತ್ತಾಯಿಸಿದ್ದಾರೆ.

'ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರವು ರೈತರ ಅಳಲನ್ನು ಕೇಳಿಸಿಕೊಳ್ಳುತ್ತಿಲ್ಲ. ಈ ಕಾರಣದಿಂದಾಗಿ, ರಾಜ್ಯದ ವಿರೋಧ ಪಕ್ಷವಾದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನಾಗಿ ನಾನು ನಿಮಗೆ ಈ ಪತ್ರ ಬರೆಯುತ್ತಿದ್ದೇನೆ' ಎಂದು ವಿಜಯೇಂದ್ರ ಅವರು ತಿಳಿಸಿದ್ದಾರೆ.

8

ಡಿಕೆಶಿ ಆಸ್ತಿ ₹1,400 ಕೋಟಿ ಹೇಗಾಯ್ತು?: ಎಚ್‌ಡಿಕೆ

ಮಂಡ್ಯ: 'ಡಿ.ಕೆ.ಶಿವಕುಮಾರ್ ಅವರ ಬಳಿ 1999ರಲ್ಲಿ ಮೂರು ಎಕರೆ ಪಿತ್ರಾರ್ಜಿತ ಆಸ್ತಿ ಇತ್ತು. ಅದು 2018ರ ವೇಳೆಗೆ ₹1,400 ಕೋಟಿ ಮೌಲ್ಯದ ಆಸ್ತಿ ಹೇಗಾಯಿತು?' ಎಂದು ಕೇಳಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, 'ಆ ಬಗ್ಗೆ ಜನರಿಗೂ ತರಬೇತಿ ಕೊಡಲಿ. ಸಣ್ಣ ಹಿಡುವಳಿದಾರರು ಅವರಂತೆಯೇ ಶ್ರೀಮಂತರಾಗಲಿ' ಎಂದು ಹೇಳಿದರು.

ಇಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಿಯಲ್ ಎಸ್ಟೇಟ್ ದೊರೆ. ಬಿಡದಿ ಟೌನ್‌ಶಿಪ್ ಸರ್ಕಾರದ ರಿಯಲ್ ಎಸ್ಟೇಟ್ ಯೋಜನೆಯಾಗಿದೆ' ಎಂದು ಆರೋಪಿಸಿದರು.

'ರಾಜ್ಯ ಸರ್ಕಾರವೇ ನೇರವಾಗಿ ಜನರ ಭೂಮಿ ಲೂಟಿಗೆ ಹೊರಟಿದೆ. ಮುಖ್ಯಮಂತ್ರಿಯೇ ರಿಯಲ್ ಎಸ್ಟೇಟ್ ಮಾಫಿಯಾ ದೊರೆಗಳ ಜೊತೆ ಕೈಜೋಡಿಸಿ ಈ ದಂಧೆ ನಡೆಸುತ್ತಿದ್ದಾರೆ. ಬಹುಪಾಲು ರೈತರು ಭೂಮಿ ಕೊಡಲು ತಯಾರಿಲ್ಲ. ಪೊಲೀಸರು ಮತ್ತು ರೌಡಿಗಳನ್ನು ಬಿಟ್ಟು ರೈತರನ್ನು ಬೆದರಿಸುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರವೇ ರಿಯಲ್ ಎಸ್ಟೇಟ್ ಏಜೆಂಟ್ ಆಗಿ ಕೆಲಸ ಮಾಡುತ್ತಿದೆ' ಎಂದು ದೂರಿದರು

8

ಕುಮಾರಸ್ವಾಮಿ ಪ್ರಮಾಣ ಮಾಡಲಿ: ಬಾಲಕೃಷ್ಣ

ಬೆಂಗಳೂರು: 'ಬಿಡದಿ ಟೌನ್‌ಶಿಪ್ ಯೋಜನೆಯನ್ನು ನಾನು ರೈತರ ಪರವಾಗಿ ಕೈಬಿಡಲು ಒಪ್ಪಿದ್ದೆ ಎಂದು ಕುಮಾರಸ್ವಾಮಿಯವರು ಚಾಮುಂಡೇಶ್ವರಿ ಮೇಲೆ ಪ್ರಮಾಣ ಮಾಡಲಿ' ಎಂದು ಕಾಂಗ್ರೆಸ್ ಶಾಸಕ ಎಚ್.ಸಿ.ಬಾಲಕೃಷ್ಣ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿಡದಿ ಟೌನ್‌ಶಿಪ್ ಯೋಜನೆಯನ್ನು ಕೈಬಿಡಲು 2018ರಲ್ಲಿ ಅವರು ಒಪ್ಪಿದ್ದ ಬಗ್ಗೆ ಪ್ರಮಾಣ ಮಾಡಲಿ. ನಾವು ಅಜ್ಜಯ್ಯ ಅವರ ಮೇಲೆ ಪ್ರಮಾಣ ಮಾಡುತ್ತೇವೆ' ಎಂದು ಹೇಳಿದರು.

'ಕೇಂದ್ರ ಸಚಿವರಾದ ಮೇಲೆ ಕುಮಾರಸ್ವಾಮಿ ಅವರು ಈ ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ಸಮಸ್ಯೆ ಹುಟ್ಟು ಹಾಕಿದವರೇ ಹೋರಾಟ ಮಾಡುತ್ತಿದ್ದಾರೆ. ಈ ರೀತಿ ಗೋಸುಂಬೆ ರಾಜಕಾರಣ ಮಾಡುವುದು ಬಿಟ್ಟು, ಒಂದು ನಿಲುವು ತೆಗೆದುಕೊಳ್ಳಬೇಕು' ಎಂದು ಬಾಲಕೃಷ್ಣ ಅವರು ಆಗ್ರಹಿಸಿದರು.

8

ವಿಶೇಷ ಪ್ರಕರಣದ ಅಡಿ ವರ್ಗಾವಣೆ ಕೋರಿ ತರಹೇವಾರಿ ಗಂಭೀರ ಆರೋಗ್ಯ ಸಮಸ್ಯೆಗಳ ಪ್ರಮಾಣಪತ್ರ ಸಲ್ಲಿಕೆ

ಅಧ್ಯಾಪಕರಿಗೆ ವಾಸಿಯಾಗದ ಕಾಯಿಲೆ ಸಂಕಷ್ಟ

• ಚಂದ್ರಹಾಸ ಹಿರೇಮಳಲಿ

440	5,990	15%	ಜೂನ್ 23-29
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು	ಪ್ರಸ್ತುತ ಇರುವ ಕಾಯಂ ಅಧ್ಯಾಪಕರು	ವರ್ಗಾವಣೆಯಾಗುವ ಅಧ್ಯಾಪಕರ ಪ್ರಮಾಣ	ವರ್ಗಾವಣೆ ಕೌನ್ಸೆಲಿಂಗ್ ದಿನಾಂಕ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬಹುತೇಕ ಅಧ್ಯಾಪಕರ ಕುಟುಂಬಗಳ ಸದಸ್ಯರು ವಾಸಿಯಾಗದ ಕಾಯಿಲೆಗಳಿಂದ ಬಳಲುತ್ತಿದ್ದು, ಬೆಂಗಳೂರು ಸೇರಿದಂತೆ ಮಹಾನಗರಗಳ ದೊಡ್ಡ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸುವ ತುರ್ತುಸ್ಥಿತಿ ಎದುರಿಸುತ್ತಿದ್ದಾರೆ.

2026–27ನೇ ಸಾಲಿನಲ್ಲಿ ವಿಶೇಷ ಪ್ರಕರಣದ ಅಡಿ ವರ್ಗಾವಣೆ ಕೋರಿ ಸಲ್ಲಿಕೆಯಾಗಿರುವ ನೂರಾರು ಅರ್ಜಿಗಳಲ್ಲಿ ಇಂತಹ ತರಹೇವಾರಿ ಆರೋಗ್ಯ ಸಮಸ್ಯೆಗಳ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಅಧ್ಯಾಪಕರು ಲಗತ್ತಿಸಿದ್ದು, ಕುಟುಂಬದ ಸದಸ್ಯರ ಆರೈಕೆಗಾಗಿ ಮಹಾ ನಗರಗಳಲ್ಲಿನ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಮುಂದಾಗಿದ್ದಾರೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರ ವರ್ಗಾವಣೆಗೆ 2021ರಲ್ಲಿ ವಿಶೇಷ ನಿಯಮ ರೂಪಿಸಲಾಗಿತ್ತು. ಅಂಗವಿಕಲರು, ತೀವ್ರತರ, ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವವರು, ವಿಧವೆಯರು, ಒಂಟಿ ಪೋಷಕರು ಹಾಗೂ ಪತಿ–ಪತ್ನಿ ಪ್ರಕರಣಗಳಿಗೆ ಶೇ 6ರಷ್ಟು ಹಾಗೂ ಶೇ 9ರಷ್ಟು ಕಡ್ಡಾಯ ವರ್ಗಾವಣೆ ಮಾಡಲು ನಿಯಮದಲ್ಲಿ ಅವಕಾಶ ಕಲ್ಪಿಸಲಾಗಿತ್ತು.

ಹೋಬಳಿ (ಇ–ಗ್ರೇಡ್), ತಾಲ್ಲೂಕು ಕೇಂದ್ರ (ಡಿ–ಗ್ರೇಡ್) ನಗರ ಸಭೆಗಳ ವ್ಯಾಪ್ತಿಯ (ಸಿ–ಗ್ರೇಡ್) ಕಾಲೇಜುಗಳಿಂದ ಮಹಾನಗರ ಪಾಲಿಕೆ ಅಥವಾ ಜಿಲ್ಲಾ ಕೇಂದ್ರಗಳ (ಬಿ–ಗ್ರೇಡ್) ಹಾಗೂ ಬೆಂಗಳೂರಿನ (ಎ–ಗ್ರೇಡ್) ಕಾಲೇಜುಗಳಿಗೆ ತೆರಳಲು ಬಯಸಿದವರು ಹೆಚ್ಚಿನ ಸಂಖ್ಯೆಯಲ್ಲಿ ಆರೋಗ್ಯ ಸಮಸ್ಯೆ, ಅಂಗವಿಕಲರ ಪ್ರಮಾಣಪತ್ರ ಹಾಗೂ ಪತಿ–ಪತ್ನಿ ಪ್ರಕರಣದ ದಾಖಲೆಗಳನ್ನು ಸಲ್ಲಿಸಿ, ವಿಶೇಷ ಪ್ರಕರಣಗಳ ಅಡಿ ವರ್ಗಾವಣೆ ಕೋರಿದ್ದಾರೆ. ಅಲ್ಲದೇ, ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬಹುತೇಕ ಅಧ್ಯಾಪಕರು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಇತರೆ ಕಾಲೇಜುಗಳಿಗೆ ಸ್ಥಳಾಂತರಗೊಳ್ಳುವ ಉದ್ದೇಶದಿಂದ ಕಡ್ಡಾಯ ವರ್ಗಾವಣೆ ವಿನಾಯಿತಿ ಪಡೆಯಲು ವಿಶೇಷ ಪ್ರಕರಣಗಳ ಅಡಿ ಅರ್ಜಿ ಸಲ್ಲಿಸಿದ್ದಾರೆ.

9

ಬೋಧನೆಯನ್ನೇ ಮರೆತ 'ವಿಶೇಷ ಅಧಿಕಾರಿಗಳು'

ಪ್ರಾಧ್ಯಾಪಕರ ಬಡ್ತಿ ಕಡತ, ಅನುದಾನಿತ ಕಾಲೇಜುಗಳ ದಾಖಲೆಗಳು, ವರ್ಗಾವಣೆ ಅರ್ಜಿಗಳ ಪರಿಶೀಲನೆ ಮತ್ತಿತರ ಕಾರ್ಯಗಳಿಗಾಗಿ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ವಿಶೇಷ ಅಧಿಕಾರಿಗಳ ಸ್ಥಾನ ಸೃಜಿಸಲಾಗಿದೆ.

'ವಿಶೇಷ ಅಧಿಕಾರಿಗಳ ಸ್ಥಾನಕ್ಕೆ ವಿವಿಧ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡಲಾಗಿದೆ. ಹಲವು ವರ್ಷಗಳಿಂದ ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಚೇರಿಯಲ್ಲೇ ಕೆಲಸ ಮಾಡುತ್ತಿರುವ ಕೆಲವರು ಬೋಧನಾ ಕೆಲಸಗಳನ್ನೇ ಮರೆತಿದ್ದಾರೆ. ಎಷ್ಟೋ ಬಾರಿ ಅವರನ್ನು ಎತ್ತಂಗಡಿ ಮಾಡಿದ್ದರೂ ರಾಜಕೀಯ ಪ್ರಭಾವ ಬಳಸಿ ಮತ್ತೆ ಅದೇ ಸ್ಥಾನಕ್ಕೆ ಬಂದಿದ್ದಾರೆ. ನಕಲಿ ಪ್ರಮಾಣ ಪತ್ರ ಸಲ್ಲಿಸಿ, ವರ್ಗಾವಣೆ ಬಯಸುವವರ ಜತೆಗೂ ವ್ಯವಹಾರದ ನಂಟು ಇಟ್ಟುಕೊಂಡಿದ್ದಾರೆ. ಅವರನ್ನು ಮೊದಲು ಬದಲಾಯಿಸಬೇಕು' ಎಂದು ಕೆಲ ಅಧ್ಯಾಪಕರು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'ಮಹಾರಾಣಿ' ಮುಕ್ತ ಪ್ರವೇಶಕ್ಕೆ ಪತ್ರ

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾ-ಲಯ ಸ್ಥಾಪನೆಯಾಗಿ ವರ್ಷಗಳೇ ಕಳೆದಿದ್ದರೂ ಅಲ್ಲಿನ ಅಧ್ಯಾಪ-ಕರನ್ನು ಇದುವರೆಗೂ ಕಾಯಂ ವಿಲೀನಗೊಳಿಸಿಲ್ಲ. ಈಗಲೂ ಅವರು ಬಡ್ತಿ, ವೇತನಕ್ಕಾಗಿ ಕಾಲೇಜು ಶಿಕ್ಷಣ ಇಲಾಖೆಯನ್ನೇ ಅವಲಂಬಿಸಿದ್ದಾರೆ.

9

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

‘ಕೃಷಿ ತಂತ್ರಜ್ಞಾನ: ಹೊಸ ಕೋರ್ಸ್’

ಬೆಂಗಳೂರು: ‘ಕೃಷಿ ತಂತ್ರಜ್ಞಾನದ ಹೊಸ ಆವಿಷ್ಕಾರಗಳನ್ನು ಪರಿಚಯಿಸಲು ವಿಶ್ವವಿದ್ಯಾಲಯವು ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸಿದೆ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ವಿ.ಸುರೇಶ ಹೇಳಿದರು.

ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯವು ಇತ್ತೀಚೆಗೆ ಆಯೋಜಿಸಿದ್ದ ‘ಕೃಷಿಯಲ್ಲಿ ದೂರ ಶಿಕ್ಷಣ’ ಕುರಿತ ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

PUBLIC NOTICE

Notice is hereby given to the General Public that my client **M/s. Prasiddhi Shriyam Ventures,** represented by its partner Sri. Balabathuri Srinivas a partnership firm, having its office at No. 79, 2nd Floor, Bhagyashri Complex,80ft Road, Opp-Ramaiah Hospital Gate, Sanjaynagar, Devasandra, RMV 2nd Stage,Bengaluru, Karnataka-560094 (hereinafter referred to as the "Proposed Purchaser"),is intending to purchase all those pieces and parcels of immovable properties bearing Property No. **4 (EPID No. 3671275606)** measuring **78 × 115 feet,** Place: Bengaluru Date: 12-06-2026 measuring **40 × 30 feet, Property No. 28 (EPID No. 7860003967)** measuring **40 × 30 feet** and **Property No. 26 (PID No. 1659966337)** measuring 40 × 30 feet, all being adjoining and contiguous to each other and together constituting one composite block of property situated at Ward No. 77, 1st Cross Road, Pipeline, Malleswaram, Bengaluru – 560 020, from its absolute owners **Managing Committee of Mahila Vidyalaya,** represented by the managing committee who claim to be the owners in possession and enjoyment of the Schedule Property.

Therefore, any person/s, banks, financial institutions or anybody having any right, title, interest, share, claim, lien, charge, mortgage, tenancy, easement, inheritance, acquisition proceedings, attachment, litigation or objection of whatsoever nature over the Schedule Property are hereby called upon to notify the same in writing to the undersigned together with supporting documentary proof within 7 (Seven) days from the date of publication of this notice, failing which it shall be presumed that no person has any claim whatsoever over the Schedule Property and the proposed transaction shall be proceeded with without any further reference.

SCHEDULE PROPERTY

All those pieces and parcels of immovable properties bearing Property No. **4 (EPID No. 3671275606)** measuring **78 × 115 feet, Property No. 27 (EPID No. 2110757682) measuring 40 × 30 feet, Property No. 28 (EPID No. 7860003967)** measuring **40 × 30 feet** and **Property No. 26 (PID No. 1659966337)** measuring **40 × 30 feet,** all being adjoining and contiguous to each other and together constituting one composite block of property totally measuring 12627 square feet situated at Ward No. 77, 1st Cross Road, Pipeline, Malleswaram, Bengaluru – 560 020, and for the purpose of the present transaction, the same are collectively treated as one amalgamated property, bounded on the:

East by : Road;
West by : Conservancy Galli & Private Property;
North by : Road;
South by : Private Property.

Manjunath J S,
ANSHI LEGAL
Advocates & Solicitors,
No. #216, Chethan Illam, 7th Cross,
7th Main, Defence Layout, Sahakaranagara,
Bangalore– 560 092:
Ph:9980913373/9880345321
Place: Bengaluru Date: 12-06-2026

ಪ್ರಧಾನ್ ರಾಜೀನಾಮೆಗೆ ಒತ್ತಾಯ

ಮಳೆಯ ನಡುವೆ ಮೂರೂವರೆ ತಾಸು ಕಾಕ್ರೋಚ್ ಜನತಾ ಪಾರ್ಟಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ
- ಟೀಕೆಗಳಿಗೆ ಹೆದರುವುದಿಲ್ಲ
- ಪ್ರಧಾನಿ ಮೌನ–ಟೀಕೆ

ಬೆಂಗಳೂರು: ‘ನೀಟ್’ ಪ್ರಶ್ನೆಪತ್ರಿಕೆ ಸೋರಿಕೆಯ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಭಾನುವಾರ ಪ್ರತಿಭಟನೆ ನಡೆಸಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ವಿದ್ಯಾರ್ಥಿಗಳು, ಯುವಕರು ಭಾಗ ವಹಿಸಿ, ಕೇಂದ್ರ ಸರ್ಕಾರ ಮತ್ತು ಶಿಕ್ಷಣ ಸಚಿವರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಮಳೆಯನ್ನು ಲೆಕ್ಕಿಸದೇ ಮೂರೂವರೆ ತಾಸು ನಡೆದ ಪ್ರತಿಭಟನೆ ವೇಳೆ ಕೇಂದ್ರದ ವಿರುದ್ಧ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಕೆಲವರು ಕೊಡೆ ಹಿಡಿದು ನಿಂತು ಭಾಷಣ ಕೇಳಿದರೆ, ಮತ್ತೆ ಕೆಲವರು ಮರದ ಕೆಳಗೆ ಆಶ್ರಯ ಪಡೆದರು. ಕ್ರಾಂತಿ ಗೀತೆಗಳನ್ನು ಹಾಡುವ ಮೂಲಕ ಪ್ರತಿಭಟನಕಾರರನ್ನು ಹುರಿದುಂಬಿಸಲಾಯಿತು.

‘ಕೇಂದ್ರ ಶಿಕ್ಷಣ ಇಲಾಖೆಯ ಬೇಜವಾಬ್ದಾರಿಯಿಂದಾಗಿ ದೇಶದಲ್ಲಿ ಒಂದು ಕೋಟಿ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಏಳೆಂಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಹೊಣೆಗಾರಿಕೆಯನ್ನು ಧರ್ಮೇಂದ್ರ ಪ್ರಧಾನ್ ವಹಿಸಿಕೊಳ್ಳಬೇಕು. ಆಡಳಿತ ನಡೆಸುವವರ ಕುಮ್ಮಕ್ಕಿನಿಂದಾಗಿಯೇ ಪ್ರಶ್ನೆಪತ್ರಿಕೆ ಸೋರಿಕೆ, ಫಲಿತಾಂಶದಲ್ಲಿ ಬದಲಾವಣೆಗಳು ನಡೆಯುತ್ತವೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಮಾತನಾಡಿ, ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕೋಮು ಆಧಾರದ ಮೇಲೆ ರಾಜಕೀಯ ಮಾಡುತ್ತಿದೆ. ಪ್ರತಿ ಚುನಾವಣೆಯಲ್ಲೂ ಹಿಂದೂ–ಮುಸ್ಲಿಂ ಹೆಸರಿನಲ್ಲಿ ನಮ್ಮನ್ನು ವಿಭಜಿಸಲು ಪ್ರಯತ್ನಿಸಲಾಗುತ್ತದೆ. ಮೊದಲು ನಮ್ಮನ್ನು ಭಾರತೀಯರು ಎಂದು ಭಾವಿಸಬೇಕು. ನಾಲ್ಕು ದಶಕಗಳಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚು ಎದುರಿಸುತ್ತಿದ್ದೇವೆ. ಕೋಮು ರಾಜಕೀಯ ಬಹಿಷ್ಕರಿಸಬೇಕು’ ಎಂದು ಕರೆ ನೀಡಿದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು ಪ್ರಜಾವಾಣಿ ಚಿತ್ರ

‘ವೈದ್ಯರಾಗಿ ಇತರರ ಜೀವಗಳನ್ನು ಉಳಿಸಬೇಕಾದ ವಿದ್ಯಾರ್ಥಿಗಳು ತಮ್ಮ ಪ್ರಾಣವನ್ನೇ ತ್ಯಾಗ ಮಾಡಬೇಕಾಯಿತು. ಇಂತಹ ವ್ಯವಸ್ಥೆ ಬಗ್ಗೆ ಪ್ರಶ್ನಿಸಿದಾಗ ನಮ್ಮನ್ನು ಜಿರಳೆಗಳು, ಪಾಕಿಸ್ತಾನಿಗಳು, ರಾಷ್ಟ್ರವಿರೋಧಿಗಳು ಎಂದು ಕರೆಯಲಾಗುತ್ತದೆ. ನನ್ನನ್ನೂ ಪಾಕಿಸ್ತಾನಿ ಎಂದರು. ಹಾಗಾದರೆ ಭಾರತೀಯರು ಯಾರು? ಬಿಜೆಪಿ ಐ.ಟಿ ಸೆಲ್‌ನಲ್ಲಿರುವವರು ಮಾತ್ರ ಭಾರತೀಯರೇ’ ಎಂದು ಅವರು ಪ್ರಶ್ನಿಸಿದರು.

ನಟ ಪ್ರಕಾಶ್ ರಾಜ್ ಮಾತನಾಡಿ, ‘ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯಕ್ಕೆ ಬರಬೇಕು. ಪ್ರಶ್ನಿಸುವವರನ್ನು ಪಾಕಿಸ್ತಾನಿ, ಕಾಕ್ರೋಚ್ ಎಂದರೂ ಬೆದರುವುದಿಲ್ಲ. ಇದನ್ನು ಶಿಕ್ಷಣ ಸಚಿವರು ಅರ್ಥ ಮಾಡಿಕೊಳ್ಳಬೇಕು. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾದರೂ ಪ್ರಧಾನಿ ಮೌನವಾಗಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಭ್ರಷ್ಟಾಚಾರ ತಡೆಯುವಲ್ಲಿ ವಿಫಲವಾಗಿದ್ದಾರೆ’ ಎಂದರು.

ಹೋರಾಟಗಾರ ಸೋನಂ ವಾಂಗ್ಚುಕ್, ಸಿಜೆಪಿಯ ಸೌರವ್ ದಾಸ್, ರಾಹುಲ್ ಟಿ.ಎಸ್., ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ ಮತ್ತು ಸೇನಾನಿ, ಲೇಖಕ ನಾಗೇಶ ಹೆಗಡೆ, ಮೈಸೂರಿನ ಪೂರ್ಣಾನಂದ, ಕೆ.ಆರ್.ಗೋಪಾಲಕೃಷ್ಣ ಇದ್ದರು.

ಚಿತ್ರಾವಳಿ

ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪತ್ರಕರ್ತ ಅಜಿತ್ ಹನುಮಕ್ಕನವರ್ ಅವರಿಗೆ ‘ಬೆ.ಸು.ನಾ. ಮಲ್ಯ ಪ್ರಶಸ್ತಿ’ ಹಾಗೂ ಸೈಕ್ಲಿಂಗ್ ಕ್ರೀಡಾಪಟು ದಾನಮ್ಮ ಚಿಚಕಂಡಿ ಅವರಿಗೆ ‘ಮಹಾಮಾನವ ಆಗೋಳಿ ಮಂಜಣ್ಣ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ, ದತ್ತಿದಾನಿ ಮೋಹನ್ ದೇವ್ ಆಳ್ವ, ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಕೋಶಾಧಿಕಾರಿ ಚಂದ್ರಶೇಖರ್ ನಾದೂರು, ಕಾರ್ಯದರ್ಶಿ ಶಾಂತರಾಜು ಉಪಸ್ಥಿತರಿದ್ದರು

ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ಗೌಡತಿಯರ ಸೇನೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಬೊಮ್ಮನಾಯಕನಹಳ್ಳಿ ಮಹೇಶ್, ಎಚ್.ಕೆ.ಬೊಮ್ಮೇಗೌಡ, ಭಾಗ್ಯಶ್ರೀ, ಎಚ್.ಡಿ.ಪುಷ್ಪಾ ಅವರನ್ನು ಜಾನಪದ ತಜ್ಞೆ ಕೆ.ಆರ್.ಸಂಧ್ಯಾರೆಡ್ಡಿ, ಬ್ರಹ್ಮ ಸಮಾಜದ ಡಬ್ಲ್ಯು.ಡಿ.ಅಶೋಕ್ ಅವರು ಸನ್ಮಾನಿಸಿದರು. ಶಾಸನ ತಜ್ಞೆ ಸ್ಮಿತಾ ಡಿ.ರೆಡ್ಡಿ, ಮಾಯಣ್ಣ, ಎಸ್.ರಾಮಲಿಂಗೇಶ್ವರ, ಕೆಂಪಾಜಮ್ಮ, ರೂಪಾ, ಬಿ.ಕೃಷ್ಣೇಗೌಡ ಪಾಲ್ಗೊಂಡಿದ್ದರು

ನಗರದಲ್ಲಿ ಇಂದು

ಹೊನ್ನಾಂಬ

ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನಾಚರಣೆ: ಉದ್ಘಾಟನೆ: ಎಸ್.ಹೊನ್ನಾಂಬ, ಆಯೋಜನೆ: ಹೆಲ್ಪ್ ಏಜ್ ಇಂಡಿಯಾ ಸಂಸ್ಥೆ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

‘ಶ್ರೀಕೃಷ್ಣವಿಜಯ’ ಪೌರಾಣಿಕ ನಾಟಕ ಪ್ರದರ್ಶನ: ಅತಿಥಿಗಳು: ಕುಪ್ಪುಸ್ವಾಮಿ, ಎಸ್.ಟಿ.ಕೃಷ್ಣಪ್ಪ, ತಂಡ: ಲಾಲ್‌ಬಾಗ್ ಶ್ರೀವಿನಾಯಕ ಡ್ರಾಮಾ ಸೀನರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನಾಚರಣೆ: ಉದ್ಘಾಟನೆ: ಸೀಮಾಂತ್ ಕುಮಾರ್ ಸಿಂಗ್, ಸಿ.ವಿ.ಸ್ನೇಹಾ, ಅಧ್ಯಕ್ಷತೆ: ರಾಧಾ ಎಸ್.ಮೂರ್ತಿ, ಆಯೋಜನೆ: ಬೆಂಗಳೂರು ನಗರ ಪೊಲೀಸ್, ಸ್ಥಳ: ನಗರ ಪೊಲೀಸ್ ಆಯುಕ್ತರ ಕಚೇರಿ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 11

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ ‘ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು’ ವಿಶೇಷ ಕಲಾ ಪ್ರದರ್ಶನ: ಆಯೋಜನೆ: ‘ಸೀಗಲ್’ ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11

‘ಸನ್ಮಾನ ಸುಖ’, ‘ಮೀನಿನ ಹೆಜ್ಜೆ’ ನಾಟಕ ಪ್ರದರ್ಶನ: ಉದ್ಘಾಟನೆ: ಹರೀಶ್ ಜಾಮ್, ಅತಿಥಿ: ಮಂಜುಳಾ ಗಟ್ಟಿಗಿತ್ತಿ, ಅಧ್ಯಕ್ಷತೆ: ತಿಮ್ಮರಾಜು, ಆಯೋಜನೆ: ವಾಸವಿ ಸಾಂಸ್ಕೃತಿಕ ಕಲಾತಂಡ, ಸ್ಥಳ: ನಿರಾಶ್ರಿತರ ಪರಿಹಾರ ಕೇಂದ್ರ, ಸುಮ್ಮನಹಳ್ಳಿ ಸರ್ಕಲ್, ಮಧ್ಯಾಹ್ನ 3

26ನೇ ವರ್ಷದ ಪ್ರವಚನ ವಾಹಿನಿ: ‘ವಾಲ್ಮೀಕಿ ರಾಮಾಯಣ ಹಾಗೂ ಸುಂದರಕಾಂಡದ ಸೂಕ್ಷ್ಮಾವಲೋಕನ’ ವಿಷಯದ ಬಗ್ಗೆ ಪ್ರವಚನ: ರಾಮಚಂದ್ರಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

‘ಸರಗು’ ನಾಟಕ ಪ್ರದರ್ಶನ: ರಚನೆ: ಮಾರುತೇಶ ಕಸಾಪುರ, ನಿರ್ದೇಶನ: ಸವಿತಾ ಬೈರಪ್ಪ, ಸಂಗೀತ: ವೈ.ಜಿ.ಉಮಾ, ಆಯೋಜನೆ: ಆಯಾಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

‘ಆಹಾರೋದ್ಯಮ: ತಂತ್ರಜ್ಞಾನ ಬಳಕೆ ಹೆಚ್ಚಳ’

ಪೀಣ್ಯ ದಾಸರಹಳ್ಳಿ: ‘ಆಹಾರೋದ್ಯಮದಲ್ಲಿ ಕೃತಕ ಬುದ್ಧಿಮತ್ತೆಯಂಥ ಅತ್ಯಾಧುನಿಕ ತಂತ್ರಜ್ಞಾನ ಪ್ರವೇಶವಾಗಿದೆ. ಆತಿಥ್ಯ ವಲಯದಲ್ಲಿ ಸ್ಮಾರ್ಟ್ ಕಿಚನ್ ತಂತ್ರಜ್ಞಾನ, ಡಿಜಿಟಲ್ ಸೇವೆಗಳ ಬಳಕೆ ಹೆಚ್ಚಿದೆ’ ಎಂದು ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ಅಭಿಪ್ರಾಯಪಟ್ಟರು.

ತುಮಕೂರು ರಸ್ತೆಯ ಬೆಂಗಳೂರು ಅಂತರ ರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ಗುರುವಾರ ಆಯೋಜಿಸಿದ್ದ ಮೂರು ದಿನಗಳ ‘ಮೆಗಾ ಫುಡ್ ಎಕ್ಸ್‌ಪೋ 2026’ ಉದ್ಘಾಟಿಸಿ ಮಾತನಾಡಿದರು.

ಮಳೆ: ಜಲಾವೃತಗೊಂಡ ರಸ್ತೆಗಳು

ತುಂಬಿದ ಚರಂಡಿ ● ವಾಹನ ಸಂಚಾರಕ್ಕೆ ತೊಡಕು ● ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಕಡೆ ಭಾನುವಾರ ಸುರಿದ ಭಾರಿ ಮಳೆಯಿಂದಾಗಿ ಪ್ರಮುಖ ರಸ್ತೆಗಳು ಜಲಾವೃತಗೊಂಡವು. ವಾಹನ ಸಂಚಾರಕ್ಕೆ ಅಡ್ಡಿಯಾಗಿ ಜನಜೀವನ ಅಸ್ತವ್ಯಸ್ತಗೊಂಡಿತು.

ಬೆಳಿಗ್ಗೆ ಸಾಧಾರಣ ಮಳೆಯಾಗಿತ್ತು. ಆನಂತರ ಆಗಾಗ ತುಂತುರು ಮಳೆ ಸುರಿಯಿತು. ಸಂಜೆ ವ್ಯಾಪಾರ–ವಹಿವಾಟು ಹೆಚ್ಚು ನಡೆಯುವ ಹೊತ್ತಿಗೆ ಜೋರಾಗಿ ಮಳೆ ಸುರಿಯತೊಡಗಿತು. ರಸ್ತೆಗಳೆಲ್ಲ ಹೊಳೆಗಳಾಗಿ ಪರಿವರ್ತನೆಗೊಂಡವು. ಮೆಜೆಸ್ಟಿಕ್, ಪುರಭವನ, ಶಿವಾಜಿನಗರ, ಕಾರ್ಪೊರೇಷನ್ ಸರ್ಕಲ್, ಚಿಕ್ಕಪೇಟೆ, ರಾಜಾಜಿನಗರ ಸಹಿತ ನಗರದ ವಿವಿಧೆಡೆ ಧಾರಾಕಾರ ಮಳೆಯಾಗಿ, ಚರಂಡಿಗಳು ತುಂಬಿ ಹರಿದವು.

ಮುನಿಸಿಂಗ್ ಜಂಕ್ಷನ್, ವಿಂಡ್ಸರ್ ಮ್ಯಾನರ್, ಸಿಬಿಐ ಬಳಿಯ ಮೇಲ್ಸೇತುವೆ, ದೇವಸಂದ್ರ ಜಂಕ್ಷನ್, ವಿದ್ಯಾಶಿಲ್ಪ ಜಂಕ್ಷನ್‌ನಲ್ಲಿ ನೀರು ನಿಂತಿದ್ದರಿಂದ ಸಂಚಾರಕ್ಕೆ ತೊಡಕುಂಟಾಯಿತು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಡೆಗೆ ವಾಹನಗಳು ಆಮೆಗತಿಯಲ್ಲಿ ಸಾಗುವಂತಾಯಿತು. ಜಿಆರ್‌ಟಿ ಜಂಕ್ಷನ್, ವರ್ತೂರು ಕೋಡಿ ಫೋರಂ ಮಾಲ್ ಸುತ್ತಮುತ್ತಲಿನ ರಸ್ತೆಗಳು, ತುಬರಹಳ್ಳಿ, ಸಿದ್ದಾಪುರ ಮತ್ತು ಬಳಗೆರೆ ಸುತ್ತ-ಮುತ್ತಲಿನ ರಸ್ತೆಗಳು ಸಂಪೂರ್ಣವಾಗಿ ಜಲಾವೃತಗೊಂಡಿದ್ದರಿಂದ ಐಟಿ ಉದ್ಯೋಗಿಗಳು ತಮ್ಮ ನಿವಾಸಗಳಿಗೆ ತೆರಳಲು ಪರದಾಡುವಂತಾಯಿತು.

ಕೆಂಗೇರಿಯಿಂದ ಮರಿಯಪ್ಪನ ಪಾಳ್ಯ, ಬಾಪೂಜಿ ನಗರದಿಂದ ಕೆಂಗೇರಿಗೆ ಸಂಪರ್ಕಿಸುವ ರಸ್ತೆಗಳು, ಆನಂದಪುರ ಜಂಕ್ಷನ್‌ನಿಂದ ಟಿ.ಸಿ. ಪಾಳ್ಯ ಕಡೆಗೆ, ಲುಲು ಮಾಲ್‌ನಿಂದ ಮೆಜೆಸ್ಟಿಕ್ ಕಡೆಗೆ, ಪೀಣ್ಯ ಫ್ಲೈಓವರ್‌ನಿಂದ ತುಮಕೂರು ರಸ್ತೆ ಕಡೆಗೆ, ಆರ್.ವಿ. ಟೀಚರ್ಸ್ ಜಂಕ್ಷನ್‌ನಿಂದ ಅಶೋಕ ಪಿಲ್ಲರ್ ಕಡೆಗೆ ಹೋಗುವ ರಸ್ತೆಗಳು ಮತ್ತು ಮಡಿವಾಳ ಕೆಳಸೇತುವೆಗಳಲ್ಲಿ ನೀರು ನಿಂತಿತು.

ಆರ್.ಆರ್. ನಗರದ ರಾಜರಾಜೇಶ್ವರಿ ದೇವಸ್ಥಾನದಿಂದ ಪಟ್ಟಣಗೆರೆ ಮುಖ್ಯ ರಸ್ತೆಯಲ್ಲಿ ಮಳೆ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡಿದರು. ನಗರದ ಕಳಪೆ ಮೂಲಸೌಕರ್ಯದ ಬಗ್ಗೆ ಪ್ರಯಾಣಿಕರು ಆಕ್ರೋಶವನ್ನು ವ್ಯಕ್ತಪಡಿಸಿದರು. ಅರ್ಧ ಗಂಟೆ ಮಳೆಯಾದರೆ ಗಂಟೆಗಟ್ಟಲೆ ಸಂಚಾರದಲ್ಲಿ ಸಿಲುಕಿಕೊಳ್ಳುವಂತಾಗಿದೆ ಎಂದು ದೂರಿದರು.



ಆರ್‌ಆರ್ ನಗರದಲ್ಲಿ ಮಳೆ ನೀರು ರಸ್ತೆಯಲ್ಲಿಯೇ ಹರಿದು ವಾಹನ ಸಂಚಾರಕ್ಕೆ ತೊಡಕುಂಟಾಯಿತು (ಎಡಚಿತ್ರ) ಕಲಾಸಿಪಾಳ್ಯದಲ್ಲಿ ಶನಿವಾರ ರಾತ್ರಿಯೇ ಚರಂಡಿ ದುರಸ್ತಿ ಮಾಡಿದ ಬೆಂಗಳೂರು ಕೇಂದ್ರ ನಗರ ಪಾಲಿಕೆ ಸಿಬ್ಬಂದಿ

ವಿಂಡ್ಸರ್ ಮ್ಯಾನರ್ ಪರ್ಯಾಯ ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನಗಳು ನಿಧಾನಗತಿಯಲ್ಲಿ ಸಾಗಿದವು

ಚರಂಡಿಗಳು ಪ್ಲಾಸ್ಟಿಕ್ ಮತ್ತು ಹೂಳಿನಿಂದ ಸಂಪೂರ್ಣವಾಗಿ ಮುಚ್ಚಿಹೋಗಿರುವುದರಿಂದ ಮಳೆಯಾದ 10 ನಿಮಿಷಗಳಲ್ಲಿ ನೀರು ಸಂಗ್ರಹವಾಗುತ್ತದೆ. ಪ್ರತಿ ವರ್ಷ, ಪ್ರಮುಖ ಜಂಕ್ಷನ್‌ಗಳಲ್ಲಿ ಇದೇ ಪರಿಸ್ಥಿತಿ ಉಂಟಾಗುತ್ತಿದೆ ಎಂದು ಅಸಹಾಯಕತೆ ತೋಡಿಕೊಂಡರು. ಬೆಂಗಳೂರು ನಗರ ವೀಕ್ಷಣಾಲಯ 14.5 ಮಿ.ಮೀ., ಎಚ್‌ಎಎಲ್ ವಿಮಾನ ನಿಲ್ದಾಣ 0.8 ಮಿ.ಮೀ. ಮತ್ತು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 0.5 ಮಿ.ಮೀ. ಮಳೆಯಾಗಿರುವುದಾಗಿ ದಾಖಲಾಗಿದೆ.

ರಾತ್ರಿಯೇ ಚರಂಡಿ ದುರಸ್ತಿ

ಚರಂಡಿಯಲ್ಲಿ ಕಸ ತುಂಬಿದ್ದರಿಂದ ನೀರು ರಸ್ತೆಯಲ್ಲೇ ನಿಂತಿತ್ತು. ಬೆಂಗಳೂರು ಕೇಂದ್ರ ನಗರ ಪಾಲಿಕೆ ನಿಯಂತ್ರ ಕೊಠಡಿಯ ಸಿಬ್ಬಂದಿ ಶನಿವಾರ ರಾತ್ರಿಯೇ ಶಿವಾಜಿನಗರ, ಇಂದಿರಾನಗರ, ಕೆ.ಆರ್. ಮಾರುಕಟ್ಟೆ, ಕಂಟೋನ್ಮೆಂಟ್ ಮುಂತಾದ ಕಡೆ ಚರಂಡಿ ಸ್ವಚ್ಛಗೊಳಿಸಿ ನೀರು ಹರಿಯುವಂತೆ ಮಾಡಿದರು.

ಕಂಟೋನ್ಮೆಂಟ್ ಕೆಳ ಸೇತುವೆಯಲ್ಲಿ ರಸ್ತೆ ಮಧ್ಯದಲ್ಲಿರುವ ಗ್ರೇಟಿಂಗ್/ಚರಂಡಿಯನ್ನು ಸ್ವಚ್ಛಗೊಳಿಸಿದ್ದರಿಂದ ಶನಿವಾರ ರಾತ್ರಿ 10.30ರ ಬಳಿಕ ವಾಹನಗಳು ಸರಾಗವಾಗಿ ಸಂಚರಿಸಿದವು.

ಇಂದಿರಾನಗರ 1ನೇ ಹಂತದಲ್ಲಿ ಮಳೆ ನೀರು ನಿಲ್ಲುವ ಸ್ಥಳಗಳಲ್ಲಿ ಚರಂಡಿಯ ಹೂಳೆತ್ತಿ ಸ್ವಚ್ಛಗೊಳಿಸಲಾಯಿತು.

ಎಲ್ಲೆಲ್ಲಿ ಎಷ್ಟು ಮಳೆ?

ನಾಯಂಡಹಳ್ಳಿಯಲ್ಲಿ 4.6 ಸೆಂ.ಮೀ., ಕೆಂಗೇರಿ 4.1 ಸೆಂ.ಮೀ., ಪೀಣ್ಯ ಕೈಗಾರಿಕಾ ವಲಯ 4.1 ಸೆಂ.ಮೀ., ರಾಜರಾಜೇಶ್ವರಿ ನಗರ 4.1 ಸೆಂ.ಮೀ., ದೊಡ್ಡ ಬಿದರಕಲ್ಲು 3.6 ಸೆಂ.ಮೀ., ಕೊಟ್ಟಿಗೆಪಾಳ್ಯ 2.9 ಸೆಂ.ಮೀ., ಹಂಪಿನಗರ 2.9 ಸೆಂ.ಮೀ., ಪುಟ್ಟೇನಹಳ್ಳಿ 2.8 ಸೆಂ.ಮೀ., ಹೇರೋಹಳ್ಳಿ 2.8 ಸೆಂ.ಮೀ., ನಾಗಪುರ 2.6 ಸೆಂ.ಮೀ., ಅರಕೆರೆ 2.1 ಸೆಂ.ಮೀ., ಅಂಜನಾಪುರ 2 ಸೆಂ.ಮೀ., ಮನೋರಾಯನಪಾಳ್ಯ 1.9 ಸೆಂ.ಮೀ., ಬಿಳೇಕಹಳ್ಳಿ 1.9 ಸೆಂ.ಮೀ., ಬಾಗಲಗುಂಟೆ 1.9 ಸೆಂ.ಮೀ., ಹೊರಮಾವು 1.9 ಸೆಂ.ಮೀ., ವಿ.ವಿ ಪುರ 1.7 ಸೆಂ.ಮೀ., ಹಗದೂರು 1.5 ಸೆಂ.ಮೀ., ಕಾಟನ್‌ಪೇಟೆ 1.5 ಸೆಂ.ಮೀ., ನಂದಿನಿ ಲೇಔಟ್ 1.5 ಸೆಂ.ಮೀ., ವಿಶ್ವನಾಥ ನಾಗೇನಹಳ್ಳಿ 1.5 ಸೆಂ.ಮೀ., ಬೊಮ್ಮನಹಳ್ಳಿ 1.5 ಸೆಂ.ಮೀ., ಪಟ್ಟಾಭಿರಾಮನಗರ 1.4 ಸೆಂ.ಮೀ., ಬಾಣಸವಾಡಿ 1.3 ಸೆಂ.ಮೀ., ರಾಮಮೂರ್ತಿನಗರ 1.3 ಸೆಂ.ಮೀ., ರಾಜಾಜಿನಗರ 1.3 ಸೆಂ.ಮೀ. ಮಳೆ ದಾಖಲಾಗಿದೆ.

EDUCATION CORNER

Attention!!! 1966 UVCE (then UCE) Graduates

Dear Fellow graduates,
A reunion of 1966 graduates of UVCE marking 60 years after graduation is planned on Saturday 20th June 2026 at the College premises, K.R. Circle, B'luru. This notification is for all batch mates to join on the said date from 11 AM to 1.00 PM followed by lunch at Century club.
Please contact without fail any of the following volunteers & register immediately.

S. VARADARAJAN 9448063724	K. NATARAJAN 9945411776
T. YELLAREDDY 9845347483	R. DWARAKANATH 9632970707

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

HATSOFF HELICOPTER TRAINING PVT LTD. BANGALORE IS INVITING QUOTATIONS / TENDER to provide **FACILITY MANAGEMENT SERVICES** at our Company located in Bangalore. Scope of Work / RFP can be requested through email : **contactus@hatsoff-training.com.**
The last date for submission of proposal is **15th July 2026.** Contact **+91 7760046977 / 9620540662** for any queries.

BUSINESS

Business to Business

Finance

URGENT LOAN AVAIL @ 5.5% P.a PERSONAL BUSINESS EDUCATION TAKEOVER ALL TYPES LOAN CAPITAL ONE FINANCE. CALL/ WHATSAPP. 7678360713

JOB OPPORTUNITIES

Graphic Designers

REQUIRED GRAPHIC Designer– Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ರಾಜಾಜಿನಗರದಲ್ಲಿನ ಕೈಗಾರಿಕಾ ಉಪನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಸ್ಥಿತಗೊಂಡಿರುವ, ಮುನಿಸಿಪಲ್ ನಂ.1 ಹೊಂದಿರುವ ಸ್ವತ್ತಿನಲ್ಲಿ ನಿರ್ಮಾಣಗೊಳ್ಳುತ್ತಿರುವ, **ಕೆಸ್ಸಾಕು**’ರವರ ನಿವಾ ಎಂಬಲ್ಲಿನ **18ನೇ ಮಹಡಿಯಲ್ಲಿರುವ ನಂ. ಎಲ್–18 ಹೊಂದಿರುವ, 4860.59 ಚದರ ಅಡಿ ವಿಸ್ತೀರ್ಣದ ಕಾರ್ಪೆಟ್ ಏರಿಯಾ, 1121.40 ಚ.ಅ.** ವಿಸ್ತೀರ್ಣದ ಬಾಲ್ಕನಿ/ಡೆಕ್ ಏರಿಯಾ ಮತ್ತು **122.30 ಚ.ಅ.** ವಿಸ್ತೀರ್ಣದ ಪ್ರತ್ಯೇಕ ವರಾಂಡಾ/ಖಾಸಗಿ ಲಾಬಿಯುಳ್ಳ, ಒಟ್ಟಾರೆ **8350 ಚ.ಅ. ವಿಸ್ತೀರ್ಣದ ಸೂಪರ್ ಬಿಲ್ಟಪ್ ಏರಿಯಾ** ಹೊಂದುರುವ ಹಾಗೂ ಬೇಸ್‌ಮೆಂಟ್ ಲೆವೆಲ್ 1/2/3 ರಲ್ಲಿನ **4 ಕವರ್ಡ್ ಕಾರ್ ಪಾರ್ಕಿಂಗ್ ಜಾಗಗಳನ್ನು** ಬಳಸಿಕೊಳ್ಳುವ ಹಕ್ಕುಗಳನ್ನೂ ಹೊಂದಿರುವ, ಕೆಳಕಂಡ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ “ಷೆಡ್ಯೂಲ್ ಪ್ರಾಪರ್ಟಿ” ಎನ್ನಲಾಗುವ ಅಪಾರ್ಟ್‌ಮೆಂಟ್ ಸ್ವತ್ತನ್ನು, ಅದರ ಪ್ರಸಕ್ತ ಮಾಲೀಕರಾದ **ಶ್ರೀಮತಿ. ರಾಧಿಕಾ ಯತಿನ್ W/o ಯತಿನ್ ಸಭಾಪತಿ** ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ; ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಗಳಿದ್ದಲ್ಲಿ ಅಥವಾ ಷೆಡ್ಯೂಲ್ ಪ್ರಾಪರ್ಟಿಗೆ ವಿರುದ್ಧವಾಗಿ ಅಥವಾ ಅದರ ದಾಖಲಾತಿಗಳಿಗೆ ಸಂಬಂಧಿಸಿದಂತೆ ಅಥವಾ ಮಾಲೀಕರ ವಿರುದ್ಧವಾಗಿ ಅಥವಾ ನಮ್ಮ ಕಕ್ಷಿದಾರರ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಕಡ್ಡಾಯವಾಗಿ, ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಹತ್ತು ದಿನಗಳೊಳಗೆ **(10 ದಿನಗಳು)**, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿತ ತಮ್ಮ ಕ್ಲೇಮ್ ಅಥವಾ ಆಕ್ಷೇಪಣೆಗಳನ್ನು ಸಾಬೀತುಪಡಿಸಬಲ್ಲ ಆಧಾರ ಮತ್ತು ಹಕ್ಕುಗಳಿಗೆ ಸಂಬಂಧಿತ ಪುರಾವೆ ದಾಖಲಾತಿಗಳ ಸಮೇತ, ಕೆಳಕಂಡ ಸಹಿದಾರರಿಗೆ ಮಾಹಿತಿ ನೀಡತಕ್ಕದ್ದು. ನಿಗದಿತ ಅವಧಿಯ ನಂತರ ನಮ್ಮ ಕಕ್ಷಿದಾರರು, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ, ಅಂತಹ ಯಾವುದೇ ಸ್ವರೂಪದ ಕ್ಲೇಮ್‌ಗಳು ಇರುವುದಿಲ್ಲವೆಂದು ಪರಿಗಣಿಸಿ ತಮ್ಮ ಖರೀದಿ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ರಾಜಾಜಿನಗರದಲ್ಲಿನ ಕೈಗಾರಿಕಾ ಉಪನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಸ್ಥಿತಗೊಂಡಿರುವ, ಮುನಿಸಿಪಲ್ ನಂ.1 ಹೊಂದಿರುವ ಸ್ವತ್ತಿನಲ್ಲಿ ನಿರ್ಮಾಣಗೊಳ್ಳುತ್ತಿರುವ, **“ಕೆಸ್ಸಾಕು”ರವರ ನಿವಾ ಎಂಬಲ್ಲಿನ 18ನೇ ಮಹಡಿಯಲ್ಲಿರುವ ನಂ. ಎಲ್–18** ಹೊಂದಿರುವ, **4860.59 ಚದರ ಅಡಿ ವಿಸ್ತೀರ್ಣದ ಕಾರ್ಪೆಟ್ ಏರಿಯಾ, 1121.40 ಚ.ಅ.** ವಿಸ್ತೀರ್ಣದ ಬಾಲ್ಕನಿ/ಡೆಕ್ ಏರಿಯಾ ಮತ್ತು **122.30 ಚ.ಅ.** ವಿಸ್ತೀರ್ಣದ ಪ್ರತ್ಯೇಕ ವರಾಂಡಾ/ಖಾಸಗಿ ಲಾಬಿಯುಳ್ಳ, ಒಟ್ಟಾರೆ 8350 ಚ.ಅ. ವಿಸ್ತೀರ್ಣದ ಸೂಪರ್ ಬಿಲ್ಟಪ್ ಏರಿಯಾ ಹೊಂದುರುವ ಹಾಗೂ ಬೇಸ್‌ಮೆಂಟ್ ಲೆವೆಲ್ 1/2/3 ರಲ್ಲಿನ **4 ಕವರ್ಡ್ ಕಾರ್ ಪಾರ್ಕಿಂಗ್ ಜಾಗಗಳನ್ನು** ಬಳಸಿಕೊಳ್ಳುವ ಹಕ್ಕುಗಳನ್ನೂ ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ **ಚಕ್ಕುಬಂದಿ:**

ಪೂರ್ವಕ್ಕೆ : ಎಂಬಿಜೆಡ್‌ಯು ಕಟ್ಟಡದ ಅಪಾರ್ಟ್‌ಮೆಂಟ್ ನಂ. ಎಲ್–18
ಪಶ್ಚಿಮಕ್ಕೆ : “ಕೆಸ್ಸಾಕು” ಎಂಬ ಅಭಿವೃದ್ಧಿಯಲ್ಲಿನ ಖಾಲಿ ಜಾಗದ ಕಡೆಗಿರುವ ಬಯಲು;
ಉತ್ತರಕ್ಕೆ : ಎಸ್‌ಒಆರ್‌ಎ ಕಟ್ಟಡದ ಅಪಾರ್ಟ್‌ಮೆಂಟ್ ನಂ. ಎಲ್–18; ಮತ್ತು
ದಕ್ಷಿಣಕ್ಕೆ : “ಕೆಸ್ಸಾಕು” ಎಂಬ ಅಭಿವೃದ್ಧಿಯಲ್ಲಿನ ಖಾಲಿ ಜಾಗದ ಕಡೆಗಿರುವ ಬಯಲು.

ಸಹಿ/–
ಎಲ್.ಎಸ್ ಕಿರಣ್ ಮಾಯೀ ರೆಡ್ಡಿ, ವಕೀಲರು
ಕಿರಣ್ ಮಾಯೀ ಲಾ ಫರ್ಮ್
ನಂ. 10. ಜಿ1, ನವೀನ್ ಅಪಾರ್ಟ್‌ಮೆಂಟ್ಸ್, 13ನೇ ಮುಖ್ಯರಸ್ತೆ, ಅರಮನೆ ರಸ್ತೆ, ವಸಂತನಗರ, ಬೆಂಗಳೂರು – 560 052.
ಮೊಬೈಲ್ ನಂ. 97391 63474
ದಿನಾಂಕ: 15.06.2026
ಸ್ಥಳ: ಬೆಂಗಳೂರು

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ಟ್ರಾನ್ಸ್‌ಫಾರ್ಮರ್‌ಗೆ ನೀರು’

ಎನ್.ಆರ್.ಕಾಲೊನಿಯ ಅಶ್ವಥ್ ಕಲಾಭವನದ ಪಕ್ಕದಲ್ಲಿರುವ ಬೆಸ್ಕಾಂನ ಟ್ರಾನ್ಸ್‌ಫಾರ್ಮರ್‌ಗೆ ಚಾವಣಿ ಇಲ್ಲ. ಮಳೆ ನೀರು ಬೀಳುತ್ತಿದ್ದು, ನೆಲಮಟ್ಟದಲ್ಲಿರುವುದರಿಂದ ಸಮೀಪದಲ್ಲಿ ಓಡಾಡುವ ಪಾದಚಾರಿಗಳಿಗೆ ಅಪಾಯ ಕಟ್ಟಿಟ್ಟಬುತ್ತಿಯಾಗಿದೆ. ಕೂಡಲೇ ಅಧಿಕಾರಿಗಳು ಕ್ರಮವಹಿಸಬೇಕು

ಕೆ.ಎಸ್.ನಾಗರಾಜ, ಎನ್.ಆರ್.ಕಾಲೊನಿ ನಿವಾಸಿ

‘ಕಸಕ್ಕೆ ಬೆಂಕಿ: ಇದ್ಯಾವ ಕ್ರಮ?’

ಸಂಪಂಗಿರಾಮಯ್ಯ ಬಡಾವಣೆಯ ಬೋನಮಿಲ್ ಬಳಿ ರಸ್ತೆ ಬದಿ ತ್ಯಾಜ್ಯ ಸುರಿಯಲಾಗಿತ್ತು. ಜಿಬಿಎಗೆ ದೂರು ನೀಡಿದ ನಂತರ ಅರ್ಧ ತ್ಯಾಜ್ಯ ತೆಗೆದ ಸಿಬ್ಬಂದಿ, ಉಳಿದದ್ದಕ್ಕೆ ಬೆಂಕಿ ಹಾಕಿದ್ದಾರೆ. ಮಾಲಿನ್ಯದಿಂದ ನಲುಗಿರುವ ಬೆಂಗಳೂರಿಗೆ ಮತ್ತಷ್ಟು ಹೊಗೆ ಸೇರಿಸುವ ಕ್ರಮವೇ?

ಮಹಾಲಿಂಗಪ್ಪ, ಸ್ಥಳೀಯ ನಿವಾಸಿ

‘ಟೋಯಿಂಗ್ ವಾಹನ ತೆರವುಗೊಳಿಸಿ’

ವಿಕ್ಟೋರಿಯಾ ಬಡಾವಣೆಯ ಹಳೆ ಅಶೋಕನಗರ ಪೊಲೀಸ್ ಠಾಣೆ ಪಕ್ಕದ ರಸ್ತೆಯಲ್ಲಿಯೇ ಪೊಲೀಸ್ ಟೋಯಿಂಗ್ ವಾಹನವು ಗುಜರಿ ಸ್ಥಿತಿಯಲ್ಲಿದೆ. ಅದರಿಂದ ಕಸ ಸಂಗ್ರಹ ತಾಣವಾಗಿದೆ. ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ನಗರದ ಎಲ್ಲೆಲ್ಲೂ ಇಂಥ ವಾಹನಗಳು ನಿಂತಿದ್ದು, ಕೂಡಲೇ ತೆರವು ಮಾಡಬೇಕು.

ಎಸ್.ಶಿವಪ್ರಸಾದ್, ಸ್ಥಳೀಯ ನಿವಾಸಿ

‘ಚರಂಡಿ ಚಪ್ಪಡಿ ಕುಸಿತ’

ಕೃಷ್ಣರಾಜಪುರದ ವೆಂಕಟೇಶ್ವರ ಶಾಲಾ ತಿರುವಿನಲ್ಲಿ ಚರಂಡಿಯ ಕಲ್ಲು ಚಪ್ಪಡಿ ಕುಸಿದಿದ್ದು, ಶಾಲಾ ಮಕ್ಕಳು ಓಡಾಡುವ ಈ ಸ್ಥಳವು ಅಪಾಯಕಾರಿಯಾಗಿದೆ. ಕೂಡಲೇ ದುರಸ್ತಿ ಮಾಡಿ. ಈಗಾಗಲೇ ದೂರು ನೀಡಿದ್ದರೂ ಪರಿಹಾರವಾಗಿಲ್ಲ

ಮಂಜುನಾಥ್, ಸ್ಥಳೀಯ ನಿವಾಸಿ

‘ಮರ ತೆರವುಗೊಳಿಸಿ’

ಜಂಬೂಸವಾರಿ ದಿಣ್ಣೆ ಮುಖ್ಯರಸ್ತೆಯ ತೀರ್ಥ ಆಶ್ರಮದ ಬಳಿ ಬೃಹತ್ ಮರ ಉರುಳಿ ಬಿದ್ದಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಸಮೀಪದಲ್ಲಿಯೇ ಮತ್ತೆರಡು ಮರಗಳು ಬಾಗಿದ್ದು, ಯಾವಾಗ ಬೇಕಾದರೂ ಉರುಳಬಹುದು. ಕೂಡಲೇ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ತೆರವು ಮಾಡಲು ಮುಂದಾಗಬೇಕು

ದೊಡ್ಡಮಾರಯ್ಯ, ಸ್ಥಳೀಯ ನಿವಾಸಿ

‘ಫುಟ್‌ಪಾತ್‌ನಲ್ಲಿ ವಿದ್ಯುತ್ ಕೇಬಲ್’



ಬಸವನಗುಡಿಯ ಹನುಮಂತ ನಗರದ ರಾಮಾಂಜನೇಯ ರಸ್ತೆಯ 9ನೇ ಕ್ರಾಸ್‌ನಲ್ಲಿ ಪಾದಚಾರಿ ಮಾರ್ಗದಲ್ಲಿಯೇ ವಿದ್ಯುತ್ ತಂತಿಯ ಕೇಬಲ್‌ಗಳು ಹಾದು ಹೋಗಿವೆ. ಸುಂಕೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಂಭಾಗದಲ್ಲಿಯೇ ಇದ್ದು, ನೂರಾರು ಮಕ್ಕಳು ಮತ್ತು ನಾಗರಿಕರಿಗೆ ಅಪಾಯವಾಗಲಿದೆ.

ಸ್ಥಳೀಯ ನಾಗರಿಕ

‘ಪಾದಚಾರಿ ಮಾರ್ಗ ದುರಸ್ತಿ ಮಾಡಿ’

ರಾಜರಾಜೇಶ್ವರಿ ನಗರ ಸ್ವಾಗತ ಕಮಾನು ಸಮೀಪದ ಪಾದಚಾರಿ ಮಾರ್ಗದಲ್ಲಿ ಚರಂಡಿಯ ಕಾಂಕ್ರೀಟ್ ಸ್ಲ್ಯಾಬ್ ಕುಸಿದಿದ್ದು, ಈಗಾಗಲೇ ಮೆಟ್ರೊ ನಿಲ್ದಾಣಕ್ಕೆ ಹೋಗುವವರು, ವಿದ್ಯಾರ್ಥಿಗಳು, ನಾಗರಿಕರು ಚರಂಡಿಗೆ ಬಿದ್ದು ಗಾಯಗೊಂಡಿದ್ದಾರೆ. ತಕ್ಷಣವೇ ದುರಸ್ತಿ ಮಾಡಬೇಕೆಂದು ಮನವಿ.

ಆರ್‌ಜಿಕೆ, ರಾಜರಾಜೇಶ್ವರಿ ನಗರ

ಕೆರೆ ಜಾಗದಲ್ಲಿ ಅಕ್ರಮವಾಗಿ ಕೃಷಿ

ಒತ್ತುವರಿ ಮಾಡಿಕೊಳ್ಳುತ್ತಿರುವ ಬಲಾಢ್ಯರು • ಕ್ರಮ ಕೈಗೊಳ್ಳದ ಅಧಿಕಾರಿಗಳು

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಜನ, ಜನುವಾರು, ಪ್ರಾಣಿ ಸಂಕುಲಕ್ಕೆ ಆಧಾರವಾಗಿರುವ ಕೆರೆಗಳನ್ನು ಅಕ್ಕಪಕ್ಕದ ಭೂ ಮಾಲೀಕರು ಒತ್ತುವರಿ ಮಾಡಿಕೊಂಡಿದ್ದಾರೆ. ಜೀವನಾಡಿ ಕೆರೆಗಳು ಅನಧಿಕೃತ ಕೃಷಿ ಚಟುವಟಿಕೆಯ ಅಂಗಳವಾಗಿ ಪರಿವರ್ತನೆಗೊಳ್ಳುತ್ತಿವೆ.

ಮಹದೇವಪುರ ಕ್ಷೇತ್ರದ ಬಿದರಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿರುವ ಜ್ಯೋತಿಪುರ, ಬೊಮ್ಮೇನಹಳ್ಳಿ, ಹಂಚರಹಳ್ಳಿ, ರಘುವನಹಳ್ಳಿ, ಹುಸ್ಕೂರು ಗ್ರಾಮಗಳಲ್ಲಿ ಕೆರೆಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಕೃಷಿ ಚಟುವಟಿಕೆ ನಡೆಸಲಾಗುತ್ತಿದೆ. ಅರಣ್ಯ ಇಲಾಖೆಯವರು ಕೆರೆ ಸುತ್ತ ಗಿಡಗಳನ್ನು ನೆಟ್ಟರೂ ಅವುಗಳನ್ನು ಕಡಿದು ಹಾಕುತ್ತಿದ್ದಾರೆ. ಯಂತ್ರೋಪಕರಣಗಳನ್ನು ಬಳಸಿ ಕೆರೆಯನ್ನು ಸಂಪೂರ್ಣವಾಗಿ ಮುಚ್ಚಿ ಕೃಷಿ ಮಾಡುತ್ತಿದ್ದಾರೆ.

ಕೆ.ಆರ್.ಪುರ ಪೂರ್ವ ತಾಲ್ಲೂಕು ಕಂದಾಯ ಗ್ರಾಮಗಳಾದ ಜ್ಯೋತಿಪುರ ಗ್ರಾಮದ ಸರ್ವೆ ನಂಬರ್ 82ರಲ್ಲಿ 275 ಎಕರೆ, ಬೊಮ್ಮೇನಹಳ್ಳಿ ಸರ್ವೆ ನಂಬರ್ 55ರಲ್ಲಿ 35 ಎಕರೆ, ಹಂಚರಹಳ್ಳಿ ಗ್ರಾಮದ ಸರ್ವೆ ನಂಬರ್ 20ರಲ್ಲಿ 133 ಎಕರೆ, ರಘುವನಹಳ್ಳಿ ಗ್ರಾಮದ ಸರ್ವೆ ನಂಬರ್ 13ರಲ್ಲಿ 161 ಎಕರೆ, ಹುಸ್ಕೂರು ಗ್ರಾಮದ ಸರ್ವೆ ನಂಬರ್ 41ರಲ್ಲಿ 19 ಎಕರೆ ಸೇರಿದಂತೆ 700ಕ್ಕೂ ಹೆಚ್ಚು ಎಕರೆ ಕೆರೆಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ.

ಈ ಕೆರೆಗಳು ಹೊಸಕೋಟೆಯ ದೊಡ್ಡ ಕೆರೆಗೆ ಸಂಪರ್ಕ ಹೊಂದಿವೆ. ದೊಡ್ಡಕೆರೆಯೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾವಿರಾರು ಎಕರೆ ವಿಸ್ತಾರ ಹೊಂದಿದ್ದು, ಭೂ ಮಾಫಿಯಾದವರಿಂದಾಗಿ ಅಳಿವಿನ ಅಂಚಿಗೆ ತಲುಪಿದೆ. ಕೆಲವರು ಕೆರೆಯ ಜಾಗದ ಕ್ರಯ ಮಾಡಿಕೊಳ್ಳಲು ಮುಂದಾಗಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಪ್ರಕೃತಿಯ ಸಮತೋಲನ, ಅಂತರ್ಜಲ ಮಟ್ಟ ಹೆಚ್ಚಿಸಲು ಹಾಗೂ ಜಾನುವಾರುಗಳಿಗಾಗಿ ಇರುವ ಸರ್ಕಾರಿ ಕೆರೆಗಳನ್ನು ರಾಜಕೀಯ ಹಿನ್ನೆಲೆ ಹೊಂದಿರುವ ಬಲಾಢ್ಯ ವ್ಯಕ್ತಿಗಳು ಅತಿಕ್ರಮಣ ಮಾಡಿಕೊಂಡು ಕೃಷಿ ಮಾಡುತ್ತಿದ್ದಾರೆ. ಜಾನುವಾರುಗಳು ನೀರು ಕುಡಿಯಲು ಅಥವಾ ಹುಲ್ಲು ಮೇಯಲು ಕೆರೆ ಅಂಗಳಕ್ಕೆ ಬಾರದಂತೆ ತಡೆಯುತ್ತಿದ್ದಾರೆ. ಹುಲ್ಲಿಗೆ ವಿಷ ಬೆರೆಸುತ್ತಿದ್ದಾರೆ ಎಂದು ತಿರುಮೇನಹಳ್ಳಿ ಗ್ರಾಮದ ನಿವಾಸಿ, ಸಾಮಾಜಿಕ ಹೋರಾಟಗಾರ ಚಂದ್ರಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

ಕೆರೆಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದೆ. ಈ ಹಿಂದೆ ಭೂಮಿಯಲ್ಲಿ 600-700 ಅಡಿ ಕೊಳವೆಬಾವಿ ತೋಡಿದರೆ ನೀರು ಸಿಗುತ್ತಿತ್ತು. ಈಗ 1,300 ಅಡಿ ಕೊರೆದರೂ ನೀರು ಸಿಗುತ್ತಿಲ್ಲ. ಕೆರೆ ನೀರನ್ನು ಸಂಗ್ರಹಿಸಿ ವ್ಯವಸಾಯಕ್ಕೆ ಬಳಸಲಾಗುತ್ತಿತ್ತು. ಎತ್ತು, ಎಮ್ಮೆ, ದನಕರು, ಕುರಿ ಇತ್ಯಾದಿಯ ಮೈ ತೊಳೆಯಲು, ಜಾನುವಾರುಗಳಿಗೆ ಹುಲ್ಲು ಮೇಯಲು ಆಸರೆಯಾಗಿತ್ತು ಎಂದು ವಕೀಲ ಸಂತೋಷ್ ಹೇಳಿದರು.

ಕೆರೆಯ ಜಾಗ ಬರಡಾಗುವ ಮುನ್ನ ಎಲ್ಲ ಸರ್ಕಾರಿ ಕೆರೆಗಳ ಜಾಗವನ್ನು ರಕ್ಷಿಸಬೇಕು. ಕೆರೆಯ ಗಡಿ ಗುರುತಿಸಿ ಒತ್ತುವರಿ ತೆರವುಗೊಳಿಸಬೇಕು. ಪ್ರತಿ ಕೆರೆಗೂ ನಾಮಫಲಕಗಳನ್ನು ಅಳವಡಿಸಬೇಕು. ಕೆರೆ ಒತ್ತುವರಿದಾರರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮುಖ್ಯಾಂಶಗಳು

- ಕೆರೆಗೆ ಹೊಂದಿಕೊಂಡ ಭೂಮಾಲೀಕರಿಂದ ಒತ್ತುವರಿ
- ಯಂತ್ರೋಪಕರಣಗಳನ್ನು ಮುಚ್ಚಿ ಕೃಷಿ ಕಾರ್ಯ
- ಅಳಿವಿನಂಚಿಗೆ ತಲುಪಿದ ಕೆರೆಗಳು; ರಕ್ಷಣೆಗೆ ಮನವಿ

ಚಂದ್ರಶೇಖರ್

ಸಂತೋಷ್

ಹುಸ್ಕೂರು ಗ್ರಾಮದ ಕೆರೆಯ ಅಂಗಳ ಕೃಷಿ ಚಟುವಟಿಕೆಗೆ ಬಳಕೆ ಆಗುತ್ತಿದೆ

'ಡಿಕೆಶಿ ನಿರ್ದೇಶನ ನೀಡಿದರೂ ಪ್ರಯೋಜನವಾಗಿಲ್ಲ'

'ಪ್ರಸ್ತುತ ಮುಖ್ಯಮಂತ್ರಿ ಆಗಿರುವ ಡಿ.ಕೆ. ಶಿವಕುಮಾರ್ ಅವರು ಹಿಂದೆ ಉಪ ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಕೆ.ಆರ್. ಪುರದಲ್ಲಿ ಜನತಾ ದರ್ಶನ ನಡೆಸಿದ್ದರು. ಕೆರೆಗಳ ಒತ್ತುವರಿಯನ್ನು ತೆರವು ಮಾಡುವಂತೆ ಸ್ಥಳೀಯರು ಮನವಿ ನೀಡಿ ಒತ್ತಾಯಿಸಿದ್ದೆವು. ಪೂರ್ವ ತಾಲ್ಲೂಕು ತಹಶೀಲ್ದಾರ್ ಹಾಗೂ ನೀರಾವರಿ ಸೇರಿದಂತೆ ವಿವಿಧ ಇಲಾಖೆಗಳಿಗೆ ಪತ್ರ ಬರೆದು ಒತ್ತುವರಿ ತೆರವು ಮಾಡುವಂತೆ ಶಿವಕುಮಾರ್ ನಿರ್ದೇಶನ ನೀಡಿದ್ದರು. ಆದರೆ ಅಧಿಕಾರಿಗಳು ಭೂ ಮಾಫಿಯಾದವರೊಂದಿಗೆ ಶಾಮಿಲಾಗಿ ತೆರವು ಮಾಡುವ ಗೋಜಿಗೆ ಹೋಗಿಲ್ಲ' ಎಂದು ಚಂದ್ರಶೇಖರ್ ತಿಳಿಸಿದರು.

ಪ್ರೇಯಸಿಯ ಕತ್ತು ಸೀಳಿ ಕೊಂದ ಪ್ರಿಯಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿಯಕರ ತನ್ನ ಪ್ರೇಯಸಿಯ ಕತ್ತು ಸೀಳಿ ಕೊಲೆ ಮಾಡಿರುವ ಘಟನೆ ಬೆಳ್ಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಸಿಕ್ಕಿಂನ ಅಟಿ ಹಂಗ್ಮಾ ಸುಭಾ (22) ಮೃತ ಯುವತಿ. ಪಶ್ಚಿಮ ಬಂಗಾಳದ ಆರೋಪಿ ಪುರ್ಬಾ ಲೆಪ್ಚಾ ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪರಸ್ಪರ ಪ್ರೀತಿಸುತ್ತಿದ್ದ ಇಬ್ಬರೂ ಒಂದು ವರ್ಷ ಸಿಕ್ಕಿಂನಲ್ಲಿ ಒಟ್ಟಿಗೆ ವಾಸವಾಗಿದ್ದರು. ಬಳಿಕ ಕೆಲಸಕ್ಕಾಗಿ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದು ದೊಡ್ಡಕನ್ನಳ್ಳಿಯಲ್ಲಿನ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಾಗಿದ್ದರು.

ಅಟಿ ಹಂಗ್ಮಾ ಸುಭಾ , ಪುರ್ಬಾ ಲೆಪ್ಚಾ

ಯುವತಿ ಸಲೂನ್‌ವೊಂದರಲ್ಲಿ ರಿಸೆಪ್ಷನಿಸ್ಟ್ ಕೆಲಸಕ್ಕೆ ಸೇರಿದ್ದಳು. ಆರೋಪಿ ಹೋಟೆಲ್‌ವೊಂದರಲ್ಲಿ ವೇಟರ್ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಯುವಕನೊಬ್ಬನ ಜೊತೆ ಯುವತಿ ಸಲುಗೆ ಹೊಂದಿದ್ದಾಳೆ ಎಂಬ ಅನುಮಾನದ ಮೇಲೆ ಇಬ್ಬರ ನಡುವೆ ಜಗಳವಾಗಿತ್ತು. ಭಾನುವಾರ ಬೆಳಿಗ್ಗೆಯೂ ಇದೇ ವಿಚಾರವಾಗಿ ವಾಗ್ವಾದ ನಡೆದಿದೆ. ಕೋಪದಲ್ಲಿ ಆರೋಪಿ, ಅಡುಗೆ ಮನೆಯಲ್ಲಿದ್ದ ಚಾಕುವಿನಿಂದ ಯುವತಿಯ ಕತ್ತು ಸೀಳಿ ಕೊಲೆ ಮಾಡಿದ್ದಾನೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಸೈದುಲು ಅಡಾವತ್ ಮಾಹಿತಿ ನೀಡಿದ್ದಾರೆ.

ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆಯ ಬಳಿಕ ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ. ಮುಂದಿನ ತನಿಖೆ ನಡೆಯುತ್ತಿದೆ ಎಂದು ಡಿಸಿಪಿ ಹೇಳಿದ್ದಾರೆ.

ಮಗು ಕೊಲೆ: ತನಿಖೆ ಚುರುಕು

ಬೆಂಗಳೂರು: ಐದು ವರ್ಷದ ಮಗು ವೆನ್ನೆಲಾ ಕೊಲೆ ಪ್ರಕರಣ ಸಂಬಂಧ ಆರೋಪಿ ತಾಯಿ ಪ್ರಿಯಾಂಕಾ ಹಾಗೂ ಪ್ರಿಯಕರ ಮೋಹನ್ ಅವರನ್ನು ಬಂಧಿಸಿರುವ ಕಾಡುಗೋಡಿ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಪೊಲೀಸ್ ಕಸ್ಟಡಿಯಲ್ಲಿರುವ ಇಬ್ಬರನ್ನೂ ತೀವ್ರ ವಿಚಾರಣೆಗೆ ಒಳಪಡಿಸಿರುವ ಪೊಲೀಸರು, ಹೇಳಿಕೆಗಳನ್ನು ಪ್ರತ್ಯೇಕವಾಗಿ ದಾಖಲಿಸಿಕೊಳ್ಳುತ್ತಿದ್ದಾರೆ.

ಈ ಪ್ರಕರಣದಲ್ಲಿ ಪೊಲೀಸರು ವೈಜ್ಞಾನಿಕ ತನಿಖೆಗೆ ಒತ್ತು ನೀಡಿದ್ದು, ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಅನುಸರಿಸಿದ್ದ ಮಾದರಿಯಲ್ಲೇ ಸಾಕ್ಷ್ಯ ಸಂಗ್ರಹ ಕಾರ್ಯ ನಡೆಯುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಾಣಸವಾಡಿ ಎಸಿಪಿ ಅನೂಪ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡಿದೆ. ಕೊಲೆಯಾದ ದಿನ ಆರೋಪಿಗಳ ಚಲನವಲನಗಳ ಪರಿಶೀಲನೆ, ಬಟ್ಟೆ, ಪಾದರಕ್ಷೆ ಸೇರಿ ತಾಂತ್ರಿಕ ಮತ್ತು ವೈಜ್ಞಾನಿಕ ಸಾಕ್ಷ್ಯಗಳ ಸಂಗ್ರಹ ಕಾರ್ಯ ನಡೆಯುತ್ತಿದೆ. ಬಾಲಕಿ ಕುಟುಂಬದವರ ವಿಚಾರಣೆ ಮಾಡಲಾಗುವುದು. ಆರೋಪಿಗಳು ಹಾಗೂ ಮಗು ಧರಿಸಿದ ಬಟ್ಟೆಗಳ ಸಂಗ್ರಹಕ್ಕೆ ಪ್ರಯತ್ನಿಸಲಾಗುತ್ತಿದ್ದು, ಆರೋಪಿಗಳು ಓಡಾಡಿದ್ದ ಪ್ರತಿಯೊಂದು ಸ್ಥಳದಲ್ಲಿ ಪರಿಶೀಲನೆ ಮಾಡಲಾಗುವುದು ಹಾಗೂ ಎಲ್ಲ ವಸ್ತುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಚಿನ್ನದ ಅಂಗಡಿ ದರೋಡೆ: ಆರೋಪಿಗಳ ಬಂಧನ

ನೆಲಮಂಗಲ: ತಾಲ್ಲೂಕಿನ ಟಿ. ಬೇಗೂರಿನಲ್ಲಿ ಚಾಕು ತೋರಿಸಿ ಚಿನ್ನದ ಅಂಗಡಿ ದರೋಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಇನ್‌ಸ್ಪೆಕ್ಟರ್ ನರೇಂದ್ರಬಾಬು ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ರಾಜಸ್ಥಾನದ ಪುಷ್ಪೇಂದ್ರ ಸಿಂಗ್, ಕೀರ್ತಿರಾಮ್, ಬಾಬುಲಾಲ್ ಎಂಬುವವರನ್ನು ಬಂಧಿಸಿದ್ದಾರೆ.

ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು ₹5 ಲಕ್ಷ ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು.

ಈ ಹಿಂದೆ ಮಾದನಾಯಕನಹಳ್ಳಿಯಲ್ಲಿ ಪಿಸ್ತೂಲ್ ತೋರಿಸಿ ಚಿನ್ನದ ಅಂಗಡಿ ದರೋಡೆ ಮಾಡಿದ್ದರು. ಇವರ ಮೇಲೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಹಲವು ಪ್ರಕರಣಗಳು ದಾಖಲಾಗಿದೆ.

ಮೈ ಮೇಲೆ ವಿಷ ಸುರಿದುಕೊಂಡು ಆತ್ಮಹತ್ಯೆ ನಾಟಕವಾಡಿದ ಪತಿ

ಕತ್ತು ಹಿಸುಕಿ ಹೆಂಡತಿಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಹಸ್ಯವಾಗಿ ಮದುವೆಯಾಗಿದ್ದರೂ ಪೋಷಕರ ಒತ್ತಾಯದ ಮೇರೆಗೆ ಮತ್ತೊಂದು ಮದುವೆಗೆ ಮುಂದಾಗಿದ್ದ ಪತ್ನಿಯನ್ನು ಪತಿಯೇ ಕತ್ತು ಹಿಸುಕಿ ಕೊಲೆ ಮಾಡಿರುವ ಘಟನೆ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ತಿಗಳರಪಾಳ್ಯದ ತುಳಸಿನಗರ ನಿವಾಸಿ ಭವಾನಿ (22) ಕೊಲೆಯಾದ ಮಹಿಳೆ. ಘಟನೆ ಸಂಬಂಧ ಭವಾನಿ ತಂದೆ ಶ್ರೀನಿವಾಸ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ಭವಾನಿ ಪತಿ ಹಾಗೂ ಆಟೊ ಚಾಲಕ ಚಂದ್ರಶೇಖರ್ ಅಲಿಯಾಸ್ ಚಂದನ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮಾಗಡಿ ತಾಲ್ಲೂಕಿನ ಭವಾನಿ ಎರಡು ವರ್ಷದಿಂದ ಮನೆ ಸಮೀಪದ ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದರು. ಹೀಗಾಗಿ ಈಕೆಯ ಪೋಷಕರು ವಾರಕ್ಕೊಮ್ಮೆ ಬಂದು ಹೋಗುತ್ತಿದ್ದರು. ಚಂದ್ರಶೇಖರ್ ಆಟೊದಲ್ಲಿ ಭವಾನಿ ಮೊಬೈಲ್ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದರು. ಈ ವೇಳೆ ಇಬ್ಬರ ಪರಿಚಯವಾಗಿ, ಪರಸ್ಪರ ಪ್ರೀತಿಸುತ್ತಿದ್ದರು. ಚಂದ್ರಶೇಖರ್‌ಗೆ ಮದುವೆಯಾಗಿ 6 ವರ್ಷದ ಮಗ ಇದ್ದಾನೆ. ಆದರೂ ಮನೆಯವರಿಗೆ ತಿಳಿಯದಂತೆ ಗುಟ್ಟಾಗಿ ಮದುವೆಯಾಗಿ, ಪ್ರತ್ಯೇಕವಾಗಿ ವಾಸವಾಗಿದ್ದರು ಎಂದು ಪೊಲೀಸರು ಹೇಳಿದರು.

ಮಗಳು ಚಂದ್ರಶೇಖರ್ ಜತೆ ಮದುವೆಯಾಗಿರುವ ವಿಚಾರ ಭವಾನಿ ಪೋಷಕರಿಗೆ ಗೊತ್ತಿಲ್ಲ. ಆದರೆ, ಯುವಕನೊಬ್ಬನನ್ನು ಪ್ರೀತಿಸುತ್ತಿದ್ದಾಳೆ ಎಂಬ ವಿಚಾರ ತಿಳಿದು ಬೇರೆ ಮದುವೆಗೆ ಸಿದ್ಧತೆ ನಡೆಸಿದ್ದರು. ಇತ್ತ ಪೋಷಕರ ಮನವಿಗೆ ಸ್ಪಂದಿಸಿ ಭವಾನಿ ಕೂಡ ಬೇರೆ ಮದುವೆ ಮಾಡಿಕೊಳ್ಳಲು ಮುಂದಾಗಿದ್ದಳು.

ಇದೇ ವಿಚಾರಕ್ಕೆ ಜೂನ್ 12ರ ರಾತ್ರಿ ಇಬ್ಬರ ಮಧ್ಯೆ ತೀವ್ರ ಜಗಳವಾಗಿತ್ತು. ಇಬ್ಬರೂ ಒಟ್ಟಿಗೆ ಸಾಯುವ ನಿರ್ಧಾರ ಮಾಡಿ ವಿಷ ಸೇವಿಸಿದ್ದರು. ಬಳಿಕ ತಾನು ಸ್ವಲ್ಪ ವಿಷ ಸೇವಿಸಿ, ಮೈ ಮೇಲೆ ಸುರಿದುಕೊಂಡು ಆತ್ಮಹತ್ಯೆಯ ನಾಟಕವಾಡಿದ್ದಾನೆ. ಭವಾನಿ ವಾಂತಿ ಮಾಡಿಕೊಳ್ಳಲಾರಂಭಿಸಿದರು. ಆಕೆ ಬದುಕಿಬಿಡಬಹುದು ಎಂದು ಭಾವಿಸಿದ ಚಂದ್ರಶೇಖರ್, ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ಕೊಲೆಯ ಬಳಿಕ ಭವಾನಿಯ ಮೊಬೈಲ್ ಬಳಸಿದ್ದ ಚಂದ್ರಶೇಖರ್, ಇಬ್ಬರೂ ಮದುವೆಯಾಗಿ ಹಾರ ಬದಲಾಯಿಸಿಕೊಂಡಿದ್ದ ಫೋಟೊವನ್ನು ಆಕೆಯ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ 'ಹ್ಯಾಪಿ ಆ್ಯನಿವರ್ಸರಿ ಗಂಡ' ಎಂಬ ಶೀರ್ಷಿಕೆಯೊಂದಿಗೆ ಪೋಸ್ಟ್ ಮಾಡಿದ್ದ. ಅದನ್ನು ಗಮನಿಸಿದ ಭವಾನಿ ಕುಟುಂಬಸ್ಥರು ಗಾಬರಿಗೊಂಡು ಸಂಪರ್ಕಿಸಲು ಯತ್ನಿಸಿದಾಗ ಫೋನ್ ಕರೆ ಸ್ವೀಕರಿಸಿಲ್ಲ. ಕೊನೆಗೆ ಆಕೆ ವಾಸಿಸುತ್ತಿದ್ದ ಮನೆಯ ಮಾಲೀಕರಿಗೆ ಕರೆ ಮಾಡಿದ್ದಾರೆ. ಮಾಲೀಕರು ಬಂದು ಪರಿಶೀಲಿಸಿದಾಗ ಭವಾನಿ ಮೃತಪಟ್ಟಿದ್ದರು. ಅಸ್ವಸ್ಥನಾಗಿದ್ದ ಚಂದ್ರಶೇಖರ್‌ನನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಘಟನಾ ಸ್ಥಳಕ್ಕೆ ಬ್ಯಾಡರಹಳ್ಳಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರಿಸಿರುವುದಾಗಿ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರದ ಮುನ್ಸಿಪಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಕೆಪಿಎಸ್‌ಸಿ ಪರೀಕ್ಷೆಗಳ ಉಚಿತ ತರಬೇತಿ ಕಾರ್ಯಾಗಾರವನ್ನು ಶಾಸಕ ಪ್ರದೀಪ್ ಈಶ್ವರ್ ಉದ್ಘಾಟಿಸಿದರು. ಹಿರಿಯ ಅಧಿಕಾರಿ ಜಿನೇಂದ್ರ ಕಣಗಾವಿ, ಇತಿಹಾಸ ತಜ್ಞ ಗೆಜ್ಜೆ ಪಾಲ್ಗೊಂಡಿದ್ದರು

ಅತ್ಯಾಚಾರ; ಆಟೊ ಚಾಲಕ ಬಂಧನ

ಹುಬ್ಬಳ್ಳಿ: ಹನ್ನೊಂದು ವರ್ಷದ ಬಾಲಕಿಯ ಮೇಲೆ ಆಟೊ ಚಾಲಕ ಅತ್ಯಾಚಾರ ಎಸಗಿದ ಆರೋಪದ ಮೇಲೆ ಇಲ್ಲಿನ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ.

ಆರೋಪಿಯು ಬಾಲಕಿಯನ್ನು ಬಲವಂತವಾಗಿ ಆಟೊದಲ್ಲಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ. ಘಟನೆ ಬಗ್ಗೆ ಯಾರಿಗೂ ಹೇಳದಂತೆ ಜೀವ ಬೆದರಿಕೆ ಹಾಕಿದ್ದಾನೆ ಎಂದು ಬಾಲಕಿಯ ಸಾಕು ತಾಯಿ ದೂರಿನಲ್ಲಿ ತಿಳಿಸಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಡಿಸಿಪಿ ಶ್ರುತಿ ತಿಳಿಸಿದ್ದಾರೆ.

'ಬ್ರ್ಯಾಂಡ್ ಅಲ್ಲ, ಬ್ಯಾಡ್ ಬೆಂಗಳೂರು'

ಬೆಂಗಳೂರು: 'ರಾಜ್ಯದಲ್ಲಿ ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ ಹಾಗೂ ಕೃಷ್ಣ ಬೈರೇಗೌಡ ಅವರು ಆರ್ಥಿಕ ಬಲಾತ್ಕಾರ ಮಾಡುತ್ತಿದ್ದಾರೆ. ಬೆಂಗಳೂರು ಭ್ರಷ್ಟಾಚಾರದ ಕೇಂದ್ರವಾಗಿದೆ' ಎಂದು ಬಿಜೆಪಿಯ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗರವಾಲ್ ಟೀಕಿಸಿದರು.

ಈಚೆಗೆ ಇಲ್ಲಿ ನಡೆದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಶಕ್ತಿ ಕೇಂದ್ರ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, 'ಅಭಿವೃದ್ಧಿ ಕೆಲಸ ಆಗುತ್ತಿಲ್ಲ, ಮೂಲಸೌಕರ್ಯ ತಲುಪಿಸುವ ಯೋಜನೆಗಳೇ ಇಲ್ಲದ ಇದು ಬ್ರ್ಯಾಂಡ್ ಅಲ್ಲ, ಬ್ಯಾಡ್ ಬೆಂಗಳೂರು' ಎಂದು ದೂರಿದರು.

ರಾಜ್ಯ ಸಹ-ಉಸ್ತುವಾರಿ ಸುಧಾಕರ ರೆಡ್ಡಿ, ರಾಜ್ಯ ಕಾರ್ಯದರ್ಶಿ ಹೆಚ್. ಸಿ.ತಮ್ಮೇಶ್ ಗೌಡ ಮಾತನಾಡಿದರು.

ಬೆಂಗಳೂರು ಹೆರಿಟೇಜ್ ಹಬ್ಬಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲೇ ಉತ್ತಮ ಹವಾಮಾನ ಹೊಂದಿರುವ ಉದ್ಯಾನ ನಗರಿ ಬೆಂಗಳೂರಿನ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ' ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬಿಎನ್ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ವಿಕಸನ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಬೆಂಗಳೂರು ಹೆರಿಟೇಜ್ ಹಬ್ಬಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಗಾಳಿ, ಮಳೆ, ಬಿಸಿಲು ಸೇರಿದಂತೆ ಎಲ್ಲಾ ರೀತಿಯ ಹವಾಮಾನ ಸಮತೋಲನವಿರುವ ಬೆಂಗಳೂರು ನಗರ ನಮ್ಮ ಹೆಮ್ಮೆಯ ಊರು. ಮುಂದಿನ ಪೀಳಿಗೆಗೆ ಶುದ್ಧ ಪರಿಸರ ಉಳಿಸಿ ಹೋಗುವುದು ನಮ್ಮ ಜವಾಬ್ದಾರಿ' ಎಂದು ಅಭಿಪ್ರಾಯಪಟ್ಟರು.

ಶಾಸಕರಾದ ಉದಯ ಗರುಡಾಚಾರ್, ಟಿ.ಎ.ಶರವಣ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ಕರ್ನಾಟಕ ಕ್ಯಾನ್ಸರ್ ಸೊಸೈಟಿ ಅಧ್ಯಕ್ಷ ಡಾ. ಸಿ.ಎ. ಕಿಶೋರ್, ಗರುಡ ಪ್ರತಿಷ್ಠಾನದ ಅಧ್ಯಕ್ಷೆ ಮೇದಿನಿ ಗರುಡಾಚಾರ್, ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ಅಧ್ಯಕ್ಷ ನಾರಾಯಣ ರಾವ್ ಮಾನೆ ಉಪಸ್ಥಿತರಿದ್ದರು.

ಓಟ, ಯೋಗ ಪ್ರದರ್ಶನ, ಮಲ್ಲಕಂಬ, ಸೈಕ್ಲಿಂಗ್ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

9 ಸಾವಿರ ಬೀದಿ ದೀಪ ಅಳವಡಿಕೆ

ಕೆಂಪೇಗೌಡ ಬಡಾವಣೆ: ಮೂಲಸೌಕರ್ಯ ಒದಗಿಸುವ ಕಾಮಗಾರಿ ಚುರುಕು

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಒದಗಿಸುವ ಕಾಮಗಾರಿ ಭರದಿಂದ ಸಾಗಿದೆ. ಒಂಬತ್ತು ಬ್ಲಾಕ್‌ಗಳಲ್ಲೂ ರಸ್ತೆ, ವಿದ್ಯುತ್ ಸಂಪರ್ಕ, ಚರಂಡಿ ವ್ಯವಸ್ಥೆ ಹಾಗೂ ಬೀದಿ ದೀಪ ಅಳವಡಿಕೆ ಕಾರ್ಯ ಅಂತಿಮ ಹಂತಕ್ಕೆ ಬಂದಿದೆ.

ಬಡಾವಣೆಯ ನಿವಾಸಿಗಳು, ನಿವೇಶನದಾರರು ಮೂಲಸೌಕರ್ಯ ಒದಗಿಸುವಂತೆ ಕೋರಿ ನಗರಾಭಿವೃದ್ಧಿ ಇಲಾಖೆ, ರೇರಾ, ವಿಧಾನಮಂಡಲದ ಅರ್ಜಿಗಳ ಸಮಿತಿಗೂ ಮನವಿ ಸಲ್ಲಿಸಿದ್ದರು. ಭೂಸ್ವಾಧೀನ ವಿಳಂಬ ಹಾಗೂ ಹಣದ ಕೊರತೆಯಿಂದ ಮೂಲಸೌಕರ್ಯ ಒದಗಿಸುವ ಗಡುವು ವಿಸ್ತರಿಸಲಾಗುತ್ತಿತ್ತು. ಈಗ ಪ್ರಾಧಿಕಾರ ಅಭಿವೃದ್ಧಿಗೆ ವೇಗ ನೀಡಿದ್ದು, ಶೇಕಡ 90ರಷ್ಟು ಕೆಲಸ ಪೂರ್ಣಗೊಂಡಿದೆ.

ನಿವಾಸಿಗಳ, ನಿವೇಶನದಾರರ ಹೋರಾಟದ ಫಲವಾಗಿ ಮೂಲ ಸೌಕರ್ಯ ಒದಗಿಸುವ ಕಾಮಗಾರಿಗಳು ಚುರುಕುಗೊಂಡಿವೆ. ಹತ್ತು ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು (ಎಸ್‌ಟಿಪಿ) ಪೂರ್ಣಗೊಂಡಿವೆ. 9 ಸಾವಿರಕ್ಕೂ ಅಧಿಕ ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸಲಾಗಿದ್ದು, ಈವರೆಗೆ ನಾಲ್ಕು ಸಾವಿರ ದೀಪಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಜೂನ್ ತಿಂಗಳ ಅಂತ್ಯಕ್ಕೆ ಕೆಲಸ ಪೂರ್ಣಗೊಳ್ಳಲಿದೆ.

ಬಡಾವಣೆ ನಿರ್ಮಾಣಕ್ಕೆ ಜಮೀನು ನೀಡಿದ ರೈತರ ಗ್ರಾಮಗಳಿಗೆ ಪ್ರಾಧಿಕಾರದ ವತಿಯಿಂದಲೇ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಈಗಾಗಲೇ ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಿಸಲಾಗಿದೆ.

'ಸುಮಾರು 2,800 ಎಕರೆಯಲ್ಲಿ ವಿವಿಧ ಅಳತೆಯ 32 ಸಾವಿರ ನಿವೇಶಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ಪೈಕಿ ಸುಮಾರು 22,481 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಆದರೆ, ಮೂಲಸೌಕರ್ಯ ಕೊರತೆಯ ಕಾರಣಕ್ಕೆ ನಿವೇಶನಗಳ ಮಾಲೀಕರು ಮನೆ ನಿರ್ಮಿಸಲು ಮುಂದಾಗುತ್ತಿರಲಿಲ್ಲ. ಕೊಮ್ಮಘಟ್ಟದಲ್ಲಿ ವಿದ್ಯುತ್ ಉಪಕೇಂದ್ರ ಕಾರ್ಯಾರಂಭ ಮಾಡಿದೆ. ಮುಖ್ಯ ರಸ್ತೆಗಳಿಗೆ ಡಾಂಬರೀಕರಣ ಆಗಿದೆ. ಒಳ ರಸ್ತೆಗಳಿಗೆ ಬಾಕಿ ಇದೆ' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

'ಶೇಕಡ 90ರಷ್ಟು ರಸ್ತೆ ಅಭಿವೃದ್ಧಿಯೂ ಆಗಿದೆ. ನಿವೇಶನ ಮಾಲೀಕರು ಮನೆ ನಿರ್ಮಿಸಲು ಆರಂಭಿಸಿದರೆ, ಇತರೆ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ. ಬಡಾವಣೆ ಹಸ್ತಾಂತರಿಸಿದ ನಂತರ ಉದ್ಯಾನ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವಹಿಸಿಕೊಳ್ಳುತ್ತದೆ' ಎಂದು ಹೇಳಿದರು.

'ಯುದ್ಧದ ಪರಿಣಾಮ ಕಚ್ಚಾವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ, ಕೆಲವು ರಸ್ತೆಗಳಿಗೆ ಡಾಂಬರು ಹಾಕುವ ಕಾರ್ಯ ವಿಳಂಬವಾಗಿದೆ. ಕಚ್ಚಾವಸ್ತುಗಳು ಸಮಯಕ್ಕೆ ಪೂರೈಕೆ ಆಗಿದ್ದರೆ ಈ ವೇಳೆಗೆ ಕಾಮಗಾರಿ ಪೂರ್ಣಗೊಳ್ಳುತ್ತಿತ್ತು. ಕೆಲವು ಜಮೀನುಗಳಿಗೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥ ಆಗಬೇಕಿದೆ. ಪ್ರಾಧಿಕಾರದ ಪರ ಆದೇಶ ಬಂದ ತಕ್ಷಣ ಅದನ್ನು ಸ್ವಾಧೀನಕ್ಕೆ ಪಡೆಯಲಾಗುತ್ತಿದೆ. ಬಡಾವಣೆಗೆ ಆರನೇ ಹಂತದಲ್ಲಿ ಕಾವೇರಿ ನೀರು ಪೂರೈಕೆ ಮಾಡುವ ಉದ್ದೇಶ ಇದೆ. ಈಗಾಗಲೇ ಪೈಪ್‌ಲೈನ್ ಅಳವಡಿಕೆ ಕಾರ್ಯ ಮುಗಿದಿದೆ' ಎಂದು ಮಾಹಿತಿ ನೀಡಿದರು.

ಶೀಘ್ರ ಕೆಲಸ ಪೂರ್ಣಗೊಳಿಸಿ: 'ಬಡಾವಣೆಗೆ ಬೀದಿ ದೀಪಗಳು ಬಂದಿವೆ. ಸುಮಾರು ಒಂಬತ್ತು ಸಾವಿರಕ್ಕೂ ಅಧಿಕ ಎಲ್‌ಇಡಿ ಬೀದಿ ದೀಪ ಅಳವಡಿಸಲಾಗಿದೆ. ಈ ತಿಂಗಳ ಅಂತ್ಯಕ್ಕೆ ಬಾಕಿ ಇರುವ ಕೆಲಸ ಪೂರ್ಣಗೊಳ್ಳಲಿದೆ. ಮನೆಗಳು ನಿರ್ಮಾಣವಾಗುತ್ತಿರುವ ಕಡೆ ಬೀದಿ ದೀಪಗಳನ್ನು ಅಳವಡಿಸಲಾಗುತ್ತಿದೆ. ಎಲ್ಲ ಕಡೆಗೂ ಬೀದಿ ದೀಪಗಳನ್ನು ಅಳವಡಿಸಬೇಕು. ನೀರು ಸರಬರಾಜು, ನಿವೇಶನ ಗುರುತು, ನಂಬರ್ ನೀಡುವ ಕೆಲಸ ಆಗಬೇಕಿದೆ. ಉಳಿದ ಕೆಲಸಗಳನ್ನು ಶೀಘ್ರವೇ ಪೂರ್ಣಗೊಳಿಸಬೇಕು' ಎಂದು ನಿವಾಸಿಗಳು ಆಗ್ರಹಿಸಿದರು.

ಕೆಂಪೇಗೌಡ ಬಡಾವಣೆಯ ರಸ್ತೆಗಳಿಗೆ ಎಲ್‌ಇಡಿ ದೀಪ ಅಳವಡಿಸಲಾಗಿದೆ

32 ಸಾವಿರ ನಿವೇಶನ ಅಭಿವೃದ್ಧಿ

ಯಶವಂತಪುರ ಹೋಬಳಿಯ ಸೀಗೆಹಳ್ಳಿ, ಕನ್ನಳ್ಳಿ, ಕೊಡಿಗೇಹಳ್ಳಿ, ಮಂಗನಹಳ್ಳಿ ಹಾಗೂ ದಕ್ಷಿಣ ತಾಲ್ಲೂಕಿನ ಕೊಮ್ಮಘಟ್ಟ, ಭೀಮನಕುಪ್ಪೆ, ರಾಮಸಂದ್ರ, ರಾಮಸಾಗರ, ಕೆಂಚನಪುರ ಸೇರಿ ಸುತ್ತಲಿನ ಗ್ರಾಮಗಳಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಿಸಲು 4,043 ಎಕರೆ 27 ಗುಂಟೆ ಜಮೀನು ಸ್ವಾಧೀನಕ್ಕೆ 2010ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು.

ಪ್ರಾಧಿಕಾರಕ್ಕೆ 3 ಸಾವಿರ ಎಕರೆ ಜಮೀನು ಹಸ್ತಾಂತರವಾಗಿದ್ದು, 2,800 ಎಕರೆ ಪ್ರದೇಶದಲ್ಲಿ ವಿವಿಧ ಅಳತೆಯ 32 ಸಾವಿರ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ. 200 ಎಕರೆ ಪ್ರದೇಶದಲ್ಲಿ ಕಾಮಗಾರಿ ನಡೆಯುತ್ತಿದೆ.

ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆ ನಡುವೆ ನಿರ್ಮಿಸಿರುವ ಈ ಬಡಾವಣೆಯ ನಿವೇಶನಗಳನ್ನು 2016 ಮತ್ತು 2018ರಲ್ಲಿ ಹಂಚಿಕೆ ಮಾಡಲಾಗಿತ್ತು. ಬಡಾವಣೆಯಲ್ಲಿ 9 ಬ್ಲಾಕ್‌ಗಳಿದ್ದು, 75 ಕುಟುಂಬಗಳಷ್ಟೇ ಮನೆ ನಿರ್ಮಿಸಿಕೊಂಡಿವೆ. 50ಕ್ಕೂ ಅಧಿಕ ಮನೆಗಳು ನಿರ್ಮಾಣ ಹಂತದಲ್ಲಿವೆ. ಇನ್ನೂ ಹಲವು ನಿವೇಶನ ಮಾಲೀಕರು ಮನೆ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದಾರೆ.

ಸುದ್ದಿ 2 ನಿಮಿಷ

ಡಾಜ್‌ಬಾಲ್: ಬೆಂಗಳೂರು ಸೆಂಟ್ರಲ್ ಬಾಲಕಿಯರಿಗೆ ಪ್ರಶಸ್ತಿ

ಬೆಂಗಳೂರು: ಮೈಸೂರು ಜಿಲ್ಲಾ ಬಾಲಕರ ಹಾಗೂ ಬೆಂಗಳೂರು ಸೆಂಟ್ರಲ್ ಬಾಲಕಿಯರ ತಂಡಗಳು ಭಾನುವಾರ ಇಲ್ಲಿ ಮುಕ್ತಾಯಗೊಂಡ ನಾಲ್ಕನೇ ಆವೃತ್ತಿಯ ರಾಜ್ಯ ಮಟ್ಟದ ಸೀನಿಯರ್ಸ್ ಡಾಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ಮೈಸೂರು ಬಾಲಕರ ತಂಡವು ಫೈನಲ್‌ನಲ್ಲಿ 3-1 ಸೆಟ್‌ಗಳಿಂದ ಬೆಂಗಳೂರಿನ ಗರುಡ ಸ್ಪೋರ್ಟ್ಸ್ ಕ್ಲಬ್ ತಂಡದ ವಿರುದ್ಧ ಗೆಲುವು ಸಾಧಿಸಿತು. ಮೂರು ಮತ್ತು ನಾಲ್ಕನೇ ಸ್ಥಾನದ ನಿರ್ಧಾರಕ್ಕಾಗಿ ನಡೆದ ಪಂದ್ಯದಲ್ಲಿ ಬೆಂಗಳೂರಿನ ಟ್ರಾನ್ಸೆಂಡ್ ಪಿಯು ಕಾಲೇಜು ತಂಡವು ಹಾಸನ ಜಿಲ್ಲಾ ತಂಡವನ್ನು ಮಣಿಸಿತು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಬೆಂಗಳೂರು ಸೆಂಟ್ರಲ್ ತಂಡವು 3-0ಯಿಂದ ಮೈಸೂರು ಜಿಲ್ಲಾ ತಂಡವನ್ನು ಸೋಲಿಸಿತು. ಆತಿಥೇಯ ಹ್ಯಾಪಿ ವ್ಯಾಲಿ ಶಾಲಾ ತಂಡವು 2-1ರಿಂದ ಟ್ರಾನ್ಸೆಂಡ್ ಕಾಲೇಜು ತಂಡವನ್ನು ಸೋಲಿಸಿ, ತೃತೀಯ ಸ್ಥಾನ ತನ್ನದಾಗಿಸಿಕೊಂಡಿತು.

ರಾಜ್ಯ ಡಾಜ್‌ಬಾಲ್ ಅಸೋಸಿಯೇಷನ್, ಹ್ಯಾಪಿ ವ್ಯಾಲಿ ಶಾಲೆ ಹಾಗೂ ಗರುಡ ಸ್ಪೋರ್ಟ್ಸ್ ಕ್ಲಬ್ ಸಹಯೋಗದಲ್ಲಿ ಉತ್ತರಹಳ್ಳಿಯ ಹ್ಯಾಪಿ ವ್ಯಾಲಿ ಶಾಲೆಯಲ್ಲಿ ಚಾಂಪಿಯನ್‌ಷಿಪ್ ನಡೆಯಿತು. ಬಾಲಕರ ವಿಭಾಗದಲ್ಲಿ 20 ತಂಡಗಳು ಮತ್ತು ಬಾಲಕಿಯರ ವಿಭಾಗದಲ್ಲಿ 13 ತಂಡಗಳು ಭಾಗವಹಿಸಿದ್ದವು.

ರಾಷ್ಟ್ರೀಯ ವಾಲಿಬಾಲ್, ಕಬಡ್ಡಿ: ಬಿಎಂಟಿಸಿ ಚಾಂಪಿಯನ್

ಬೆಂಗಳೂರು: ಸಂಯುಕ್ತ ಭಾರತೀಯ ಖೇಲ್ ಫೌಂಡೇಷನ್ (ಎಸ್‌ಬಿಕೆಎಫ್) ಆಯೋಜಿಸಿದ್ದ 14ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕಬಡ್ಡಿ ಹಾಗೂ ವಾಲಿಬಾಲ್ ಸ್ಪರ್ಧೆಯಲ್ಲಿ ಬೆಂಗಳೂರು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ನೌಕರರ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಕ್ರೀಡಾಕೂಟ ನಡೆದಿತ್ತು. ಕಬಡ್ಡಿ ಸ್ಪರ್ಧೆಯಲ್ಲಿ 13 ರಾಜ್ಯಗಳ ತಂಡಗಳು ಭಾಗವಹಿಸಿದ್ದು, ಅಂತಿಮ ಪಂದ್ಯದಲ್ಲಿ ಕರ್ನಾಟಕದ ಬಿಎಂಟಿಸಿ ತಂಡವು ತಮಿಳುನಾಡು ತಂಡವನ್ನು ಸೋಲಿಸಿ ಪ್ರಶಸ್ತಿ ಪಡೆಯಿತು.

ವಾಲಿಬಾಲ್ ಸ್ಪರ್ಧೆಯಲ್ಲಿ 14 ರಾಜ್ಯಗಳ ತಂಡಗಳು ಭಾಗವಹಿಸಿದ್ದು, ಅಂತಿಮ ಪಂದ್ಯದಲ್ಲಿ ಬಿಎಂಟಿಸಿ ತಂಡವು ಹಿಮಾಚಲ ಪ್ರದೇಶ ರಾಜ್ಯ ಪೊಲೀಸ್ ತಂಡವನ್ನು ಸೋಲಿಸಿ ಪ್ರಥಮ ಸ್ಥಾನ ಗಳಿಸಿತು. ವ್ಯವಸ್ಥಾಪಕ ನಿರ್ದೇಶಕ ಕೆ.ಬಿ. ಶಿವಕುಮಾರ್, ನಿರ್ದೇಶಕ ಅಬ್ದುಲ್ ಅಹದ್ ಅವರು ಕ್ರೀಡಾಪಟುಗಳನ್ನು ಅಭಿನಂದಿಸಿದ್ದಾರೆ.

ಎನ್‌ಎಎಲ್ ವಿನ್ಯಾಸಗೊಳಿಸಿದ ಮೊದಲ ವಿಮಾನದ ಹಾರಾಟ ಯಶಸ್ವಿ

ಸ್ವದೇಶಿ ವಿಮಾನದಲ್ಲೇ ಪೈಲಟ್ ತರಬೇತಿ

• ಕೆ.ನರಸಿಂಹಮೂರ್ತಿ

ಬೆಂಗಳೂರು: ಕಡಿಮೆ ಖರ್ಚಿನಲ್ಲಿ, ಸ್ವದೇಶಿ ವಿಮಾನದಲ್ಲೇ ಪೈಲಟ್ ತರಬೇತಿ ಪಡೆಯಬೇಕೆಂಬ ದೇಶದ ಯುವಜನರ ಕನಸು ಸದ್ಯದಲ್ಲೇ ನನಸಾಗಲಿದೆ.

ದೇಶದಲ್ಲಿ ಖಾಸಗಿಯಾಗಿ ಪೈಲಟ್ ತರಬೇತಿ ಪಡೆಯುವುದು ದುಬಾರಿಯಾಗಿದೆ. ಕರ್ನಾಟಕದಲ್ಲಿ, ಬೆಂಗಳೂರಿನ ಜಕ್ಕೂರಿನಲ್ಲಿ ಮಾತ್ರ ಅತಿ ಹಳೆಯ ಸರ್ಕಾರಿ ತರಬೇತಿ ಸಂಸ್ಥೆ ಜಿಎಫ್‌ಟಿಎಸ್ ಕಾರ್ಯನಿರ್ವಹಿಸುತ್ತಿದ್ದು, ಅದು ಕೂಡ ತರಬೇತಿಗಾಗಿ ವಿದೇಶಿ ವಿಮಾನವನ್ನು ಬಳಸುತ್ತಿದೆ.

ಕೇಂದ್ರ ಸರ್ಕಾರದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಅಡಿಯಲ್ಲಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ವೈಮಾನಿಕ ಸಂಶೋಧನಾ ಸಂಸ್ಥೆಯು (ಎನ್‌ಎಎಲ್) ವಿನ್ಯಾಸಗೊಳಿಸಿದ ವಿಮಾನದ ಮಾದರಿ 'ಹಂಸ-3' ಅನ್ನು ಕಳೆದ ವರ್ಷ ಬಿಡುಗಡೆ ಮಾಡಲಾಗಿತ್ತು. ವಿಮಾನ ಉತ್ಪಾದಕ ಸಂಸ್ಥೆಯಾದ ಪಯೋನೀರ್ ಕ್ಲೀನ್ ಆಂಪ್ಸ್ ಮೊದಲ ವಿಮಾನವನ್ನು ನಿರ್ಮಿಸಿದ್ದು, ಅದರ ಪ್ರಾಯೋಗಿಕ ಹಾರಾಟವು ಇತ್ತೀಚೆಗೆ ಹೈದರಾಬಾದ್‌ನಲ್ಲಿ ನಡೆದಿದೆ.

ಎನ್‌ಎಎಲ್ ತಜ್ಞರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿರುವ ಉತ್ಪಾದಕ ಸಂಸ್ಥೆಯ ಸಿಬ್ಬಂದಿಯ ತಂಡ ಸಮಾಲೋಚನೆ ನಡೆಸುತ್ತಿದೆ. ಬಳಿಕ, ಇನ್ನೂ ಎರಡು ವಿಮಾನಗಳ ಉತ್ಪಾದನೆಯು ಶುರುವಾಗಲಿದೆ.

ಎರಡು ಆಸನಗಳ ವಿಮಾನಗಳನ್ನು ತಯಾರಿಸುವ ಪಯನೀರ್ ಕ್ಲೀನ್ ಆ್ಯಂಪ್ಸ್ ಸಂಸ್ಥೆಯು ಆಂಧ್ರಪ್ರದೇಶದ ಕುಪ್ಪಂನಲ್ಲಿ ವಿಮಾನಗಳನ್ನು ಉತ್ಪಾದಿಸುವ ಘಟಕವನ್ನು ಹೊಂದಿದ್ದು, ವಾರ್ಷಿಕವಾಗಿ 100 ವಿಮಾನಗಳನ್ನು ತಯಾರಿಸುವ ಗುರಿ ಹೊಂದಿದೆ.

'ತರಬೇತಿ ವಿಮಾನದ ಪ್ರಾಯೋಗಿಕ ಹಾರಾಟಕ್ಕೆ ಸೂಕ್ತ ಸ್ಥಳಾವಕಾಶ ರಾಜ್ಯದಲ್ಲಿ ಇಲ್ಲದಿರುವುದರಿಂದ, ಹೈದರಾಬಾದ್‌ನಲ್ಲಿ ಪ್ರಯೋಗ ನಡೆದಿದೆ. ಅಲ್ಲಿಗೆ ಸಂಶೋಧನಾ ಸಂಸ್ಥೆಯ ತಜ್ಞರ ತಂಡವು ತೆರಳಿತ್ತು. ಅದರ ಬಳಿಕ, ಉತ್ಪಾದಕ ಸಂಸ್ಥೆಯ ತಂಡವು ಬೆಂಗಳೂರಿಗೆ ಬಂದಿದ್ದು, ಮುಖಾಮುಖಿ ಚರ್ಚೆ ನಡೆಸಿದೆ. ಪ್ರಾಯೋಗಿಕ ಹಾರಾಟದ ಕುರಿತ ವಿಶ್ಲೇಷಣೆಯೂ ನಡೆದಿದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಕಲಿಕಾರ್ಥಿಗಳಿಗೆ ಅನುಕೂಲಕರವಾಗಿರುವಂತೆ ವಿಮಾನದ ತಂತ್ರಗಾರಿಕೆಯನ್ನು ಪರಿಷ್ಕರಿಸುವ ಸಲಹೆಯೂ ಬಂದಿದೆ. ಇಂಧನ ಕ್ಷಮತೆಗೂ ಆದ್ಯತೆ ನೀಡಲಾಗುವುದು. ಖಾಸಗಿ ಪೈಲಟ್ ಲೈಸೆನ್ಸ್ ಮತ್ತು ವಾಣಿಜ್ಯ ಪೈಲಟ್ ಲೈಸೆನ್ಸ್ ಪಡೆಯಲು ಅಗತ್ಯವಿರುವ ತರಬೇತಿಯನ್ನು ನೀಡಲಾಗುವುದು. ಯಾರೇ ಆದರೂ ಮೊದಲು ವಾಣಿಜ್ಯ ಲೈಸೆನ್ಸ್ ಅನ್ನು ಪಡೆಯುವುದು ಕಡ್ಡಾಯ. ಬೋಧನೆ ಮತ್ತು ಪ್ರಾಯೋಗಿಕ ಪಾಠಗಳು ತರಬೇತಿಯಲ್ಲಿ ಸೇರಿರುತ್ತವೆ' ಎಂದು ತಿಳಿಸಿವೆ.

ಮುಖ್ಯಾಂಶಗಳು

- ವೈಮಾನಿಕ ಸಂಶೋಧನೆ ಸಂಸ್ಥೆಯಲ್ಲಿ ಬಿರುಸಿನ ಚಟುವಟಿಕೆ
- ಇನ್ನೆರಡು ತರಬೇತಿ ವಿಮಾನ ಉತ್ಪಾದನೆಗೂ ನಡೆದಿದೆ ಸಿದ್ಧತೆ

ಏರೋಸ್ಪೇಸ್ ಕ್ಷೇತ್ರದಲ್ಲಿ ಅತಿ ಹೆಚ್ಚು ಸ್ಟಾರ್ಟ್-ಅಪ್‌ಗಳನ್ನು ಹೊಂದಿರುವ ವಿಶ್ವದ ಮೂರನೇ ನಗರವಾಗಿ ಬೆಂಗಳೂರು ಹೊರಹೊಮ್ಮಿದೆ

ಅಭಯ್ ಎ.ಫಸಲ್ಕರ್, ನಿರ್ದೇಶಕ, ಎನ್‌ಎಎಲ್

ಕಸ ನಿರ್ವಹಣೆ ಘಟಕ ಸ್ಥಳಾಂತರಿಸಿ: ಅಧಿಕಾರಿಗಳಿಗೆ ಸ್ಥಳೀಯರ ಆಗ್ರಹ

ರಾಜರಾಜೇಶ್ವರಿನಗರ: 'ಶಿವನಪಾಳ್ಯ ಮುಖ್ಯರಸ್ತೆಯಲ್ಲಿರುವ ಕಸ ನಿರ್ವಹಣೆ ಘಟಕದಲ್ಲಿ ಸಮರ್ಪಕವಾಗಿ ಕಸ ವಿಲೇವಾರಿ ಮಾಡುತ್ತಿಲ್ಲ' ಎಂದು ಆರೋಪಿಸಿರುವ ಸ್ಥಳೀಯ ನಿವಾಸಿಗಳು, ಈ ಘಟಕವನ್ನು ಸ್ಥಳಾಂತರ ಮಾಡುವಂತೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಅಧಿಕಾರಿಗಳನ್ನು ಒತ್ತಾಯಿಸಿದರು.

ಶಿವನಪಾಳ್ಯ, ನೇತಾಜಿ ಬಡಾವಣೆ (ಶಿರ್ಕೆ) ಹಾಗೂ ಜ್ಞಾನಭಾರತಿ ಬಡಾವಣೆ ನಿವಾಸಿಗಳು ಕಸ ವಿಂಗಡಿಸಿ, ವಿಲೇವಾರಿಗೆ ಕ್ರಮವಹಿಸದ ಘನತ್ಯಾಜ್ಯ ವಿಭಾಗದ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

'ಹಸಿ ಮತ್ತು ಒಣ ಕಸವನ್ನು ವಿಂಗಡಿಸಿ, ವಿಲೇವಾರಿ ಮಾಡದ ಪರಿಣಾಮ ಕಸದ ರಾಶಿ ಬೆಳೆಯುತ್ತಿದೆ. ಹಸಿ ಕಸ ಕೊಳೆತು ದುರ್ವಾಸನೆ ಬೀರುತ್ತಿದೆ. ಇದರಿಂದಾಗಿ ಮನೆಯಲ್ಲಿ ವಾಸ ಮಾಡಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿದಿಲ್ಲ' ಎಂದು ಮಹಿಳೆಯರು ವಾಗ್ದಾಳಿ ನಡೆಸಿದರು.

'ಪ್ರತಿನಿತ್ಯ ಸಂಗ್ರಹಿಸುವ ಹಸಿ ಕಸವನ್ನು ಬೇರೆಡೆ ಸ್ಥಳಾಂತರ ಮಾಡದ ಕಾರಣ ದುರ್ವಾಸನೆಯ ಜತೆಗೆ ಸೊಳ್ಳೆ, ನೊಣದ ಹಾವಳಿ ಹೆಚ್ಚಾಗಿದೆ. ಅನಾರೋಗ್ಯ ಸಮಸ್ಯೆಗಳಿಗೆ ಆಹ್ವಾನ ನೀಡಿದಂತಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡ ದುಬಾಸಿಪಾಳ್ಯ ಕೆ.ರಾಮು ಮಾತನಾಡಿ, 'ಇಲ್ಲಿಂದ ಘಟಕವನ್ನು ತೆರವುಗೊಳಿಸದಿದ್ದರೆ, ಎಲ್ಲ ಬಡಾವಣೆಯ ನಿವಾಸಿಗಳು ಹಗಲು-ರಾತ್ರಿ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಶಿವನಪಾಳ್ಯ ವಾರ್ಡ್ ಬಿಜೆಪಿ ಅಧ್ಯಕ್ಷ ಆರ್.ಸತ್ಯನಾರಾಯಣ (ಶಿವನಪಾಳ್ಯ ಸತ್ಯನಾರಾಯಣ) ಮಾತನಾಡಿ, 'ಶಿವನಪಾಳ್ಯ, ಶಿರ್ಕೆ ಮತ್ತು ಜ್ಞಾನಭಾರತಿ ಬಡಾವಣೆ ವ್ಯಾಪ್ತಿಯಲ್ಲಿ ಬಡವರು, ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ವಾಸ ಮಾಡುತ್ತಿದ್ದಾರೆ. ಕೊಳೆತ ಕಸದಿಂದ ಜನರು ಅನಾರೋಗ್ಯ ಪೀಡಿತರಾಗಿ, ಆಸ್ಪತ್ರೆಗಳಿಗೆ ಸಾವಿರಾರು ರೂಪಾಯಿ ಭರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ತುರ್ತಾಗಿ ಸಮಸ್ಯೆ ನಿವಾರಿಸಬೇಕು' ಎಂದು ಆಗ್ರಹಿಸಿದರು.

ಅಶ್ವಿನಿ– ಶಿಖಾ ಜೋಡಿಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಅಶ್ವಿನಿ ಭಟ್– ಶಿಖಾ ಗೌತಮ್ ಜೋಡಿಯು ಪುಣೆಯಲ್ಲಿ ಭಾನುವಾರ ಮುಕ್ತಾಯಗೊಂಡ ವಿ.ವಿ.ನಾಥು ಸ್ಮರಣಾರ್ಥ ಅಖಿಲ ಭಾರತ ಸೀನಿಯರ್ ರ‍್ಯಾಂಕಿಂಗ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ರಾಜ್ಯದ ಜೋಡಿಯು ಫೈನಲ್ ಹಣಾಹಣಿಯಲ್ಲಿ 21–12, 21–15ರಿಂದ ನೇರ ಗೇಮ್‌ಗಳಲ್ಲಿ ಶ್ರೇಯಾ ಬಾಲಾಜಿ (ತಮಿಳುನಾಡು) ಹಾಗೂ ಲಿಖಿತಾ ಶ್ರೀವಾಸ್ತವ (ದೆಹಲಿ) ಅವರನ್ನು ಸೋಲಿಸಿತು. ಅಗ್ರ ಶ್ರೇಯಾಂಕ ಪಡೆದಿದ್ದ ಈ ಜೋಡಿ 35 ನಿಮಿಷಗಳಲ್ಲಿ ಪಂದ್ಯವನ್ನು ತನ್ನದಾಗಿಸಿಕೊಂಡಿತು. ಇವರಿಬ್ಬರೂ ಸೀನಿಯರ್ ರಾಷ್ಟ್ರೀಯ ಮಹಿಳಾ ಡಬಲ್ಸ್‌ನ ಹಾಲಿ ಚಾಂಪಿಯನ್ ಕೂಡ ಆಗಿದ್ದಾರೆ.

ದೇಶೀಯ ಬ್ಯಾಡ್ಮಿಂಟನ್ ಋತುವಿನಲ್ಲಿ ಈ ಟೂರ್ನಿಯು ಮೊದಲನೆಯದ್ದಾಗಿದೆ.

ಅಪಘಾತ: ಇಬ್ಬರು ಯುವಕರ ಸಾವು

ರಾಮನಗರ: ಧರ್ಮಸ್ಥಳಕ್ಕೆ ಹೋಗಿ ದೇವರ ದರ್ಶನ ಮುಗಿಸಿಕೊಂಡು ವಾಪಸಾಗುತ್ತಿದ್ದ ಸ್ನೇಹಿತರಿದ್ದ ಕಾರು ಮತ್ತು ಲಾರಿ ನಡುವೆ ಭಾನುವಾರ ಸಂಭವಿಸಿದ ಅಪಘಾತದಲ್ಲಿ ಯುವಕರಿಬ್ಬರು ಮೃತಪಟ್ಟಿದ್ದಾರೆ.

ವಿಭೂತಿಕೆರೆ ಸ್ವಾಮಿ ಅವರ ಮಗ ದೀಕ್ಷಿತ್ (19) ಹಾಗೂ ಅಂಕನಹಳ್ಳಿ ದೇವರಾಜು ಅವರ ಮಗ ಸಂಜಯ್ (19) ಮೃತ ಯುವಕರು. ಎಂಟು ಮಂದಿ ಸ್ನೇಹಿತರ ಗುಂಪು ಕಾರಿನಲ್ಲಿ ಶೃಂಗೇರಿ, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ ಸೇರಿದಂತೆ ಇತರ ಸ್ಥಳಗಳಿಗೆ ಜೂನ್ 11ರಂದು ಪ್ರವಾಸ ಹೋಗಿತ್ತು.

ಧರ್ಮಸ್ಥಳದಿಂದ ಮೈಸೂರು ಮಾರ್ಗವಾಗಿ ತಡರಾತ್ರಿ ಕೆ.ಆರ್.ನಗರ ಸಮೀಪ ಕಾರಿನಲ್ಲಿ ಬರುತ್ತಿದ್ದಾಗ ಮಂಚನಹಳ್ಳಿ– ಬಡಕನಕೊಪ್ಪಲು ರಸ್ತೆಯಲ್ಲಿ ಎದುರಿಗೆ ವೇಗವಾಗಿ ಬಂದ ಲಾರಿ ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ದೀಕ್ಷಿತ್ ಮತ್ತು ಸಂಜಯ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹೇಮಂತ್, ಚಂದನ್, ಕೌಶಿಕ್, ಮನಿಶ್, ಮನೋಜ್ ಹಾಗೂ ಚಾಲಕ ಧನಂಜಯ್ ಅವರಿಗೆ ಗಾಯವಾಗಿದೆ. ಪ್ರಕರಣ ದಾಖಲಾಗಿದೆ.

ಸಾಧಕ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ನ್ಯಾ.ವಿ.ಶ್ರೀಶಾನಂದ

'ಪ್ರಾಯೋಗಿಕ ಜ್ಞಾನದ ಗಳಿಕೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ಅಂಕ ಗಳಿಕೆಯ ಜ್ಞಾನಾರ್ಜನೆಗೆ ಸೀಮಿತವಾಗದೇ ಪ್ರಾಯೋಗಿಕ ಜ್ಞಾನ ಗಳಿಸಿಕೊಳ್ಳಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಹೇಳಿದರು.

ನಗರದ ವಿಜಯ ಕಾಲೇಜಿನಲ್ಲಿ ನಿವೃತ್ತ ಅಧ್ಯಾಪಕರ ಬಳಗ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಕೇವಲ ಅಕ್ಷರ ಜ್ಞಾನವಿದ್ದವನು ವಿದ್ಯಾವಂತನಾಗುವುದಿಲ್ಲ. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಕಲಿತ ವಿದ್ಯೆ ಸಾರ್ಥಕವಾಗುತ್ತದೆ ಎಂದರು.

ಇಂದಿನ ದಿನಗಳಲ್ಲಿ ಅನಾರೋಗ್ಯಕರ ಸ್ಪರ್ಧೆಯಿಂದಾಗಿ ಜೀವನ ಮೌಲ್ಯಗಳು ಕಣ್ಮರೆಯಾಗುತ್ತಿವೆ. ಈ ಸ್ಪರ್ಧೆಯಲ್ಲಿ ಹಿಂದುಳಿಯಬಾರದು ಎಂಬ ಪ್ರಯತ್ನವು ಅಮಾನವೀಯ ಕೆಲಸಗಳಿಗೆ ಕಾರಣವಾಗುತ್ತಿದೆ. ಯುವಜನರಲ್ಲಿ ಮಾದಕ ದ್ರವ್ಯಗಳ ಮತ್ತು ಮೊಬೈಲ್ ವ್ಯಸನ ಹೆಚ್ಚಾಗುತ್ತಿದೆ. ಇವುಗಳನ್ನು ಮೀರಿ ಸಾಧನೆಯ ಪಥದಲ್ಲಿ ಮುಂದುವರಿಯಬೇಕು ಎಂದು ಸಲಹೆ ನೀಡಿದರು.

ಬಿಎಚ್‌ಎಸ್ ಉನ್ನತ ಶಿಕ್ಷಣ ಸಮಿತಿಯ ಪ್ರಧಾನ ಕಾರ್ಯದರ್ಶಿ ಟಿ.ಎ. ಬಾಲಕೃಷ್ಣ ಮಾತನಾಡಿ, 'ವಿದ್ಯಾರ್ಥಿಗಳು ಭವಿಷ್ಯದಲ್ಲಿ ಎಷ್ಟೇ ಉನ್ನತ ಸ್ಥಾನಕ್ಕೇರಿದರೂ ವಿಶ್ವ ಮಾನವ ಪ್ರಜ್ಞೆಯನ್ನು ಮರೆಯಬಾರದು' ಎಂದು ಕಿವಿಮಾತು ಹೇಳಿದರು.

ಪಿಯುಸಿಯಲ್ಲಿ ರಾಜ್ಯ ಮಟ್ಟದಲ್ಲಿ ಉತ್ತಮ ಸ್ಥಾನಗಳಿಸಿದ ಹಿತಾ ರವಿಕುಮಾರ್, ವಿಜಯೇಶ್ವರ್ ಪ್ರಸಾದ್, ಕೆ.ಎ. ಹರ್ಷಿಣಿ, ಸ್ಪಂದನಾ ವರ್ಣೇಕರ್, ಪಿ. ಕಾವ್ಯ ಮತ್ತು ಎಂ.ಎಸ್ಸಿ ರಸಾಯನ ವಿಜ್ಞಾನ ವಿಭಾಗದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಐದನೇ ರ‍್ಯಾಂಕ್ ಪಡೆದ ಆರ್.ಕಿರಣ್ ಅವರನ್ನು ಸನ್ಮಾನಿಸಲಾಯಿತು.

ಪದವಿ ಕಾಲೇಜಿನ ಪ್ರಾಂಶುಪಾಲ ಎಂ. ಸುಬ್ರಹ್ಮಣ್ಯ ಭಟ್, ಪಿಯು ಕಾಲೇಜು ಪ್ರಾಂಶುಪಾಲ ಶಿವಪ್ರಕಾಶ್ ಅವರು ಭಾಗವಹಿಸಿದ್ದರು.

'ವಿದ್ಯಾರ್ಥಿ ಸಾಧಕರಿಗೆ ಸನ್ಮಾನ' ಕಾರ್ಯಕ್ರಮದಲ್ಲಿ ಆರ್. ಕಿರಣ್, ಹಿತಾ ರವಿಕುಮಾರ್, ವಿಜಯೇಶ್ವರ್ ಪ್ರಸಾದ್, ಆರ್. ಶಿವಾನಿ, ಪಿ. ಕಾವ್ಯ ಮತ್ತು ಸ್ಪಂದನ ವರ್ಣೇಕರ್ ಅವರನ್ನು ಸನ್ಮಾನಿಸಲಾಯಿತು. ಶಿವಪ್ಪ, ಮಹೇಶ್ ಅರವಿಂದ್, ಡಿ.ಪಿ. ರವೀಂದ್ರ, ಸಿ.ಎಸ್. ನಾರಾಯಣಸ್ವಾಮಿ, ವಿ. ಶ್ರೀಶಾನಂದ, ಎಂ. ಸುಬ್ರಮಣ್ಯ ಭಟ್, ಟಿ.ಎ ಬಾಲಕೃಷ್ಣ, ಟಿ.ಎನ್. ಚಂದ್ರಕಾಂತ್, ಎಂ. ಶಿವಪ್ರಕಾಶ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮಂಡ್ಯದ ಅಂಬೇಡ್ಕರ್ ಭವನದಲ್ಲಿ ಭಾನುವಾರ ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದಿಂದ 2025ನೇ ಸಾಲಿನ ಡಾ.ಬೆಸಗರಹಳ್ಳಿ ರಾಮಣ್ಣ ಕಥಾಸಂಕಲನ ಪ್ರಶಸ್ತಿಯನ್ನು 'ಇಲ್ಲಿಂದ ಮುಂದೆಲ್ಲ ಕಥೆ' ಕೃತಿಯ ಲೇಖಕ, 'ಪ್ರಜಾವಾಣಿ'ಯ ಅಭಿಮತ ಸಂಪಾದಕ ರಘುನಾಥ ಚ.ಹ. ಅವರಿಗೆ ಪ್ರದಾನ ಮಾಡಲಾಯಿತು. ಐಜಿಪಿ ಬಿ.ಆರ್. ರವಿಕಾಂತೇಗೌಡ, ಪ್ರಾಧ್ಯಾಪಕ ನಿತ್ಯಾನಂದ ಬಿ.ಶೆಟ್ಟಿ, ಸಾಹಿತಿ ಬರಗೂರು ರಾಮಚಂದ್ರಪ್ಪ, ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್. ಸುಜಾತಾ, ಡಿ.ಪಿ.ರಾಜಮ್ಮ ರಾಮಣ್ಣ, ಲೇಖಕಿ ಸಬಿಹಾ ಭೂಮಿಗೌಡ, ಪ್ರತಿಷ್ಠಾನದ ಸದಸ್ಯರಾದ ಕೆ.ಪುಟ್ಟಸ್ವಾಮಿ, ಎ.ಎಂ.ರವಿ, ಲೋಕಾನಂದ ಎಂ.ಪಿ. ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರೊ.ರಾಜೇಂದ್ರ ಚೆನ್ನಿ ಅವರ 'ಎ ಕ್ರಿಟಿಕಲ್ ಹಿಸ್ಟರಿ ಆಫ್ ಕನ್ನಡ ಲಿಟ್ರೇಚರ್' ಕೃತಿ ಕುರಿತು ಸಂವಾದ

ಕನ್ನಡ ವಿಮರ್ಶಾ ಲೋಕದ ಅವಲೋಕನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯದ ಬಹು ಜಗತ್ತುಗಳ ಪ್ರವೇಶಿಕೆಯೊಂದು ಇಲ್ಲಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಭಾನುವಾರ ಸಹೃದಯರಿಗೆ ಸಿಕ್ಕಿತು. ರಾಜೇಂದ್ರ ಚೆನ್ನಿ ಅವರ 'ಎ ಕ್ರಿಟಿಕಲ್ ಹಿಸ್ಟರಿ ಆಫ್ ಕನ್ನಡ ಲಿಟ್ರೇಚರ್' ಕೃತಿ ಕುರಿತ ಸಂವಾದವು ವಿಮರ್ಶೆಯ ಅಲೆಗಳನ್ನು ಎಬ್ಬಿಸಿತು.

ಪಂಪನಿಂದ ಕುವೆಂಪುವರೆಗಿನ ವಿಮರ್ಶಾ ಪರಂಪರೆಯ ಅವಲೋಕನ ನಡೆಯಿತಲ್ಲದೇ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ಪ್ರಭುತ್ವದ ವಿರುದ್ಧ ನಡೆದ ಪ್ರತಿರೋಧವನ್ನು ವಿಶ್ಲೇಷಿಸಲಾಯಿತು. ಕನ್ನಡ ವೈವಿಧ್ಯ, ಬಹುತ್ವವೂ ಅನಾವರಣಗೊಂಡಿತು.

ವಿಮರ್ಶಕ ಇ.ವಿ.ರಾಮಕೃಷ್ಣನ್ ಮಾತನಾಡಿ, 'ಪಾಶ್ಚಾತ್ಯರು ಬರೆದ ಭಾರತೀಯ ಸಾಹಿತ್ಯ ಚರಿತ್ರೆಗಳಲ್ಲಿ ಕಾಳಿದಾಸನಿಗೆ ಬಹು ಅಧ್ಯಾಯಗಳು ಮೀಸಲಾಗಿವೆ. ಆದರೆ, ಅವರಿಗೆ ದೇಶದ 600ಕ್ಕೂ ಹೆಚ್ಚು ಭಾಷೆಗಳಲ್ಲಿನ ಸಾಹಿತ್ಯ ನೆನಪಾಗದು. ಅದರಲ್ಲೂ ಜಾನಪದ ಕಾವ್ಯ, ಪ್ರದರ್ಶಕ ಕಲೆಗಳು ವಿಶ್ವಕ್ಕೆ ಇಂದಿಗೂ ಅಪರಿಚಿತವಾಗಿವೆ' ಎಂದರು.

'ಭಾಷಾ ಚರಿತ್ರೆಗಳಲ್ಲಿ ಅನೇಕವು ವಸಾಹತುಶಾಹಿ ಘಟ್ಟದಲ್ಲಿ ರಚನೆಯಾಗಿವೆ. ಹೀಗಾಗಿ, ಐರೋಪ್ಯ ಕೇಂದ್ರಿತ ಬೌದ್ಧಿಕತೆಯ ಹೊರೆ ಕೃತಿಗಳಲ್ಲಿ ಕಾಣುತ್ತದೆ' ಎಂದರು.

'19ನೇ ಶತಮಾನದಲ್ಲಿ ಪಾಶ್ಚಾತ್ಯರಿಗೆ ಪೌರ್ವಾತ್ಯ ಸಾಹಿತ್ಯದ ಆಸಕ್ತಿ ಹೆಚ್ಚಾಯಿತು. ಭಾರತೀಯ ಕಲೆ, ಸಾಹಿತ್ಯ ಜ್ಞಾನದ ವಸ್ತುವಾದವು. ಆದರೆ, ಅವರಿಗೆ ಭಾರತೀಯ ಸಾಹಿತ್ಯವೆಂದರೆ ಅಧ್ಯಾತ್ಮವಾಗಿತ್ತು. ಭಗವದ್ಗೀತೆ, ಸಲ್ಮಾನ್ ರಶ್ದಿಯ 'ಮಿಡ್ ನೈಟ್ ಚಿಲ್ಡ್ರನ್' ಮಾತ್ರವೇ ಕೃತಿಗಳೆಂದುಕೊಂಡಿದ್ದರು' ಎಂದರು.

ಲೇಖಕ ರಾಜೇಂದ್ರ ಚೆನ್ನಿ ಮಾತನಾಡಿ, 'ಕನ್ನಡ ಸಾಹಿತ್ಯ ಲೋಕವು ಎಲ್ಲ ಸಮುದಾಯಗಳ ಅನುಭವ ಕಥನಗಳನ್ನು ಹೊಂದಿದೆ. ಪರ ಧರ್ಮ, ವಿಚಾರದ ಬಗ್ಗೆ ಸಹಿಷ್ಣುತೆ ಇರಬೇಕು ಎಂದು ಮೊದಲ ಗ್ರಂಥ 'ಕವಿರಾಜಮಾರ್ಗ'ವೇ ಹೇಳುತ್ತದೆ. ಹೀಗಾಗಿ, ತನ್ನ ವೈವಿಧ್ಯವನ್ನು ಸಂಭ್ರಮಿಸುತ್ತಲೇ ಸ್ವಾಯತ್ತತೆ, ಸ್ವಾತಂತ್ರ್ಯವನ್ನು ಕನ್ನಡ ಸಾಹಿತ್ಯವು ಪ್ರತಿಪಾದಿಸುತ್ತದೆ' ಎಂದರು.

'ಕನ್ನಡ ನುಡಿ ಪರಂಪರೆ ಎಂದಿಗೂ ವ್ಯವಸ್ಥೆಯನ್ನು ಪ್ರಶ್ನಿಸಿದೆ. ಅನ್ಯಾಯವಾದಾಗ ಕ್ರಾಂತಿ ನಡೆಸಿದೆ. ಪಂಪ ರಾಜಾಶ್ರಯದಲ್ಲಿಯೇ ಇದ್ದರೂ, ರಾಜನನ್ನು ಕಟುವಾಗಿ ಟೀಕಿಸಿದ್ದರು. ಅಂತೆಯೇ, ಮನುಷ್ಯ ಜಾತಿಯೊಂದೇ ಎಂದು ಹೇಳುತ್ತಾ ಕನ್ನಡ ಸೌಹಾರ್ದ ಮೊಳಗಿಸಿದ್ದರು. ನಂತರದಲ್ಲಿ ವಚನಕಾರರು ವೈದಿಕ ಯಾಜಮಾನ್ಯ, ಮೌಢ್ಯ, ಜಾತಿಯನ್ನು ತಿರಸ್ಕರಿಸಿದ್ದರು. ಅದು ಈಗಿನವರೆಗೂ ನಡೆದುಬಂದಿದೆ' ಎಂದು ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಭಾನುವಾರ ನಡೆದ 'ಎ ಕ್ರಿಟಿಕಲ್ ಹಿಸ್ಟರಿ ಆಫ್ ಕನ್ನಡ ಲಿಟ್ರೇಚರ್' ಕೃತಿ ಕುರಿತ ಸಂವಾದದಲ್ಲಿ ಪ್ರೊ.ರಾಜೇಂದ್ರ ಚೆನ್ನಿ ಮಾತನಾಡಿದರು. ಪ್ರೊ.ಎನ್.ಎಸ್.ಗುಂಡೂರು, ಇ.ವಿ.ರಾಮಕೃಷ್ಣನ್, ಪ್ರೊ.ವನಮಾಲಾ ವಿಶ್ವನಾಥ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

> ಅಮೆರಿಕದ ವಿದ್ವಾಂಸ ಶೆಲ್ಡನ್ ಪೊಲಾಕ್ ನಂತರ ಕನ್ನಡ ಸಾಹಿತ್ಯದ ಇತಿಹಾಸವನ್ನು ಇಡಿಯಾಗಿ ಕಟ್ಟಿಕೊಟ್ಟ ಅಪೂರ್ವ ಕೃತಿ ಚೆನ್ನಿಯವರದ್ದಾಗಿದೆ
> **ಎನ್.ಎಸ್.ಗುಂಡೂರ್,** ಲೇಖಕ

> ಕನ್ನಡ ಸಾಹಿತ್ಯ ಕಥನದ ಮೌಲಿಕ ವಿಶ್ಲೇಷಣೆ ನಡೆಸುವ ಚೆನ್ನಿ ಅವರ ಕೃತಿಯು, ಕನ್ನಡದ ವಿಮರ್ಶೆಯ ಬಹು ಜಗತ್ತುಗಳನ್ನು ತೋರಿದೆ
> **ವನಮಾಲಾ ವಿಶ್ವನಾಥ್,** ಲೇಖಕಿ

ಪರಿಸರ ಜಾಗೃತಿ: 3 ಸಾವಿರ ಮಂದಿ ಓಟ

ಪ್ರಜಾವಾಣಿ ವಾರ್ತೆ

ಯಲಹಂಕ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ಹಾಗೂ ರಾಚೇನಹಳ್ಳಿ ಕೆರೆ ಪರಿಸರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಬೆಂಗಳೂರು ಲೇಕ್ ರನ್'ನಲ್ಲಿ ಮೂರು ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡು, ಪರಿಸರ ಸಂರಕ್ಷಣೆ ಹಾಗೂ ದೈಹಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದರು.

ಜಕ್ಕೂರು ಕೆರೆ ಆವರಣದಿಂದ ಬೆಳಿಗ್ಗೆ 6.30ಕ್ಕೆ ಆರಂಭವಾದ ಓಟವು, ಜಕ್ಕೂರು ವೃತ್ತ, ಕೆ.ವಿ.ಜಯರಾಂ ರಸ್ತೆ, ಟೆಲಿಕಾಂ ಲೇಔಟ್ ಹಾಗೂ ಶ್ರೀರಾಮಪುರ ಮುಖ್ಯರಸ್ತೆ ಮಾರ್ಗವಾಗಿ ರಾಚೇನಹಳ್ಳಿ ಕೆರೆಯವರೆಗೆ ಸಾಗಿತು. ನಂತರ ರಾಚೇನಹಳ್ಳಿ ಕೆರೆಯ ಸುತ್ತಲೂ ಸಾಗಿ, ಓಟ ಮುಕ್ತಾಯಗೊಳಿಸಲಾಯಿತು.

10 ಕಿ.ಮೀ, 3.5 ಕಿ.ಮೀ 'ಮಜಾ ರನ್' ಹಾಗೂ 3.5 ಕಿ.ಮೀ 'ಸೂಪರ್ ಮಜಾ ರನ್' ವಿಭಾಗಗಳಲ್ಲಿ ಪಾಲ್ಗೊಂಡ ಜನರು, ಉತ್ಸಾಹದಿಂದ ಓಡಿದರು. ಮಕ್ಕಳೂ ಸೇರಿ ವಿವಿಧ ವಯೋಮಾನದವರು ಈ ಓಟಗಳ ಭಾಗವಾದರು. ಮಹಿಳಾ ಹಾಗೂ ಪುರುಷರ ವಿಭಾಗಗಳಲ್ಲಿ ವಿಜೇತರಿಗೆ ನಗದು ಬಹುಮಾನ ಮತ್ತು ಟ್ರೋಫಿಗಳನ್ನು ವಿತರಿಸಲಾಯಿತು.

10 ಕಿ.ಮೀ. ಓಟವನ್ನು ಪೂರ್ಣಗೊಳಿಸಿದ ಬಳಿಕ ಮಾತನಾಡಿದ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ, 'ನಗರೀಕರಣ, ಅರಣ್ಯನಾಶ ಹಾಗೂ ಮಾಲಿನ್ಯದಿಂದ ಪರಿಸರದ ಸಮತೋಲನ ಹದಗೆಡುತ್ತಿದೆ. ಹವಾಮಾನ ವೈಪರೀತ್ಯಗಳು ಹೆಚ್ಚಾಗುತ್ತಿವೆ. ಮುಂದಿನ ಪೀಳಿಗೆಗೆ ಉತ್ತಮ ಹಾಗೂ ಆರೋಗ್ಯಕರ ಪರಿಸರವನ್ನು ನೀಡಬೇಕಾದರೆ, ಪರಿಸರಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ' ಎಂದು ಹೇಳಿದರು.

'ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 60 ಕೆರೆಗಳಿದ್ದು, ಅವುಗಳ ಪುನಶ್ಚೇತನ ಕಾರ್ಯ ನಡೆಯುತ್ತಿದೆ. ಜಕ್ಕೂರು ಹಾಗೂ ರಾಚೇನಹಳ್ಳಿ ಕೆರೆಗಳನ್ನು ಕಳೆದ 15 ವರ್ಷಗಳಿಂದ ನಿರಂತರವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಶಿಕ್ಷಣ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ವರ್ಷಪೂರ್ತಿ ಆಯೋಜಿಸಲಾಗುತ್ತಿದೆ. ಪ್ರತಿಯೊಬ್ಬರೂ ನಡಿಗೆ, ವ್ಯಾಯಾಮ ಅಥವಾ ಓಟದಂತಹ ದೈಹಿಕ ಚಟುವಟಿಕೆಗಳನ್ನು ದಿನನಿತ್ಯದ ಜೀವನದ ಭಾಗವನ್ನಾಗಿ ಮಾಡಿಕೊಳ್ಳಬೇಕು' ಎಂದು ಮನವಿ ಮಾಡಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣ ಬೈರೇಗೌಡ, ಕಾಂಗ್ರೆಸ್ ಮುಖಂಡರಾದ ಎಚ್.ಎ.ಶಿವಕುಮಾರ್, ರಾಹುಲ್ ಗೌಡ.ಎನ್.ಎ, ಸಂತೋಷ್ ರಾಜನ್, ವಿಶ್ವನಾಥ್ ವಿ. ಗೌಡ, ನವೀನ್ ಉಪಸ್ಥಿತರಿದ್ದರು.

ಓಟದಲ್ಲಿ ಪಾಲ್ಗೊಂಡ ಜನರು ಪರಿಸರ ಜಾಗೃತಿ ಮೂಡಿಸಿದರು

सत्यमेव जयते
ನಾಗರಿಕ ವಿಮಾನಯಾನ ಸಚಿವಾಲಯ
ಭಾರತ ಸರ್ಕಾರ
ವಿಕಸಿತ ಭಾರತದ ಕಡೆಗಿನ ನೆಗೆತವು, ಜನರನ್ನು ಅಭಿವೃದ್ಧಿಯ ಜೊತೆಗೆ ಒಗ್ಗೂಡಿಸುತ್ತಿದೆ
"ಕಳೆದ ಒಂದು ದಶಕದಲ್ಲಿ, ಭಾರತದ ವಿಮಾನಯಾನ ಕ್ಷೇತ್ರದಲ್ಲಿ ಐತಿಹಾಸಿಕ ಪರಿವರ್ತನೆ ಉಂಟಾಗಿದೆ, ಸಾಮಾನ್ಯ ವೈಮಾನಿಕ ಸಮುದಾಯದಿಂದ ವಿಶ್ವದ ಮೂರನೇಯ ಬೃಹತ್ ಸ್ಥಳೀಯ ವೈಮಾನಿಕ ಮಾರುಕಟ್ಟೆಯಾಗಿ ಮಾರ್ಪಟ್ಟಿದೆ."
– ನರೇಂದ್ರ ಮೋದಿ, ಪ್ರಧಾನಮಂತ್ರಿ
ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ದೂರದೃಷ್ಟಿಯುಳ್ಳ ನೇತೃತ್ವದ ಅಡಿಯಲ್ಲಿ, ನಾಗರಿಕ ವಿಮಾನಯಾನ ಸಚಿವಾಲಯವು ಬೆಳವಣಿಗೆಯ ಬೆನ್ನೆತ್ತಿದೆ ಮತ್ತು ತನ್ನ ಅಗ್ರಮಾನ್ಯ ಸಾಧನೆಗಳು ಹಾಗೂ ಆಧುನಿಕತೆಗಳ ಮೂಲಕ ಭಾರತವನ್ನು ಒಗ್ಗೂಡಿಸುತ್ತಿದೆ.
ಉಡಾನ್–ಪ್ರಾದೇಶಿಕ ಸಂಪರ್ಕವನ್ನು ಹೆಚ್ಚಿಸಿದೆ
ಕಾರ್ಯಾಚರಣೆಗೆ ಅಣಿಗೊಳಿಸಿದ 669 ಮಾರ್ಗಗಳು, 95 ವಿಮಾನ ನಿಲ್ದಾಣಗಳು, 3.50 ಲಕ್ಷ ವಿಮಾನಗಳು 1.66 ಕೋಟಿ ಪ್ರಯಾಣಿಕರಿಗೆ ಸೇವೆ ಸಲ್ಲಿಸಿವೆ.
ವಿಮಾನ ನಿಲ್ದಾಣ ಮೂಲಸೌಕರ್ಯಗಳ ವಿಸ್ತರಣೆ
ರೂ. 1.4 ಲಕ್ಷ ಕೋಟಿಗೂ ಅಧಿಕ ಹೂಡಿಕೆಯ ಮೂಲಕ, ಕಾರ್ಯಾಚರಣೆಯಲ್ಲಿದ್ದ ವಿಮಾನ ನಿಲ್ದಾಣಗಳ ಸಂಖ್ಯೆಯನ್ನು 74 ರಿಂದ 165ಕ್ಕೆ, ಎಂದರೆ ದ್ವಿಗುಣಗೊಳಿಸಲಾಗಿದೆ.
ವಿಮಾನಯಾನ ಆಧುನೀಕರಣದ ಕಾನೂನು ಚೌಕಟ್ಟು
ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಶಾಸಕಾಂಗ ಮತ್ತು ನಿಯಂತ್ರಣಾ ಸುಧಾರಣೆಗಳನ್ನು ರೂಪಿಸಲಾಗಿದೆ.
ಡ್ರೋನ್ ಇಕೋಸಿಸ್ಟಮ್
39000 ಡ್ರೋನ್‌ಗಳ ನೋಂದಣಿ ಆಗಿದೆ ಮತ್ತು 44,000+ ಪೈಲಟ್ ಪ್ರಮಾಣಪತ್ರಗಳನ್ನು ನೀಡಲಾಗಿದೆ.
ಮೈಂಟೇನನ್ಸ್ ರಿಪೇರ್ ಮತ್ತು ಓವರ್‌ಹೌಲ್ (ಎಂಆರ್‌ಒ)
ಇದು ಭಾರತವನ್ನು ಎಂಆರ್‌ಒ ಜಾಲವನ್ನಾಗಿ ಪರಿವರ್ತಿಸಿದೆ, 96 ರಿಂದ 164 ಎಂಆರ್‌ಒ'ಗಳು ಬೆಳೆದಿವೆ.
ವಿಮಾನಯಾನದಲ್ಲಿ ಮಹಿಳೆಯರು
ಮಹಿಳಾ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲಾಗಿದ್ದು, ದೇಶದ ಪೈಲಟ್‌ಗಳಲ್ಲಿ 15% ಮಹಿಳೆಯರಿದ್ದಾರೆ.
12 ವರ್ಷಗಳು
ಭಾರತದ ವೈಮಾನಿಕ ನೆಗೆತದಲ್ಲಿನ ಸಾಧನೆ
DIGI YATRA
ವಿಮಾನ ನಿಲ್ದಾಣಗಳಲ್ಲಿನ ಒಳಗೊಳ್ಳುವಿಕೆ
ಉಡಾನ್ ಯಾತ್ರಿ ಕೆಫೆ, ಫ್ಲೈಬೇ ಮತ್ತು ಕಿಡ್ಸ್ ಜೋನ್ ಮುಖಾಂತರ ವಿಮಾನ ನಿಲ್ದಾಣಗಳ ಅನುಭೂತಿಯನ್ನು ಮರು ವ್ಯಾಖ್ಯಾನಿಸಲಾಗಿದೆ.
ಡಿಜಿಟಲ್ ಟ್ರಾನ್ಸ್‌ಫಾರ್ಮೇಶನ್
ಡಿಜಿಯಾತ್ರಾ ತಂತ್ರಾಂಶವು ಸಂಪರ್ಕರಹಿತ ಪ್ರಯಾಣ ಸೌಲಭ್ಯ ಒದಗಿಸುತ್ತಿದ್ದು, ಇಲ್ಲಿಯವರೆಗೆ 38 ವಿಮಾನ ನಿಲ್ದಾಣಗಳಲ್ಲಿ 10 ಕೋಟಿಗೂ ಅಧಿಕ ಪ್ರಯಾಣಗಳು ಜರುಗಿವೆ.
ಸ್ಥಳೀಯ ತಯಾರಿಕೆ
ದೇಸಿ ಸಿವಿಲ್ ಏರ್‌ಕ್ರಾಫ್ಟ್‌ಗಳ ಉತ್ಪಾದನೆಗಾಗಿ ಮತ್ತು ಎಂಆರ್‌ಒ'ಗಳಿಗಾಗಿ ವ್ಯವಸ್ಥೆ ರೂಪಿಸಲಾಗಿದೆ.
ಹಸಿರು ವಿಮಾನ ನಿಲ್ದಾಣಗಳು
100 ವಿಮಾನ ನಿಲ್ದಾಣಗಳು ಹಸಿರು ಇಂಧನ ಬಳಸಿಕೊಂಡು ಕಾರ್ಯಾಚರಣೆ ನಡೆಸುತ್ತಲಿವೆ.
ವಿಮಾನಯಾನ ತರಬೇತಿ ವ್ಯವಸ್ಥೆಯ ಬಲವರ್ಧನೆ
ದೇಶಾದ್ಯಂತ 41 ವೈಮಾಂತರಿಕ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.
ಏರ್‌ಕ್ರಾಫ್ಟ್ ಲೀಸಿಂಗ್ ಹಬ್
378 ವಿಮಾನಯಾನ ಸ್ವತ್ತುಗಳನ್ನು ಲೀಸ್ ನೀಡಲಾಗಿದೆ.
VEER SAVARKAR INTERNATIONAL AIRPORT
CBC 03111/13/0002/2627
12 Saal Vishwas ke, Vikas ke, Jan-kalyan ke

ಅತಿಯಾದ ಶಬ್ದ ಮಾಡಿ ಕಾರು ಚಾಲನೆ: ರಿಕ್ಕಿ ರೈಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮೇ 20ರ ಮಧ್ಯರಾತ್ರಿ ನಡೆದಿದ್ದ ಘಟನೆ
- ವಾಹನದಲ್ಲಿ ಅನಧಿಕೃತ ಮಾರ್ಪಾಡು ಮಾಡಿರುವ ಶಂಕೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಸಾರ್ವಜನಿಕ ರಸ್ತೆಯಲ್ಲಿ ಅಪಾಯಕಾರಿಯಾಗಿ ಕಾರು ಚಲಾಯಿಸಿ, ಅತಿಯಾದ ಶಬ್ದ ಉಂಟು ಮಾಡಿದ ಆರೋಪದಡಿ ಉದ್ಯಮಿ ರಿಕ್ಕಿ ರೈ ಅವರಿಗೆ ದೇವನಹಳ್ಳಿ ಸಂಚಾರ ಪೊಲೀಸರು ಶನಿವಾರ ನೋಟಿಸ್ ಜಾರಿಗೊಳಿಸಿದ್ದಾರೆ.

ರಿಕ್ಕಿ ರೈ

ಮೇ 20ರ ಮಧ್ಯರಾತ್ರಿ ಕೆಐಎ ರಸ್ತೆಯಲ್ಲಿ ಕಾರನ್ನು ಸಾರ್ವಜನಿಕರ ಸುರಕ್ಷತೆಗೆ ಅಪಾಯ ಉಂಟು ಮಾಡುವ ರೀತಿಯಲ್ಲಿ ಚಾಲನೆ ಮಾಡಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದ್ದವು.

ವಾಹನದಿಂದ ಕರ್ಕಶ ಶಬ್ದ ಉಂಟಾಗಿದೆ. ಸಾರ್ವಜನಿಕರಲ್ಲಿ ಆತಂಕ ಮತ್ತು ಅಸುರಕ್ಷತೆ ಭಾವನೆ ಮೂಡಿಸಿದೆ ಎಂದು ನೋಟಿಸ್‌ನಲ್ಲಿ ಪೊಲೀಸರು ಉಲ್ಲೇಖಿಸಿದ್ದಾರೆ.

ಪ್ರಾಥಮಿಕ ಪರಿಶೀಲನೆಯಲ್ಲಿ ವಾಹನದಲ್ಲಿ ಅನಧಿಕೃತ ಮಾರ್ಪಾಡು ಮಾಡಿರುವ ಸಾಧ್ಯತೆ ಕಂಡು ಬಂದಿದೆ. ರಸ್ತೆ ಸುರಕ್ಷತೆ ಹಾಗೂ ಶಬ್ದ ನಿಯಂತ್ರಣ ಮಾನದಂಡಗಳು ಉಲ್ಲಂಘನೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೋಟಾರು ವಾಹನ ಕಾಯ್ದೆಯಡಿ ಅಪಾಯಕಾರಿ ವಾಹನ ಚಾಲನೆ, ಅನಧಿಕೃತ ಮಾರ್ಪಾಡು, ರಸ್ತೆ ಸುರಕ್ಷತೆ ಹಾಗೂ ಶಬ್ದ ನಿಯಂತ್ರಣ ನಿಯಮ ಉಲ್ಲಂಘನೆ ಹಾಗೂ ಬಿಎನ್‌ಎಸ್–2023ರ ಕಲಂ 281ರ ಅಡಿಯಲ್ಲಿ ಕ್ರಮ ಜರುಗಿಸುವ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ನಿಗದಿತ ಅವಧಿಯೊಳಗೆ ಹಾಜರಾಗದಿದ್ದಲ್ಲಿ ಅನ್ವಯವಾಗುವ ಕಾನೂನಿನಡಿ ನೋಟಿಸ್ ನೀಡದೆ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಎಚ್ಚರಿಸಿದ್ದಾರೆ.

ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು

ನಂ. ಆಇ 12 ಜಂ.ಕಾ(ಆ ಮತ್ತು ಸಂ) 2026 ಬೆಂಗಳೂರು, 15ನೇ ಜುಲೈ 2026

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್.ಡಿ. 01 ಬಿಎಂಬಿ 2020, ದಿನಾಂಕ: 10ನೇ ಜುಲೈ 2020ರ ನಿಬಂಧನೆಯ ಮೇರೆಗೆ ಹೊರಡಿಸಲಾದ 5.7% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2026, (Karnataka SDL 2026) ದಿನಾಂಕ : 14ನೇ ಜುಲೈ 2026 ದಿನಾಂಕವೂ ಸೇರಿ ಅವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 15ನೇ ಜುಲೈ 2026 ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. 15ನೇ ಜುಲೈ 2026 ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ– ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, 5.7% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2026, (Karnataka SDL 2026) ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ."

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/– (ಡಾ. ಗೋಪಾಲ್ ಕೃಷ್ಣ ಬಿ)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ

DIPR/CP/1153/Zen/2026-27

'ಸಮಗ್ರ ಭಾಷಾ ನೀತಿ'ಗೆ ಒಕ್ಕೊರಲ ಆಗ್ರಹ

ಕರವೇ ದುಂಡು ಮೇಜಿನ ಸಭೆಯಲ್ಲಿ ಕನ್ನಡ ಭಾಷೆ ಬಗ್ಗೆ ವ್ಯಾಪಕ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ, ಆಡಳಿತ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಕನ್ನಡಕ್ಕೆ ಪ್ರಾತಿನಿಧ್ಯ ಸಿಗುವಂತಾಗಲು ರಾಜ್ಯ ಸರ್ಕಾರವು 'ಸಮಗ್ರ ಭಾಷಾ ನೀತಿ' ಹಾಗೂ 'ಭಾಷಾ ಯೋಜನೆ'ಯನ್ನು ರೂಪಿಸಬೇಕೆಂಬ ಒಕ್ಕೊರಲ ಆಗ್ರಹ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರಿಂದ ವ್ಯಕ್ತವಾಯಿತು.

ಕರ್ನಾಟಕ ರಕ್ಷಣಾ ವೇದಿಕೆ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಸಮಗ್ರ ಭಾಷಾ ನೀತಿ, ಭಾಷಾ ಯೋಜನೆ: ಕರ್ನಾಟಕದ ಸಾಧ್ಯತೆಗಳು' ಕುರಿತ ದುಂಡು ಮೇಜಿನ ಸಭೆಯಲ್ಲಿ ಭಾಷಾ ತಜ್ಞರು, ಸಾಹಿತಿಗಳು, ಶಿಕ್ಷಣ ತಜ್ಞರು, ಚಿಂತಕರು, ಕನ್ನಡ ಪರ ಹೋರಾಟಗಾರರು, ಪತ್ರಕರ್ತರು ಸೇರಿದಂತೆ ವಿಷಯ ತಜ್ಞರು ಭಾಷಾ ನೀತಿ ಮತ್ತು ಯೋಜನೆ ರೂಪಿಸುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು.

ದಿಕ್ಸೂಚಿ ಭಾಷಣ ಮಾಡಿದ ಭಾಷಾ ವಿದ್ವಾಂಸ ಕೆ.ವಿ.ನಾರಾಯಣ, 'ಹೊಸದಾಗಿ ಸಮಗ್ರ ಭಾಷಾ ನೀತಿ ಹಾಗೂ ಭಾಷಾ ಯೋಜನೆ ರೂಪಿಸುವಾಗ ಈವರೆಗೆ ಮಾಡಿರುವ ತಪ್ಪುಗಳನ್ನು ಗುರುತಿಸಬೇಕು. ಶಿಕ್ಷಣದಲ್ಲಿ ಯಾವ ಭಾಷೆಯನ್ನು ಎಷ್ಟು ಕಲಿಯಬೇಕೆಂಬ ಬಗ್ಗೆ ಗೊಂದಲವಿದೆ. ಇದಕ್ಕೆ ಅಧಿಕಾರಿ ವರ್ಗವೇ ಕಾರಣ. 1986ರಲ್ಲಿ ರಾಜ್ಯ ಸರ್ಕಾರ ಶೈಕ್ಷಣಿಕ ಕ್ಷೇತ್ರದಲ್ಲಿ ತಪ್ಪು ಹೆಜ್ಜೆಯಿಟ್ಟಿತು. ಅನುದಾನರಹಿತ ಶಾಲೆ ಪ್ರಾರಂಭಿಸಬಹುದೆಂಬ ನಿಯಮ ಮಾಡಿತು. ಅದರ ಪರಿಣಾಮವನ್ನು ಈಗ ನಾವು ಎದುರಿಸುತ್ತಿದ್ದೇವೆ. ನಿರಾಕ್ಷೇಪಣಾ ಪ್ರಮಾಣಪತ್ರ ಪಡೆದ ಶಾಲೆಗಳು ಅನುದಾನ ಪಡೆಯಬೇಕೆಂಬ ನಿಯಮ ಮಾಡಬೇಕು. ಆಗ ಶಾಲೆಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣ ಸಾಧ್ಯವಾಗಲಿದೆ' ಎಂದು ಅಭಿಪ್ರಾಯಪಟ್ಟರು.

> ರಾಜ್ಯದಲ್ಲಿ 27 ಭಾಷೆಗಳನ್ನು 5 ಸಾವಿರಕ್ಕೂ ಹೆಚ್ಚು ಜನರು ಮಾತನಾಡುತ್ತಾರೆ. 3ನೇ ಭಾಷೆಯನ್ನಾಗಿ ಅವುಗಳಿಗೆ ಅವಕಾಶ ನೀಡಿದರೆ, ರಾಜ್ಯದ ಭಾಷಾ ನೀತಿಯಲ್ಲಿ ಕನ್ನಡ ಮತ್ತು ಸಣ್ಣ ಭಾಷೆ ಉಳಿಯುತ್ತದೆ
>
> **ಪುರುಷೋತ್ತಮ ಬಿಳಿಮಲೆ,** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ, 'ಕನ್ನಡ ಪಠ್ಯಗಳನ್ನು ಖಾಸಗಿ ಶಾಲೆಗಳಲ್ಲಿಯೂ ಕಲಿಸಬೇಕು. ಆದರೆ, ಶಿಕ್ಷಣವು ಪೋಷಕರ ಹಕ್ಕು ಎಂದು ಹೇಳುವ ಮೂಲಕ ಖಾಸಗಿ ಶಾಲೆಗಳು ನ್ಯಾಯಾಲಯಗಳಲ್ಲಿ ಮೇಲುಗೈ ಸಾಧಿಸುತ್ತಿವೆ. ಸರ್ಕಾರ ಈ ನೆಲದ ಭಾಷೆಗೆ ಗೌರವ ಕೊಟ್ಟು, ಭಾಷಾ ನೀತಿಯನ್ನು ರಚಿಸಬೇಕಿದೆ. ಪರಿಸರ ಭಾಷೆ, ರಾಜ್ಯ ಭಾಷೆ ಎಂಬ ಪ್ರಯೋಗ ತರಬೇಕು. ಆಗ ಕನ್ನಡ ಉಳಿಯಲು ಸಾಧ್ಯ. ಎಲ್ಲ ಖಾಸಗಿ ಶಾಲೆಗಳಲ್ಲಿ ಒಂದು ಭಾಷೆಯಾಗಿ ಕನ್ನಡವನ್ನು ಕಲಿಸುವ ಅಗತ್ಯವಿದೆ' ಎಂದರು.

ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, 'ಸಮಗ್ರ ಭಾಷಾ ನೀತಿ ರೂಪಿಸಿಕೊಂಡರೆ ಭಾರತದ ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿ ಮಾಡಬಹುದು. ಭಾಷಾ ಹೇರಿಕೆ ನಿರಂತರವಾಗಿ ನಡೆಯುತ್ತಿದ್ದು, ಒಂದು ಭಾಷೆಯ ಯಜಮಾನಿಕೆ ಒಪ್ಪಲು ಸಾಧ್ಯವಿಲ್ಲ. ಐಎಎಸ್ ಅಧಿಕಾರಿಗಳು ಭಾಷೆಗೆ ಸಂಬಂಧಿಸಿದ ಸಂಶೋಧನೆಗಳನ್ನೂ ಪರಿಗಣಿಸುತ್ತಿಲ್ಲ. ಇದರ ಪರಿಣಾಮ ಇಷ್ಟೊಂದು ಸಮಸ್ಯೆಯ ಸುಳಿಯಲ್ಲಿ ಸಿಲುಕಿದ್ದೇವೆ. ಎಲ್ಲರನ್ನೂ ಒಳಗೊಳ್ಳುವ, ಸಂವಿಧಾನದ ಮೂಲ ಆಶಯ ಸಾಕಾರ ಮಾಡುವ ಭಾಷಾ ನೀತಿ ಅಗತ್ಯ' ಎಂದು ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣಗೌಡ, 'ದುಂಡು ಮೇಜಿನ ಸಭೆಯ ಮುಂದುವರಿದ ಭಾಗವಾಗಿ ಆಗಸ್ಟ್‌ನಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಮೂರು ದಿನಗಳ ಕಮ್ಮಟ ನಡೆಸಲಾಗುವುದು. ಅಲ್ಲಿ ತಜ್ಞರ ಜತೆಗೆ ಚರ್ಚಿಸಿ, ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತೇವೆ. ಆ ವರದಿ ಅನುಷ್ಠಾನ ಆಗುವ ನಿಟ್ಟಿನಲ್ಲಿ ಚಳವಳಿ ನಡೆಸಲಾಗುವುದು' ಎಂದರು.

ಹಂಪ ನಾಗರಾಜಯ್ಯ ಮತ್ತು ಟಿ.ಎ. ನಾರಾಯಣಗೌಡ ಹಸ್ತಲಾಘವ ಮಾಡಿದರು. ಪುರುಷೋತ್ತಮ ಬಿಳಿಮಲೆ, ಕೆ.ವಿ. ನಾರಾಯಣ, ಎಸ್‌.ಜಿ. ಸಿದ್ಧರಾಮಯ್ಯ, ವಿ.ಪಿ. ನಿರಂಜನಾರಾಧ್ಯ ಸಭೆಯಲ್ಲಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

> ಹಣದ ಆಸೆಗಾಗಿ ಕನ್ನಡಿಗರೇ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯುತ್ತಿದ್ದಾರೆ. ಹಲವು ಶಾಲೆಗಳನ್ನು ಜನಪ್ರತಿನಿಧಿಗಳೇ ನಡೆಸುತ್ತಿದ್ದಾರೆ. ಕನ್ನಡ ಭಾಷೆಗೆ ಇಳಿಗಾಲ ಬಂತಲ್ಲ ಎಂಬ ನೋವಿದೆ
>
> **ಹಂಪ ನಾಗರಾಜಯ್ಯ,** ಸಾಹಿತಿ

> ಅನುದಾನರಹಿತ ಶಾಲೆಗಳು ಕರ್ನಾಟಕದಲ್ಲಿ ಬಂದ ಬಳಿಕ ನಮ್ಮ ಭಾಷೆ, ನಮ್ಮ ಶಿಕ್ಷಣ ಕುಸಿತ ಕಂಡಿತು. ಉಚಿತ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುವ ಬಾಗಿಲು ತೆರೆದಿದ್ದು ಇದೇ ದರಿದ್ರ ಸರ್ಕಾರಗಳು
>
> **ಎಸ್‌.ಜಿ. ಸಿದ್ಧರಾಮಯ್ಯ,** ಸಾಹಿತಿ

'ಕೊರತೆಯನ್ನು ನಿವಾರಿಸಬೇಕು'

'ಶಿಕ್ಷಣ, ಉದ್ಯೋಗ, ಆಡಳಿತ ಈ ಮೂರು ಘಟಕದಲ್ಲಿ ಕನ್ನಡಕ್ಕೆ ಆದ್ಯತೆ ಸಿಗಬೇಕು. ಈ ಮೂಲತತ್ವದ ಆಧಾರದ ಮೇಲೆ ಉಳಿದ ಅಂಶ ರೂಪಿಸಬೇಕು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಕಾಲದಲ್ಲಿ ಭಾಷೆಗೆ ಸಂಕಷ್ಟ ಇರುವುದು ನಿಜ. ತಂತ್ರಜ್ಞಾನ ಬಂದಾಗಲೂ ಇದೇ ರೀತಿಯ ಪ್ರಶ್ನೆಗಳಿದ್ದವು. ಯಾವುದೇ ತಂತ್ರಜ್ಞಾನದ ಹಿಂದೆ ಮನುಷ್ಯ ಜ್ಞಾನದ ಶಕ್ತಿ ಇರುತ್ತದೆ. ಈಗ ಮನುಷ್ಯ ಜ್ಞಾನ ತಂತ್ರಜ್ಞಾನವನ್ನು ಸೃಷ್ಟಿ ಮಾಡುತ್ತದೆ. ಸೃಷ್ಟಿಯಾದ ತಂತ್ರಜ್ಞಾನವನ್ನು ಕೊಂಡುಕೊಳ್ಳುವ ವಿಪರ್ಯಾಸದ ಸಂದರ್ಭದಲ್ಲಿದ್ದೇವೆ. ಕನ್ನಡ ಭಾಷೆ ಮತ್ತು ಇದನ್ನು ಆಡುವ ಜನರು ಎದುರಿಸುವ ಸಮಸ್ಯೆ ಬಗ್ಗೆ ಕಾರ್ಯಯೋಜನೆ ರೂಪಿಸಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

'ಶಿಕ್ಷಣದ ಸಮಸ್ಯೆಯನ್ನು ಅಗಾಧವಾದ ರೀತಿಯಲ್ಲಿ ಜಟಿಲಗೊಳಿಸಲಾಗಿದೆ. ಪ್ರಾಥಮಿಕ ಶಿಕ್ಷಣ ಪ್ರಯೋಗದ ಬಲಿಪಶುವಾಗಿದೆ. ಹಳೆಯದರಲ್ಲಿ ಇರುವ ಕೊರತೆಯನ್ನು ತುಂಬಿಕೊಳ್ಳಬೇಕು. ಕನ್ನಡ ಮಾಧ್ಯಮ ಶಾಲೆಗಳಿಗೆ ವಿದ್ಯಾರ್ಥಿಗಳು ಏಕೆ ಬರುತ್ತಿಲ್ಲ ಎಂಬ ಬಗ್ಗೆ ಹಿಂದಿನ ಮುಖ್ಯಮಂತ್ರಿಗಳ ಸರ್ಕಾರ ಚಿಂತನೆ ನಡೆಸಿಲ್ಲ. ಕನ್ನಡ ಮಾಧ್ಯಮ ಶಾಲೆ ಉಳಿಸಿದ ಶಿಕ್ಷಕರ ಅಭಿಪ್ರಾಯವನ್ನೇ ಸರ್ಕಾರ ಪಡೆಯುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಆಯುಕ್ತರ ಕಾರ್ಯಾಲಯ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18,
ದೂರವಾಣಿ:26709689/ 26706775, Email: endowmentcommissioner@gmail.com.

ಸಂಖ್ಯೆ: HRICE-CDMS0CD/9/2026-2184090 ದಿನಾಂಕ:–12.06.2026

ಪತ್ರಿಕಾ ಪ್ರಕಟಣೆ

2026–27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಕೈಗೊಂಡ ಯಾತ್ರಾರ್ಥಿಗಳಿಗೆ ತಲಾ ರೂ.30,000/– (ರೂ. ಮೂವತ್ತು ಸಾವಿರಗಳೂ ಮಾತ್ರ) ಗಳಂತೆ ಸರ್ಕಾರದ ಸಹಾಯಧನವನ್ನು ನೀಡುವ ಕುರಿತು ದಿನಾಂಕ: 16.06.2026 ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆಗಳು

(1) ಯಾತ್ರಾರ್ಥಿಗಳು ಕರ್ನಾಟಕದ ಖಾಯಂ ನಿವಾಸಿಗಳಾಗಿರತಕ್ಕದ್ದು.
(2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:15.11.2026 ಸಂಜೆ 5:30ಗಂಟೆಯೊಳಗೆ.
(3) ಅನುದಾನ ಲಭ್ಯತೆಗೆ ಅನುಗುಣವಾಗಿ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ವಿತರಿಸಲಾಗುವುದು.
(4) ಯಾತ್ರಾರ್ಥಿಗಳು ತಮ್ಮ ಅರ್ಜಿಯನ್ನು ಆನ್ ಲೈನ್ ಮೂಲಕವೇ ಸೇವಾ ಸಿಂಧು ವೆಬ್ ಪೋರ್ಟಲ್ (https://sevasindhuservices.karnataka.gov.in) ದಿನಾಂಕ: 15.11.2026 05:00ಗಂಟೆಯೊಳಗೆ ಸಲ್ಲಿಸಬೇಕಾಗಿರುತ್ತದೆ.

	ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಅಪ್ ಲೋಡ್ ಮಾಡಬೇಕಾದ ದಾಖಲೆಗಳು
1.	ಒಂದು ಭಾವಚಿತ್ರ (ಪಾಸ್‌ಪೋರ್ಟ್ ಅಳತೆ)
2.	ಚುನಾವಣಾ ಗುರುತಿನ ಚೀಟಿ/ರೇಷನ್ ಕಾರ್ಡ್ / ಪಾಸ್‌ಪೋರ್ಟ್ / ಡ್ರೈವಿಂಗ್ ಲೈಸೆನ್ಸ್
3.	ಯಾತ್ರಾರ್ಥಿಯು ರೂ.100/–ಗಳ ಛಾಪಾ ಕಾಗದ (E-Stamp Paper)ದಲ್ಲಿ ಈ ಹಿಂದೆ ಸರ್ಕಾರದ ಸಹಾಯಧನವನ್ನು ಪಡೆದಿಲ್ಲವೆಂದು ಸ್ವದೃಢೀಕರಿಸಿ ನೋಟರಿ ಮೊಹರು ಮತ್ತು ಸಹಿಯೊಂದಿಗೆ ದೃಢೀಕರಣವನ್ನು ಅಪ್‌ಲೋಡ್ ಮಾಡತಕ್ಕದ್ದು.
4.	ಸದರಿ ಯಾತ್ರೆಯನ್ನು ಕೇಂದ್ರ ಸರ್ಕಾರದ ಮಾರ್ಗವಾಗಿ ತೆರಳಿದಲ್ಲಿ ಕೇಂದ್ರ ಸರ್ಕಾರದ ವತಿಯಿಂದ ನೀಡಲಾಗುವ ದೃಢೀಕರಣವನ್ನು ನೀಡತಕ್ಕದ್ದು
5.	ಯಾತ್ರೆಯನ್ನು ನೇಪಾಳ / ಟಿಬೆಟ್ ಮಾರ್ಗವಾಗಿ ಕೈಗೊಂಡಿದ್ದಲ್ಲಿ ಲಾಹ್ಸ, ಚೈನಾ ಸರ್ಕಾರದ ವತಿಯಿಂದ ನೀಡಲಾದ (C.I.P.S.C) ಪ್ರತಿಯನ್ನು ಒದಗಿಸತಕ್ಕದ್ದು.
6.	ಗ್ರೂಪ್ ವಿಸಾ (Full list)
7.	ಪಾಸ್‌ಪೋರ್ಟ್‌ನ ಮೊದಲ ಹಾಗೂ ಕೊನೆಯ ಪ್ರತಿ, ಮತ್ತು ಸೀಲ್ ಇರುವಂತಹ ಕಲರ್ ಪ್ರತಿಯನ್ನು upload ಮಾಡತಕ್ಕದು.

:ಸೂಚನೆ:
(1) ಹೆಚ್ಚಿನ ವಿವರಗಳನ್ನು ಇಲಾಖೆಯ ಅಧಿಕೃತ ವೆಬ್ ಸೈಟ್ https://itms.kar.nic.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
(2) ಅರ್ಜಿಸಲ್ಲಿದ ಯಾತ್ರಾರ್ಥಿಗಳು ತಮ್ಮ ಅರ್ಜಿಯ ಹಂತದ ಬಗ್ಗೆ ಆಗಿಂದಾಗೆ ತಮ್ಮ login ಪರಿಶೀಲಿಸಿಕೊಳ್ಳುವುದು.
(3) ಯಾತ್ರಾರ್ಥಿಯು ಅರ್ಜಿ ಸಲ್ಲಿಸುವ ಮುನ್ನ ಅವರ ಬ್ಯಾಂಕ್ ಖಾತೆಯು ಚಾಲ್ತಿಯಲ್ಲಿರುವ ಬಗ್ಗೆ ಖಾತ್ರಿಪಡಿಸಿಕೊಂಡು, ಸದರಿ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಅನ್ನು ತಪ್ಪದೇ Seed ಹಾಗೂ NPCI Active ಮಾಡಿಸಿರತಕ್ಕದ್ದು. (ಸರ್ಕಾರದ ಮಾರ್ಗಸೂಚಿಯನ್ವಯ ಆಯಾಯಾ ವರ್ಷದ ಅನುದಾನವನ್ನು ಅಯಾಯಾ ವರ್ಷ ಪಾವತಿಸಲು ಅವಕಾಶವಿರುವುದರಿಂದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಅನ್ನು ತಪ್ಪದೇ Seed ಹಾಗೂ NPCI Active ಮಾಡಿಸಿರತಕ್ಕದ್ದು. ನಿಗಧಿತ ದಿನಾಂಕದೊಳಗೆ ಮಾಡಿಸದಿದ್ದಲ್ಲಿ ತಾವೇ ನೇರ ಜವಾಬ್ದಾರರು)
(4) ಆವಧಿ ಮುಗಿದ ನಂತರ ಸಹಾಯಧನ ಕೋರಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಉಪ ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾಧಾಯ ದತ್ತಿಗಳ ಇಲಾಖೆ,
ಚಾಮರಾಜ ಪೇಟೆ, ಬೆಂಗಳೂರು.

ವಾಸಸಂಇ/ವಾ.ಪ್ರ/1134/ಶಿರಡಿ ಸಾಯಿ/2026–27

ದೇವರ ದರ್ಶನ ಪಡೆದು, ಹರಕೆ ಸೇವೆ ಹಾಗೂ ವಿಶೇಷ ಪೂಜೆ ಸಲ್ಲಿಕೆ

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಕ್ತರ ದಟ್ಟಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಿಥುನ ಮಾಸ ಆರಂಭ
- ರಾಜ್ಯ ಹಾಗೂ ಹೊರರಾಜ್ಯಗಳಿಂದ ಭಕ್ತರ ದಂಡು
- ದೇವಸ್ಥಾನದ ವಸತಿ ಗೃಹಗಳು ವಾರದ ಹಿಂದೆಯೇ ಭರ್ತಿ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭಾನುವಾರ ಭಾರಿ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದರು. ಮಿಥುನ ಮಾಸ ಆರಂಭಗೊಂಡಿರುವುದರಿಂದ ರಾಜ್ಯದ ವಿವಿಧ ಜಿಲ್ಲೆ ಹಾಗೂ ಹೊರರಾಜ್ಯಗಳಿಂದ ಭಕ್ತರು ಶನಿವಾರ ರಾತ್ರಿಯೇ ಕುಕ್ಕೆಗೆ ಬಂದಿದ್ದರು. ದೇವರ ದರ್ಶನ ಪಡೆದು, ಹರಕೆ ಸೇವೆ ಹಾಗೂ ವಿಶೇಷ ಪೂಜೆ ಸಲ್ಲಿಸಿದರು.

ದೇವಸ್ಥಾನದ ವಸತಿಗೃಹಗಳು ವಾರದ ಹಿಂದೆಯೇ ಭರ್ತಿಯಾಗಿದ್ದರೆ, ಖಾಸಗಿ ವಸತಿಗೃಹಗಳೂ ಶನಿವಾರವೇ ಸಂಪೂರ್ಣ ಭರ್ತಿಯಾಗಿದ್ದವು.

ಭಕ್ತರ ವಾಹನಗಳ ಸಂಖ್ಯೆಯೂ ಹೆಚ್ಚಾಗಿದ್ದರಿಂದ ಸುಬ್ರಹ್ಮಣ್ಯ ಪೊಲೀಸ್ ಠಾಣೆ ಬಳಿಯಿಂದ ಮುಖ್ಯಪೇಟೆಯವರೆಗೆ, ಕಾಶಿಕಟ್ಟೆಯಿಂದ ಆದಿ ಸುಬ್ರಹ್ಮಣ್ಯ ರಸ್ತೆಯ ಎರಡೂ ಬದಿಗಳಲ್ಲಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆಬದಿ ವಾಹನಗಳನ್ನು ನಿಲ್ಲಿಸಲಾಗಿತ್ತು. ಇದರಿಂದ ವಾಹನ ಸಂಚಾರಕ್ಕೆ ಮತ್ತು ಪಾದಚಾರಿಗಳ ಓಡಾಟಕ್ಕೆ ತೊಂದರೆ ಉಂಟಾಯಿತು.

ವಾರಾಂತ್ಯ ಹಾಗೂ ವಿಶೇಷ ದಿನಗಳಲ್ಲಿ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಭಕ್ತರ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿರುವ ಕಾರಣ ಪೊಲೀಸ್ ಇಲಾಖೆ ಹಾಗೂ ಸಂಬಂಧಿತ ಅಧಿಕಾರಿಗಳು ಬಿಲದ್ವಾರ ಸೇರಿದಂತೆ ಲಭ್ಯವಿರುವ ಪಾರ್ಕಿಂಗ್ ಸ್ಥಳಗಳನ್ನು ಸಮರ್ಪಕವಾಗಿ ಬಳಸುವಂತೆ ಕ್ರಮ ಕೈಗೊಳ್ಳಬೇಕು. ಭಕ್ತರು ಹಾಗೂ ಸ್ಥಳೀಯರಿಗೆ ತೊಂದರೆಯಾಗದಂತೆ ವಾಹನ ಸಂಚಾರಕ್ಕೆ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಾನುವಾರ ಕಂಡು ಬಂದ ಭಕ್ತರ ಸಂದಣಿ

ಮೂವರು ಯುವಕರು ನೀರುಪಾಲು

ಹಾಸನ: ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ತೆರಳಿ ವಾಪಸಾಗುತ್ತಿದ್ದ ಯುವಕರ ತಂಡದ ಮೂವರು ಇಲ್ಲಿನ ಶೆಟ್ಟಿಹಳ್ಳಿ ಚರ್ಚ್ ಬಳಿಯ ಹೊಳೆಯಲ್ಲಿ ಈಜಲು ಹೋಗಿ ನೀರು ಪಾಲಾಗಿದ್ದಾರೆ.

ಮಣಿಕಂಠ (20) ಅವರ ಮೃತದೇಹ ಪತ್ತೆಯಾಗಿದ್ದು, ಮಿಲನ್ ಗೌಡ (23), ಚರಣ್ (20) ಕೊಚ್ಚಿ ಹೋಗಿದ್ದು, ಶೋಧ ಕಾರ್ಯ ನಡೆದಿದೆ.

ಬೆಂಗಳೂರಿನ ಗಿರಿನಗರ ಹಾಗೂ ಬ್ಯಾಟರಾಯನಪುರದ 10 ಮಂದಿ ಯುವಕರ ತಂಡ ಧರ್ಮಸ್ಥಳಕ್ಕೆ ತೆರಳಿದ್ದು, ವಾಪಸಾಗುವ ಮಾರ್ಗ ಮಧ್ಯೆ ಶೆಟ್ಟಿಹಳ್ಳಿ ರೋಸರಿ ಚರ್ಚ್ ವೀಕ್ಷಣೆಗೆ ಬಂದಿತ್ತು. ಬಳಿಕ ಚರ್ಚ್ ಬಳಿಯ ಹೊಳೆಯಲ್ಲಿ ಈಜಲು ತೆರಳಿತ್ತು.

ರಾಜಸ್ಥಾನ ಎಸಿಬಿ ಬಲೆಗೆ ಬೆಂಗಳೂರು ಪೊಲೀಸರು

ಬೆಂಗಳೂರು: ಎಚ್‌ಎಎಲ್ ಠಾಣೆ ಮಹಿಳಾ ಸಬ್ ಇನ್‌ಸ್ಪೆಕ್ಟರ್ ಸೇರಿ ಮೂವರು ಪೊಲೀಸ್ ಸಿಬ್ಬಂದಿಯನ್ನು ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಂಧಿಸಿದೆ.

ಲಂಚ ಪಡೆದ ಆರೋಪದಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಕೆ.ಅನಿತಾ, ಹೆಡ್ ಕಾನ್‌ಸ್ಟೆಬಲ್ ಉಲ್ಲವ್ವ ತೆಗೂರು ಹಾಗೂ ಯತೀಶ್ ಅವರನ್ನು ಬಂಧಿಸಲಾಗಿದೆ.

ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ಜೈಪುರಕ್ಕೆ ಎಚ್‌ಎಎಲ್ ಪೊಲೀಸರು ತೆರಳಿದ್ದರು. ಆದರೆ, ಪ್ರಕರಣದಿಂದ ಕೈ ಬಿಡಲು ಆರೋಪಿಗಳ ಕುಟುಂಬದವರಿಂದ ₹ 2 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ದೂರಿನ ಆಧಾರದ ಮೇಲೆ ರಾಜಸ್ಥಾನದ ಎಸಿಬಿ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿ ಜೈಪುರದ ಹೋಟೆಲ್ ಗಂಗೌರ್‌ನಲ್ಲಿ ₹40 ಸಾವಿರ ಲಂಚ ಪಡೆಯುವಾಗ ಉಲ್ಲವ್ವ ತೆಗೂರು ಅವರನ್ನು ಹಣ ಸಮೇತ ಬಂಧಿಸಿದ್ದಾರೆ. ಬಳಿಕ ನಡೆದ ವಿಚಾರಣೆಯಲ್ಲಿ ಕೆ.ಅನಿತಾ ಮತ್ತು ಯತೀಶ್ ಅವರ ಪಾತ್ರವೂ ಇರುವುದು ಗೊತ್ತಾಗಿ, ಅವರಿಬ್ಬರನ್ನೂ ಬಂಧಿಸಿದ್ದಾರೆ.

ಕಸದಲ್ಲಿ ಆಹಾರ ಅರಸುತ್ತಾ...

ಚಾಮರಾಜನಗರ ಜಿಲ್ಲೆ ಮಹದೇಶ್ವರ ಬೆಟ್ಟದ ಅರಣ್ಯದಂಚಿನಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ತ್ಯಾಜ್ಯದ ರಾಶಿಯೊಳಗೆ ಕಾಡಾನೆಯೊಂದು ಆಹಾರ ಹುಡುಕಿತು

ವೈಯಕ್ತಿಕ ಕಲಹ: ಮಕ್ಕಳನ್ನು ಶಾಲೆಗೆ ಕಳುಹಿಸದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಕವಿತಾಳ (ರಾಯಚೂರು ಜಿಲ್ಲೆ): ಮಸ್ಕಿ ತಾಲ್ಲೂಕಿನ ಹಾಲಾಪುರ ಗ್ರಾ.ಪಂ ವ್ಯಾಪ್ತಿಯ ಎಂ.ರಾಮಲದಿನ್ನಿ ಗ್ರಾಮದಲ್ಲಿ ಬಿಸಿಯೂಟದ ಅಡುಗೆ ಸಿಬ್ಬಂದಿ ಮತ್ತು ಗ್ರಾಮಸ್ಥರ ನಡುವಿನ ವೈಯಕ್ತಿಕ ಕಲಹದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲ. ಶೈಕ್ಷಣಿಕ ವರ್ಷ ಆರಂಭವಾಗಿ 15 ದಿನಗಳಾದರೂ ಮಕ್ಕಳು ಶಾಲೆಗೆ ಬರುತ್ತಿಲ್ಲ ಎನ್ನಲಾಗಿದೆ.

ಪರಿಶಿಷ್ಟ ಜಾತಿಯ ಅಡುಗೆ ಸಿಬ್ಬಂದಿ ಮತ್ತು ಗ್ರಾಮದ ಪರಿಶಿಷ್ಟ ಪಂಗಡದ ಕೆಲವರ ನಡುವೆ ಹಿಂದೆ ನಡೆದ ವೈಯಕ್ತಿಕ ಜಗಳ ಠಾಣೆ ಮೆಟ್ಟಿಲೇರಿದ್ದು, ಪರಸ್ಪರ ಅಸಮಾಧಾನ ಇದ್ದುದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸದಂತೆ ಗ್ರಾಮಸ್ಥರು ತಡೆದಿದ್ದಾರೆ.

ಮಾಹಿತಿ ತಿಳಿದು ಈಚೆಗೆ ಶಾಲೆಗೆ ಭೇಟಿ ನೀಡಿದ್ದ ಅಕ್ಷರ ದಾಸೋಹ ತಾಲ್ಲೂಕು ಅಧಿಕಾರಿ ಕುಬೇರಪ್ಪ ಮತ್ತು ಹಾಲಾಪುರ ಸರ್ಕಾರಿ ಶಾಲೆ ಮುಖ್ಯಶಿಕ್ಷಕ ಸುಭಾಷ್ ಸಿಂಗ್ ಅವರು ಗ್ರಾಮಸ್ಥರೊಂದಿಗೆ ಚರ್ಚಿಸಿದ್ದಾರೆ.

'ಮಹಿಳೆ ಮತ್ತು ಗ್ರಾಮಸ್ಥರ ನಡುವಿನ ಜಗಳದ ವಿಷಯ ಪೊಲೀಸ್ ಠಾಣೆವರೆಗೆ ಹೋಗಿದೆ. ಈ ಸಂದರ್ಭದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಬಿಸಿಯೂಟದ ಸಿಬ್ಬಂದಿ ಮಕ್ಕಳಿಗೆ ತೊಂದರೆ ನೀಡಬಹುದು ಎಂಬ ಭಯದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲ' ಎಂದು ಗ್ರಾಮದ ಅಯ್ಯಪ್ಪ, ಅಂಬಣ್ಣ, ಸಣ್ಣಯಂಕಪ್ಪ ಮತ್ತು ಸಿದ್ದಪ್ಪ ಹೇಳಿದರು.

'ಪರಸ್ಪರ ಜಗಳ ನಡೆದಿದ್ದರೂ ಮಕ್ಕಳಿಗೆ ತೊಂದರೆ ನೀಡುವ ಉದ್ದೇಶವಿಲ್ಲ. ಪಾಲಕರು ಆತಂಕಪಡುವ ಅಗತ್ಯವಿಲ್ಲ' ಎಂದು ಅಡುಗೆ ಸಿಬ್ಬಂದಿ ಶಂಕ್ರಮ್ಮ ತಿಳಿಸಿದರು.

ರಾಯಚೂರು ಜಿಲ್ಲೆ ಕವಿತಾಳ ಸಮೀಪದ ಎಂ.ರಾಮಲದಿನ್ನಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ

ಆಯುಕ್ತರವರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ,ಬೆಂಗಳೂರು –18, ದೂರವಾಣಿ:26709689/ 26706775,
Email: endowmentcommissioner@gmail.com.

ಸಂಖ್ಯೆ: HRICE-CDMS0CD/9/2026-2184090 ದಿನಾಂಕ:–12.06.2026

ಪತ್ರಿಕಾ ಪ್ರಕಟಣೆ

2026–27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಚಾರ್‌ಧಾಮ್ ಯಾತ್ರೆಯನ್ನು ಕೈಗೊಂಡ ಯಾತ್ರಾರ್ಥಿಗಳಿಗೆ ತಲಾ ರೂ.20,000/– (ರೂ. ಇಪ್ಪತ್ತು ಸಾವಿರಗಳು ಮಾತ್ರ) ಗಳಂತೆ ಸರ್ಕಾರದ ಸಹಾಯಧನವನ್ನು ನೀಡುವ ಕುರಿತು ದಿನಾಂಕ:16.06.2026 ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆಗಳು:

(1) ಯಾತ್ರಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರತಕ್ಕದ್ದು.
(2) 45ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸಬಹುದು.
(3) ಯಾತ್ರಾರ್ಥಿಯು ಕಡ್ಡಾಯವಾಗಿ ಬದರೀನಾಥ್, ಕೇದಾರ್‌ನಾಥ್, ಯಮುನೋತ್ರಿ ಮತ್ತು ಗಂಗೋತ್ರಿ ಕ್ಷೇತ್ರಗಳಿಗೆ ಭೇಟಿ ನೀಡಿರತಕ್ಕದ್ದು.
(4) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:15.11.2026 ಸಂಜೆ 5:30 ಗಂಟೆಯೊಳಗೆ.
(5) ಅನುದಾನ ಲಭ್ಯತೆಗೆ ಅನುಗುಣವಾಗಿ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ವಿತರಿಸಲಾಗುವುದು.
(6) ಯಾತ್ರಾರ್ಥಿಗಳು ತಮ್ಮ ಅರ್ಜಿಯನ್ನು ಆನ್‌ಲೈನ್ ಮೂಲಕವೇ ಸೇವಾ ಸಿಂಧು ವೆಬ್ ಪೋರ್ಟಲ್ (https://sevasindhuservices.karnataka.gov.in) ನಲ್ಲಿ ದಿನಾಂಕ:15.11.2026 ಸಂಜೆ 05:00 ಗಂಟೆಯೊಳಗೆ ಸಲ್ಲಿಸಬೇಕಾಗಿರುತ್ತದೆ.

	ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಆಪ್ ಲೋಡ್ ಮಾಡಬೇಕಾದ ದಾಖಲೆಗಳು
1.	ಒಂದು ಭಾವಚಿತ್ರ (ಪಾಸ್‌ಪೋರ್ಟ್ ಅಳತೆ)
2.	ಚುನಾವಣಾ ಗುರುತಿನ ಚೀಟಿ/ರೇಷನ್ ಕಾರ್ಡ್/ ಪಾಸ್‌ಪೋರ್ಟ್ /ಡ್ರೈವಿಂಗ್ ಲೈಸೆನ್ಸ್
3.	ಯಾತ್ರಾರ್ಥಿಯು ರೂ.100/–ಗಳ ಛಾಪಾ ಕಾಗದ (E-Stamp Paper)ದಲ್ಲಿ ಈ ಹಿಂದೆ ಸರ್ಕಾರದ ಸಹಾಯಧನವನ್ನು ಪಡೆದಿಲ್ಲವೆಂದು ಸ್ವದೃಢೀಕರಿಸಿ ನೋಟರಿ ಮೊಹರು ಮತ್ತು ಸಹಿಯೊಂದಿಗೆ ದೃಢೀಕರಣವನ್ನು ಅಪ್‌ಲೋಡ್ ಮಾಡತಕ್ಕದ್ದು.
4.	ಯಾತ್ರೆ ಕೈಗೊಳ್ಳುವ ಮುನ್ನ ಯಾತ್ರೆಗೆ ನೋಂದಾಯಿಸಿಕೊಂಡ ಪ್ರತಿ.
5.	ಯಾತ್ರೆ ಮುಗಿದ ನಂತರ ಉತ್ತರಖಂಡ್ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನೀಡಲಾದ ಪ್ರಮಾಣ ಪತ್ರ (ಕಡ್ಡಾಯವಾಗಿ 4 ಧಾಮಗಳು ನಮೂದಾಗಿರತಕ್ಕದ್ದು).

ಸೂಚನೆ:–(1)ಹೆಚ್ಚಿನ ವಿವರಗಳನ್ನು ಇಲಾಖೆಯ ಅಧಿಕೃತ ವೆಬ್ ಸೈಟ್ https://itms.kar.nic.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
(2) ಅರ್ಜಿಸಲ್ಲಿದ ಯಾತ್ರಾರ್ಥಿಗಳು ತಮ್ಮ ಅರ್ಜಿಯ ಹಂತದ ಬಗ್ಗೆ ಆಗಿಂದಾಗೆ ತಮ್ಮ login ಪರಿಶೀಲಿಸಿಕೊಳ್ಳುವುದು.
(3)ಯಾತ್ರಾರ್ಥಿಯು ಅರ್ಜಿ ಸಲ್ಲಿಸುವ ಮುನ್ನ ಅವರ ಬ್ಯಾಂಕ್ ಖಾತೆಯು ಚಾಲಿಯಲ್ಲಿರುವ ಬಗ್ಗೆ ಖಾತ್ರಿಪಡಿಸಿಕೊಂಡು, ಸದರಿ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಅನ್ನು ತಪ್ಪದೇ Seed ಹಾಗೂ NPCI Active ಮಾಡಿಸಿರತಕ್ಕದ್ದು.(ಸರ್ಕಾರದ ಮಾರ್ಗಸೂಚಿಯನ್ವಯ ಆಯಾಯಾ ವರ್ಷದ ಅನುದಾನವನ್ನು ಅಯಾಯಾ ವರ್ಷ ಪಾವತಿಸಲು ಅವಕಾಶವಿರುವುದರಿಂದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಅನ್ನು ತಪ್ಪದೇ Seed ಹಾಗೂ NPCI Active ಮಾಡಿಸಿರತಕ್ಕದ್ದು. ನಿಗಧಿತ ದಿನಾಂಕದೊಳಗೆ ಮಾಡಿಸದಿದ್ದಲ್ಲಿ ತಾವೇ ನೇರ ಜವಾಬ್ದಾರರು)
(4) ಆವಧಿ ಮುಗಿದ ನಂತರ ಸಹಾಯಧನ ಕೋರಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಉಪ ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧಾರ್ಮಿಕ ದತ್ತಿ ಇಲಾಖೆ,
ಚಾಮರಾಜಪೇಟೆ, ಬೆಂಗಳೂರು

ವಾಸಸಂಇ/ವಾ.ಪ್ರ/1135/ಎಸ್‌ಎಸ್‌ಸಿ/2026–27

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18, ದೂರವಾಣಿ:26709689/ 26706775,
Email: endowmentcommissioner@gmail.com.

ಸಂಖ್ಯೆ: HRICE-CDMS0CD/9/2026-2184090 ದಿನಾಂಕ:– 12.06.2026

ಪತ್ರಿಕಾ ಪ್ರಕಟಣೆ

2026–27ನೇ ಸಾಲಿನಲ್ಲಿ (ದಿನಾಂಕ:01.11.2025 ರಿಂದ) ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಕಾಶಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ತಲಾ ರೂ.5000/– (ರೂ. ಐದು ಸಾವಿರಗಳು ಮಾತ್ರ) ಗಳಂತೆ ಸರ್ಕಾರದ ಸಹಾಯಧನವನ್ನು ವಿತರಿಸುವ ಕುರಿತು ದಿನಾಂಕ:16.06.2026 ರಿಂದ "ಆನ್ ಲೈನ್" ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆಗಳು:

1. ಯಾತ್ರಾರ್ಥಿಗಳು ಕರ್ನಾಟಕದ ಖಾಯಂ ನಿವಾಸಿಗಳಾಗಿರತಕ್ಕದ್ದು.
2. 18ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿರುತ್ತದೆ.
3. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.11.2026 ಸಂಜೆ 5:30ಗಂಟೆಯೊಳಗೆ.
4. ಯಾತ್ರಾರ್ಥಿಗಳು ತಮ್ಮ ಅರ್ಜಿಯನ್ನು ಆನ್ ಲೈನ್ ಮೂಲಕವೇ ಸೇವಾ ಸಿಂಧು ವೆಬ್ ಪೋರ್ಟಲ್ (https://sevasindhuservices.karnataka.gov.in) ನಲ್ಲಿ ದಿನಾಂಕ: 15.11.2026 ಸಂಜೆ 05:00ಗಂಟೆಯೊಳಗೆ ಸಲ್ಲಿಸಬೇಕಾಗಿರುತ್ತದೆ.

	ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು
1.	ಒಂದು ಭಾವಚಿತ್ರ (ಪಾಸ್‌ಪೋರ್ಟ್ ಅಳತೆ)
2.	ಚುನಾವಣಾ ಗುರುತಿನ ಚೀಟಿ/ರೇಷನ್ ಕಾರ್ಡ್/ ಪಾಸ್‌ಪೋರ್ಟ್ / ಡ್ರೈವಿಂಗ್ ಲೈಸೆನ್ಸ್.
3.	ಯಾತ್ರಾರ್ಥಿಗಳು ಕಾಶಿಗೆ ಪ್ರಯಾಣಿಸಿದ ಕುರಿತು ಟಿಕೆಟ್ ಅಪ್ ಲೋಡ್ ಮಾಡತಕ್ಕದ್ದು.
4.	ಕಾಶಿಯಾತ್ರೆ ಕೈಗೊಂಡಿರುವುದನ್ನು ದೃಢೀಕರಿಸುವ ಸಲುವಾಗಿ ಕಾಶಿ ವಿಶ್ವನಾಥಸ್ವಾಮಿ ದೇವಾಲಯದ ಮುಂಬದಿಯಲ್ಲಿ ಯಾತ್ರಾರ್ಥಿಗಳ (Photo)/GPS location ಹೊಂದಿರುವ ಛಾಯಾಚಿತ್ರನ್ನು ತೆಗೆದು ಆಪ್‌ಲೋಡ್ ಮಾಡತಕ್ಕದ್ದು.
5.	ಯಾತ್ರಾರ್ಥಿಗಳು ಸಹಾಯಧನವನ್ನು ಒಂದು ಬಾರಿ ಪಡೆದ ನಂತರದಲ್ಲಿ ಅದೇ ವ್ಯಕ್ತಿಗೆ ಮತ್ತೊಮ್ಮೆ ಅನುದಾನ ನೀಡಲಾಗುವುದಿಲ್ಲ, ಈ ಬಗ್ಗೆ ಯಾತ್ರಾರ್ಥಿಗಳು ರೂ.100/–ಗಳ ಛಾಪಾ ಕಾಗದ (E-Stamp Paper)ದಲ್ಲಿ ಈ ಹಿಂದೆ ಸರ್ಕಾರದ ಸಹಾಯಧನವನ್ನು ಪಡೆದಿಲ್ಲವೆಂದು ಸ್ವದೃಢೀಕರಿಸಿ ನೋಟರಿ ಮೊಹರು ಮತ್ತು ಸಹಿಯೊಂದಿಗೆ ದೃಢೀಕರಣವನ್ನು ಅಪ್‌ಲೋಡ್ ಮಾಡತಕ್ಕದ್ದು.

ಸೂಚನೆ: (1) ಹೆಚ್ಚಿನ ವಿವರಗಳನ್ನು ಇಲಾಖೆಯ ಅಧಿಕೃತ ವೆಬ್ ಸೈಟ್ https://itms.kar.nic.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
(2) ಅರ್ಜಿಸಲ್ಲಿದ ಯಾತ್ರಾರ್ಥಿಗಳು ತಮ್ಮ ಅರ್ಜಿಯ ಹಂತದ ಬಗ್ಗೆ ಆಗಿಂದಾಗೆ ತಮ್ಮ login ಪರಿಶೀಲಿಸಿಕೊಳ್ಳುವುದು.
(3) ಯಾತ್ರಾರ್ಥಿಯು ಅರ್ಜಿ ಸಲ್ಲಿಸುವ ಮುನ್ನ ಅವರ ಬ್ಯಾಂಕ್ ಖಾತೆಯು ಚಾಲಿಯಲ್ಲಿರುವ ಬಗ್ಗೆ ಖಾತ್ರಿಪಡಿಸಿಕೊಂಡು, ಸದರಿ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಅನ್ನು ತಪ್ಪದೇ Seed ಹಾಗೂ NPCI Active ಮಾಡಿಸಿರತಕ್ಕದ್ದು. (ಸರ್ಕಾರದ ಮಾರ್ಗಸೂಚಿಯನ್ವಯ ಆಯಾಯಾ ವರ್ಷದ ಅನುದಾನವನ್ನು ಅಯಾಯಾ ವರ್ಷ ಪಾವತಿಸಲು ಅವಕಾಶವಿರುವುದರಿಂದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಅನ್ನು ತಪ್ಪದೇ Seed ಹಾಗೂ NPCI Active ಮಾಡಿಸಿರತಕ್ಕದ್ದು. ನಿಗಧಿತ ದಿನಾಂಕದೊಳಗೆ ಮಾಡಿಸದಿದ್ದಲ್ಲಿ ತಾವೇ ನೇರ ಜವಾಬ್ದಾರರು)
(4) ಆವಧಿ ಮುಗಿದ ನಂತರ ಸಹಾಯಧನ ಕೋರಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಉಪ ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು

ವಾಸಸಂಇ/ವಾ.ಪ್ರ/1133/ಎಸ್‌ಎಸ್‌ಸಿ/2026–27

ಡಾ. ರಾಜೇಂದ್ರ ಪ್ರಸಾದ್ ವಿದ್ಯಾರ್ಥಿವೇತನ

Buddy4Study ಸಂಸ್ಥೆ ಇದನ್ನು ನೀಡುತ್ತದೆ.

ಅರ್ಹತೆ: 2025-26ನೇ ಶೈಕ್ಷಣಿಕ ವರ್ಷದಲ್ಲಿ 10 ಅಥವಾ 12ನೇ ತರಗತಿ ಪೂರ್ಣಗೊಳಿಸಿದ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 65ರಷ್ಟು ಅಂಕ ಗಳಿಸಿರಬೇಕು.

ಪೋಷಕರ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ₹ 8 ಲಕ್ಷಕ್ಕಿಂತ ಹೆಚ್ಚಿರಬಾರದು.

ಇವರಿಗೆ ಆದ್ಯತೆ: ಸರ್ಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು, ಅಂಗವಿಕಲರು, ಈಶಾನ್ಯ ಭಾಗದ ಹಾಗೂ ಹಿಂದುಳಿದ ಜಿಲ್ಲೆಗಳ ವಿದ್ಯಾರ್ಥಿಗಳು.

ಆರ್ಥಿಕ ನೆರವು: ಶುಲ್ಕ ವ್ಯವಸ್ಥೆಯ ಆಧಾರದ ಮೇಲೆ ₹ 30,000ದವರೆಗೆ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೇ ದಿನ: 28-06-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: Short Url: www.b4s.in/praja/DRPSP1

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ಸಮಾಜವಿಜ್ಞಾನ (ಇತಿಹಾಸ)

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಬಿಟ್ಟ ಸ್ಥಳ ತುಂಬಿರಿ

28) ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ....ನೀಡಿದನು.

ಉತ್ತರ:– ಎರಡನೇ ಷಾ ಆಲಂ

29) ಷಾ ಆಲಂ ವಾರ್ಷಿಕ ....ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು

ಉತ್ತರ:– 26 ಲಕ್ಷ

30) ಔದ್‌ನ ನವಾಬನಾದ ....ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.

ಉತ್ತರ:– ಷುಜಾ–ಉದ್–ದೌಲನು

31) ಮೀರ್ ಖಾಸಿಮನು ಮೊಗಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜಾ–ಉದ್–ದೌಲರೊಂದಿಗೆ ಒಪ್ಪಂದ ಮಾಡಿಕೊಂಡನು. ಹೀಗಾಗಿ ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ....ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಉತ್ತರ:– 1764

32) ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ....ನನ್ನು ಬಂಗಾಳದ ನವಾಬನೆಂದು ನೇಮಿಸಿದರು

ಉತ್ತರ:– ಮೀರ್ ಖಾಸಿಂ

33) ಮಾರ್ತಾಂಡ ವರ್ಮನು ವೈನಾಡ್ ಸಂಸ್ಥಾನದ ಗಡಿಯನ್ನು ವಿಸ್ತರಿಸಲು .... ಸಾವಿರ ಸೈನಿಕರ ಸೈನ್ಯವನ್ನು ಕಟ್ಟಿದನು.

ಉತ್ತರ:– 50

ಹಿಂದಿನ ಪ್ರಶ್ನೆಪತ್ರಿಕೆಯಿಂದ

1) ಬಕ್ಸಾರ್ ಕದನವು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಮೇಲೆ ಬೀರಿದ ಪರಿಣಾಮಗಳೇನು?

(2024 ಮಾರ್ಚ್ ವಾರ್ಷಿಕ ಪರೀಕ್ಷೆ 3 ಅಂಕದ ಪ್ರಶ್ನೆ)

ಉತ್ತರ:– ಬಕ್ಸಾರ್ ಕದನವು **ಈಸ್ಟ್ ಇಂಡಿಯಾ ಕಂಪನಿಯ ಮೇಲೆ ಬೀರಿದ** ಪರಿಣಾಮಗಳು:–

1. ಈಸ್ಟ್ ಇಂಡಿಯಾ ಕಂಪನಿಯು ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನಿಂದ ಪಡೆಯಿತು
2. ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಟ್ಟನು
3. ಔದ್‌ನ ನವಾಬನಾದ ಷುಜಾ–ಉದ್–ದೌಲನು ಕಂಪನಿಗೆ ಯುದ್ಧ ನಷ್ಟದ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ನೀಡಿದನು
4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು

ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು. 1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.

2) ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು ಸ್ಪಷ್ಟೀಕರಿಸಿ (2019 ಮಾರ್ಚ್ :2 ಅಂಕದ ಪ್ರಶ್ನೆ)

ಉತ್ತರ:– ಬಕ್ಸಾರ್ ಕದನದ ಪರಿಣಾಮ ಬಿಹಾರ, ಒಡಿಶಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್‌ಕ್ಲೈವನು ದ್ವಿ–ಸರ್ಕಾರವನ್ನು ಜಾರಿಗೆ ತಂದನು. ಇದರ ಪ್ರಕಾರ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಂಡರು. ಈ ರೀತಿ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು

3) 1453ರಲ್ಲಿ ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು..............................

ಎ) ಅರಬರು   ಬಿ) ಅಟೋಮನ್ ಟರ್ಕರು
ಸಿ) ಇಟಲಿ   ಡಿ) ಪೋರ್ಚುಗೀಸರು

(2020 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

ಉತ್ತರ:–ಬಿ

4) ಬಂಗಾಳದಲ್ಲಿ ದ್ವಿಪ್ರಭುತ್ವವನ್ನು ಜಾರಿಗೆ ತಂದವನು ಯಾರು?

ಉತ್ತರ:– ರಾಬರ್ಟ್ ಕ್ಲೈವ್

(2020ರ ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

5) ಕಾನ್‌ಸ್ಟಾಂಟಿನೋಪಲ್‌ನ್ನು ವ್ಯಾಪಾರದ ದ್ವಾರವೆಂದು ಪರಿಗಣಿಸಲಾಗಿತ್ತು. ಏಕೆಂದರೆ ಅದು............

ಎ) ಅಂತಾರಾಷ್ಟ್ರೀಯ ವ್ಯಾಪಾರ ಮಾರ್ಗಗಳ ಕೇಂದ್ರ
ಬಿ) ಅದೊಂದೇ ಜಲಮಾರ್ಗ
ಸಿ) ರೋಮನ್ ಸಾಮ್ರಾಜ್ಯದ ರಾಜಧಾನಿ
ಡಿ) ಯೂರೋಪಿಯನ್ ಸಂಪನ್ಮೂಲಗಳ ಏಕೈಕ ಮೂಲ

ಉತ್ತರ:– ಎ **(2021 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)**

6) ಪ್ಲಾಸಿ ಕದನದ ಪರಿಣಾಮಗಳೇನು? (ಜೂನ್ 2017 ಪರೀಕ್ಷೆ)

ಉತ್ತರ:– **ಪ್ಲಾಸಿ ಕದನದ ಪರಿಣಾಮಗಳು**

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು. ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

7) 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?

ಉತ್ತರ:– **ಬ್ರಿಟಿಷರು** ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ **ನವಾಬನು** ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು. **(ಏಪ್ರಿಲ್ 2017 ವಾರ್ಷಿಕ ಪರೀಕ್ಷೆ)**

ಕಾಳಜಿ ಉಸಿರುಗಟ್ಟಿಸುತ್ತಿದೆ!

• ನಾನು ಬಿ.ಇ ಓದುತ್ತಿದ್ದೇನೆ. ನನ್ನ ಪಾಲಕರ ವರ್ತನೆಯಿಂದ ನನಗೆ ಜೀವನ ಸಾಕಾಗಿದೆ. ನನಗೆ ಒಂದಿಷ್ಟೂ ಸ್ವಾತಂತ್ರ್ಯ ಇಲ್ಲ. ಪ್ರತಿದಿನ ಮನೆಯಿಂದ ಕಾಲೇಜಿಗೆ ನಾನು ಆಟೊದಲ್ಲಿ ಹೋಗಬೇಕು. ಕಾಲೇಜು ಮುಗಿಸಿ ಸೀದಾ ಮನೆಗೆ ಬರಬೇಕು. ಸ್ವಲ್ಪವೂ ತಡವಾಗಬಾರದು. ಶಾಪಿಂಗ್, ಫ್ರೆಂಡ್ಸ್ ಮನೆಗೆ ಹೋಗುವುದಿರಲಿ, ಕಾಲೇಜಿನಲ್ಲಿ ಕಾರ್ಯಕ್ರಮ ಇರಲಿ ಅಮ್ಮ ಅಥವಾ ಅಪ್ಪ ಜೊತೆಗೆ ಬರುತ್ತಾರೆ. ಎಲ್ಲಿಗೂ ನಾನು ಒಬ್ಬಳೇ ಹೋಗುವ ಹಾಗಿಲ್ಲ. ನನಗೆ ಇಷ್ಟವಾದ ಫೋನ್ ಕೊಡಿಸಿದ್ದಾರೆ. ಅದನ್ನು ಆಗಾಗ ಚೆಕ್ ಮಾಡುತ್ತಾರೆ. ಇದರಿಂದ ಕಾಲೇಜಿನಲ್ಲಿ ನನ್ನನ್ನು ಪಾಪಚ್ಚಿ, ಪಾಪು ಎಂದೆಲ್ಲ ರೇಗಿಸುತ್ತಾರೆ. ನನಗೆ ಅವಮಾನವಾಗುತ್ತದೆ. ಪಾಲಕರ ಕಣ್ಣಂಚಿನಿಂದ ದೂರವಾದರೆ ಮಕ್ಕಳು ಹಾಳಾಗುತ್ತಾರೆ ಎಂದೆಲ್ಲ ನಮ್ಮ ಮನೆಯಲ್ಲಿ ಮಾತನಾಡುತ್ತಾರೆ. ಹೈಸ್ಕೂಲಿನಲ್ಲಿರುವ ನನ್ನ ತಮ್ಮನಿಗೂ ಅಷ್ಟೆ. ಬಹುತೇಕ ಅಪ್ಪ ಅವನ ಜೊತೆಗೇ ಇರುತ್ತಾರೆ. ನಾನು ಪಿಯುಸಿಯಲ್ಲಿದ್ದಾಗ ಒಬ್ಬ ಹುಡುಗ ನನ್ನ ಸ್ನೇಹಕ್ಕಾಗಿ ಕೆಲವು ಸಲ ಮನೆಯ ಹತ್ತಿರ ಓಡಾಡಿದ ಎಂದು, ನನ್ನ ಅಪ್ಪ ಅವನಿಗೆ ಬೈದು, ಹೊಡೆಯುವುದಕ್ಕೆ ಹೋಗಿದ್ದರು. ಎಂಜಿನಿಯರಿಂಗ್ ಮುಗಿದ ಮೇಲೆ ನನ್ನನ್ನು ಮದುವೆ ಮಾಡಿ ಅಮೆರಿಕಕ್ಕೆ ಕಳಿಸುವರಂತೆ! ಅವರೆಗೂ ಅವರು ಹೇಳಿದಂತೆ ಕೇಳಿಕೊಂಡು ಇದ್ದು ಮನೆಗೆ ಗೌರವ ತರಬೇಕಂತೆ. ನನಗಂತೂ ಓದುವುದಕ್ಕಾಗಲಿ, ಬದುಕುವುದಕ್ಕಾಗಲಿ ಆಸೆ ಇಲ್ಲ. ಸಾಯಲು ಧೈರ್ಯವೂ ಇಲ್ಲ. ನನಗೆ ಖಾಸಗಿತನ ಎಂಬುದೇ ಇಲ್ಲ. ಏನು ಮಾಡಲಿ ತಿಳಿಯುತ್ತಿಲ್ಲ. ದಾರಿ ತೋರಿಸಿ.

ಕಾವೇರಿ ರವಿಶಂಕರ್, ಬೆಂಗಳೂರು

ನಿನ್ನ ಸಂಕಷ್ಟ, ಒಂಟಿತನ ಅರ್ಥವಾಗುತ್ತದೆ. ಹರೆಯದ ಮಕ್ಕಳನ್ನು ಪಂಜರದಲ್ಲಿಟ್ಟು ಬೆಳೆಸಬೇಕೆನ್ನುವ ಪಾಲಕರ ವರ್ತನೆಯ ಬಗ್ಗೆ ಕನಿಕರವಾಗುತ್ತದೆ. ತಮ್ಮ ಮಕ್ಕಳು ಹಾಳಾಗಬಾರದು ಎನ್ನುವ ಅವರ ಅತಿಯಾದ ಕಾಳಜಿ, ಮಕ್ಕಳ ಮನಸ್ಸಿನ ಮೇಲೆ ಎಂಥ ಅಹಿತಕರವಾದ ಪರಿಣಾಮವನ್ನು ಉಂಟುಮಾಡುತ್ತದೆ ಎನ್ನುವ ಅರಿವು ಅವರಿಗೆ ಇರುವುದಿಲ್ಲ. ತಾವೇನೂ ತಪ್ಪು ಮಾಡುತ್ತಿಲ್ಲ ಅಂದುಕೊಂಡಿರುತ್ತಾರೆ.

ನಾವಿರುವ ಜೀವಜಗತ್ತಿನ ಎಲ್ಲಾ ಪ್ರಾಣಿ- ಪಕ್ಷಿಗಳಿಗೆ ತಮ್ಮ ಮರಿಗಳನ್ನು ಹೇಗೆ ಹೊತ್ತು, ಹೆತ್ತು ಸಾಕಬೇಕು ಎನ್ನುವುದು ಸರಿಯಾಗಿ ತಿಳಿದಿದೆ. ಮನುಷ್ಯರಿಗೆ ಮಾತ್ರ ಈ ಪೇರೆಂಟಿಂಗ್ ಬಗ್ಗೆ ತಿಳಿದಿಲ್ಲ. ಮಕ್ಕಳನ್ನು ಬೆಳೆಸುವ ಸಂಭ್ರಮವಾಗಲಿ, ಸುಖ, ಸಂತೋಷವನ್ನು ಅನುಭವಿಸುವುದಾಗಲಿ ಗೊತ್ತಾಗಲಿಲ್ಲ. ಇದು ಸೋಜಿಗವೆನ್ನಿಸಿದರೂ ಸತ್ಯ. ಹಾಗಾಗಿ, ಸಕಾರಾತ್ಮಕ-ವಾದ ಸಮಾಜವನ್ನು ನಿರ್ಮಿಸುವುದಾಗಲಿ, ಭೂಮಿಯನ್ನು ಸ್ವರ್ಗವನ್ನಾಗಿ ಮಾಡುವುದಾಗಲಿ ಅಸಾಧ್ಯವಾಗಿದೆ ಎಂದು ತತ್ವಜ್ಞಾನಿಯೊಬ್ಬರು ಹೇಳಿದ್ದಿದೆ.

ನಿನ್ನ ಪಾಲಕರು ನಿನಗೆ ನೆರಳಿನಂತೆ ಆಗಿರುವುದರ ಬಗ್ಗೆ ಹೆಚ್ಚು ದುಃಖಿಸಬೇಡ. ಅದನ್ನು ಎಂಜಾಯ್ ಮಾಡುವುದಕ್ಕೆ ಪ್ರಯತ್ನಿಸು. ನೀನು ಒಂಟಿಯಲ್ಲ. ನಿನಗೆ ನಿನ್ನ ಪಾಲಕರಾದಿಯಾಗಿ ಎಲ್ಲರೂ ಇದ್ದಾರೆ. ಆತ್ಮಹತ್ಯೆಯಂಥ ಆಲೋಚನೆಯನ್ನು ಮಾಡಬಾರದು. ಬದುಕನ್ನು ಎದುರಿಸಿ ಗೆಲ್ಲಬೇಕು. ಎಂಜಿನಿಯರಿಂಗ್ ಓದುತ್ತಿರುವೆ ಎಂದಾದಾಗ ನೀನು ಸಾಕಷ್ಟು ಜಾಣೆ. ನಿನ್ನ ಬುದ್ಧಿವಂತಿಕೆಯಿಂದ ನಿನ್ನ ಪರಿಸರವನ್ನು ಸರಿಯಾಗಿ ಗಮನಿಸು. ನಿನಗಿಂತಲೂ ಕಷ್ಟದಲ್ಲಿ ಇರುವವರನ್ನು ಕಂಡಾಗ ನೀನು ಎಷ್ಟೊಂದು ಸುಖವಾಗಿರುವೆ ಎನ್ನುವುದು ತಿಳಿಯುತ್ತದೆ. ನಿನಗಿರುವ ಅವಕಾಶದಲ್ಲಿ ನೀನು ನಿನ್ನ ಬದುಕನ್ನು ಭವ್ಯವಾಗಿಸಿಕೊ-ಳ್ಳುವತ್ತ ಗಮನಹರಿಸು. ಒಬ್ಬರ ಬದುಕಿನಂತೆ ಇನ್ನೊಬ್ಬರದ್ದು ಇರುವುದಿಲ್ಲ. ನಮಗೆ ಸಿಕ್ಕಿರುವುದು ನಮ್ಮ ಪಾಲಿನ ಭಾಗ್ಯ ಎಂದುಕೊಳ್ಳಬೇಕು.

ಪಠ್ಯ ಓದುವುದರ ಜೊತೆಗೆ ನೀನು ಯೋಗ, ವ್ಯಾಯಾಮ, ಸಂಗೀತ, ನೃತ್ಯದಂತಹ ಹವ್ಯಾಸಗಳನ್ನು ಬೆಳೆಸಿಕೊ. ಅದರಿಂದ ನಿನ್ನ ವ್ಯಕ್ತಿತ್ವಕ್ಕೆ ಹೆಚ್ಚಿನ ಮೆರುಗು ಬರುತ್ತದೆ. ನಿತ್ಯ ಅರ್ಧಗಂಟೆ ಧ್ಯಾನ, ಪ್ರಾರ್ಥನೆ ಮಾಡು. ಪಾಲಕರ ಬಗ್ಗೆ ಇರುವ ಕೋಪವನ್ನಾಗಲೀ ಬೇಸರವನ್ನಾ-ಗಲೀ ಬಿಟ್ಟುಬಿಡು. ಅವರ ಬಗ್ಗೆ ಗೌರವ ಹಾಗೂ ಪ್ರೀತಿಯ ಭಾವನೆಯನ್ನು ಬೆಳೆಸಿಕೊ. ಅವರ ನ್ಯೂನತೆಗಳನ್ನು ಗಮನಿಸಬೇಡ. ಅವರನ್ನು ತಿದ್ದುವುದಕ್ಕೆ ಪ್ರಯತ್ನಿಸುವುದ-ಕ್ಕಿಂತ, ನಿನ್ನನ್ನು ಸಕಾರಾತ್ಮಕವಾಗಿ ಬದಲಾಯಿಸಿಕೊಳ್ಳುವು-ದಕ್ಕೆ ಪ್ರಯತ್ನಿಸು.

ನಿನ್ನ ಕಾಲೇಜಿನಲ್ಲಿ ನಿನಗೆ ನಂಬಿಕೆ ಇರುವ ಉಪನ್ಯಾಸಕರ ಸಹಾಯವನ್ನೂ ಪಡೆದುಕೊಳ್ಳಬಹುದು. ಇಷ್ಟಕ್ಕೂ ನಿನಗೆ ಸಮಾಧಾನವಾಗದಿದ್ದರೆ ಆದಷ್ಟು ಬೇಗ ಮಾನಸಿಕ ತಜ್ಞರನ್ನು ಭೇಟಿಯಾಗಿ ಸಮಾಲೋಚಿಸುವುದು ಒಳ್ಳೆಯದು.

ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

ವಿದ್ಯಾರ್ಥಿ ವೇತನ ಕೈಪಿಡಿ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಹುಡಿ ಎಂಟರ್‌ಪ್ರೈಸ್: ಕೋಡಿಂಗ್ ಕಂಟೆಂಟ್ ಕ್ರಿಯೇಟರ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಸಿಎಸ್ಎಸ್, ಎಚ್‌ಟಿಎಂಎಲ್, ಜಾವಾಸ್ಕ್ರಿಪ್ಟ್, ಪೈಥಾನ್ ಮತ್ತು ಎಸ್‌ಕ್ಯುಎಲ್ ಬಗ್ಗೆ ಜ್ಞಾನ ಇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜುಲೈ 4 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 7,000. ಸಂಪರ್ಕ: internshala.com/i/64c66c.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಬಾಕ್ಸ್‌ಅಪ್ ಲಕ್ಷುರಿ ಗಿಫ್ಟಿಂಗ್: ಕಂಟೆಂಟ್ ರೈಟಿಂಗ್ ಇಂಟರ್ನಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳಿಗೆ ಬ್ಲಾಗಿಂಗ್, ಕ್ರಿಯೇಟಿವ್ ರೈಟಿಂಗ್, ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ) ಮತ್ತು ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಜ್ಞಾನ ಇರಬೇಕು. ಇಂಗ್ಲಿಷ್‌ನಲ್ಲಿ ಬರೆಯುವ ಮತ್ತು ಮಾತನಾಡುವ ಸಾಮರ್ಥ್ಯ ಇರಬೇಕು. ಅಂತಹವರು ಜುಲೈ 3ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ 15,000 - 20,000. ಸಂಪರ್ಕ: internshala.com/i/67c270.

ಟಲ್‌ವ್ಯೂ (Talview): ಯುಐ/ಯುಎಕ್ಸ್ ಡಿಸೈನ್ ಇಂಟರ್ನಿಗಳನ್ನು ಆಹ್ವಾನಿಸಿದ್ದು, ಜುಲೈ 1 ಅರ್ಜಿ ಸಲ್ಲಿಕೆಗೆ ಕಡೇ ದಿನ. ವಿದ್ಯಾರ್ಥಿಗಳು ಬಾಲ್ಸಮಿಕ್, ಫಿಗ್ಮ, ಇನ್‌ವಿಷನ್, ಸ್ಕೆಚ್,ಯುಐ & ಯುಎಕ್ಸ್ ಡಿಸೈನ್ ಹಾಗೂ ವೈರ್‌ಫ್ರೇಮಿಂಗ್ ವಿಷಯಗಳನ್ನು ಅರಿತಿರಬೇಕು. ಸ್ಟೈಪೆಂಡ್– ತಿಂಗಳಿಗೆ ₹ 15,000– 20,000.

ಸಂಪರ್ಕ: internshala.com/i/26f2fb.

CMR UNIVERSITY
Private University Estd in Karnataka State by Act No. 45 of 2013
BENGALURU | RECOGNISED BY UGC
A GRADE ACCREDITED BY NAAC
SCAN TO APPLY
Ph.D. admissions notification
July 2026 Batch
Full-Time And Part-Time
Architecture | Computer Science and Engineering | Electronics and Communication Engineering | Information Technology
Computer Applications | Management Studies
Basic Sciences | Law | Interdisciplinary Studies
• Full-time research scholars are eligible for CMRU Research Fellowship with financial assistance of ₹30,000/- per month for the first two years and ₹35,000/- for the third year.
• Provision to receive research grants as seed money.
• Candidates with qualified UGC-NET (JRF/SRF) / UGC-CSIR | NET | GATE | SLET are exempted from the entrance examination.
• Candidates with a four-year Bachelor's degree and a minimum of 75% marks, preferably from NIRF top 200 institutions, are eligible for direct Ph.D. admission.
Last date for submission of application form: 4th July 2026
+91 96117 60838 / +91 98948 96257
admissions.phd@cmr.edu.in | research@cmr.edu.in | www.cmr.edu.in
#2, 3rd C Cross, 6th A Main, HRBR Layout, 2nd Block, Kalyan Nagar, Bengaluru 560043

CMR UNIVERSITY
Private University Estd in Karnataka State by Act No. 45 of 2013
A GRADE ACCREDITED BY NAAC
Make Your Own Way
APPLY NOW!
ADMISSIONS OPEN FOR AY 2026-27
3 Future-Ready Campuses | 9 Prestigious Schools | 40+ Nationalities of Students | 70+ Industry-Ready Programmes | 200+ World-Class Recruiters | 500+ Faculty Members | 20000+ Alumni Worldwide

Design bold, lead change
SOD SCHOOL OF DESIGN
PROGRAMMES OFFERED
B.Des.
• Communication Design
• Product Design
• Fashion Design
• Interior Design
B.Sc.
• Sound Engineering
• Visual Effects & Animation

Build a future in architecture
SOA SCHOOL OF ARCHITECTURE
PROGRAMME OFFERED
B.Arch. | Bachelor of Architecture
Approved by Council of Architecture (COA)
The SOA Advantage
• Maker-Centred Approach
• Fostering Sustainability
• Immersive Learning Environment
• Integration of Softwares
• Regenerative Design Thinking
• Industry Institute Associations
• Real-to-Virtual Experiences

Shape the future with technology
SOET SCHOOL OF ENGINEERING & TECHNOLOGY
PROGRAMMES OFFERED
B.Tech.
• Computer Science & Engineering
• Computer Science & Engineering (Artificial Intelligence & Machine Learning)
• Computer Science & Engineering (Data Science)
• Computer Engineering* *With specialisation in Artificial Intelligence & Machine Learning
• Computer Science & Technology* *With specialisation in Artificial Intelligence & Machine Learning/Internet of Things
• Information Technology
• Electronics & Communication Engineering
• Artificial Intelligence & Data Science#
M.Tech.
• Computer Science & Engineering
• Artificial Intelligence
Subject to government approval

CET codes: B.Tech. - E257 • B.Arch. - E245 | COMEDK codes: B.Tech. - E187 • B.Arch. - E187(A)

LATEST RANKINGS
Ranked #42 Among the Top 70 Private Engineering Institutes for Placements in India
Source: Times All India Engineering Institutes Ranking Survey 2026
Ranked #65 Among the Top 125 Private Engineering Institutes in India
Source: Times All India Engineering Institutes Ranking Survey 2026

OUR TOP RECRUITERS
Capgemini, opentext, htc, ICICI Prudential, Deloitte, Radisson, standard chartered, eurofins, Tech Mahindra, ORACLE, accenture, Arvind, BOSCH, carelon, FEDERAL BANK, and many more..

Scholarships & awards
Providing opportunities to get scholarships worth ₹12 crores*
Special fee concessions* in the B.Tech. programme for students with 70% or above marks in the 12th grade
CET Rank-based scholarships* for B.Tech. up to rank 30,000 and for B.Arch. up to rank 400
*T&C apply

Your journey, fully supported
Semester-wise payment option available
Education loan (EMI option*)
Hostel facility for boys & girls
Transport facility available

HURRY! LIMITED SEATS AVAILABLE AT SPECIAL CONCESSIONAL FEE
ADMISSIONS HELPLINE
+91 93429 00666
admissions@cmr.edu.in | www.cmr.edu.in
Lakeside Campus: Off Hennur–Bagalur Main Road, Chagalahatti, Bengaluru – 562 149
City Campus: #2, 3rd Cross, 6th A Main, HRBR Layout, Bengaluru – 560 043
OMBR Campus: #5, Bhuvanagiri, OMBR Layout, Bengaluru – 560 043

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸತ್ಯದ ಮೂಲಕ ದೇವರ ದಿವ್ಯದರ್ಶನ ಪಡೆಯುವುದೇ ಎಲ್ಲ ಮತ-ಧರ್ಮಗಳ ಮುಖ್ಯ ಗುರಿಯಾಗಿದೆ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ನ್ಯೂಸ್‌ಕ್ಲಿಕ್ ವಿರುದ್ಧ ಸುಳ್ಳು ಆರೋಪ ಸಾಂವಿಧಾನಿಕ ಹಕ್ಕಿನ ಉಲ್ಲಂಘನೆ

ನ್ಯೂಸ್‌ಕ್ಲಿಕ್ ಸುದ್ದಿಮಾಧ್ಯಮದ ವಿರುದ್ಧ ದಾಖಲಿಸಿದ್ದ ಪ್ರಕರಣಗಳನ್ನು ರದ್ದುಪಡಿಸುವ ಮೂಲಕ ದೆಹಲಿ ಹೈಕೋರ್ಟ್, ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ದೆಹಲಿ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧಗಳ ವಿಭಾಗ (ಇಒಡಬ್ಲ್ಯು) ಈ ಸುದ್ದಿಮಾಧ್ಯಮಕ್ಕೆ ನಿರಂತರವಾಗಿ ನೀಡುತ್ತಿದ್ದ ಕಿರುಕುಳಕ್ಕೆ ಕೊನೆಗಾಣಿಸಿದೆ. ಕಳೆದ ಆರು ವರ್ಷಗಳಿಂದ ಈ ಸುದ್ದಿಮಾಧ್ಯಮವು ಕಾನೂನು ಜಾರಿ ಸಂಸ್ಥೆಗಳಿಂದ ಕಿರುಕುಳಕ್ಕೆ ಗುರಿಯಾಗಿದೆ. ಅಧಿಕಾರಿಗಳಿಂದ ದಾಳಿ, ಸಂಸ್ಥೆಯ ಸಂಸ್ಥಾಪಕ ಹಾಗೂ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರ ಬಂಧನ, ಅಕ್ರಮ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಹಾಗೂ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸುವ ಕೆಲಸ ಆಗಿತ್ತು. ಪ್ರಕರಣವನ್ನು ರದ್ದುಪಡಿಸುವ ಸಂದರ್ಭದಲ್ಲಿ ಕೋರ್ಟ್ ಆಡಿರುವ ಮಾತುಗಳು ಗಮನ ಸೆಳೆಯುವಂತಿವೆ. ಪ್ರಕರಣವು ‘ಕಾನೂನಿನ ಪ್ರಕ್ರಿಯೆಯ ದುರ್ಬಳಕೆ ಆಗುತ್ತದೆ’ ಎಂದು ಕೋರ್ಟ್ ಹೇಳಿದೆ. ಅಪರಾಧ ನಡೆದಿದೆ ಎಂಬುದನ್ನು ಅಸ್ಪಷ್ಟವಾಗಿಯೂ ಹೇಳದ ಕೆಲವು ‘ಮಾತುಗಳು ಮಾತ್ರ’ ಆರೋಪದಲ್ಲಿವೆ ಎಂದೂ ಕೋರ್ಟ್ ಹೇಳಿದೆ. ನ್ಯಾಯಮೂರ್ತಿ ನೀನಾ ಬನ್ಸಲ್ ಕೃಷ್ಣ ಅವರು ಎರಡೂ ಪ್ರಕರಣಗಳನ್ನು ರದ್ದುಪಡಿಸಿದ್ದಾರೆ. ಈಗ ಇ.ಡಿ ಹಾಗೂ ದೆಹಲಿ ಪೊಲೀಸ್ ಇಲಾಖೆಯ ಇಒಡಬ್ಲ್ಯು ವಿಭಾಗವು ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಸಜ್ಜಾಗಿವೆ.



ನ್ಯೂಸ್‌ಕ್ಲಿಕ್ ವಿರುದ್ಧ ದಾಖಲಿಸಿದ್ದ ಪ್ರಕರಣಗಳನ್ನು ನ್ಯಾಯಾಲಯವು ರದ್ದುಪಡಿಸಿದೆ. ತನಿಖಾ ಸಂಸ್ಥೆಗಳು ಕಾನೂನಿನ ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದಕ್ಕೆ ಈ ಪ್ರಕರಣ ನಿದರ್ಶನವಾಗಿದೆ.

ಕೋರ್ಟ್ ನೀಡಿರುವ ಆದೇಶ ಹಾಗೂ ಆದೇಶದಲ್ಲಿ ಹೇಳಿರುವ ಮಾತುಗಳು ಈ ಎರಡೂ ತನಿಖಾ ಸಂಸ್ಥೆಗಳ ಮೇಲೆ ದೋಷ ಹೊರಿಸುವಂತಿವೆ. ಪುರಕಾಯಸ್ಥ ಅವರನ್ನು ಪಿಎಂಎಲ್‌ಎ ಕಾನೂನಿನ ಅಡಿಯಲ್ಲಿ ಬಂಧಿಸಿದ ಕ್ರಮವನ್ನು 2024ರಲ್ಲಿ ರದ್ದುಪಡಿಸಿದ ಸುಪ್ರೀಂ ಕೋರ್ಟ್, ಬಂಧನದ ಸಂದರ್ಭದಲ್ಲಿ ಅನುಸರಿಸಿದ ಪ್ರಕ್ರಿಯೆಯನ್ನು ಕಟುವಾಗಿ ಟೀಕಿಸಿತ್ತು. ಇದು ‘ಕಾನೂನಿನ ಸರಿಯಾದ ಪ್ರಕ್ರಿಯೆಯನ್ನು ತಪ್ಪಿಸಿಕೊಳ್ಳಲು ಅನುಸರಿಸಿದ ಕಳ್ಳಾಟದ ಮಾರ್ಗ’ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಆ ಹೊತ್ತಿಗೆ ಪುರಕಾಯಸ್ಥ ಅವರು ಏಳು ತಿಂಗಳಿಗೂ ಹೆಚ್ಚು ಕಾಲ ಜೈಲಿನಲ್ಲಿದ್ದರು. ಈಗ ಎರಡು ಪ್ರಕರಣಗಳಲ್ಲಿ ಅನುಸರಿಸಿದ ಪ್ರಕ್ರಿಯೆಯ ಬಗ್ಗೆ ದೆಹಲಿ ಹೈಕೋರ್ಟ್ ಇದೇ ಬಗೆಯ ಅಭಿಪ್ರಾಯ ವ್ಯಕ್ತಪಡಿಸಿದೆ. ‘ಪಿಎಂಎಲ್‌ಎ ಅಡಿಯಲ್ಲಿ ಶಿಕ್ಷೆಗೆ ಒಳಗಾಗಬಹುದಾದ ಅಪರಾಧ ನಡೆದಿದೆ ಎಂಬುದನ್ನು ಹೇಳುವ ಸಣ್ಣ ಆರೋಪ ಕೂಡ ಇಲ್ಲ’ ಎಂದು ದೆಹಲಿ ಹೈಕೋರ್ಟ್ ಹೇಳಿದೆ. ತನಿಖಾ ಸಂಸ್ಥೆಗಳು ಉಲ್ಲೇಖಿಸಿದ ಪ್ರತಿ ಆರೋಪವನ್ನೂ ವಿಶ್ಲೇಷಿಸಿರುವ ಕೋರ್ಟ್, ಪಿಎಂಎಲ್‌ಎ ಅಡಿಯಲ್ಲಿ ಪ್ರಕರಣ ದಾಖಲಿಸುವ ಯಾವುದೇ ಅಕ್ರಮ ಅಥವಾ ತಪ್ಪು ಕೆಲಸವು ನ್ಯೂಸ್‌ಕ್ಲಿಕ್‌ನಿಂದ ಆಗಿಲ್ಲ ಎಂದು ಹೇಳಿದೆ.

ನ್ಯೂಸ್‌ಕ್ಲಿಕ್ ಸುದ್ದಿಮಾಧ್ಯಮದ ಕಚೇರಿಯ ಮೇಲೆ ದಾಳಿ ನಡೆಸಿ, ಅದರ ನೌಕರರನ್ನು ವಿಚಾರಣೆಗೆ ಒಳಪಡಿಸಿದ ಆರೋಪದ ಸತ್ಯಾಸತ್ಯತೆ ಬಗ್ಗೆ ಪ್ರಶ್ನೆಗಳು ಎದ್ದಿದ್ದವು. ಈ ದಾಳಿಯನ್ನು ಸಂಪಾದಕರ ಕೂಟ ಹಾಗೂ ಪತ್ರಕರ್ತರ ಸಂಘಟನೆಗಳು ಖಂಡಿಸಿದ್ದವು. ಈ ಸುದ್ದಿಮಾಧ್ಯಮವು ಪಾಲಿಸುತ್ತಿದ್ದ ಸ್ವತಂತ್ರ ಪತ್ರಿಕಾವೃತ್ತಿಗೆ ಪ್ರತಿಯಾಗಿ ಈ ಬಗೆಯಲ್ಲಿ ದಾಳಿ ನಡೆದಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಸರ್ಕಾರದ ಟೀಕಾಕಾರರು ಹಾಗೂ ಸರ್ಕಾರದ ನಿಲುವಿಗೆ ಭಿನ್ನವಾದ ನಿಲುವನ್ನು ತಾಳುವವರ ಮೇಲೆ ತನಿಖಾ ಸಂಸ್ಥೆಗಳು ಕಠಿಣ ಕಾನೂನುಗಳನ್ನು ಬಳಸಿ ದಾಖಲಿಸಿದ ಪ್ರಕರಣಗಳು ಕೋರ್ಟ್‌ನಲ್ಲಿ ಬಿದ್ದುಹೋಗಿರುವುದು ಇದೇ ಮೊದಲಲ್ಲ. ಈಗ ಎಲ್ಲ ಆರೋಪಗಳೂ ಸುಳ್ಳು ಎಂದು ಸಾಬೀತಾಗಿದೆ. ಆದರೆ ಸುಳ್ಳನ್ನು ಸಾಬೀತುಮಾಡುವ ಕೆಲಸ ಬಹಳ ಶ್ರಮವನ್ನು ಕೇಳುತ್ತದೆ. ಸುಳ್ಳನ್ನು ಸುಳ್ಳು ಎಂದು ಸಾಬೀತುಮಾಡುವ ಪ್ರಕ್ರಿಯೆಯೇ ಒಂದು ಶಿಕ್ಷೆಯಂತೆ ಆಗಿಬಿಡುತ್ತದೆ. ತನಿಖಾ ಸಂಸ್ಥೆಗಳು ತಮಗೆ ಲಭ್ಯವಿರುವ ಅತ್ಯಂತ ಕಠಿಣ ಕಾನೂನನ್ನು ಬಳಸಿ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲಿಸಬಹುದು. ಈ ಪ್ರಕರಣದಲ್ಲಿ ನ್ಯಾಯಾಲಯವೇ ತೋರಿಸಿಕೊಟ್ಟಿರುವಂತೆ, ಹಾಗೆ ಪ್ರಕರಣ ದಾಖಲಿಸುವಾಗ ಯಾವುದೇ ತಪ್ಪು ಆಗಿರಬೇಕು ಎಂಬುದೇನೂ ಇಲ್ಲ. ಈ ರೀತಿಯ ಸಂದರ್ಭ ಎದುರಾದಾಗ ನಿರಪರಾಧಿತ್ವ ಸಾಬೀತು ಮಾಡುವ ಹೊಣೆಯು ಆರೋಪಿಯ ಮೇಲೆಯೇ ಬೀಳುತ್ತದೆ. ನ್ಯೂಸ್‌ಕ್ಲಿಕ್ ವಿರುದ್ಧದ ಕ್ರಮವು ದುರುದ್ದೇಶಪೂರಿತವಾಗಿತ್ತು. ಅಷ್ಟೇ ಅಲ್ಲದೆ ಅದು ಮುಕ್ತವಾಗಿ ಕೆಲಸ ಮಾಡುವ ಮಾಧ್ಯಮ ಸಂಸ್ಥೆಗಳ ಮೇಲಿನ ದಾಳಿಯೂ ಆಗಿತ್ತು. ನ್ಯೂಸ್‌ಕ್ಲಿಕ್ ವಿರುದ್ಧದ ಕ್ರಮವು ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯೂ ಹೌದು.

ಸಿಡಿಲು: ಪ್ರಹಾರ, ವರ, ಎಚ್ಚರ

ವಿಶ್ಲೇಷಣೆ

ಡಾ. ಮುರಳೀಧರ ಕಿರಣಕೆರೆ

> ಮುಂಗಾರಿನ ವರ್ತಮಾನಗಳಲ್ಲಿ ಸಿಡಿಲು ಬಡಿದು ಮೃತಪಡುವ ನತದೃಷ್ಟರ ಕುರಿತ ವರದಿಗಳೂ ಸೇರಿರುತ್ತವೆ. ಜಾನುವಾರುಗಳೂ ಸಿಡಿಲಿಗೆ ಬಲಿಯಾಗುತ್ತವೆ. ಬಹಳಷ್ಟು ಸಂದರ್ಭಗಳಲ್ಲಿ ಸಿಡಿಲಿನಿಂದ ಪಾರಾಗುವ ಸಾಧ್ಯತೆಯಿರುತ್ತದೆ. ಮಾಹಿತಿ–ಮುನ್ನೆಚ್ಚರಿಕೆಯ ಕೊರತೆಯೇ ಸಿಡಿಲಿನಿಂದ ಉಂಟಾಗುವ ಬಹುತೇಕ ಸಾವುಗಳಿಗೆ ಕಾರಣವಾಗಿರುತ್ತದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರದ ಮಾಹಿತಿಯಂತೆ ಈ ವರ್ಷ ರಾಜ್ಯದಲ್ಲಿ ಇಲ್ಲಿಯವರೆಗೆ 44 ಮಂದಿ ಸಿಡಿಲಿನ ಆಘಾತದಿಂದ ಮೃತಪಟ್ಟಿದ್ದಾರೆ. ಅರಣ್ಯನಾಶ, ಜಲಮೂಲಗಳ ಅಳಿವು ಸೇರಿದಂತೆ ವ್ಯಾಪಕ ಪರಿಸರ ಹಾನಿಯಿಂದಾಗಿ ಜಾಗತಿಕ ತಾಪಮಾನ ಅಪಾಯಕಾರಿಯಾಗಿ ಏರುತ್ತಿದೆ; ಈ ಬೆಳವಣಿಗೆ ಹವಾಮಾನ ವೈಪರೀತ್ಯಗಳಿಗೆ ಕಾರಣವಾಗುತ್ತಿದೆ. ಇದರಿಂದಾಗಿಯೇ ಸಿಡಿಲಿನ ಪ್ರಮಾಣ ಮತ್ತು ತೀವ್ರತೆ ಹೆಚ್ಚುತ್ತಿದೆ ಎನ್ನುತ್ತದೆ ವರದಿ. ಅಧಿಕೃತ ಮೂಲಗಳ ಪ್ರಕಾರ, ಭಾರತದಲ್ಲಿ ಪ್ರತಿವರ್ಷ ಸಿಡಿಲಿನಿಂದಾಗಿ 2,000ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಂದರೆ, ಇಲ್ಲಿ ಚಂಡಮಾರುತ, ಪ್ರವಾಹ, ಭೂಕಂಪಗಳಂತಹ ನೈಸರ್ಗಿಕ ವಿಕೋಪಗಳಿಗಿಂತಲೂ ಸಿಡಿಲಿನಿಂದ ಹೆಚ್ಚಿನ ಜೀವಹಾನಿ ಆಗುತ್ತಿದೆ.

ಗುಡುಗು, ಮಿಂಚು ಮತ್ತು ಸಿಡಿಲುಗಳ ಆರ್ಭಟ ಮುಂಗಾರುಪೂರ್ವ (ಬೇಸಿಗೆಯ ಕೊನೆಯಲ್ಲಿ) ಮತ್ತು ಮುಂಗಾರು ಅವಧಿಯಲ್ಲಿ ಹೆಚ್ಚಿರುತ್ತದೆ. ಬೇಸಿಗೆಯಲ್ಲಿ ಭೂಮಿ ಅತಿಯಾಗಿ ಕಾಯುತ್ತದೆ. ಈ ಬಿಸಿ ಗಾಳಿಯು ಮೇಲಕ್ಕೆದ್ದಾಗ, ಸಮುದ್ರದಿಂದ ಬರುವ ತೇವಾಂಶಭರಿತ ತಂಪಾದ ಗಾಳಿಯೊಂದಿಗೆ ಘರ್ಷಣೆ ಹೊಂದುತ್ತದೆ. ಇದು ಬೃಹತ್ ಗಾತ್ರದ ಮೋಡಗಳ ಸೃಷ್ಟಿಗೆ ಕಾರಣವಾಗುತ್ತದೆ. ಈ ಮೋಡಗಳಲ್ಲಿನ ನೀರಿನ ಹನಿಗಳು ಮತ್ತು ಮಂಜುಗಡ್ಡೆಯ ಕಣಗಳು ಪರಸ್ಪರ ಘರ್ಷಣೆಗೊಂಡಾಗ, ಧನ ಮತ್ತು ಋಣ ವಿದ್ಯುತ್ ಆವೇಶಗಳು ಸೃಷ್ಟಿಯಾಗುತ್ತವೆ. ಇವುಗಳ ನಡುವಿನ ತೀವ್ರ ಆಕರ್ಷಣೆಯಿಂದಾಗಿ ಗುಡುಗು, ಮಿಂಚು, ಸಿಡಿಲುಗಳು ಹುಟ್ಟುತ್ತವೆ.

ಸಿಡಿಲಿನ ಆಘಾತದಿಂದ ಮೃತರಾಗುವವರಲ್ಲಿ ಶೇ 70ಕ್ಕಿಂತ ಹೆಚ್ಚು ಜನರು ಗ್ರಾಮೀಣ ಭಾಗದ ರೈತರು ಹಾಗೂ ಕೃಷಿ ಕಾರ್ಮಿಕರು. ಇದಕ್ಕೆ ಮುಖ್ಯ ಕಾರಣ, ಅವರ ಕೆಲಸದ ಸ್ವರೂಪ ಮತ್ತು ಪರಿಸರ. ಅವರು ಬಯಲು, ಗದ್ದೆ, ತೋಟಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಸಿಡಿಲು ಯಾವಾಗಲೂ ಭೂಮಿಯ ಮೇಲಿರುವ ಎತ್ತರವಾದ ವಸ್ತುವನ್ನು ಮೊದಲು ಹುಡುಕುತ್ತದೆ. ಹಾಗಾಗಿ ಬಯಲು ಪ್ರದೇಶದಲ್ಲಿ ಕೆಲಸ ಮಾಡುವ ವ್ಯಕ್ತಿಗಳ ಮೇಲೆ ಬೀಳುವ ಸಾಧ್ಯತೆ ಹೆಚ್ಚು. ಭತ್ತದ ಗದ್ದೆ, ತೇವವಿರುವ ಮಣ್ಣಿನಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತವೆ. ನೀರು, ಒದ್ದೆಯಾದ ನೆಲದಲ್ಲಿ ವಿದ್ಯುತ್ ಅಲೆಗಳು ವೇಗವಾಗಿ ಪ್ರವಹಿಸುತ್ತವೆ. ಹತ್ತಿರದಲ್ಲಿ ಎಲ್ಲಿಯಾದರೂ ಸಿಡಿಲು ಬಡಿದರೆ ಆ ವಿದ್ಯುತ್ ತರಂಗಗಳು ನೀರಿನ ಮೂಲಕ ಹರಿದು ಬಂದು ಅಲ್ಲಿರುವ ವ್ಯಕ್ತಿಗಳಿಗೆ ಆಘಾತ ತರಬಹುದು. ಹಠಾತ್ತಾಗಿ ಮಳೆ ಸುರಿದಾಗ ಜಮೀನಿನಲ್ಲಿ ಕೆಲಸ ಮಾಡುತ್ತಿರುವವರು ರಕ್ಷಣೆಗಾಗಿ ಹತ್ತಿರದ ಮರಗಳ ಕೆಳಗೆ ನಿಲ್ಲುತ್ತಾರೆ. ಇದು ಅತ್ಯಂತ ಅಪಾಯಕಾರಿ.

ಸಿಡಿಲು ಸಾಮಾನ್ಯವಾಗಿ ಎತ್ತರದ ಮರಗಳಿಗೆ ಬಡಿಯುತ್ತದೆ. ಮರಕ್ಕೆ ಸಿಡಿಲು ಬಡಿದಾಗ ಅದರ ಕೆಳಗೆ ನಿಂತಿರುವವರಿಗೂ ವಿದ್ಯುತ್ ತಗಲುತ್ತದೆ. ಸಾಮಾನ್ಯವಾಗಿ ಸಿಡಿಲಿನಿಂದ ಸಾಯುವವರಲ್ಲಿ ಅಧಿಕಾಂಶ ಜನರು ಮರದ ಕೆಳಗೆ ಆಶ್ರಯ ಪಡೆದವರೇ ಆಗಿರುತ್ತಾರೆ. ಮುನ್ನೆಚ್ಚರಿಕೆ, ಮಾಹಿತಿಯ ಕೊರತೆಯೂ ಅಪಾಯದ ಸಾಧ್ಯತೆ ಹೆಚ್ಚಿಸುತ್ತದೆ. ಹವಾಮಾನದ ಹಠಾತ್ ಬದಲಾವಣೆಯ ಬಗ್ಗೆ ಪಟ್ಟಣದವರಂತೆ ಹಳ್ಳಿಗರಿಗೆ ಬೇಗನೆ ವಿಷಯ ಗೊತ್ತಾಗದು. ಜೊತೆಗೆ ಸುರಕ್ಷಿತ ಜಾಗಕ್ಕೆ ಹೋಗುವಷ್ಟು ಸಮಯವೂ ಸಿಗುವುದಿಲ್ಲ. ಹೊಲಗಳಲ್ಲಿ ಸರಿಯಾದ ಆಶ್ರಯ ತಾಣಗಳೂ ಇರುವುದಿಲ್ಲ. ಅಲ್ಲದೆ ರೈತರು ಕೆಲಸ ಕಾರ್ಯಕ್ಕಾಗಿ ಕಬ್ಬಿಣದ ಸಲಕರಣೆಗಳನ್ನು ಹೆಚ್ಚಾಗಿ ಬಳಸುತ್ತಾರೆ. ಲೋಹದ ವಸ್ತುಗಳು ಸಿಡಿಲಿನಲ್ಲಿರುವ ವಿದ್ಯುತ್ತನ್ನು ಬೇಗನೆ ಆಕರ್ಷಿಸುತ್ತವೆ.

ಗುಡುಗು ಮತ್ತು ಸಿಡಿಲು ಬರುವಾಗ ಸೂಕ್ತ ಮುನ್ನೆಚ್ಚರಿಕೆ ವಹಿಸುವುದರಿಂದ ಪ್ರಾಣಾಪಾಯದಿಂದ ಪಾರಾಗಬಹುದು. ಇವುಗಳ ಆರ್ಭಟವಿದ್ದಾಗ ಮನೆಯ ಕಿಟಕಿ, ಬಾಗಿಲುಗಳನ್ನು ಸಂಪೂರ್ಣವಾಗಿ ಮುಚ್ಚಬೇಕು; ಆದಷ್ಟೂ ಒಳಗಡೆಯೇ ಇರಬೇಕು. ಅಂಗಳ, ಬಾಲ್ಕನಿ, ಟೆರೇಸ್‌ಗೆ ಹೋಗುವುದು ಅಪಾಯಕಾರಿ. ಟಿ.ವಿ, ಫ್ರಿಡ್ಜ್, ಕಂಪ್ಯೂಟರ್‌ನಂತಹ ಎಲೆಕ್ಟ್ರಾನಿಕ್ ಉಪಕರಣಗಳ ಪ್ಲಗ್‌ಗಳನ್ನು ಸಾಕೆಟ್‌ಗಳಿಂದ ಹೊರತೆಗೆಯಬೇಕು. ಫೋನ್ ಬಳಸಬಾರದು. ನೀರಿನ ನಲ್ಲಿಗಳನ್ನು ಮುಟ್ಟುವುದು, ಆ ಸಮಯದಲ್ಲಿ ಸ್ನಾನ ಮಾಡುವುದು ಕೂಡದು, ಪೈಪ್‌ಗಳ ಮೂಲಕ ವಿದ್ಯುತ್ ಪ್ರವಹಿಸುವ ಸಾಧ್ಯತೆ ಇರುತ್ತದೆ!

ಇನ್ನು ಮನೆಯಿಂದ ಹೊರಗಿದ್ದಾಗ ಮರದ ಕೆಳಗಂತೂ ಆಶ್ರಯ ಪಡೆಯಲೇಬಾರದು. ಸಿಡಿಲು ಹೆಚ್ಚಾಗಿ ಮರಗಳಿಗೆ ಅಪ್ಪಳಿಸುವುದರಿಂದ ಅವುಗಳ ಕೆಳಗೆ ನಿಲ್ಲುವುದು ಅಪಾಯವನ್ನು ಮೈಮೇಲೆ ಎಳೆದುಕೊಂಡಂತಾಗಬಹುದು. ಒಂದು ವೇಳೆ ವಿಕೋಪದ ಸಮಯದಲ್ಲಿ ತೆರೆದ ಜಾಗ, ಮೈದಾನದಲ್ಲಿದ್ದರೆ ಅಲ್ಲಿ ನಿಲ್ಲದೆ, ತಕ್ಷಣವೇ ತಗ್ಗು ಪ್ರದೇಶಕ್ಕೆ ಹೋಗಿ, ಕಾಲುಗಳನ್ನು ಹತ್ತಿರ ಇಟ್ಟುಕೊಂಡು, ಮೊಣಕಾಲುಗಳ ಒಳಗೆ ತಲೆಬಾಗಿಸಿ ಕುಳಿತುಕೊಳ್ಳಬೇಕು. ನೆಲದ ಮೇಲೆ ಮಲಗಬಾರದು. ಕಾರು–ಬಸ್‌ನಂತಹ ವಾಹನದಲ್ಲಿದ್ದರೆ ಒಳಗಡೆಯೇ ಇರಬೇಕು. ವಾಹನದ ಲೋಹದ ರಚನೆ ಸುರಕ್ಷತಾ ಕವಚವಾಗಿ ಕೆಲಸ ಮಾಡುತ್ತದೆ. ಬೈಕ್ ಅಥವಾ ಸೈಕಲ್ ಸವಾರಿ ಮಾಡುತ್ತಿದ್ದರೆ ತಕ್ಷಣ ನಿಲ್ಲಿಸಿ ಸುರಕ್ಷಿತ ಜಾಗ ಸೇರಬೇಕು. ವಿಕೋಪದ ಸಂದರ್ಭದಲ್ಲಿ ಜಲಾವೃತ ಪ್ರದೇಶದಿಂದ ದೂರವಿರಬೇಕು. ಕೆರೆ, ನದಿ, ಈಜುಕೊಳದಲ್ಲಿದ್ದರೆ ತಕ್ಷಣವೇ ಹೊರಗೆ ಬರಬೇಕು; ನೀರು ಕೂಡ ಉತ್ತಮ ವಿದ್ಯುತ್ ವಾಹಕ ಎಂಬುದು ಸದಾ ನೆನಪಿರಬೇಕು.

ಸಿಡಿಲಿನ ಪ್ರಹಾರಕ್ಕೆ ಮನುಷ್ಯರಿಗಿಂತ ಪ್ರಾಣಿಗಳು, ಅದರಲ್ಲೂ ದನ–ಕರು, ಕುರಿ–ಮೇಕೆಗಳು ಹೆಚ್ಚಾಗಿ ಬಲಿಯಾಗುತ್ತವೆ. ಪಶುಗಳ ದೇಹದ ರಚನೆ (ನಾಲ್ಕು ಕಾಲುಗಳು), ಅವುಗಳ ಗುಂಪುಗೂಡುವ ಸ್ವಭಾವ ಮತ್ತು ಮಳೆ ಬಂದಾಗ ಮರದ ಕೆಳಗೆ ನಿಲ್ಲುವ ನಡವಳಿಕೆಯೇ ಈ ಅನಾಹುತಕ್ಕೆ ಕಾರಣ. ಸಿಡಿಲು ಭೂಮಿಗೆ ಅಪ್ಪಳಿಸಿದಾಗ, ವಿದ್ಯುತ್ ಪ್ರವಾಹವು ನೆಲದ ಮೇಲ್ಮೈಯಲ್ಲಿ ವೃತ್ತಾಕಾರವಾಗಿ ಹರಡುತ್ತದೆ. ಪ್ರಾಣಿಗಳ ಮುಂಗಾಲು ಮತ್ತು ಹಿಂಗಾಲುಗಳ ನಡುವೆ ಹೆಚ್ಚಿನ ಅಂತರವಿರುತ್ತದೆ. ಈ ಅಂತರದಿಂದಾಗಿ ಎರಡು ಕಾಲುಗಳ ನಡುವೆ ವಿದ್ಯುತ್ ವೋಲ್ಟೇಜ್ ವ್ಯತ್ಯಾಸ ಸೃಷ್ಟಿಯಾಗುತ್ತದೆ. ಪರಿಣಾಮವಾಗಿ, ವಿದ್ಯುತ್ ಒಂದು ಕಾಲಿನ ಮೂಲಕ ದೇಹವನ್ನು ಪ್ರವೇಶಿಸಿ, ಮತ್ತೊಂದು ಕಾಲಿನಿಂದ ಹೊರಬರುತ್ತದೆ. ಇದು ಒಳಾಂಗಗಳನ್ನು ಗಾಸಿಗೊಳಿಸಿ, ತಕ್ಷಣವೇ ಹೃದಯಾಘಾತಕ್ಕೆ ಕಾರಣವಾಗುತ್ತದೆ! ಮನುಷ್ಯರು ಎರಡು ಕಾಲಿನ ಮೇಲೆ ನಿಲ್ಲುವುದರಿಂದ ಮತ್ತು ಕಾಲುಗಳ ನಡುವಿನ ಅಂತರ ಕಡಿಮೆ ಇರುವುದರಿಂದ ಅಪಾಯದ ಪ್ರಮಾಣ ತುಸು ಕಮ್ಮಿ.

ಪ್ರಾಣಿಗಳಲ್ಲಿ ರಕ್ಷಣೆಗಾಗಿ ಒಟ್ಟಿಗೆ ಸೇರುವುದು ಸಹಜ ಪ್ರವೃತ್ತಿ. ಜೋರು ಮಳೆ ಬಂದಾಗ ಕುರಿ, ಮೇಕೆ, ಹಸುಗಳು ಹೆದರಿ ಪರಸ್ಪರ ತಾಗಿಕೊಂಡು ಗುಂಪಾಗಿ ನಿಲ್ಲುತ್ತವೆ. ಸಿಡಿಲು ಆ ಜಾಗದ ಹತ್ತಿರ ಎಲ್ಲಾದರೂ ಅಪ್ಪಳಿಸಿದರೆ, ವಿದ್ಯುತ್ ಇಡೀ ಗುಂಪಿಗೆ ವೇಗವಾಗಿ ಹರಡುತ್ತದೆ. ಒಂದೇ ಸಿಡಿಲಿಗೆ ನೂರಾರು ಕುರಿಗಳು, ಹತ್ತಾರು ಹಸುಗಳು ಒಟ್ಟಿಗೆ ಸಾಯಲು ಇದೇ ಕಾರಣ. ಜಾನುವಾರುಗಳು ಮಳೆ–ಬಿಸಿಲೆನ್ನದೆ ತೆರೆದ ಮೈದಾನ, ಗುಡ್ಡ, ಗದ್ದೆಗಳಲ್ಲಿ ಮೇಯುತ್ತಿರುತ್ತವೆ. ಮಳೆ ಬಂದಾಗ ದೊಡ್ಡ ಮರಗಳ ಕೆಳಗೆ ಆಶ್ರಯ ಪಡೆಯುತ್ತವೆ. ಹೀಗಾಗಿ, ಅವುಗಳಿಗೆ ಅಪಾಯದ ಸಾಧ್ಯತೆ ಹೆಚ್ಚು. ಮಳೆಯಲ್ಲಿ ಪ್ರಾಣಿಗಳ ಚರ್ಮ ಮತ್ತು ಕೂದಲು ಒದ್ದೆಯಾದಾಗ, ಅವು ವಿದ್ಯುತ್ ವಾಹಕವಾಗಿ ಬದಲಾಗುತ್ತವೆ. ಇದು ಸಿಡಿಲಿನ ಆಘಾತದ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಗುಡುಗು, ಮಿಂಚು, ಸಿಡಿಲು ಆಪತ್ತುಗಳು ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿದೆ. ಇದು ತಪ್ಪು ತಿಳಿವಳಿಕೆ. ಪರಿಸರದ ಸಮತೋಲನ ಕಾಯ್ದುಕೊಳ್ಳುವಲ್ಲಿ ಮತ್ತು ಜೀವರಾಶಿಗಳ ಉಳಿವಿನಲ್ಲಿ ಈ ನೈಸರ್ಗಿಕ ವಿದ್ಯಮಾನ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ.

ವಾತಾವರಣದಲ್ಲಿ ಅನಿಲ ರೂಪದಲ್ಲಿರುವ ಸಾರಜನಕವನ್ನು ಸಸ್ಯಗಳು ನೇರವಾಗಿ ಬಳಸಿಕೊಳ್ಳಲಾರವು. ಮಿಂಚು ಉಂಟಾದಾಗ ಉತ್ಪತ್ತಿಯಾಗುವ ವಿದ್ಯುತ್, ಆ ಹೆಚ್ಚಿನ ಉಷ್ಣತೆ ಸಾರಜನಕವನ್ನು ಆಮ್ಲಜನಕದೊಂದಿಗೆ ಸೇರಿಸುತ್ತದೆ, ಇದು ಮಳೆನೀರಲ್ಲಿ ಬೆರೆತು ಗಿಡ–ಮರಗಳಿಗೆ ನೈಟ್ರೇಟ್ ರೂಪದಲ್ಲಿ ಅತ್ಯುತ್ತಮ ನೈಸರ್ಗಿಕ ಗೊಬ್ಬರ ಒದಗಿಸುತ್ತದೆ. ಮಿಂಚು ಅತ್ಯಂತ ಶಕ್ತಿಶಾಲಿ ವಿದ್ಯುತ್ ತರಂಗಗಳನ್ನು ಹೊಂದಿರುತ್ತದೆ. ಇದು ವಾತಾವರಣದ ಮೇಲ್ಭಾಗದಲ್ಲಿರುವ ಆಮ್ಲಜನಕದ ಅಣುಗಳನ್ನು ವಿಭಜಿಸಿ ಓಜೋನ್ ಅನಿಲವಾಗಿ ಪರಿವರ್ತಿಸುವುದರಿಂದ ಭೂಮಿಗೆ ರಕ್ಷಾಕವಚದಂತಿರುವ ಓಜೋನ್ ಪದರ ಗಟ್ಟಿಯಾಗುತ್ತದೆ. ಹಾಗೆಯೇ ಭೂಮಿಯ ವಿದ್ಯುತ್ ಕಾಂತೀಯ ಕ್ಷೇತ್ರವನ್ನು ಸಮತೋಲನದಲ್ಲಿಡಲು, ಹಸಿರುಮನೆ ಅನಿಲಗಳನ್ನು ವಿಭಜಿಸಿ ಗಾಳಿಯನ್ನು ಶುದ್ಧೀಕರಿಸಲು, ನಿಸರ್ಗದ ಒಟ್ಟಾರೆ ನವೀಕರಣ ಮತ್ತು ಪೋಷಣೆಗೆ ಪ್ರಕೃತಿಯ ಈ ರೌದ್ರಾವತಾರ ಅತಿ ಅಗತ್ಯ. ಒಂದರ್ಥದಲ್ಲಿ ಇದು ಬುವಿಯನ್ನು ಹದಗೊಳಿಸಿ ಫಲವಂತಿಕೆಯನ್ನು ಕಾಪಿಡುವ ಪ್ರಕ್ರಿಯೆ.

ಹೌದು, ಗುಡುಗು, ಮಿಂಚು, ಸಿಡಿಲುಗಳು ಅಗತ್ಯ ನೈಸರ್ಗಿಕ ಕ್ರಿಯೆಗಳಾಗಿದ್ದರೂ, ಹವಾಮಾನ ಇಲಾಖೆಯ ಎಚ್ಚರಿಕೆಗಳನ್ನು ಪಾಲಿಸುವುದು ಮತ್ತು ಸೂಕ್ತ ಮುಂಜಾಗ್ರತೆ ವಹಿಸುವುದರಿಂದ ಖಂಡಿತವಾಗಿಯೂ ಅಪಾಯಗಳಿಂದ ಪಾರಾಗಬಹುದು. ಶಾಲಾಕಾಲೇಜುಗಳಲ್ಲಿ, ರೈತರಲ್ಲಿ, ಗ್ರಾಮೀಣ ಭಾಗದಲ್ಲಿ ಈ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಬೇಕಿದೆ. ‘ಮನೆ ಒಳಗಿದ್ದರೆ ಸುರಕ್ಷಿತ’ ಎಂಬ ನಿಯಮವನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಸಿಡಿಲಿನ ಆಘಾತದಿಂದ ಜನ–ಜಾನುವಾರುಗಳನ್ನು ಪಾರು ಮಾಡಬಹುದು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ

ವಾಚಕರ ವಾಣಿ

ಸಿಐಡಿ ಅರಣ್ಯ ವಿಭಾಗ ರದ್ದತಿಗೆ ಹುನ್ನಾರ

1972ರಲ್ಲಿ ಸಿಐಡಿ ಅರಣ್ಯ ವಿಭಾಗ ಸ್ಥಾಪಿಸಲಾಯಿತು. ಇಲ್ಲಿ ಒಬ್ಬರು ಡಿಐಜಿ ಶ್ರೇಣಿ ಅಧಿಕಾರಿ, ಒಬ್ಬರು ಎಸ್‌ಪಿ ಶ್ರೇಣಿ ಅಧಿಕಾರಿ, ಇಬ್ಬರು ಡಿವೈಎಸ್‌ಪಿ ಶ್ರೇಣಿ ಅಧಿಕಾರಿಗಳು, 18 ಮಂದಿ ಪಿಎಸ್‌ಐ ಶ್ರೇಣಿ ಅಧಿಕಾರಿಗಳು ಸೇರಿದಂತೆ ಒಟ್ಟು 120 ಸಿಬ್ಬಂದಿ ಜಿಲ್ಲಾವಾರು ಅರಣ್ಯ ಸಂರಕ್ಷಣೆಗೆ ಶ್ರಮಿಸುತ್ತಿದ್ದಾರೆ. ಈ ಅಧಿಕಾರಿಗಳು ವನ್ಯಜೀವಿ ಅಪರಾಧಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಸಾವಿರಾರು ಪ್ರಕರಣ ದಾಖಲಿಸಿದ್ದಾರೆ. ಹಲವು ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ. ಅರಣ್ಯ ನಾಶ, ಅರಣ್ಯ ಉತ್ಪನ್ನಗಳು, ವನ್ಯಜೀವಿಗಳ ಅಕ್ರಮ ಬೇಟೆ, ಕಳ್ಳಸಾಗಾಣಿಕೆ ತಡೆಯುವಲ್ಲಿ ಈ ವಿಭಾಗವು ಶ್ರಮಿಸುತ್ತಿದೆ. ಪ್ರಸ್ತುತ ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಈ ವಿಭಾಗದ ರದ್ದತಿಗೆ ರಾಜ್ಯ ಪೊಲೀಸ್ ಇಲಾಖೆಯು, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಇದರ ಹಿಂದೆ ಹಿರಿಯ ಅಧಿಕಾರಿಗಳ ಹುನ್ನಾರ ಇರುವಂತಿದೆ. ಸರ್ಕಾರ ಈ ವಿಭಾಗವನ್ನು ರದ್ದುಪಡಿಸಬಾರದು; ಮತ್ತಷ್ಟು ಬಲಪಡಿಸಲು ಕ್ರಮವಹಿಸಬೇಕಿದೆ.

ಕೆ. ವೆಂಕಟೇಶ ಕವಲಕೋಡು, ಸಾಗರ

ನೀಟ್: ವಿದ್ಯಾರ್ಥಿ ಸಾಮರ್ಥ್ಯಕ್ಕೆ ಕನ್ನಡಿಯೆ?

ವಿದ್ಯಾರ್ಥಿಗಳ ನೈಜ ಸಾಮರ್ಥ್ಯ ಅಳೆಯುವಲ್ಲಿ ‘ನೀಟ್’ ವಿಫಲವಾಗುತ್ತಿದೆ. ವರ್ಷಪೂರ್ತಿ ಪಾಠ ಮಾಡುವ ಬೋಧಕರ ಪಾತ್ರವನ್ನು ಈ ಪರೀಕ್ಷಾ ಪದ್ಧತಿಯು ಬದಿಗೊತ್ತಿದೆ. ಶಾರ್ಟ್‌ಕಟ್ ತಂತ್ರ ಹೇಳಿಕೊಡುವ ಕೋಚಿಂಗ್ ಉದ್ಯಮದ ಮೇಲೆ ಇದು ಹೆಚ್ಚು ಅವಲಂಬಿತವಾಗಿದೆ. ಇಂಗ್ಲಿಷ್‌ನಿಂದ ಪ್ರಾದೇಶಿಕ ಭಾಷೆಗಳಿಗೆ ತರ್ಜುಮೆ ಮಾಡುವಾಗ ಹಲವು ದೋಷಗಳಾಗುತ್ತವೆ. ಇದರಿಂದ ಮಾತೃಭಾಷೆಯಲ್ಲಿ ಪರೀಕ್ಷೆ ಬರೆಯುವ ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಬಹುಆಯ್ಕೆ ಮಾದರಿ ಪ್ರಶ್ನೆಗಳ ಪದ್ಧತಿಯು ಆಳವಾಗಿ ವಿಷಯ ಅರ್ಥ ಮಾಡಿಕೊಂಡವರಿಗಿಂತ, ಪರೀಕ್ಷಾ ಮಾದರಿಯನ್ನು ಲೀಲಾಜಾಲವಾಗಿ ಬಿಡಿಸಬಲ್ಲವರಿಗಷ್ಟೆ ನೆರವಾಗುತ್ತಿದೆ. ಇದು ವೈದ್ಯಕೀಯ ವೃತ್ತಿಗೆ ಇರಬೇಕಾದ ನೈಜ ಸಾಮರ್ಥ್ಯವನ್ನು ಪರೀಕ್ಷಿಸುತ್ತಿಲ್ಲ. ಹಾಗಾಗಿ, ‘ನೀಟ್’ ರದ್ದುಪಡಿಸಬೇಕು. ‘ಸಿಇಟಿ’ ಮಾದರಿಯಲ್ಲಿ ಕನಿಷ್ಠ ಎರಡು ಹಂತದ ಪರೀಕ್ಷಾ ಪ್ರಕ್ರಿಯೆ ಜಾರಿಗೆ ತರಬೇಕಿದೆ.

ಜಗನ್ನಾಥ ರೈ ಬಿ., ಮೂಡುಬಿದಿರೆ

‘ಸ್ಯಾಟ್ಸ್’ ದೋಷ: ಪ್ರವೇಶಾತಿ ಅಸ್ತವ್ಯಸ್ತ

ಪ್ರಸಕ್ತ ಶೈಕ್ಷಣಿಕ ವರ್ಷ ಪ್ರಾರಂಭವಾದರೂ ಶಿಕ್ಷಣ ಇಲಾಖೆಯು ಸ್ಯಾಟ್ಸ್ ತಂತ್ರಾಂಶದಲ್ಲಿ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಪ್ರಮೋಟ್ ಮಾಡಿಲ್ಲ. ಇದರಿಂದ ಶಾಲೆಗಳಿಗೆ ವರ್ಗಾವಣೆ ಪತ್ರವನ್ನು ‘ಇನ್’ ಹಾಗೂ ‘ಔಟ್’ ಮಾಡಿಕೊಳ್ಳಲಾಗುತ್ತಿಲ್ಲ. ವರ್ಗಾವಣೆ ಪತ್ರ ಇಲ್ಲದೇ ಮಕ್ಕಳು ಬೇರೆ ಶಾಲೆಗೆ ಪ್ರವೇಶಾತಿ ಪಡೆಯಲು ಆಗುತ್ತಿಲ್ಲ. ಇದರಿಂದ ಶಾಲೆಗಳ ಶೈಕ್ಷಣಿಕ ಕಾರ್ಯವೈಖರಿ ನಿಧಾನವಾಗುತ್ತಿದೆ. ಖಾಸಗಿ ಶಾಲೆಗಳಲ್ಲಿ ವಾರ್ಷಿಕ 150ರಿಂದ 200 ಹೊಸ ದಾಖಲಾತಿ ಆಗುತ್ತವೆ. ಅಷ್ಟು ಮಕ್ಕಳ ವರ್ಗಾವಣೆ ಪತ್ರವನ್ನು ‘ಇನ್’ ಹಾಗೂ ‘ಔಟ್’ ಮಾಡಲು ಸಾಕಷ್ಟು ಸಮಯಬೇಕು. ಆಮೆಗತಿಯಲ್ಲಿ ಸಾಗುತ್ತಿರುವ ಶಿಕ್ಷಣ ಇಲಾಖೆಯು ತುರ್ತಾಗಿ ತಂತ್ರಾಂಶವನ್ನು ಅಪ್‌ಡೇಟ್ ಮಾಡಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಅಧಿಕಾರಿಗಳ ಜಗಳ: ಪುಕ್ಕಟೆ ಮನರಂಜನೆ

ರಾಜ್ಯದಲ್ಲಿ ಉನ್ನತ ಹುದ್ದೆಯಲ್ಲಿರುವ ಅಖಿಲ ಭಾರತೀಯ ಸೇವಾ ಶ್ರೇಣಿಯ ಇಬ್ಬರು ಮಹಿಳಾ ಅಧಿಕಾರಿಗಳ ಪರಸ್ಪರ ಆರೋಪ–ಪ್ರತ್ಯಾರೋಪ ಮತ್ತು ಕಿತ್ತಾಟವು ಕಳೆದ ಮೂರು ವರ್ಷಗಳಿಂದ ಜನರಿಗೆ ಪುಕ್ಕಟೆ ಮನರಂಜನೆ ನೀಡುತ್ತಿದೆ. ತಮ್ಮ ಬುದ್ಧಿವಂತಿಕೆಯಿಂದ ಯುಪಿಎಸ್‌ಸಿ ಪರೀಕ್ಷೆ ಪಾಸಾಗಿ ಐಎಎಸ್, ಐಪಿಎಸ್ ಹುದ್ದೆ ಪಡೆದ ಈ ಇಬ್ಬರಿಗೂ ಕನಿಷ್ಠ ಪ್ರಜ್ಞೆ ಇಲ್ಲದಿರುವುದು ಬೇಸರದ ಸಂಗತಿ. ‘ಇಬ್ಬರು ವೃತ್ತಿಜೀವನ ಹಾಳು ಮಾಡಿಕೊಳ್ಳುತ್ತಿದ್ದೀರಿ’ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ಸರಿಯಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ನಡೆದುಕೊಳ್ಳಬೇಕಿದೆ. ಉಳಿದಿರುವ ಸೇವಾವಧಿಯಲ್ಲಿ ತಮಗೆ ದೊರೆಯುವ ಉನ್ನತ ಹುದ್ದೆಗಳ ಮೂಲಕ ನಾಡಿಗೆ ಉತ್ತಮ ಸೇವೆ ಸಲ್ಲಿಸಿ ಮಾದರಿಯಾಗಬೇಕಿದೆ.

ವಿನಯ ಮ. ಗಡೇದ, ಮುದ್ದೇಬಿಹಾಳ

ಕೋರ್ಸ್ ಕಲಿಕೆ: ಬಲವಂತದ ಹೇರಿಕೆ ಬೇಡ

ಗಂಗಾವತಿ ತಾಲ್ಲೂಕಿನ ಹೊಸ ಅಯೋಧ್ಯ ಗ್ರಾಮದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಎಸಗಿರುವ ಕೃತ್ಯವು ಪೋಷಕರು ಮತ್ತು ಶಿಕ್ಷಕರಿಗೆ ಎಚ್ಚರಿಕೆಯ ಸಂದೇಶವಾಗಿದೆ. ಬಹಳಷ್ಟು ಪಾಲಕರು ಒಣ ಪ್ರತಿಷ್ಠೆಗೆ ಬಿದ್ದು ಮಕ್ಕಳ ಇಷ್ಟವನ್ನು ನೋಡದೆ ತಮ್ಮಿಷ್ಟದ ಕೋರ್ಸ್‌ಗೆ ಸೇರಿಸುತ್ತಾರೆ. ಇಂತಹ ಬಲವಂತದ ಹೇರಿಕೆ ಒಳ್ಳೆಯದಲ್ಲ. ಅವರು ಇಷ್ಟಪಟ್ಟ ಕೋರ್ಸ್ ಕಲಿಯಲು ಬಿಡಬೇಕು. ಅದಕ್ಕೆ ಪೂರಕವಾಗಿ ಸೂಕ್ತ ಮಾರ್ಗದರ್ಶನ ನೀಡಬೇಕಿದೆ. ಕೌಟುಂಬಿಕ ವಾತಾವರಣ ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಹಾಗಾಗಿ, ಅವರೊಟ್ಟಿಗೆ ಸ್ನೇಹ ಹಾಗೂ ಸೌಹಾರ್ದದಿಂದ ವರ್ತಿಸಬೇಕು.

ಸುರೇಶ್ ಗೌರೆ, ನವನೀಹಾಳ

ಇವಿಎಂಗಳಿಗೆ ಬೆಂಕಿ: ವಿಶ್ವಾಸಾರ್ಹತೆಗೆ ಧಕ್ಕೆ

ಪಶ್ಚಿಮ ಬಂಗಾಳದಲ್ಲಿ ನಾಲ್ಕು ಸಾವಿರ ಇವಿಎಂಗಳಿಗೆ ಬೆಂಕಿ ಬಿದ್ದಿದೆ. ಇದು ಚುನಾವಣಾ ಆಯೋಗದ ದೊಡ್ಡ ವೈಫಲ್ಯವೇ ಸರಿ. ಹಲವು ವರ್ಷಗಳಿಂದ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆಯನ್ನು ನಡೆಸಬೇಕೆಂದು ವಿಪಕ್ಷಗಳು ಆಗ್ರಹಿಸುತ್ತಿವೆ. ಇದೇ ಸಂದರ್ಭದಲ್ಲಿ ಇಂತಹ ಘಟನೆ ಸಂಭವಿಸಿದೆ. ಇದು ಆಯೋಗದ ಮೇಲೆ ಮತ್ತಷ್ಟು ಅನುಮಾನ ಹೆಚ್ಚಿಸಿದೆ. ಜೊತೆಗೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಜನರು ನಂಬಿಕೆ ಕಳೆದುಕೊಳ್ಳುವ ಸಂಭವ ಹೆಚ್ಚಿರುತ್ತದೆ. ಕೇವಲ ಅಧಿಕಾರದ ಆಸೆಯಿಂದಾಗಿ ಇಂತಹ ಘಟನೆಗಳನ್ನು ಸಮರ್ಥಿಸಿಕೊಳ್ಳುವುದು ಮೂರ್ಖತನವಾದೀತು.

ನಾಗಾರ್ಜುನ ಹೊಸಮನಿ, ಕಲಬುರಗಿ

ಚುರುಮುರಿ

ದೇಹ ನವೀಕರಣ!

• ಸುಮಂಗಲಾ

‘ತಮಿಳುನಾಡು ಸಿಎಂ ಕೊಲ್ಲೂರು ದೇವಸ್ಥಾನದಲ್ಲಿ ಸೀಟಿ ಊದಿದರಂತೆ... ನೋಡು... ಮಿರಿಮಿರಿ ಮಿಂಚೋ ಕೆಂಪು ಮಡಿ ಶಾಲು ಹೊದ್ದುಕೊಂಡು ಎಷ್ಟ್ ಛಂದ ಕಾಣತಾರೆ!’ ಎಂದು ಬೆಕ್ಕಣ್ಣ ಉದ್ಗರಿಸಿತು.

‘ಎಲ್ಲಾ ಕಡಿಗೆ ಯುದ್ಧ ನಡದೈತಿ, ನಿಂಗೂ ಬೇಕಾಗಬೌದು ಅಂತ ದೇವಿಗೆ ಬೆಳ್ಳಿ ಖಡ್ಗನೂ ಕೊಟ್ಟು, ತಾವು ಕೈಗೆ ದಾರ ಕಟ್ಟಿಸಿಕೊಂಡು ಶತ್ರುಸಂಹಾರ ಸಂಕಲ್ಪ ಮಾಡ್ಯಾರಂತೆ’ ಎಂದೆ.

‘ಇನ್ನು ನಮ್ ಡಿಕೇಶಂಕಲ್ಲೂ ನಾನೇನು ಕಡಿಮೆ ಅಂತ ಟೆಂಪಲ್‌ರನ್ ಶುರು ಮಾಡಬೌದು’ ಬೆಕ್ಕಣ್ಣ ನಕ್ಕಿತು.

‘ಈ ಖಾತೆ ಕ್ಯಾತೆಗಳನ್ನು ನೀವೇ ಬಗೆಹರಿಸ್ರಿ ಅಂತ ದೇವಾನುದೇವತೆಗಳಿಗೆ, ಮಠಾಧಿಪತಿಗಳಿಗೆ ಪ್ರಾರ್ಥನೆ ಸಲ್ಲಿಸಬಹುದು’ ಎಂದು ನಾನೂ ನಕ್ಕೆ.

‘ಸದ್ಯಕ್ಕೆ ಡಿಕೇಶಂಕಲ್ ಗಮನ ಏನಿದ್ರೂ ಕುಮಾರಕೃಪಾ ಗೋಡೆ ಕೆಡವಿ, ನವೀಕರಣ ಮಾಡಿ, ವಾಸ್ತು ಪ್ರಕಾರ ಬಾಗಿಲು, ಕಿಟಕಿ ಇಡಿಸಿಕೊಳ್ಳದು! ವಾಸ್ತು ಸರಿಯಿದ್ರೆ ಮುಂದಿನ ಸಲನೂ ನೀವೇ ಸಿಎಂ ಅಂತ ವಾಸ್ತುತಜ್ಞರು ಹೇಳ್ಯಾರಂತೆ!’ ಬೆಕ್ಕಣ್ಣ ಮುಗುಮ್ಮಾಗಿ ಹೇಳಿತು.

‘ಹೋದವರ್ಷ ಸಿಎಂ ನಿವಾಸ ಕಾವೇರಿ ನವೀಕರಣಕ್ಕೆ ಎರಡು ಕೋಟಿ ಖರ್ಚಾಯಿತಂತೆ. ಇನ್ನು ಈ ಹೊಸ ಸಿಎಂ ನಿವಾಸದ ನವೀಕರಣಕ್ಕೆ ಎಷ್ಟು ರೊಕ್ಕ ಸುರೀತಾರೋ... ಅಲ್ಲೇ ಹಿಂದಿರೋ ಸರ್ಕಾರಿ ಸಿಬ್ಬಂದಿಯ ಮನೆಗಳು ಕುಸಿದು ಬೀಳೂ ಹಂಗದಾವು. ಶ್ರೀಸಾಮಾನ್ಯ, ಸಿಬ್ಬಂದಿಯ ಮನೆ ದುರಸ್ತಿಗೆ ಮಾತ್ರ ರೊಕ್ಕ ಇರಂಗಿಲ್ಲ’ ಎಂದೆ ಸಿಟ್ಟಿನಿಂದ.

‘ಸದ್ಯ... ಈ ವಾಸ್ತು ಪ್ರಕಾರ ಕೇವಲ ತಾವು ವಾಸಿಸೋ ಕಟ್ಟಡದ ನವೀಕರಣ ಮಾಡತಾರೆ. ಬುದ್ಧಿ, ಮನಸ್ಸು ನೆಲೆಗೊಂಡಿರೋ ತಮ್ಮದೇ ದೇಹದ ನವೀಕರಣಕ್ಕೆ ಇನ್ನೂ ಮುಂದಾಗಿಲ್ಲ! ಬೆನ್ನಹಿಂದಿನ ವೈರಿಗಳನ್ನೂ ಗಮನಿಸಬೇಕು, ಬಲಗಣ್ಣನ್ನು ತೆಗೆದು ಬೆನ್ನಿಗೆ ಅಂಟಿಸಿಕೊಳ್ಳಿ. ಎಡಗೈ ಭಾಳ ಅಶುಭ, ಅದನ್ನೂ ಬಲಕ್ಕೆ ಅಂಟಿಸಿಕೊಳ್ಳಿ ಅಂತೆಲ್ಲ ಯಾವ ದೇಹವಾಸ್ತುತಜ್ಞರು ಇನ್ನೂ ಸಲಹೆ ಕೊಟ್ಟಿಲ್ಲ ಅಂಥಾ ಕಾಣುತ್ತೆ!’ ಎಂದು ಬೆಕ್ಕಣ್ಣ ಕಿಸಕ್ಕನೆ ನಕ್ಕಿತು.

ಸಂಗತ

ಕಲ್ಯಾಣರಾಜ್ಯಕ್ಕಾಗಿ ನಾವೇನು ಮಾಡಬೇಕು?

ರಾಜಕೀಯ ಮತ್ತು ಹಣಬಲದ ಅಪವಿತ್ರ ಮೈತ್ರಿಯ ಫಲವನ್ನು ನೋಡುತ್ತಿದ್ದೇವೆ. ಹಣದ ಬದಲು ತತ್ವಾಧಾರಿತ ರಾಜಕಾರಣವನ್ನು ಮತದಾರರು ಬೆಂಬಲಿಸಬೇಕಿದೆ.

• ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಗ್ರೀಕ್ ತತ್ತ್ವಜ್ಞಾನಿ ಪ್ಲೇಟೊ ‘ದಿ ರಿಪಬ್ಲಿಕ್’ ಕೃತಿಯಲ್ಲಿ ಆದರ್ಶ ರಾಜ್ಯದ ಕಲ್ಪನೆಯನ್ನು ವಿವರಿಸಿದ್ದಾನೆ. ‘ತತ್ತ್ವಜ್ಞಾನಿ ಅರಸ’ನಾಗಬೇಕು ಎನ್ನುವುದು ಪ್ಲೇಟೊ ಅಭಿಪ್ರಾಯ. ಆಳುವವರಿಗೆ ಭೌತಿಕ ಸಂಪತ್ತಿನ ವ್ಯಾಮೋಹ, ಸ್ವಾರ್ಥ ಇರಬಾರದು. ಎಲ್ಲಿಯವರೆಗೆ ತತ್ತ್ವಜ್ಞಾನಿಗಳು ರಾಜರಾಗುವುದಿಲ್ಲವೋ ಅಥವಾ ರಾಜರು ತತ್ತ್ವಜ್ಞಾನಿಗಳಾಗುವುದಿಲ್ಲವೋ ಅಲ್ಲಿಯವರೆಗೆ ದೇಶದ ಸಂಕಷ್ಟಗಳಿಗೆ ಮುಕ್ತಿ ಇಲ್ಲ ಎನ್ನುವ ಪ್ಲೇಟೊ ಮಾತು ಇಂದು ಸತ್ಯವಾಗಿದೆ.

ರಾಜಕೀಯ ಶಕ್ತಿ ಮತ್ತು ಹಣಬಲ ಒಂದಾದಾಗ ಪ್ರಜಾಪ್ರಭುತ್ವದ ಮೂಲ ಆಶಯಗಳು ಮಣ್ಣುಪಾಲಾಗುತ್ತವೆ. ಆಳುವವರಿಗೆ ಸ್ವಂತ ಆಸ್ತಿ ಅಥವಾ ಕುಟುಂಬ ಇರಬಾರದು; ಅಧಿಕಾರ ಇರುವವರ ಕೈಯಲ್ಲಿ ಹಣ ಇರಬಾರದು ಹಾಗೂ ಹಣ ಇರುವವರ ಕೈಯಲ್ಲಿ ಅಧಿಕಾರ ಇರಬಾರದು ಎನ್ನುವುದು ಪ್ಲೇಟೊನ ವಿಚಾರಧಾರೆ. ಆ ಆಶಯಗಳಿಗೆ ವಿರುದ್ಧವಾದ ವಾತಾವರಣ ಈಗಿದೆ. ಈಗ ಹಣಬಲ ಮತ್ತು ರಾಜಕೀಯ ಶಕ್ತಿ ಒಂದೇ ನಾಣ್ಯದ ಎರಡು ಮುಖಗಳಂತಾಗಿವೆ. ಚುನಾವಣೆ ಎಂದರೆ ಕೋಟ್ಯಂತರ ರೂಪಾಯಿ ಬಂಡವಾಳದ ಉದ್ಯಮವಾಗಿದೆ. ಪ್ರಾಮಾಣಿಕ, ವಿದ್ಯಾವಂತ ಮತ್ತು ಜನಸೇವೆಯ ಗುರಿ ಹೊಂದಿರುವ ಸಾಮಾನ್ಯ ವ್ಯಕ್ತಿ ಪ್ರಸ್ತುತ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಿಲ್ಲದ ವಾತಾವರಣ ನಿರ್ಮಾಣವಾಗಿದೆ.



ರಾಜಕಾರಣಿಗಳು ಚುನಾವಣೆಯಲ್ಲಿ ಗೆಲ್ಲಲು ಬಂಡವಾಳಶಾಹಿಗಳಿಂದ ಹಣ ಪಡೆಯುತ್ತಾರೆ. ಗೆದ್ದನಂತರ ಆ ಬಂಡವಾಳಶಾಹಿಗಳ ಹಿತಾಸಕ್ತಿಗೆ ಅನುಗುಣವಾಗಿ ನೀತಿ–ನಿಯಮಗಳನ್ನು ರೂಪಿಸುತ್ತಾರೆ. ಇದು ಪ್ರಜಾಪ್ರಭುತ್ವದ ಕತ್ತು ಹಿಸುಕುವ ಪ್ರಕ್ರಿಯೆ. ಆಮಿಷ ಪೂರೈಸಿ ಅಧಿಕಾರಕ್ಕೆ ಬರುವವರು ಜನರ ಕಲ್ಯಾಣಕ್ಕಿಂತ ತಾವು ಹೂಡಿದ ಬಂಡವಾಳಕ್ಕೆ ಬಡ್ಡಿಸಮೇತ ಲಾಭ ಪಡೆಯಲು ಹವಣಿಸುತ್ತಿರುತ್ತಾರೆ. ಇಂಥ ದುರಂತವನ್ನು ಬದಲಾಯಿಸುವ ಶಕ್ತಿ ಇರುವುದು ಮತದಾರರಲ್ಲಿ ಮಾತ್ರ. ಅವರು ಜಾಗೃತರಾಗದಿದ್ದರೆ ಪ್ರಜಾಪ್ರಭುತ್ವ ಉಳ್ಳವರ ಪ್ರಭುತ್ವವಾಗುತ್ತದೆ. ಮತದಾರರು ಹಣ, ಜಾತಿ, ಧರ್ಮ ಇತ್ಯಾದಿ ಪರಿಗಣಿಸದೆ ಅಭ್ಯರ್ಥಿಯ ಚಾರಿತ್ರ್ಯ, ವಿದ್ಯಾರ್ಹತೆ, ಸಮಾಜಸೇವೆಯ ಹಿನ್ನೆಲೆ ಮೊದಲಾದವುಗಳನ್ನು ಗಮನಿಸಿ ಅರ್ಹರಿಗೆ ಮತ ಚಲಾಯಿಸುವ ವಿವೇಕಿಗಳಾಗಬೇಕು.

ಪ್ರಸ್ತುತ ಗ್ರಾಮ ಪಂಚಾಯಿತಿಯಿಂದ ಲೋಕಸಭಾ ಚುನಾವಣೆಯವರೆಗೆ ಸ್ಪರ್ಧಿಸುವ ಬಹುತೇಕರು ತಾವು ಕೋಟ್ಯಧಿಪತಿಗಳು ಎಂದು ತಮ್ಮ ಆಸ್ತಿ ಘೋಷಣೆ ಮಾಡಿಕೊಳ್ಳುತ್ತಾರೆ. ಒಬ್ಬ ಪ್ರಾಮಾಣಿಕ ಶಿಕ್ಷಕ, ವಕೀಲ, ವೈದ್ಯ, ಅಧಿಕಾರಿ, ಪ್ರಗತಿಪರ ಕೃಷಿಕ ಅಥವಾ ಜನರ ನೋವಿಗೆ ಸ್ಪಂದಿಸುವ ಸಮಾಜ ಸೇವಕನಿಗೆ ಹಣದ ತೂಕವಿಲ್ಲದ ಕಾರಣ, ಪಕ್ಷಗಳ ಟಿಕೆಟ್‌ನಿಂದಲೇ ವಂಚಿತರಾಗುತ್ತಾರೆ. ಪ್ರಜಾಪ್ರಭುತ್ವ ‘ಧನಿಕರ ಕ್ಲಬ್’ ಎನ್ನುವಂತಾಗಿದೆ. ಈ ಬೆಳವಣಿಗೆ ದೇಶದ ದುರಂತವೂ ಹೌದು, ಪ್ರಜಾಪ್ರಭುತ್ವದ ದುರಂತವೂ ಹೌದು.

ನಕಾರಾತ್ಮಕ ಉದಾಹರಣೆಗಳನ್ನೇ ನೋಡಬೇಕಾಗಿಲ್ಲ. ಪ್ಲೇಟೊ ಕಂಡ ಕನಸಿನಂತೆ ಆಡಳಿತ ನಡೆಸಿದವರು ಹಿಂದೆ ಇದ್ದರು; ಇಂದೂ ಬೆರಳೆಣಿಕೆಯಲ್ಲಿದ್ದಾರೆ. ಉರುಗ್ವೆಯ ಮಾಜಿ ಅಧ್ಯಕ್ಷ ಜೋಸ್ ಮುಜಿಕಾ ಅವರನ್ನು ಜಗತ್ತಿನ ಅತ್ಯಂತ ಬಡ ಅಧ್ಯಕ್ಷ ಎನ್ನಲಾಗುತ್ತಿತ್ತು. ಅವರು ತಮ್ಮ ವೇತನದ ಶೇ 90ರಷ್ಟನ್ನು ಬಡವರಿಗಾಗಿ ದಾನ ಮಾಡುತ್ತಿದ್ದರಂತೆ. ತಮ್ಮ ಹಳೆಯ ಕಾರಿನಲ್ಲೇ ಓಡಾಡುತ್ತಿದ್ದರಂತೆ. ಅವರ ಕೈಯಲ್ಲಿ ಅಧಿಕಾರವಿತ್ತೇ ಹೊರತು ಹಣದ ವ್ಯಾಮೋಹವಲ್ಲ. ಭಾರತದ ಪ್ರಧಾನಿಯಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿ ಹಾಗೂ ರಾಷ್ಟ್ರಪತಿಯಾಗಿದ್ದ ಅಬ್ದುಲ್ ಕಲಾಂ ಅವರು ಉನ್ನತ ಅಧಿಕಾರದಲ್ಲಿದ್ದರೂ ತಮ್ಮ ವೈಯಕ್ತಿಕ ಆಸ್ತಿಯನ್ನು ಹೆಚ್ಚಿಸಿಕೊಳ್ಳದೆ ಸೇವೆ ಮತ್ತು ನೈತಿಕತೆಯನ್ನು ಆಡಳಿತದ ಬಂಡವಾಳ ಮಾಡಿಕೊಂಡಿದ್ದನ್ನು ನಾವು ಎಂದಿಗೂ ಮರೆಯುವಂತಿಲ್ಲ.

ಕರ್ನಾಟಕದ ರಾಜಕೀಯ ಸಿಂಹಾವಲೋಕನ ಮಾಡಿದರೆ ಹಣಬಲವನ್ನು ನಗಣ್ಯವಾಗಿಸಿ ನೈತಿಕತೆ, ಸಾಮಾಜಿಕ ಪ್ರಗತಿಯ ಬದ್ಧತೆಯನ್ನೇ ಬಂಡವಾಳ ಮಾಡಿಕೊಂಡವರ ಉದಾಹರಣೆಗಳು ಸಿಗುತ್ತವೆ. ಅತ್ಯಲ್ಪ ಅವಧಿಗೆ ಮುಖ್ಯಮಂತ್ರಿಗಳಾಗಿದ್ದ ಕಡಿದಾಳು ಮಂಜಪ್ಪನವರು ಸೃಷ್ಟಿಸಿದ ನೈತಿಕತೆಯ ಇತಿಹಾಸ ಮರೆಯುವಂತಹುದಲ್ಲ. ಅವರು ಅಧಿಕಾರದಿಂದ ಇಳಿದಾಗ ಸ್ವಂತ ಮನೆ ಅಥವಾ ಕಾರನ್ನು ಹೊಂದಿರಲಿಲ್ಲ. ರಾಜಕೀಯ ಅಧಿಕಾರವನ್ನು ಜನಸೇವೆಯ ತಪಸ್ಸಾಗಿಸಿಕೊಂಡ ತಾತ್ತ್ವಿಕ ನಾಯಕರವರು. ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಶರಾವತಿ ಬೃಹತ್ ನೀರಾವರಿ ಯೋಜನೆಯನ್ನು ಜಾರಿಗೆ ತಂದ ಜನನಾಯಕ. ಅಧಿಕಾರದಿಂದ ಇಳಿದಾಗ ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಹಣವೂ ಇಲ್ಲದೆ, ಕೊನೆಗಾಲದಲ್ಲಿ ಚಿಕಿತ್ಸೆಗೂ ಪರದಾಡುವಂತಹ ಸ್ಥಿತಿ ಅವರದಾಗಿತ್ತು. ಸಾಮಾಜಿಕ ನ್ಯಾಯದ ಹರಿಕಾರರೆಂದೇ ಪ್ರಖ್ಯಾತರಾಗಿರುವ ದೇವರಾಜ ಅರಸು ಅವರು ‘ಉಳುವವನೇ ಭೂಮಿಯ ಒಡೆಯ’ ಎಂದು ಘೋಷಿಸಿ ಶೋಷಿತ ವರ್ಗಗಳಿಗೆ ರಾಜಕೀಯ ಶಕ್ತಿ ನೀಡಿದವರು. ಭ್ರಷ್ಟಾಚಾರರಹಿತ ಆಡಳಿತ, ದಕ್ಷತೆ ಮತ್ತು ಕಠಿಣ ನಿರ್ಧಾರಗಳಿಗೆ ಮತ್ತೊಂದು ಹೆಸರು ವೀರೇಂದ್ರ ಪಾಟೀಲ್. ಆಡಳಿತದಲ್ಲಿ ಶಿಸ್ತು, ಪಾರದರ್ಶಕತೆ ತರಲು ಅವರು ಯಾರೊಂದಿಗೂ ರಾಜಿಯಾಗುತ್ತಿರಲಿಲ್ಲ. ರಾಜಕೀಯ ಶಕ್ತಿಗೆ ನೈತಿಕತೆಯ ಶಿಸ್ತು ಮುಖ್ಯ ಎಂದು ತೋರಿಸಿಕೊಟ್ಟವರು.

ನಾಯಕರ ಪ್ರಾಮಾಣಿಕತೆ ಸಹಜ ನಡವಳಿಕೆಯಾದಲ್ಲಿ ಪ್ರಜಾಪ್ರಭುತ್ವಕ್ಕೆ ಬೆಲೆ ಬರುತ್ತದೆ. ಆರ್ಥಿಕ ಬಂಡವಾಳವಿಲ್ಲದ ಬದಲು ಪ್ರತಿಭೆ, ಕನಸು ಹಾಗೂ ಜನಪರ ಕಾಳಜಿಗಳನ್ನು ನೆಚ್ಚಿಕೊಂಡಿರುವ ವಿವಿಧ ಕ್ಷೇತ್ರಗಳ ಯುವಜನರನ್ನು ಅಧಿಕಾರದ ಗದ್ದುಗೆಯ ಮೇಲೆ ಕೂರಿಸುವ ಸಂಕಲ್ಪವನ್ನು ಮತದಾರರು ಮಾಡಬೇಕು. ಆಗ ಸರ್ವೋದಯದ ಸಾಧ್ಯತೆ, ಕಲ್ಯಾಣ ರಾಜ್ಯದ ಕನಸು ತೆರೆದುಕೊಳ್ಳುತ್ತವೆ.

ಜಾಲಡಿ

ಜನತಂತ್ರಕ್ಕೆ ಫ್ಯಾಸಿಸಂ ಅಪಾಯ

ಇವತ್ತಿನ ಫ್ಯಾಸಿಸಂಗೆ ಮಿಲಿಟರಿಗಳ ಬಳಕೆ ಬೇಡ. ಅದು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ಅಧಿಕಾರ ಸ್ಥಾಪನೆ ಮಾಡುತ್ತದೆ. ಉಗ್ರ ರಾಷ್ಟ್ರೀಯತೆಯ ಕಾರಣ ನೀಡಿ ವಲಸಿಗರನ್ನು ಮತ್ತು ಅಲ್ಪಸಂಖ್ಯಾತರನ್ನು ಬಲಿ ಪಡೆದು ಬಹುಸಂಖ್ಯಾತರ ಮೇಲೆ ಹಿಡಿತ ಸಾಧಿಸುತ್ತದೆ. ಭವಿಷ್ಯದ ಅಧಿಕಾರ ಸ್ಥಾಪನೆಗಾಗಿ ಇತಿಹಾಸವನ್ನೂ ತಿರುಚುತ್ತದೆ.

ಪುರುಷೋತ್ತಮ ಬಿಳಿಮಲೆ,
ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ‘ಫೇಸ್‌ಬುಕ್’ನಿಂದ

ಕಿಡಿನುಡಿ

‘ಅಹಿಂದ’ ಹೆಸರಿನಲ್ಲಿ ರಾಜಕಾರಣ ಮಾಡುವ ಕಾಂಗ್ರೆಸ್ ತನ್ನ ಹಳೆಯ ಚಾಳಿಯನ್ನು ಇನ್ನೂ ಬಿಟ್ಟಿಲ್ಲ. ಡಿ. ದೇವರಾಜ ಅರಸು ಅವರ ಪುಣ್ಯಸ್ಮರಣೆ ಸೇರಿದಂತೆ ಪ್ರಮುಖ ಕಾರ್ಯಕ್ರಮಗಳ ಜಾಹೀರಾತಿನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆಗೆ, ಡಿಸಿಎಂ ಪರಮೇಶ್ವರ ಅವರ ಫೋಟೊ ಕಾಣೆಯಾಗುತ್ತಿರುವುದೇ ಇದಕ್ಕೆ ಸಾಕ್ಷಿ.

ಪ್ರಲ್ಹಾದ ಜೋಶಿ, ಕೇಂದ್ರ ಆಹಾರ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 15-6-2001

• ಕೆರೆಗಳ ಹೂಳೆತ್ತಲು ಕೇಂದ್ರ ಜಲ ಆಯೋಗ ಆಕ್ಷೇಪ

ಬೆಂಗಳೂರು, ಜೂನ್ 14– ಕಾವೇರಿ ಜಲಾನಯನ ಪ್ರದೇಶದ ಕೆರೆಗಳ ಹೂಳೆತ್ತುವ ಕಾರ್ಯಕ್ಕೆ ಕೇಂದ್ರ ಜಲ ಆಯೋಗವು ಆಕ್ಷೇಪ ವ್ಯಕ್ತಪಡಿಸಿದೆ.

ಹೀಗಾಗಿ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಿಂದ ಅನುಮತಿ ಪಡೆದ ನಂತರವೇ ಈ ಪ್ರದೇಶದ ಕೆರೆಗಳ ಹೂಳು ಎತ್ತಲಾಗುವುದು ಎಂದು ಜಲಸಂಪನ್ಮೂಲ ಖಾತೆ ರಾಜ್ಯ ಸಚಿವ ಕುಮಾರ ಬಂಗಾರಪ್ಪ ಇಂದು ಇಲ್ಲಿ ತಿಳಿಸಿದರು.

ವರದಿಗಾರರ ಜತೆ ಮಾತನಾಡಿದ ಅವರು, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವೆ ನದಿ ನೀರಿನ ವಿವಾದ ಇರುವ ಕಾರಣ ಈ ಸಮಸ್ಯೆ ಉದ್ಭವಿಸಿದೆ ಎಂದು ಹೇಳಿದರು. ಕಾವೇರಿ ಅಥವಾ ಅದರ ಉಪನದಿಗಳಿಗೆ ನೀರಿನ ಹರಿವನ್ನು ತಡೆಯುವ ಅಥವಾ ಆ ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳುವಂಥ ಕೆರೆಗಳ ಹೂಳನ್ನು ತೆಗೆಯಬಾರದು ಎಂದು ಕೇಂದ್ರ ಜಲ ಆಯೋಗವು ಕೆಲವು ದಿನಗಳ ಹಿಂದೆ ರಾಜ್ಯಕ್ಕೆ ಪತ್ರ ಬರೆದಿದೆ ಎಂದರು.

75 ವರ್ಷಗಳ ಹಿಂದೆ

ಶುಕ್ರವಾರ, 15-6-1951

• ನಾಡಿನ ಪ್ರಗತಿಗೆ ಎಲ್ಲರ ದುಡಿಮೆಯೂ ಅಗತ್ಯ

ಬೆಂಗಳೂರು, ಜೂನ್ 14– ‘ಕೈಗಾರಿಕೆ ಅಭಿವೃದ್ಧಿ ಸಾಧನೆಯಾಗದಿದ್ದಲ್ಲಿ ವಿನಾಶ ಖಂಡಿತ’ ಎಂದು ಒತ್ತಿ ಹೇಳಿದ ಭಾರತದ ಕೈಗಾರಿಕೆ ಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯನವರು, ‘ದೇಶ ಪ್ರಗತಿ ಹೊಂದಬೇಕಾದರೆ ಪ್ರತಿಯೊಬ್ಬ ಪ್ರಜೆಯೂ, ಉದ್ದೇಶ ಪೂರ್ಣ ಹಾಗೂ ನಿಯಮಿತ ರೀತಿಯಲ್ಲಿ ಶ್ರಮವಹಿಸಿ ಕೆಲಸ ಮಾಡಲೇಬೇಕು’ ಎಂದು ಸಲಹೆ ನೀಡಿದರು.

ಜನಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಗಟ್ಟಬೇಕಾದುದು ಅತ್ಯವಶ್ಯಕವೆಂದು ನುಡಿದು, ‘ದಿನೇ ದಿನೇ ಏರುತ್ತಿರುವ ಜನಸಂಖ್ಯೆಯನ್ನು ನಿಲ್ಲಿಸದೇ ಹೋದಲ್ಲಿ, ಇನ್ನು 20 ವರ್ಷಗಳಲ್ಲಿ ನಾನು ಬದುಕಿದ್ದರೆ ಬೀದಿಗಳಲ್ಲಿ ಜನರು ಆಹಾರವಿಲ್ಲದೆ ಕುಸಿದು ಬೀಳುವುದನ್ನು ನೋಡಬೇಕಾಗುತ್ತದೆ’ ಎಂದು ಅವರು ಎಚ್ಚರಿಸಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕ್ರೀಡೆಯಲ್ಲಿ ಮಹಿಳೆ ಇದು ಬರೀ ಆಟವಲ್ಲ

ಮಹಿಳಾ ಕ್ರೀಡಾಪಟುಗಳು ಎದುರಿಸುವ ಆರೋಗ್ಯ ಸಮಸ್ಯೆಗಳು ಹಲವು

ಇತ್ತೀಚೆಗೆ ವಿವಿಧ ಕ್ರೀಡೆಗಳಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ಹೆಚ್ಚಾಗುತ್ತಿದೆ. ಪುರುಷರಿಗೆ ಸಮನಾಗಿ ಅವರು ಪಂದ್ಯ, ಪದಕ ಗೆಲ್ಲುತ್ತಿದ್ದಾರೆ. ಆದರೆ, ಆಟ ಎನ್ನುವುದು ಇಬ್ಬರಿಗೂ ಒಂದೇ ಅಲ್ಲ. ಮಹಿಳೆಯರು ಆಟ ಆಡುವಾಗ ನಾನಾ ರೀತಿಯ ದೈಹಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮುಟ್ಟು, ಹಾರ್ಮೋನ್ ವ್ಯತ್ಯಾಸ, ಮದುವೆ, ಮಗು ಹೊಂದುವುದು ಇಂಥ ಪ್ರತಿಯೊಂದು ಸಹಜ ಮತ್ತು ಸಾಮಾನ್ಯ ಬೆಳವಣಿಗೆಯು ಮಹಿಳಾ ಕ್ರೀಡಾಪಟುಗಳ ಆಟದ ಗುಣಮಟ್ಟವನ್ನು, ಅವರ ಭವಿಷ್ಯವನ್ನು ಬದಲಾಯಿಸುತ್ತದೆ. ಕ್ರೀಡೆಯ ಬಗ್ಗೆ ಆಸಕ್ತಿ, ಪ್ರೀತಿ ಹೊಂದಿರುವ ಹೆಣ್ಣುಮಕ್ಕಳು ತಮ್ಮ ಎದುರಾಳಿಗಳ ಜತೆಗೆ ತಮ್ಮದೇ ದೇಹದ ಜೈವಿಕ ಬದಲಾವಣೆಗಳ ಜತೆಗೂ ಸೆಣಸಬೇಕಾಗಿದೆ

ಸ್ಮೃತಿ ಮಂದಾನ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಮಹಿಳಾ ಕ್ರಿಕೆಟ್‌ನ ಒಂದು ಟೆಸ್ಟ್ ಪಂದ್ಯ. ಭಾರತದ ಸ್ಮೃತಿ ಮಂದಾನ ಅವರು ಬ್ಯಾಟಿಂಗ್ ಮಾಡುತ್ತಿದ್ದರು. ಒಂದು ಹಂತದಲ್ಲಿ ಪಂದ್ಯದ ನಡುವೆ ಆಟ ನಿಲ್ಲಿಸಿದ ಅವರು ಅಂಪೈರ್ ಬಳಿ ತೆರಳಿದರು. ಬ್ಯಾಟಿಂಗ್ ನಡುವೆಯೇ ಮುಟ್ಟಾಗಿದ್ದ ಅವರು ಸ್ಯಾನಿಟರಿ ಪ್ಯಾಡ್ ಬದಲಾಯಿಸಲು ಅಂಪೈರ್ ಅನುಮತಿಗಾಗಿ ಅವರ ಬಳಿ ಬಂದಿದ್ದರು. ಆ ಸಂದರ್ಭದಲ್ಲಿ ಎಷ್ಟು ಮುಜುಗರ, ಕಷ್ಟ ಅನುಭವಿಸಿದೆ ಎಂದು ಅವರು ಇತ್ತೀಚೆಗೆ ಹೇಳಿಕೊಂಡಿದ್ದಾರೆ. ಮಹಿಳಾ ಕ್ರೀಡಾಪಟುಗಳು ಅನುಭವಿಸುವ ನಿರ್ದಿಷ್ಟ ದೈಹಿಕ ಮತ್ತು ಮಾನಸಿಕ ಸವಾಲುಗಳಿಗೆ ಸ್ಮೃತಿ ಮಂದಾನ ಅವರ ಈ ಘಟನೆಯು ಒಂದು ಪುಟ್ಟ ಉದಾಹರಣೆ ಮಾತ್ರ.

ಆಟ ಮತ್ತು ಆಟದ ನಿಯಮಗಳು ಸ್ತ್ರೀ ಮತ್ತು ಪುರುಷ ಇಬ್ಬರಿಗೂ ಒಂದೇ ಆಗಿರುತ್ತವೆ. ಆದರೆ, ಇಬ್ಬರ ದೈಹಿಕ ಲಕ್ಷಣಗಳು, ಅವುಗಳಲ್ಲಿನ ಬದಲಾವಣೆ ಒಂದೇ ರೀತಿ ಇರುವುದಿಲ್ಲ. ಮನುಷ್ಯ ಸಂತತಿಯನ್ನು ಮುಂದುವರಿಸುವ ಜೈವಿಕ ಜವಾಬ್ದಾರಿ ಹೊತ್ತಿರುವ ಹೆಣ್ಣುಮಕ್ಕಳು, ವಯಸ್ಕರಾದಂತೆ ಹಲವು ರೀತಿಯ ದೈಹಿಕ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ವಾಸ್ತವವಾಗಿ, ಶಕ್ತಿ, ಸಾಮರ್ಥ್ಯಗಳಲ್ಲಿ ಮಹಿಳೆಯರು ಪುರುಷರಿಗೆ ಬಹುತೇಕ ಸರಿ ಸಮನಾಗಿದ್ದಾರೆ. ಆದರೆ, ಮಹಿಳೆಯರ ದೇಹ ರಚನೆಯು ಅವರ ಜೈವಿಕ ಜವಾಬ್ದಾರಿಗೆ ತಕ್ಕಂತೆ ರೂಪುಗೊಂಡಿದೆ. ಈ ಜವಾಬ್ದಾರಿಯು ಅವರ ದೇಹದ ಮೇಲೆ ಕೆಲವು ಮಿತಿಗಳನ್ನು ಹೇರುತ್ತದೆ.

ಆಟಗಳಲ್ಲಿ ಓಡುವುದು, ನೆಗೆಯುವುದು ಸೇರಿದಂತೆ ಹಲವು ರೀತಿಯ ದೈಹಿಕ ಕಸರತ್ತುಗಳನ್ನು ಮಾಡಬೇಕಾಗುತ್ತದೆ. ಆ ಚಟುವಟಿಕೆಗಳು ಮಹಿಳಾ ಕ್ರೀಡಾಪಟುಗಳ ದೇಹವನ್ನು ಗಾಸಿಗೊಳಿಸುವ ಸಂಭವ ಇರುತ್ತವೆ. ಮಹಿಳಾ ಕ್ರೀಡಾಪಟುಗಳ ಭುಜ, ಸ್ತನಗಳು, ತೊಡೆ ಸೇರಿದಂತೆ ಹಲವು ಭಾಗಗಳಲ್ಲಿ ಗಾಯ, ನೋವು ಉಂಟಾಗುವ ಸಾಧ್ಯತೆ ಇರುತ್ತದೆ ಎಂದು ಅಧ್ಯಯನ ವರದಿಗಳಲ್ಲಿ ಉಲ್ಲೇಖಗೊಂಡಿದೆ.

ಇವುಗಳ ಜತೆಗೆ ಋತುಚಕ್ರ, ಗರ್ಭ ಧರಿಸುವುದು, ಹಾಲುಣಿಸುವುದರಿಂದ ಕೂಡ ಅವರ ಕ್ರೀಡಾ ಸಾಮರ್ಥ್ಯ, ಏಕಾಗ್ರತೆ, ಸಾಧನೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ ಎಂದು ವರದಿಗಳು ತಿಳಿಸಿವೆ. ಬಹುತೇಕ ಮಹಿಳೆಯರಿಗೆ ಮುಟ್ಟಾದಾಗ ಒಂದೆರಡು ದಿನಗಳ ಮಟ್ಟಿಗೆ ನೋವು, ಮಾನಸಿಕ ಅಸಮತೋಲನ ಕಾಡುತ್ತವೆ. ಪಂದ್ಯಗಳು ನಡೆಯುವ ವೇಳೆ ಹೀಗಾದರೆ, ಅದು ಅವರ ಆಟದ ಗುಣಮಟ್ಟದ ಮೇಲೆ ಮತ್ತು ಫಲಿತಾಂಶದ ಮೇಲೆ ಪ್ರಭಾವ ಬೀರುತ್ತದೆ. ದೀರ್ಘ ಸಮಯದವರೆಗೆ ಪಂದ್ಯಗಳು ನಡೆಯುವಾಗ ಬಹಳ ಹೊತ್ತಿನವರೆಗೆ ಮೂತ್ರ ಹಿಡಿದಿಟ್ಟುಕೊಳ್ಳುವುದರಿಂದ ಹಲವರು ಮೂತ್ರನಾಳದ ಸೋಂಕುಗಳಿಗೆ ಒಳಗಾದದ್ದಿದೆ.

ಮಹಿಳೆಯರಲ್ಲಿ ಸಾಮಾನ್ಯವಾಗಿ ಪೃಷ್ಠ ಮತ್ತು ತೊಡೆಯ ಭಾಗ ಪುರುಷರಿಗಿಂತ ದಪ್ಪ ಇರುತ್ತವೆ. ಕ್ಷಿಪ್ರವಾದ, ತೀವ್ರವಾದ ಚಲನೆ ಹಲವು ರೀತಿಯ ದೈಹಿಕ ಸಮಸ್ಯೆಗಳನ್ನು ಉಂಟುಮಾಡುತ್ತದೆ. ದೇಹವು ತೆಗೆದುಕೊಳ್ಳುವುದಕ್ಕಿಂತ ಹೆಚ್ಚಿನ ಕ್ಯಾಲೊರಿಗಳನ್ನು ಸುಡುವುದರಿಂದ ನಿಶ್ಶಕ್ತಿ ಉಂಟಾಗುವುದು, ಮುಟ್ಟಿನ ಏರುಪೇರು ಮತ್ತು ಕಡಿಮೆ ಮೂಳೆ ಸಾಂದ್ರತೆಯು ಮಹಿಳಾ ಕ್ರೀಡಾಪಟುಗಳಲ್ಲಿ ವಿವಿಧ ರೀತಿಯ ಕಾಯಿಲೆ, ಗಾಯಗಳಿಗೆ ಕಾರಣವಾಗುತ್ತಿವೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಹುಣ್ಣು, ಚರ್ಮಕ್ಕೆ ಸಂಬಂಧಿಸಿದ ಕಾಯಿಲೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಟೆಸ್ಟಾಸ್ಟರೋನ್ ಹಾರ್ಮೋನ್ ವಿವಿಧ ಪ್ರಮಾಣಗಳಲ್ಲಿ ಇರುವುದು ಕೂಡ ಅವರ ಕ್ರೀಡಾಸಾಮರ್ಥ್ಯದ ಮೇಲೆ ಪರಿಣಾಮ ಉಂಟುಮಾಡುತ್ತದೆ.

ಜಗತ್ತಿನ ಹಲವು ದೇಶಗಳಲ್ಲಿ ಆದಂತೆ ಭಾರತದಲ್ಲಿಯೂ ಮಹಿಳಾ ಕ್ರೀಡಾಪಟುಗಳು ಮತ್ತು ಅವರು ಪಾಲ್ಗೊಳ್ಳುವ ಕ್ರೀಡೆಗಳ ಬಗ್ಗೆ ಜನರ ದೃಷ್ಟಿಕೋನ ಇತ್ತೀಚಿನ ವರ್ಷಗಳಲ್ಲಿ ಬದಲಾಗುತ್ತಿದೆ. ಕ್ರಿಕೆಟ್, ಟೆನಿಸ್, ಕಬಡ್ಡಿ ಸೇರಿದಂತೆ ವಿವಿಧ ರೀತಿಯ ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಮತ್ತು ಆ ಆಟಗಳನ್ನು ನೋಡುವವರ ಸಂಖ್ಯೆ ಹೆಚ್ಚಾಗಿದೆ ಎಂದು ಬಿಬಿಸಿ ಮತ್ತು ಕಲೆಕ್ಟಿವ್ ನ್ಯೂಸ್‌ರೂಮ್ ನಡೆಸಿದ ಅಧ್ಯಯನದಲ್ಲಿ ತಿಳಿದುಬಂದಿದೆ. ಆದರೆ, ಮಹಿಳೆಯರು ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ದಿಸೆಯಲ್ಲಿ ಕೆಲವು ಸೌಲಭ್ಯಗಳನ್ನು ಕಲ್ಪಿಸುವ, ಪ್ರತ್ಯೇಕ ನಿಯಮಗಳನ್ನು ರೂಪಿಸ ಬೇಕು ಎನ್ನುವ ಒತ್ತಾಯ ಇದೆ.

ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ದೇಶಗಳಲ್ಲಿ ಮಹಿಳಾ ಕ್ರೀಡಾಪಟುಗಳು ತಮ್ಮ ದೈಹಿಕ ಸಮಸ್ಯೆಗಳನ್ನು, ಅಗತ್ಯಗಳನ್ನು ಮುಕ್ತವಾಗಿ ಹೇಳಿಕೊಳ್ಳುವಂಥ ವಾತಾವರಣ ಇನ್ನೂ ಸೃಷ್ಟಿಯಾಗಿಲ್ಲ. ಶುಚಿತ್ವ ಕಾಪಾಡಿಕೊಳ್ಳಲು, ಸುರಕ್ಷತೆ ಖಾತರಿಪಡಿಸಿಕೊಳ್ಳಲು ಅವರು ಅಪಾರವಾಗಿ ಶ್ರಮಿಸಬೇಕಾಗಿದೆ. ಹಲವು ಕ್ರೀಡಾಪಟುಗಳು ಕ್ರೀಡಾರಂಗದಿಂದಲೇ ನಿರ್ಗಮಿಸಲು ಈ ಸ್ಥಿತಿ ಕಾರಣವಾಗುತ್ತಿದೆ. ಶಾಲೆ, ಕಾಲೇಜು ಹಂತದಲ್ಲಿ ಹೆಣ್ಣುಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ, ವಯಸ್ಕರಾದ ನಂತರ ಮತ್ತು ಕಾಲೇಜು ತೊರೆದ ನಂತರ ಅವರು ಕ್ರೀಡಾಚಟುವಟಿಕೆಗಳನ್ನು ನಿಲ್ಲಿಸುತ್ತಿದ್ದಾರೆ. ಈ ದಿಸೆಯಲ್ಲಿ ಮಹಿಳಾ ಕ್ರೀಡಾಪಟುಗಳನ್ನು ಉತ್ತೇಜಿಸಲು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವುದು, ವಿಶೇಷ ಅನುಕೂಲಗಳನ್ನು ಕಲ್ಪಿಸುವುದು ಮುಖ್ಯವಾಗಿದೆ.

ಆಧಾರ: ಜರ್ನಲ್ ಆಫ್ ಸೈನ್ಸ್ ಆ್ಯಂಡ್ ಮೆಡಿಸಿನ್ ಇನ್ ಸ್ಪೋರ್ಟ್ ಅಧ್ಯಯನ ವರದಿ, ಬಿಬಿಸಿ–ಕಲೆಕ್ಟಿವ್ ನ್ಯೂಸ್‌ರೂಂ ಅಧ್ಯಯನ, ದಿ ನ್ಯೂಯಾರ್ಕ್ ಟೈಮ್ಸ್, ದಿ ಫೀಮೇಲ್ ಅಥ್ಲೀಟ್ ಹೆಲ್ತ್ ರಿಪೋರ್ಟ್

ಪೂರ್ವಸಿದ್ಧತೆ ಮಾಡಿಕೊಳ್ಳಬೇಕು

ಟೂರ್ನಿ ಸಂದರ್ಭದಲ್ಲಿ ಹೊಟ್ಟೆನೋವು ಬಂದರೆ, ಯಾರೂ ತಪ್ಪಿಸಲಾಗದು. ಅದೊಂದು ನೈಸರ್ಗಿಕ ಕ್ರಿಯೆ. ಥ್ರೋಬಾಲ್‌ನಲ್ಲಿ ಮೀಸಲು ಆಟಗಾರ್ತಿಯರು ಇರ್ತಾರೆ. ವಸ್ತ್ರಸಂಹಿತೆ ವಿಷಯ ಬಂದಾಗ, ಥ್ರೋಬಾಲ್‌ನಲ್ಲಿ ನಾವು ಶಾರ್ಟ್ಸ್ ಧರಿಸುತ್ತೇವೆ. ಮುಸ್ಲಿಂ ದೇಶಗಳ ಆಟಗಾರ್ತಿಯರು ಮೈಕಾಣದೇ ಇರುವ ತರಹ ಒಳವಸ್ತ್ರ ಬಳಸಿಕೊಳ್ಳುತ್ತಾರೆ. ಕ್ರೀಡೆಯಷ್ಟೇ ಅಲ್ಲ, ಎಲ್ಲ ವೃತ್ತಿಗಳಲ್ಲಿಯೂ ಹೆಣ್ಣುಮಕ್ಕಳಿಗೆ ಕೆಲ ಪುರುಷರಿಂದ ಕಿರುಕುಳವಾಗುವ ಸಾಧ್ಯತೆ ಇದ್ದೇ ಇರುತ್ತದೆ. ಅದನ್ನು ಎದುರಿಸುವ ಧೈರ್ಯವನ್ನು ಬೆಳೆಸಿಕೊಳ್ಳಬೇಕು. ಕೆಲವು ಪ್ರವಾಸಗಳಿಗೆ ಹೋದಾಗ ಒಳ್ಳೆಯ ವಸತಿ ಮತ್ತು ಊಟ ಸಿಗುವುದಿಲ್ಲ. ಆಗಲೂ ಕೂಡ ಪೂರ್ವಸಿದ್ಧತೆ ಮಾಡಿಕೊಂಡು ಹೋಗಬೇಕು. ಅಮೆರಿಕದಂತಹ ದೇಶಗಳಲ್ಲಿ ಶೌಚಾಲಯಗಳಲ್ಲಿಯೇ ನೀರು ಸಿಗುವುದು ದುಸ್ತರ

ಸಂಪೂರ್ಣಾ ಹೆಗಡೆ, ಥ್ರೋಬಾಲ್ ಆಟಗಾರ್ತಿ

ಕ್ರೀಡೆಯಲ್ಲಿ ಮಹಿಳೆಯರ ತೊಡಗುವಿಕೆ ಹೆಚ್ಚಳ, ಆದರೆ...

ಭಾರತದ ಕ್ರೀಡಾ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕುರಿತು ಬಿಬಿಸಿಯು ಈ ವರ್ಷದ ಆರಂಭದಲ್ಲಿ ಒಂದು ಸಮೀಕ್ಷೆ ನಡೆಸಿದೆ. ಅದರ ವರದಿಯನ್ನು ಮಾರ್ಚ್‌ನಲ್ಲಿ ಬಿಡುಗಡೆ ಮಾಡಿದೆ. ದಿ ಇಂಡಿಯನ್ ಸ್ಪೋರ್ಟ್ಸ್‌ವಿಮೆನ್ ಆಫ್‌ದ ಇಯರ್ ಭಾಗವಾಗಿ ಈ ಸಮೀಕ್ಷೆ ನಡೆಸಲಾಗಿದೆ. 14 ರಾಜ್ಯಗಳ ಮಹಿಳೆಯರು, ಪುರುಷರು ಸೇರಿದಂತೆ 10,304 ಜನರನ್ನು ಸಂಪರ್ಕಿಸಲಾಗಿದೆ. ಕ್ರೀಡೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ. ಮಹಿಳಾ ಕ್ರೀಡಾಪಟುಗಳ ಬಗ್ಗೆ ಜನರ ಧೋರಣೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಸಮೀಕ್ಷೆಯ ವರದಿ ಮಾಹಿತಿ ನೀಡಿದೆ.

ಕ್ರಿಕೆಟ್‌ನತ್ತ ಚಿತ್ತ

ಮಹಿಳೆಯರ ನಡುವೆಯೂ ಈಗ ಕ್ರಿಕೆಟ್ ಜನಪ್ರಿಯವಾಗುತ್ತಿದೆ. ಯುವತಿಯರು ಕ್ರಿಕೆಟ್‌ನತ್ತ ಒಲವು ತೋರುತ್ತಿರುವುದನ್ನು ಇತ್ತೀಚಿನ ಅಧ್ಯಯನದ ಅಂಕಿಅಂಶಗಳು ಹೇಳುತ್ತಿವೆ. ಪ್ರತಿ 10ರಲ್ಲಿ ಒಬ್ಬ ಮಹಿಳೆ ತಾನು ಕ್ರಿಕೆಟ್ ಆಡುವುದಾಗಿ ಹೇಳಿಕೊಂಡಿದ್ದಾರೆ. ಮೊದಲು ಕಬಡ್ಡಿ ಬಗ್ಗೆ ಮಹಿಳೆಯರು ಹೆಚ್ಚು ಆಸಕ್ತಿ ತೋರುತ್ತಿದ್ದರು. ಈಗ ಬ್ಯಾಡ್ಮಿಂಟನ್‌ಗೂ ಮಹಿಳೆಯರು ಒತ್ತು ನೀಡುತ್ತಿದ್ದಾರೆ.

ಕ್ರೀಡೆ ಆಡುತ್ತೇವೆ ಎಂದ ಮಹಿಳೆಯರ ಪ್ರಮಾಣ

	2020	2026
ಕ್ರಿಕೆಟ್	5%	10%
ಕಬಡ್ಡಿ	11%	7%

ವೃತ್ತಿಯತ್ತ ಒಲವು

ಕ್ರೀಡೆಯನ್ನು ವೃತ್ತಿಯನ್ನಾಗಿಸಿಕೊಳ್ಳಲು ಮಕ್ಕಳನ್ನು ಪ್ರೇರೇಪಿಸುತ್ತಿರುವ ಪೋಷಕರ ಸಂಖ್ಯೆ ಹೆಚ್ಚಿದೆ. ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಪೋಷಕರಲ್ಲಿ ಶೇ 86ರಷ್ಟು ಮಂದಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕ್ರೀಡೆಯನ್ನು ವೃತ್ತಿ ಜೀವನದ ಭಾಗವಾಗಿಸಲು ಇಚ್ಛಿಸುವ ಹೆಣ್ಣುಮಕ್ಕಳ ಪ್ರಮಾಣವೂ ಜಾಸ್ತಿಯಾಗಿದೆ. ಸಮೀಕ್ಷೆಯ ಭಾಗವಾಗಿದ್ದ ಹೆಣ್ಣುಮಕ್ಕಳ ಪೈಕಿ ಆರರಲ್ಲಿ ಒಬ್ಬರು ಈ ರೀತಿ ಹೇಳಿದ್ದಾರೆ.

	2020	2026
ಕ್ರೀಡೆಯನ್ನು ವೃತ್ತಿಯನ್ನಾಗಿ ಪರಿಗಣಿಸುವುದಾಗಿ ಹೇಳಿದವರು	10%	17%

ಮುಗಿಯದ ಸವಾಲುಗಳು

ಕ್ರೀಡೆಯಲ್ಲಿ ಮಹಿಳೆಯರ ಆಸಕ್ತಿ, ಪಾಲ್ಗೊಳ್ಳುವಿಕೆ ಹೆಚ್ಚಾಗಿರಬಹುದು. ಆದರೆ, ಅವರು ಎದುರಿಸುತ್ತಿರುವ ಸವಾಲುಗಳು ಹಾಗೆಯೇ ಉಳಿದಿವೆ.

ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಕ್ರೀಡಾ ಸೌಲಭ್ಯಗಳ ಲಭ್ಯತೆ ಹೆಚ್ಚಾಗಿದ್ದರೂ, ಎಲ್ಲರಿಗೂ ಸಿಗುತ್ತಿಲ್ಲ. 14–24 ವರ್ಷ ವಯೋಮಾನದ ಶೇ 12ರಷ್ಟು ಹೆಣ್ಣುಮಕ್ಕಳು ತಾವು ಬಾಲ್ಯದಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿಲ್ಲ ಎಂದು ಹೇಳಿದ್ದಾರೆ. ಶಾಲಾ–ಕಾಲೇಜುಗಳಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಿದ್ದರೂ, ಹುಡುಗರ ರೀತಿಯಲ್ಲಿ ನೆರೆ ಹೊರೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಆಟ ಆಡುವವರ ಸಂಖ್ಯೆ ಕಡಿಮೆ.

13% ಸುರಕ್ಷತೆಯ ಕಾರಣಕ್ಕೆ ತಾವು ಆಟ ಆಡುವುದಿಲ್ಲ ಎಂದು ಹೇಳಿದ ಹೆಣ್ಣುಮಕ್ಕಳ ಪ್ರಮಾಣ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಮತ್ತು ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ '**ಶೈಕ್ಷಣಿಕ ನೆರವಿಗೆ ಅರ್ಜಿ**' ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಮಾಹಿತಿ ಕೊರತೆ

ಋತುಚಕ್ರಕ್ಕೆ ಸಂಬಂಧಿಸಿದಂತೆ ಸ್ವತಃ ಮಹಿಳಾ ಕ್ರೀಡಾಪಟುಗಳು, ಅವರ ತರಬೇತುದಾರರಿಗೆ ಮಾಹಿತಿಯ ಕೊರತೆ ಇದೆ ಎಂದು 2023ರಲ್ಲಿ ಪ್ರಕಟವಾಗಿದ್ದ 'ದಿ ಫೀಮೇಲ್ ಅಥ್ಲೀಟ್ ಹೆಲ್ತ್ ರಿಪೋರ್ಟ್' ಎಂಬ ಸಮೀಕ್ಷಾ ವರದಿ ಹೇಳಿತ್ತು. ಪ್ರಾಜೆಕ್ಟ್ ರೆಡ್–ಎಸ್, ಮತ್ತು ಕಿನಿಸ್ಕಾ ಅಡ್ವೊಕೆಸಿಯು ಜಂಟಿಯಾಗಿ ಬ್ರಿಟನ್ನಿನ 769 ಮಹಿಳಾ ಕ್ರೀಡಾಪಟುಗಳನ್ನು ಸಂಪರ್ಕಿಸಿ ಈ ವರದಿಯನ್ನು ಸಿದ್ಧಪಡಿಸಿತ್ತು.

ಶೇ 43ರಷ್ಟು ಮಂದಿ ತಮ್ಮ ಋತುಚಕ್ರ ಸರಿಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದರೆ, ಶೇ 14 ಮಂದಿ ಸಮಯಕ್ಕೆ ಸರಿಯಾಗಿ ಮುಟ್ಟು ಆಗುತ್ತಿಲ್ಲ ಎಂದಿದ್ದರು. ಶೇ 10ರಷ್ಟು ಮಂದಿ ತಮ್ಮ ಸಹಜ ಋತುಚಕ್ರದ ಅವಧಿ ಯಾವಾಗಲೂ ತಪ್ಪುತ್ತಿದೆ ಎಂದು ಹೇಳಿದ್ದರು. ಚಟುವಟಿಕೆಯಲ್ಲಿರುವ ಮಹಿಳೆಯರು ಮುಟ್ಟು ಆಗದಿರುವುದು ಸಹಜ ಕ್ರಿಯೆ ಎಂದು ಈ ವಿಚಾರವನ್ನು ನಿರ್ಲಕ್ಷಿಸಿರುವುದಾಗಿ ಶೇ 36ರಷ್ಟು ಕ್ರೀಡಾಳುಗಳು ಅಭಿಪ್ರಾಯಪಟ್ಟಿದ್ದರು. ಮುಟ್ಟು ಆಗದೇ ಇರುವುದರಿಂದ ತಮ್ಮ ಕ್ರೀಡಾ ಪ್ರದರ್ಶನಕ್ಕೆ ಅನುಕೂಲವಾಗಬಹುದು ಎಂದು ಶೇ 19ರಷ್ಟು ಆಟಗಾರ್ತಿಯರು ನಂಬಿದ್ದರು.

ಕ್ರೀಡಾಪಟುಗಳ ಚಟುವಟಿಕೆಯ ಮಟ್ಟ ಹೆಚ್ಚಿರುವುದರಿಂದ ನಿಗದಿತ ಸಮಯಕ್ಕೆ ಮುಟ್ಟು ಆಗದಿರುವುದು ಅಥವಾ ನಿಧಾನಕ್ಕೆ ಆಗುವುದು ಸಹಜ ಎಂದು ಶೇ 30ರಷ್ಟು ಕ್ರೀಡಾಪಟುಗಳಿಗೆ ವೈದ್ಯರು ಹೇಳಿದ್ದರು.

ಅಸಮರ್ಪಕ ಋತುಚಕ್ರದಿಂದ ಕ್ರೀಡಾಳುಗಳ ಆರೋಗ್ಯದ ಮೇಲಾಗುವ ಪರಿಣಾಮಗಳ ಬಗ್ಗೆ ವೈದ್ಯಕೀಯ ವೃತ್ತಿಪರರು, ತರಬೇತುದಾರರಿಗೆ ಮಾಹಿತಿಯ ಕೊರತೆ ಇರುವ ಸಾಧ್ಯತೆ ಇದ್ದು, ಈ ಬಗ್ಗೆ ಅವರಿಗೆ ಶಿಕ್ಷಣ ನೀಡುವ ಅಗತ್ಯವಿದೆ ಎಂದು ವರದಿ ಶಿಫಾರಸು ಮಾಡಿತ್ತು.

ಬದಲಾಗದ ಧೋರಣೆ

ಮಹಿಳೆಯರ ವಿಚಾರದಲ್ಲಿ ಸಮಾಜದ ದೃಷ್ಟಿಕೋನ, ಜನರ ನಡವಳಿಕೆ ಇನ್ನೂ ಬದಲಾಗಿಲ್ಲ. ಈಗಲೂ ಬಹಳಷ್ಟು ಜನರು ಮಹಿಳಾ ಕ್ರೀಡಾಳುಗಳು ಆಕರ್ಷಕವಾಗಿ ಕಾಣಬೇಕು ಎಂದು ಬಯಸುತ್ತಾರೆ. 2020ರ ಸಮೀಕ್ಷೆಗೆ ಹೋಲಿಸಿದರೆ ಈ ಬಾರಿ ಹೆಚ್ಚು ಮಂದಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

	2020	2026
ಆಟಗಾರ್ತಿಯರು ಆಕರ್ಷಕವಾಗಿರಬೇಕು ಎಂದವರು	37%	46%
ಮಹಿಳಾ ಕ್ರೀಡಾಳುಗಳಲ್ಲಿ ಹೆಣ್ತನದ ಲಕ್ಷಣ ಕಡಿಮೆ ಇದೆ ಎಂದವರು	37%	40%

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ **ಗರ್ಭಿಣಿಯ** ರೀತಿಯಲ್ಲಿ ವೇಷಮರೆಸಿಕೊಂಡಿದ್ದ ದಕ್ಷಿಣ ಕೊರಿಯಾದ ಯೂಟ್ಯೂಬರ್‌ಗೆ ಭಾರತದಲ್ಲಿ ಲೈಂಗಿಕ ಕಿರುಕುಳ ನೀಡಲಾಗಿದೆ ಎಂದು ಪ್ರತಿಪಾದಿಸುತ್ತಾ ಜೊನಾಥನ್ ವಾಂಗ್ ಎಂಬ 'ಎಕ್ಸ್' ಬಳಕೆದಾರ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದಾರೆ. ಈ ವಿಡಿಯೊವನ್ನು ಹಲವರು ಹಂಚಿಕೊಂಡಿದ್ದಾರೆ. ಭಾರತದಲ್ಲಿ ಹೋಳಿ ಸಂಭ್ರಮಾಚರಣೆಯ ವೇಳೆ ಈ ಘಟನೆ ನಡೆದಂತೆ ಕಾಣುತ್ತದೆ. ಆದರೆ, ಇದು ನಿಜವಲ್ಲ.

✅ **ವಿಡಿಯೊದಲ್ಲಿರುವ** ಹೋಳಿ ಸಂಭ್ರಮಾಚರಣೆಯ ದೃಶ್ಯದ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿಕೊಂಡು ರಿವರ್ಸ್ ಸರ್ಚ್ ವಿಧಾನದ ಮೂಲಕ ಹುಡುಕಿದಾಗ, 'ಐ ಆ್ಯಮ್ ಸುಮಿನ್' ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ 2025ರ ಮೇ 16ರಂದು ಅಪ್‌ಲೋಡ್ ಮಾಡಿದ ವಿಡಿಯೊ ಸಿಕ್ಕಿತು. ಅದು ವಿಡಿಯೊದಲ್ಲಿರುವ ವ್ಯಕ್ತಿಯೇ ನಿರ್ವಹಿಸುವ ಚಾನೆಲ್ ಎಂಬುದು ಗೊತ್ತಾಯಿತು. ಹೋಳಿ ಸಂಭ್ರಮಾಚರಣೆಯಲ್ಲಿ ಅವರು ಭಾಗವಹಿಸಿದ್ದು ನಿಜ. ಆದರೆ, ಆಗ ಅವರು ಗರ್ಭಿಣಿಯ ರೀತಿಯಲ್ಲಿ ವೇಷ ಹಾಕಿರಲಿಲ್ಲ. ಇದೇ ವಿಡಿಯೊದಲ್ಲಿ ಅವರು ಗರ್ಭಿಣಿಯ ವೇಷ ಧರಿಸಿದ ದೃಶ್ಯಗಳಿದ್ದರೂ, ಅದು ಬಾಂಗ್ಲಾದೇಶದಲ್ಲಿ ಚಿತ್ರೀಕರಿಸಿದ್ದು. ಅವುಗಳ ಪ್ರತ್ಯೇಕ ವಿಡಿಯೊಗಳೂ ಅವರ ಚಾನೆಲ್‌ನಲ್ಲಿವೆ. ಈಗ ಹರಿದಾಡುತ್ತಿರುವ ವಿಡಿಯೊದಿಂದ ಉಂಟಾಗಿರುವ ವಿವಾದದ ಬಗ್ಗೆ ಅವರು ಸ್ಪಷ್ಟನೆ ನೀಡಿದ್ದಾರೆಯೇ ಎಂಬುದನ್ನು ತಿಳಿಯಲು ಅವರ ಸಾಮಾಜಿಕ ಜಾಲತಾಣಗಳ ಖಾತೆಗಳಿಗೆ ಭೇಟಿ ನೀಡಿದಾಗ, ಭಾರತದ ವಿಡಿಯೊಗೆ ಅವರು ಸ್ಪಷ್ಟನೆ ನೀಡಿರುವುದು ಸಿಕ್ಕಿತು. 'ಭಾರತಕ್ಕೆ ಪ್ರತ್ಯೇಕವಾಗಿ ಪ್ರವಾಸ ಕೈಗೊಂಡಿದ್ದ ಸಂದರ್ಭದಲ್ಲಿ ಚಿತ್ರೀಕರಿಸಿದ ವಿಡಿಯೊ. ನಾನು ಕೂಡ ಹೋಳಿ ಹಬ್ಬವನ್ನು ಸಂಭ್ರಮಿಸಿದ್ದೆ. ಅದರಲ್ಲಿ ನಾನು ವೇಷ ಮರೆಸಿರಲಿಲ್ಲ' ಎಂದೂ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಸಮಾನತೆ ಸಮಾಜದ ವಿಕಾಸಕ್ಕೆ ಅಡಿಪಾಯ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಈ ತಾಯಿಗೆ ಮೂವರು ಮಕ್ಕಳು. ಕೊನೆಯ ಮಗನಿಗೆ ಹುಟ್ಟುತ್ತಲೇ ಪೋಲಿಯೋ ಕಾರಣದಿಂದ ಒಂದು ಕಾಲು ಊನವಾಯಿತು. ಅಲ್ಲದೆ ಹುಟ್ಟಿದ ನಾಲ್ಕೇ ತಿಂಗಳಲ್ಲಿ ಅಪ್ಪನನ್ನು ಕಳೆದುಕೊಂಡ. ಇವನ ಜೊತೆಗೆ ದೈಹಿಕವಾಗಿ ಎಲ್ಲಾ ಸರಿಯಿದ್ದ ಇನ್ನೊಬ್ಬ ಮಗ ಮತ್ತು ಮಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತ ತಾಯಿ ಗಂಡ ಉಳಿಸಿಹೋದ ಒಂದೆಕರೆ ಹೊಲವನ್ನು ಗುತ್ತಿಗೆಗೆ ಕೊಟ್ಟು ಬಂದ ಹಣದಿಂದ ಜೀವನ ನಿಭಾಯಿಸಲು ಹಣಗಾಡುತ್ತಿದ್ದಳು. ಮಕ್ಕಳು ಬೆಳೆದಂತೆ ಕಾಲಿಲ್ಲದ ಮಗನ ಆರೈಕೆಯ ಕಡೆಗೆ ಹೆಚ್ಚು ಗಮನ ಕೊಡುವುದು ಅನಿವಾರ್ಯವಾಯಿತು. ಅವನಿಗೆ ಹೊತ್ತು ಹೊತ್ತಿಗೆ ತುತ್ತು ತಿನ್ನಿಸಿ ತಲೆ ನೇವರಿಸುತ್ತಾ ಕಥೆ ಹೇಳುತ್ತಾ ತೊಡೆ ಮೇಲೆ ಮಲಗಿಸಿ ತಾನೂ ಮಲಗುವುದು ಚಾಚೂ ತಪ್ಪದೆ ನಡೆಯುತ್ತಿತ್ತು. ಹಾಗಂತ ಇನ್ನಿಬ್ಬರು ಮಕ್ಕಳನ್ನು ಕಡೆಗಣಿಸಲಿಲ್ಲ. ಹಿರಿಯ ಮಗ ಬೆಳೆದಂತೆ ಅಮ್ಮನ ಮೇಲೆ ಮುನಿಸು ಬೆಳೆಸಿಕೊಂಡ. ತಾನು ಮಗನಲ್ಲವೇ? ಅಮ್ಮ ಯಾವಾಗಲೂ ಅವನ ಕಾಳಜಿಯಲ್ಲೇ ಇರುತ್ತಾಳೆ. ತನ್ನ ಮೇಲೆ ಅಮ್ಮನಿಗೆ ಪ್ರೀತಿ, ಕಳಕಳಿ ಇಲ್ಲ ಎಂಬ ಭಾವನೆ ಅವನಲ್ಲಿ ಬಲಿಯತೊಡಗಿತು. ಅಣ್ಣನ ವರ್ತನೆಯಲ್ಲಾದ ವ್ಯತ್ಯಾಸವನ್ನು ಸರಿಪಡಿಸಲು ಪ್ರಯತ್ನಿಸಿ ಸಾಧ್ಯವಾಗದೆ ತಂಗಿಯೂ ಸುಮ್ಮನಾದಳು.

ಬರುಬರುತ್ತಾ ಮಕ್ಕಳೆಲ್ಲ ಬೆಳೆದು ದೊಡ್ಡವರಾದರು. ದೂರದೂರಿನ ಹಳೇ ಸಂಬಂಧದ ಹೆಣ್ಣು ತಂದು ಹಿರಿಮಗನಿಗೆ ಮದುವೆ ಮಾಡಿದರು. ಕಂಡುಂಡ ಹೆಣ್ಣು ತಂದರೆ ಕೂಡಿ ಬಾಳುತ್ತಾಳೆ ಅಂತ ನಿರೀಕ್ಷೆಯಿತ್ತು. ಆದರೆ ಅವರು ತಿಂಗಳೊಪ್ಪತ್ತಿನಲ್ಲೇ ಬೇರೆಯಾದರು. ಮಗಳಿಗೆ ಅದೇ ಊರಿನಲ್ಲಿದ್ದ ತಮ್ಮನ ಮಗನ ಜೊತೆ ಮದುವೆ ಮಾಡಿ ಕಳಿಸಿಕೊಟ್ಟರು. ಅಮ್ಮ ತಮ್ಮ ಕಣ್ಣೆದುರಿನಲ್ಲಿ ಓಡಾಡಿದರೂ ಮಾತಾಡಿಸಲಾರದಷ್ಟು ಅಸಮಾಧಾನ ಬೆಳೆಸಿಕೊಂಡ ಹಿರಿಮಗನ ವರ್ತನೆ ಕಂಡು ತಾಯಿ ಕರುಳು ನೊಂದುಕೊಳ್ಳುತ್ತದೆ. ಅಮ್ಮ ಮಗನ ನಡುವೆ ಸರಿಹೋಗದ ಸಂಬಂಧ ನೋಡಿಕೊಂಡು ಇದೇ ಊರಲ್ಲಿರಬೇಕಾಯ್ತಲ್ಲಾ ಅಂತ ತಂಗಿಯ ಹೆಂಗರುಳು ಕೊರಗುತ್ತದೆ. ಯಾರು ಸರಿ? ಯಾರು ತಪ್ಪು? ಒಬ್ಬನು ದೈಹಿಕ ವೈಕಲ್ಯದಿಂದ ಮತ್ತೊಬ್ಬ ಮನೋವೈಕಲ್ಯದಿಂದ ನರಳುತ್ತಿದ್ದಾರೆ. ಇವರಿಬ್ಬರ ನರಳಾಟ ನಿಷ್ಪಾಪಿಗಳಾದ ಇನ್ನಿಬ್ಬರನ್ನೂ ಆವರಿಸಿದೆ. ಕುಟುಂಬ ದಿಕ್ಕಾಪಾಲಾಗಿದೆ.

ಇದು ಕೇವಲ ಕುಟುಂಬದ ಸಮಸ್ಯೆಯಲ್ಲ; ಸಮಗ್ರ ಮನುಷ್ಯಕುಲ ಸೃಷ್ಟಿಸಿಕೊಂಡ ಅಸಮಾನ ಸಮಾಜದ ಸಂಧಿವಾತ. ಗಲ್ಲಿಗೊಂದು ಜಾತಿ ಉಪಜಾತಿ ನಿರ್ಮಿಸಿಕೊಂಡು ಒಬ್ಬರು ಮತ್ತೊಬ್ಬರಿಗಿಂತ ಮೇಲು ಕೀಳು ಎಂದು ವಿಭಜಿಸಿದ ವ್ಯವಸ್ಥೆಯಲ್ಲಿ ಸಮಾನತೆ ಎನ್ನುವುದು ಸಾಮಾಜಿಕ ಕೆಳಮುಖ ಚಲನೆಯಿಂದ ಮಾತ್ರ ಸಾಧ್ಯವಾಗುತ್ತದೆ. ಇದನ್ನು ಸಾಧಿಸಲು ಆಡಳಿತ ನಡೆಸುವವರಿಗೆ ವಜ್ರದಂತೆ ಕಠಿಣವೂ ಸುಮದಂತೆ ಕೋಮಲವೂ ಆದ ನೀತಿಗಳು ಬೇಕಾಗುತ್ತವೆ. ಮೇಲು ಅಂದುಕೊಂಡವರು ತಮ್ಮದಲ್ಲದ ತಪ್ಪಿಗೆ ಕೀಳಾದವರ ಪಾಲಿಗೆ ಭರವಸೆಯ ಹೆಗಲಾಗಬೇಕಾಗುತ್ತದೆ. ದುರ್ಬಲರ ಬೆನ್ನಿಗೆ ಸದಾ ಆತುಕೊಳ್ಳುವ ತಾಯಿಕರುಳ ಕಾಳಜಿ ಆಳುವವರಿಗೆ ಮಾತ್ರ ಇದ್ದರೆ ಸಾಲದು, ಮೇಲರಿಮೆ ಉಳ್ಳವರ ಅಂತಃಕರಣಕ್ಕೂ ಅದು ತಾಗಬೇಕು. ಧಾರ್ಮಿಕ ಅರಿವಿನ ಸಾಹಚರ್ಯ ಜತೆಗಿದ್ದರೆ ಇದು ಇನ್ನೂ ಸಲೀಸು. ಬೆನ್ನಲ್ಲಿಬಿದ್ದ ತಮ್ಮನ ದೇಹದೌರ್ಬಲ್ಯ ಅವನ ತಪ್ಪಲ್ಲ ಅವನ ಪಾಪವೂ ಅಲ್ಲ. ತಾಯಿ ತೋರಿಸಿದ ಸ್ವಲ್ಪ ಹೆಚ್ಚಿನ ಕಾಳಜಿಯು ಅವನಿಗೆ ಸಿಗಬೇಕಾದದ್ದೇ, ಅದಕ್ಕವನು ಅರ್ಹನಿದ್ದಾನೆ ಅನ್ನುವ ತಿಳಿವಳಿಕೆಯೇ ವಿವೇಕ. ಅಸಮಾನತೆಯು ಸಮಾಜದ ದೌರ್ಬಲ್ಯ. ಅಪಮಾನಿತರ ಜೀವನಘನತೆಯನ್ನು ಎತ್ತಿ ಹಿಡಿಯುವುದು ಬರೀ ಸರ್ಕಾರದ ಕೆಲಸವಲ್ಲ, ಧಾರ್ಮಿಕ ವಿವೇಕವೂ ಆ ಹೊಣೆಯನ್ನು ಹೊರಬೇಕು. ನಿಜವಾದ ಧರ್ಮ ಪರಿಧಿಗಳನ್ನು ಸೃಷ್ಟಿಸುವುದಿಲ್ಲ, ವಿಸ್ತರಿಸುತ್ತದೆ. ಸಂಕುಚಿತತೆ ಧಾರ್ಮಿಕ ದೃಷ್ಟಿಯಾಗುವುದು ಸಾಧ್ಯವೇ ಇಲ್ಲ. ಅಸಮಾನತೆಯು ಸಮಾಜದ ನೈತಿಕ ಕುಸಿತಕ್ಕೆ ಕಾರಣವಾಗುತ್ತದೆ. ಸಹನೆ, ಸಮಾನತೆಗಳು ಸಮಾಜದ ವಿಕಾಸಕ್ಕೆ ಅಡಿಪಾಯವಾಗುತ್ತವೆ. ❖

ಪದಬಂಧ 6434

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಾಯಿಲೆಯ ಕಾರಣದ ಶೋಧನೆ (5)
4.ಈತ ಸಂಪ್ರದಾಯ ವಿರೋಧಿ (3)
5.ಗಣಿಯ ಹತ್ತಿರ ಕಲಿತಿರುವ ಲೆಕ್ಕಶಾಸ್ತ್ರ (3)
6.ಶೇಕಡಾವಾರು ಎನ್ನುತ್ತಿರುವವನ ಬೆನ್ನೆಲುಬು! (3)
8.ನಿರಂತರ ಎಂದು ಹೀಗೆನ್ನಿ (3)
10.ಮೊಟ್ಟೆಯಿಂದ ಜನಿಸಿದುದು (3)
11.ಕುಣಿಯುತ ಹಾಕಿರುವ ಸರಗಂಟು (3)
15.ನೂರು ಸಾವಿರದಿಂದ ಶುಭ ಚಿಹ್ನೆ ಬಂದಿತೇ? (3)
16.ಆಯಾಳಿಗೆ ಆಗಿರುವ ಸುಸ್ತು (3)
17.ಹೀಗೆ ಮರಳಿ ಸಂಭವಿಸು (5)

ಮೇಲಿಂದ ಕೆಳಕ್ಕೆ
1.ಕೊನೆಗೆ ದನ ನೋಡಿದ್ದಕ್ಕೇ ಈ ಪ್ರಲಾಪ! (3)
2.ಭೇದಭಾವ ಇಲ್ಲದಿರುವಿಕೆ (5)
3.ನಗರಕ್ಕೆ ಬಂದಿರುವ ವ್ಯಾಪಾರಿ (3)
4.ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
7.ಕಡ ಪಡೆದರೆ ನೂರಕ್ಕೆ ಇಷ್ಟು ಎಂಬ ದರ! (3)
9.ತಾರುಣ್ಯವನ್ನು ಹೊಂದಿದವಳು (3)
10.ಈತ ಮೈಗಾವಲಿನವನು (5)
12.ಕೆಲವರು ಮಾಡುವ ಕಾರ್ಯ (3)
13.ಪ್ರಾಯಕ್ಕೆ ಬರುತ್ತಿರುವ ಎಮ್ಮೆ ಇಲ್ಲಿ ತಿರುಗಿದೆಯಲ್ಲಾ? (3)
14.ಯತಿಗೆ ಬಂದಿರುವ ಕೋಪ (3)



6433ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಾಯಮಾನ 3.ಅಸ್ತಿಭಾರ
4.ಪಾಕಡ 5.ದ್ರವ
7.ವಿಮೋಹ 9.ಪ್ರಸಂಗ
10.ಕುಲುಮೆ 11.ರಮಿಸು
14.ರಸ 16.ಪರೋಕ್ಷ
18.ಅವಭೃಥ 19.ರಸಹೀನ

ಮೇಲಿಂದ ಕೆಳಕ್ಕೆ:
1.ಜಾಲಂಧ್ರ 2.ನಪಾಸು
3.ಅಡವಿ 6.ವರ್ಣಸಂಕರ
8.ಹಲಾಲುಕೋರ 12.ಸುಪಥ
13.ಅಕ್ಷರ 15.ಸಜ್ಜನ

ಸುಡೊಕು 6817

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4				6	8	1		3
9		6					7	
	8		7			2		6
6		1		5		7		9
			8		6			
8				7		5		2
3		9		1			2	
			6		7	9		4
7		8		2			1	

6816 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಜೂನ್ 2026 ಸೋಮವಾರ, ಶ್ರೀ ಪರಾಭವ ನಾಮಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ಅಮಾವಾಸ್ಯೆ ಗಂ. 08-24 ನಂತರ ನಿಜ ಜ್ಯೇಷ್ಠ ಶುಕ್ಲ ಪ್ರತಿಪದ್ ಗಂ. 28-31 ನಕ್ಷತ್ರ: ಮೃಗಶಿರ ಗಂ. 19-09 ಯೋಗ: ಶೂಲ ಗಂ. 8-56 ನಂತರ ಗಂಡ ಗಂ. 28-39 ಕರಣ: ನಾಗ ಗಂ. 8-24, ವೃಷಭ ಮಾಸದ 32 ನೇ ದಿನ. ಮಳೆ ನಕ್ಷತ್ರ : ಮೃಗಶಿರ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-08 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ : 29 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 8, 12

ಮೇಷ: ಹಿರಿಯರೊಂದಿಗೆ ವ್ಯವಹರಿಸುವಾಗ ಅವರ ಬಳಿ ಬೈಸಿಕೊಂಡರೂ ಬೇಸರಪಡದೆ ತಪ್ಪುಗಳನ್ನು ಸರಿಪಡಿಸಿಕೊಳ್ಳಿ. ಸತ್ಯ ಸಂಗತಿಗಳು ತಿಳಿಯುವುದರಿಂದ ದುಃಖಗಳು ದೂರಾಗಲಿವೆ.

ವೃಷಭ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಥವಾ ಆಸೆ- ಆಕಾಂಕ್ಷೆಯನ್ನು ಈಡೇರಿಸುವ ಸಲುವಾಗಿ ಹಣ ಹೊಂದಿಸಬೇಕಾಗುತ್ತದೆ. ಜಾಗ ಹಾಗೂ ಸಮಯವನ್ನು ನೋಡಿ ವ್ಯವಹಾರ ಮಾಡುವುದು ಸೂಕ್ತ.

ಮಿಥುನ: ಮನೆ ನೋಂದಣಿಗೆ ಸಂಬಂಧಪಟ್ಟ ಕಾರ್ಯವು ಮುನ್ನಡೆ ಕಾಣಲಿದೆ. ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವ ಲಕ್ಷಣವಿದೆ.

ಕರ್ಕಾಟಕ: ಸದ್ಯದ ಪರಿಸ್ಥಿತಿಯಲ್ಲಿ ಮನಸ್ಸನ್ನು ಚಂಚಲಗೊಳಿಸುವ ಸಕಲ ವ್ಯವಸ್ಥೆಗಳಿದ್ದರೂ ಗುರಿಯ ಮೇಲೆ ಮಾತ್ರ ಗಮನ ಹರಿಸಿ. ಹಣ ಸಂಪಾದನೆಯಲ್ಲಿ ತೃಪ್ತಿ ಮುಖ್ಯ.

ಸಿಂಹ: ದೀರ್ಘಕಾಲೀನ ಅನಾರೋಗ್ಯಕ್ಕೆ ಸ್ನೇಹಿತರ ಸಲಹೆಯಂತೆ ನಾಟಿ ಔಷಧಿಯ ಮೊರೆ ಹೋಗುವಿರಿ. ಪ್ರಾಣಿ ಪಕ್ಷಿಗಳ ಸಾಕಣೆ ಹಾಗೂ ಸಾಗಣೆದಾರರಿಗೆ ಅಧಿಕ ಲಾಭ ಉಂಟಾಗಲಿದೆ.

ಕನ್ಯಾ: ಎಂದೋ ಆಡಿದ ಮಾತಿನಿಂದಾಗಿ ಅದೇ ರೀತಿಯ ಚುಚ್ಚು ಮಾತುಗಳನ್ನು ಕೇಳಬೇಕಾಗುವುದು. ಉದ್ದಿಮೆಗಾಗಿ ಹೆಚ್ಚಿನ ಬಂಡವಾಳ ಹೂಡಲು ಪ್ರಯಾಣ ಬೆಳೆಸಬೇಕಾಗುತ್ತದೆ.

ತುಲಾ: ಉತ್ತಮ ಆಹಾರ ಸೇವನೆಯಿಂದ ಆರೋಗ್ಯ ಸಂಪಾದಿಸಬಹುದು. ಸಾತ್ವಿಕ ನಡತೆಯಿಂದ ಜನಪ್ರಿಯತೆ ಗಳಿಸುವಿರಿ. ಪ್ರಯತ್ನಬಲದಿಂದ ಹಣದ ಹರಿವು ಸುಗಮವಾಗಲಿದೆ.

ವೃಶ್ಚಿಕ: ಮಿತ್ರವರ್ಗದ ವ್ಯಾಪ್ತಿ ಹೆಚ್ಚಿಸಿಕೊಳ್ಳಲು ಅವಕಾಶಗಳು ಸಿಗಲಿವೆ. ಇದು ದೀರ್ಘಕಾಲದ ಲಾಭ ತಂದುಕೊಡಲಿದೆ. ವಿದ್ಯಾರ್ಥಿಗಳು ಓದಿನಲ್ಲಿ ಗಮನಹರಿಸಬೇಕಾಗುವುದು.

ಧನು: ಸಂಸಾರದಲ್ಲಿ ಉತ್ತಮ ಅಭಿವೃದ್ಧಿಯಿಂದ ಸಂತೋಷ ಹಾಗೂ ನೆಮ್ಮದಿ ಇರಲಿದೆ. ಸಂಘ ಸಂಸ್ಥೆಗಳಿಂದ ಮನ್ನಣೆ ಹಾಗೂ ಸನ್ಮಾನ ಸಿಗಲಿದೆ. ಸಂಸ್ಥೆಗಳ ಷೇರು ಬಂಡವಾಳದಲ್ಲಿ ಲಾಭ ಸಿಗಲಿದೆ.

ಮಕರ: ಮನಸ್ಸಿನಲ್ಲಿ ಆಗುತ್ತಿರುವ ತಳಮಳಗಳಿಗೆ ಪರಿಹಾರ ಸಿಗಲಿದೆ. ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವ ಪ್ರಯತ್ನ ಮಾಡಿರಿ.

ಕುಂಭ: ಕುಟುಂಬದ ಸದಸ್ಯರೊಂದಿಗೆ ಸಂತಸದಿಂದ ಕಾಲ ಕಳೆಯುವಿರಿ. ಸುಮ್ಮನೆ ಮಕ್ಕಳ ಮೇಲೆ ಸಿಟ್ಟುಕೊಳ್ಳಬೇಡಿ. ಇತರರ ಕಷ್ಟ-ಸುಖಗಳಿಗೆ ನೆರವಾಗುವ ಮನೋಭಾವವನ್ನು ಬೆಳೆಸಿಕೊಳ್ಳಿರಿ.

ಮೀನ: ಗುಂಪು ಚಟುವಟಿಕೆಗಳಿಗೆ ಮುಂದಾಳತ್ವ ಅಗತ್ಯವಾಗಿರುವುದು. ಪಾಲುದಾರರ ಮಾತಿನಲ್ಲಿ ವಿಶ್ವಾಸವಿಡಬಹುದು. ಆಸ್ತಿ ಖರೀದಿಯ ವಿಚಾರದಲ್ಲಿ ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ.

ಗುಂಡಣ್ಣ

ಎಸ್ಕಾಂ: ಉದ್ಯೋಗ ಕಳೆದುಕೊಳ್ಳುವ ಭೀತಿ

ವಿದ್ಯುತ್ ವಿತರಣೆ ಖಾಸಗೀಕರಣ • ಟಾಟಾ ಕಂಪನಿಗೆ ಪರವಾನಗಿ ನೀಡುವುದಕ್ಕೆ ತೀವ್ರ ವಿರೋಧ

• ಎ.ಎಂ.ಸುರೇಶ

ಬೆಂಗಳೂರು: ರಾಜ್ಯದಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗಿಕರಣ ಗೊಳಿಸಿದರೆ ಎಸ್ಕಾಂಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 50 ಸಾವಿರಕ್ಕೂ ಅಧಿಕ ಸಿಬ್ಬಂದಿಯ ಸೇವಾ ಭದ್ರತೆ, ಪಿಂಚಣಿಗೆ ತೊಂದರೆಯಾಗಲಿದೆ. ಅಲ್ಲದೆ ಖಾಲಿ ಇರುವ ಹುದ್ದೆಗಳೂ ರದ್ದಾಗಲಿದ್ದು, ಯುವಕರಿಗೆ ಸರ್ಕಾರಿ ಉದ್ಯೋಗಾವಕಾಶ ಇಲ್ಲದಂತಾಗಲಿದೆ ಎಂಬ ಆತಂಕ ವ್ಯಕ್ತವಾಗಿದೆ.

'ಎಸ್ಕಾಂಗಳ ವ್ಯಾಪ್ತಿಯಲ್ಲಿ ಬರುವ 19 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಯ ಪರವಾನಗಿ ನೀಡುವಂತೆ ಕೋರಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈಗಾಗಲೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಅರ್ಜಿ ಸಲ್ಲಿಸಿದೆ. ಆಯೋಗವು ಇದಕ್ಕೆ ಒಪ್ಪಿಗೆ ನೀಡಿದರೆ ನಮ್ಮ ಉದ್ಯೋಗಕ್ಕೆ ಕುತ್ತು ಬರಲಿದೆ' ಎಂಬ ಭೀತಿಯಲ್ಲಿ ನೌಕರರು ಇದ್ದಾರೆ.

ಕಂಪನಿ ಹೆಸರು	ಒಟ್ಟು ಹುದ್ದೆಗಳು	ಹಾಲಿ ಸಿಬ್ಬಂದಿ
ಬೆಸ್ಕಾಂ	24,600	13,945
ಮೆಸ್ಕಾಂ	9,220	5,261
ಹೆಸ್ಕಾಂ	16,896	10,382
ಜೆಸ್ಕಾಂ	10,115	7,285
ಚೆಸ್ಕಾಂ	10,402	6,429
ಕೆಪಿಟಿಸಿಎಲ್	16,301	9,726
ಒಟ್ಟು	87,534	53,028

'ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ಹಾಗೂ ಐದು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ 87,534. ಈ ಪೈಕಿ 34,506 ಹುದ್ದೆಗಳು ಖಾಲಿ ಇದ್ದು, 53,028 ಉದ್ಯೋಗಿಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ. ಒಂದು ವೇಳೆ ವಿದ್ಯುತ್ ವಿತರಣೆಯ ಪರವಾನಗಿಯನ್ನು ಖಾಸಗಿಯವರಿಗೆ ನೀಡಿದರೆ ನೌಕರರ ಭವಿಷ್ಯ ಅತಂತ್ರ ವಾಗಲಿದೆ' ಎಂದು ಕ.ವಿ.ಮಂ. ನೌಕರರ ಸಂಘಗಳ ಒಕ್ಕೂಟದ ಅಧ್ಯಕ್ಷ ಕೆ.ಬಲರಾಮ್ 'ಪ್ರಜಾವಾಣಿ'ಗೆ ತಿಳಿಸಿದರು.

> **1902ರಿಂದ ಮೂಲಸೌಕರ್ಯ ಕಲ್ಪಿಸಲು ಸರ್ಕಾರ ಕೋಟ್ಯಂತರ ರೂಪಾಯಿ ವ್ಯಯಿಸಿದೆ. ಅದೆಲ್ಲವನ್ನೂ ಖಾಸಗಿಯವರಿಗೆ ನೀಡಿ, ಎಸ್ಕಾಂಗಳಲ್ಲಿ ಇರುವ ನೌಕರರನ್ನು ಅತಂತ್ರಗೊಳಿಸುವುದು ಸಲ್ಲ.**
> **ಕೆ.ಬಲರಾಮ್,** ಅಧ್ಯಕ್ಷರು, ಕ.ವಿ.ಮಂ. ನೌಕರರ ಸಂಘಗಳ ಒಕ್ಕೂಟ

ಲಖನೌದಲ್ಲಿ ಹಿಂದೆ ಮಹಾನಗರ ಟೆಲಿಫೋನ್ ನಿಗಮ ಲಿಮಿಟೆಡ್ (ಎಂಟಿಎನ್‌ಎಲ್) ಅನ್ನು ಖಾಸಗಿಕರಣಗೊಳಿಸಿದಾಗ, ಅಲ್ಲಿದ್ದ ಎಲ್ಲ ಸಿಬ್ಬಂದಿಯನ್ನು ಖಾಸಗಿಯವರು ಮುಂದುವರಿಸಲಿಲ್ಲ. ಖಾಸಗಿಕರಣಗೊಳಿಸಿದಾಗ, ಹಾಲಿ ಇರುವ ಸಿಬ್ಬಂದಿಯ ಸಾಮರ್ಥ್ಯ, ಸೇವೆಯಲ್ಲಿ ಮುಂದುವರಿಸುವ ಅಗತ್ಯತೆ ಇತ್ಯಾದಿಯನ್ನು ಗಮನಿಸಲಾಗುತ್ತದೆ. ಇದಕ್ಕೆ ಮಾನದಂಡ ನಿಗದಿಪಡಿಸಲಾಗುತ್ತದೆ. ಆ ಮಾನದಂಡದ ವ್ಯಾಪ್ತಿಯಲ್ಲಿ ಬಾರದವರು ಕೆಲಸ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ಕೆಪಿಟಿಸಿಎಲ್‌ನ ನಿವೃತ್ತ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಎಸ್ಕಾಂಗಳಲ್ಲಿ ಈಗಿರುವ ಸಿಬ್ಬಂದಿಗೆ ಪರೀಕ್ಷೆ ನಡೆಸಿ, ಅವರ ಸಾಮರ್ಥ್ಯ ತೃಪ್ತಿಕರವಾಗಿದೆ ಎನಿಸಿದರೆ ಖಾಸಗಿಯವರು ನೇಮಕ ಮಾಡಿಕೊಳ್ಳಬಹುದು. ಇಲ್ಲವೇ ಅವರಿಗೆ ಬೇಕಾದ ಹೊರಗಿನವರನ್ನು ನೇಮಕ ಮಾಡಿಕೊಳ್ಳಬಹುದು. ಹೀಗಾಗಿ ಈಗಿರುವ ಸಿಬ್ಬಂದಿಗೆ ಸೇವಾ ಭದ್ರತೆಯ ಆತಂಕವಂತೂ ಇದ್ದೇ ಇದೆ' ಎಂದರು.

ಸ್ಥಾನಪಲ್ಲಟ: ಟಾಟಾದವರು 19 ಜಿಲ್ಲೆಗಳಲ್ಲಿ ಪರವಾನಗಿ ಕೇಳಿದ್ದು ಇದಕ್ಕೆ ಒಪ್ಪಿಗೆ ದೊರೆತರೆ ಎಸ್ಕಾಂಗಳಲ್ಲಿ ಈಗಿರುವ ಸಿಬ್ಬಂದಿ ಕೆಲಸ ಕಳೆದುಕೊಳ್ಳಬಹುದು ಅಥವಾ ಬೇರೆ ಕಡೆಗೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು. ಪರವಾನಗಿ ನೀಡಿದ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಕಡೆ ಖಾಲಿ ಇರುವ ಹುದ್ದೆಗಳಿಗೆ ವರ್ಗಾವಣೆ ಮಾಡಬಹುದು. ಆಗ ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ಹೋಗಬೇಕಾಗುತ್ತದೆ.

ಪರವಾನಗಿ ನೀಡಿದ ಬಳಿಕ ಉಳಿಯುವ 12 ಜಿಲ್ಲೆಗಳಲ್ಲಿ ಈಗಿರುವ ಎಲ್ಲ ಉದ್ಯೋಗಿಗಳಿಗೂ ಪರ್ಯಾಯ ವ್ಯವಸ್ಥೆ ಮಾಡಲು ಆಗುವುದಿಲ್ಲ. ಒಂದು ವೇಳೆ ಸರ್ಕಾರ ಮನಸ್ಸು ಮಾಡಿದರೆ, ಕೆಲವರನ್ನು ಅಷ್ಟೇ ಸೇವೆಯಲ್ಲಿ ಉಳಿಸಿಕೊಳ್ಳಬಹುದು. ಎಸ್ಕಾಂಗಳು ಈಗಾಗಲೇ ನಷ್ಟದಲ್ಲಿ ಇರುವುದರಿಂದ ಎಲ್ಲ ಸಿಬ್ಬಂದಿಗೂ ಸೇವಾ ಭದ್ರತೆ ಒದಗಿಸುವುದು ಅಸಾಧ್ಯ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ವಿರೋಧ: ಕರ್ನಾಟಕ ವಿದ್ಯುತ್ ಬಳಕೆದಾರರ ಒಕ್ಕೂಟ, ಕರ್ನಾಟಕ ವಿದ್ಯುತ್ ಮಂಡಳಿ ನೌಕರರ ಸಂಘಗಳ ಒಕ್ಕೂಟ, ವಿವಿಧ ರೈತ ಸಂಘಟನೆಗಳು, ಸಂಘ ಸಂಸ್ಥೆಗಳು ಈಗಾಗಲೇ ಕೆಇಆರ್‌ಸಿಗೆ ಆಕ್ಷೇಪಣೆ ಸಲ್ಲಿಸಿದ್ದು, ಟಾಟಾ ಕಂಪನಿಗೆ ಪರವಾನಗಿ ನೀಡಬಾರದು. ಈ ಸಂಬಂಧ ಸಲ್ಲಿಸಿರುವ ಪ್ರಸ್ತಾವನೆಯನ್ನು ತಿರಸ್ಕರಿಸಬೇಕು ಎಂದು ಒತ್ತಾಯಿಸಲಾಗಿದೆ.

ಖಾಸಗಿಯವರು ಲಾಭದ ಉದ್ದೇಶ ಇಟ್ಟುಕೊಂಡು ಕಾರ್ಯನಿರ್ವಹಿಸುತ್ತಾರೆ. ಬಹುಪಾಲು ಆದಾಯ ಖಾಸಗಿಯವರಿಗೆ ಹೋಗುವುದರಿಂದ ಮುಂದೆ ಸಬ್ಸಿಡಿ ಯೋಜನೆಗಳಿಗೆ ಅನುದಾನ ನೀಡುವುದು ಕಷ್ಟವಾಗಲಿದೆ. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ಗೃಹ ಜ್ಯೋತಿ, ಕುಟೀರ ಜ್ಯೋತಿ, ಭಾಗ್ಯ ಜ್ಯೋತಿ ಇತ್ಯಾದಿ ಯೋಜನೆಗಳು ಸ್ಥಗಿತವಾಗಬಹುದು ಎಂದು ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.

ಸುದ್ದಿ 2 ನಿಮಿಷ

'ಮೀಸಲು: ಸರ್ವಪಕ್ಷ ಸಭೆ ಕರೆಯಲಿ'

ಬಾಗಲಕೋಟೆ: 'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು. ಈ ಬಗ್ಗೆ ಚರ್ಚಿಸಲು ಸರ್ವ ಪಕ್ಷ ಸಭೆ ಕರೆಯಬೇಕು ಹಾಗೂ ಸರ್ವ ಪಕ್ಷ ನಿಯೋಗವನ್ನು ಪ್ರಧಾನಿ ಬಳಿ ತೆಗೆದುಕೊಂಡು ಹೋಗಬೇಕು' ಎಂದು ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ವಿ.ಎಸ್.ಉಗ್ರಪ್ಪ ಆಗ್ರಹಿಸಿದರು.

'ಮೀಸಲಾತಿ ಸಂಬಂಧ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ತೆರವಿಗೆ ರಾಜ್ಯ ಸರ್ಕಾರ ಮುಂದಾಗಬೇಕು. ತಡೆಯಾಜ್ಞೆ ತೆರವಾಗದಿದ್ದರೆ, ಸುಪ್ರೀಂ ಕೋರ್ಟ್‌ಗೆ ವಿಶೇಷ ಅರ್ಜಿ ಸಲ್ಲಿಸಬೇಕು' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

'ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಕಾನೂನನ್ನು ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರಿಸಿದರೆ ಮಾತ್ರ ಸಾಮಾಜಿಕ ನ್ಯಾಯ ದೊರೆಯುತ್ತದೆ. ಜನಪ್ರತಿನಿಧಿಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುವ ಕೆಲಸ ಮಾಡಬೇಕು' ಎಂದು ಆಗ್ರಹಿಸಿದರು.

'ರಾಜ್ಯದಲ್ಲಿ 3 ಲಕ್ಷಕ್ಕೂ ಹೆಚ್ಚು ಜನ ಸುಳ್ಳು ಜಾತಿ ಪ್ರಮಾಣಪತ್ರ ಪಡೆದಿದ್ದಾರೆ. ಸುಳ್ಳು ಪ್ರಮಾಣಪತ್ರ ಪಡೆದವರು ಹಾಗೂ ಅದನ್ನು ನೀಡಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿದರು.

ಅಂಬೇಡ್ಕರ್ ಫೋಟೊಕ್ಕೆ ಅವಮಾನ: ಬಿಗುವಿನ ಪರಿಸ್ಥಿತಿ

ಯಳಂದೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಮಸಣಾಪುರ ಗ್ರಾಮದಲ್ಲಿ ಭಾನುವಾರ ನಸುಕಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಫೋಟೊಗೆ ಸಗಣಿ ಎರಚಿ ಅವಮಾನಿಸಲಾಗಿದ್ದು, ವಿದ್ಯುತ್ ದೀಪಗಳನ್ನು ವಿರೂಪಗೊಳಿಸಲಾಗಿದೆ.

ಆರೋಪಿಯನ್ನು ಅದೇ ಗ್ರಾಮದ ಚಂದ್ರು ಎಂದು ಗುರುತಿಸಲಾಗಿದ್ದು, ಸ್ಥಳದಲ್ಲಿಯೇ ಗ್ರಾಮಸ್ಥರ ಕೈಗೆ ಸಿಕ್ಕಿಬಿದ್ದಿದ್ದಾನೆ. ಸಮುದಾಯದವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಆತನನ್ನು ಸ್ಥಳೀಯರು ಕಂಬಕ್ಕೆ ಕಟ್ಟಿ, ರಸ್ತೆ ಬಂದ್ ಮಾಡಿ ಪ್ರತಿಭಟಿಸಿದರು. ಗಡೀಪಾರು ಮಾಡುವಂತೆ ಆಗ್ರಹಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಎಸ್‌ಪಿ ಎಂ.ಮುತ್ತುರಾಜು, 'ಆರೋಪಿಯನ್ನು ವಶಕ್ಕೆ ಪಡೆದಿದ್ದೇವೆ' ಎಂದು ತಿಳಿಸಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ ಭೇಟಿ ನೀಡಿ ಶಾಂತಿ ಕಾಪಾಡುವಂತೆ ಜನರನ್ನು ಕೋರಿದರು. ಗ್ರಾಮದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

'ವಿಕಸಿತ ಭಾರತಕ್ಕಾಗಿ ಸಂಕಲ್ಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2047ರ ವೇಳೆಗೆ ವಿಕಸಿತ ಭಾರತವನ್ನು ಸಾಧಿಸಲು ನಾವೆಲ್ಲಾ ಸಂಕಲ್ಪ ತೊಡಬೇಕು' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿದರು.

ನಿರ್ಮಲಾ ಸೀತಾರಾಮನ್

ಪ್ರಧಾನಿ ನರೇಂದ್ರ ಮೋದಿ ಅವರು 12 ವರ್ಷಗಳ ಅಧಿಕಾರಾವಧಿ ಪೂರೈಸಿದ ಸಲುವಾಗಿ ನಗರದಲ್ಲಿ ಭಾನುವಾರ 'ವಿಕಸಿತ ಭಾರತ ಸಂಕಲ್ಪ ಸಮಾವೇಶ' ಆಯೋಜಿಸಲಾಗಿತ್ತು. ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಮೋದಿ ಅವರ 12 ವರ್ಷಗಳ ಆಡಳಿತವು ದೇಶದ ಪ್ರಗತಿಯಲ್ಲಿ ಮಹತ್ವದ ಪಾತ್ರವಹಿಸಿದೆ. ಎಲ್ಲ ಕ್ಷೇತ್ರಗಳಲ್ಲೂ ಭಾರತವು ಗಣನೀಯ ಬೆಳವಣಿಗೆ ದಾಖಲಿಸುತ್ತಿದೆ. ಅಭಿವೃದ್ಧಿಯಲ್ಲಿ ಇದೇ ಗತಿಯನ್ನು ಕಾಯ್ದುಕೊಂಡರೆ ವಿಕಸಿತ ಭಾರತದ ಕನಸು ನನಸಾಗುತ್ತದೆ' ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ.ಮೋಹನ್, ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಕೆ. ರಾಮಮೂರ್ತಿ ಭಾಗಿಯಾಗಿದ್ದರು.

ಸಮಾವೇಶಕ್ಕೂ ಮುನ್ನ ರಾಜ್ಯ ಬಿಜೆಪಿ ನಾಯಕರು ನಗರದ ಮೈಸೂರು ಬ್ಯಾಂಕ್ ವೃತ್ತಕ್ಕೆ ತೆರಳಿ, ಅಲ್ಲಿನ ಆಂಜನೇಯಸ್ವಾಮಿ ದೇವಾಲಯದ ಬಳಿ ಸ್ವಚ್ಛತಾ ಕಾರ್ಯ ನಡೆಸಿದರು. ನಿರ್ಮಲಾ ಸೀತಾರಾಮನ್, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಎಸ್.ಸುರೇಶ್‌ಕುಮಾರ್ ಪೊರಕೆ ಹಿಡಿದು, ದೇವಾಲಯದ ಎದುರಿನ ರಸ್ತೆಯಲ್ಲಿನ ಕಸ ಗುಡಿಸಿದರು.

ನಂತರ ನಿರ್ಮಲಾ ಅವರು, ಬೀದಿಬದಿ ವ್ಯಾಪಾರಿಗಳ ಜತೆ ಮಾತುಕತೆ ನಡೆಸಿದರು. ಅವರಿಂದ ಮನವಿ ಪತ್ರಗಳನ್ನು ಸ್ವೀಕರಿಸಿದರು. ಬೀದಿಬದಿ ವ್ಯಾಪಾರಿಗಳಿಗೆ ಸುಲಭವಾಗಿ ಸಾಲ ದೊರೆಯುವಂತೆ ಮಾಡಿ ಎಂದು ರಾಜ್ಯ ಬಿಜೆಪಿ ನಾಯಕರಿಗೆ ಸೂಚಿಸಿದರು.

ವರದಕ್ಷಿಣೆ ನಿಷೇಧ; ಮುಖಂಡರ ಪ್ರತಿಜ್ಞೆ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಯಾವುದೇ ತಾಂಡಾದಲ್ಲಿ ವರದಕ್ಷಿಣೆ ತೆಗೆದುಕೊಳ್ಳದೆ, ಸರಳವಾಗಿ ಮದುವೆ ಮಾಡಬೇಕು ಎಂದು ಪಟ್ಟಣದಲ್ಲಿ ಅಖಿಲ ಭಾರತ ಬಂಜಾರ ಸೇವಾ ಸಂಘ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 'ವರದಕ್ಷಿಣೆ ಪಿಡುಗು ನಿರ್ಮೂಲನೆ ಸಭೆ'ಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಬಂಜಾರಾ ಸಮಾಜದ ಗುರು ಸೋಮಲಿಂಗ ಮಹಾರಾಜ ಕೆಸರಟ್ಟಿ ಅವರ ಸಾನ್ನಿಧ್ಯದಲ್ಲಿ ನಡೆದ ಸಭೆಯಲ್ಲಿ, ತಾಲ್ಲೂಕಿನ 22 ತಾಂಡಾಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು.

'ಬಂಜಾರಾ ಸಮಾಜದ ಮದುವೆ, ಜಾತ್ರೆ ಕಾರ್ಯಕ್ರಮಗಳಲ್ಲಿ ದುಂದುವೆಚ್ಚಕ್ಕೆ ಕಡಿವಾಣ ಹಾಕಬೇಕು. ವರದಕ್ಷಿಣೆ ಕೊಡುವುದು ಅಥವಾ ತೆಗೆದುಕೊಳ್ಳುವುದನ್ನು ಮಾಡಬಾರದು, ಡಿಜೆ ಬಳಸಬಾರದು, ಮದ್ಯ ನಿಷೇಧಿಸಬೇಕು ಎಂದು ಪ್ರತಿಜ್ಞೆ ಮಾಡಲಾಗಿದೆ. ಸಮಾಜದ ಮುಖಂಡರು, ಕಾರಬಾರಿಗಳು ಇದಕ್ಕೆ ಒಪ್ಪಿಗೆ ನೀಡಿದ್ದಾರೆ' ಎಂದು ಸೋಮಲಿಂಗ ಮಹಾರಾಜ ಕೆಸರಟ್ಟಿ ಹೇಳಿದರು.

'ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುವುದು. ವರದಕ್ಷಿಣೆ ಪಿಡುಗು ನಿರ್ಮೂಲನೆ, ಮದ್ಯಪಾನದಿಂದಗುವ ದುಷ್ಪರಿಣಾಮಗಳ ಕುರಿತು ತಾಂಡಾಗಳಲ್ಲಿ ಸಮಾಜದಿಂದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು' ಎಂದರು.

'ಬಂಜಾರಾ ಸಂಸ್ಕೃತಿ, ಸಂಪ್ರದಾಯ, ಪರಂಪರೆ ವಿಶಿಷ್ಟವಾದದ್ದು. ಸಮಾಜದವರು ಇತ್ತೀಚಿನ ದಿನಗಳಲ್ಲಿ ಮತಾಂತರ ಆಗುತ್ತಿರುವುದು ನೋವಿನ ಸಂಗತಿ. ಮತಾಂತರವಾಗದೆ ನಮ್ಮ ಸಂಸ್ಕೃತಿ ಉಳಿಸಬೇಕು' ಎಂದು ಹೇಳಿದರು.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಬಂಜಾರಾ ಸಮಾಜದ ಮುಖಂಡರು ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ ಮತ್ತು ಕೊಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು

ಬಣ್ಣದ ಕೊಕ್ಕರೆ

ಪ್ರಜಾವಾಣಿ ಚಿತ್ರ: ಸಿ.ಶಿವಾನಂದ

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿರುವ ಅಂಕಸಮುದ್ರ ಪಕ್ಷಿಧಾಮದಲ್ಲಿ ಬಣ್ಣದ ಕೊಕ್ಕರೆಯೊಂದು (ಪೇಂಟೆಂಡ್ ಸ್ಟಾರ್ಕ್) ತನ್ನ ಮರಿಗಳಿಗೆ ತುತ್ತು ನೀಡಿದ ದೃಶ್ಯ ಕ್ಯಾಮೆರಾ ಕಣ್ಣಿನಲ್ಲಿ ಸೆರೆಯಾಯಿತು

ಬಿಡದಿ ಟೌನ್‌ಶಿಪ್ ಜಟಾಪಟಿ

'ಭೂಸ್ವಾಧೀನ ಕೈಬಿಡಲು ಸೂಚಿಸಿ':
ಒಂದನೇ ಪುಟದಿಂದ...

'ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿಯಲ್ಲಿ ಫಲವತ್ತಾದ ಭೂಮಿಯನ್ನು ಕಳೆದುಕೊಂಡು ಕಣ್ಣೀರು ಹಾಕುತ್ತಿರುವ ಸಾವಿರಾರು ಶೋಷಿತ ಸಮುದಾಯ ಮತ್ತು ರೈತ ಕುಟುಂಬಗಳ ದನಿಯಾಗಿ ಕೆಲವು ವಿಷಯಗಳನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ' ಎಂದಿದ್ದಾರೆ.

'ನೀವು, ದೇಶದಾದ್ಯಂತ ರೈತರ ಭೂಮಿ ಉಳಿಸುವ ಮತ್ತು ಕಾರ್ಪೊರೇಟ್ ಕಪಿಮುಷ್ಠಿಯಿಂದ ದೇಶವನ್ನು ರಕ್ಷಿಸುವ ಹೆಸರಿನಲ್ಲಿ ಘೋಷಣೆ ಕೂಗುತ್ತೀರಿ. ಯಾತ್ರೆಯನ್ನೂ ನಡೆಸುತ್ತೀರಿ. ಆದರೆ, ನಿಮ್ಮದೇ ಕಾಂಗ್ರೆಸ್ ಸರ್ಕಾರವಿರುವ ಕರ್ನಾಟಕದಲ್ಲಿ ಮುಖ್ಯಮಂತ್ರಿಯು ನಾಡಿನ ಅನ್ನದಾತರ ಹಿತ ನಿರ್ಲಕ್ಷಿಸುತ್ತಿರುವುದು ನಿಮ್ಮ ಗಮನಕ್ಕೆ ಬಂದಿದೆ ಎಂದು ಭಾವಿಸುತ್ತೇನೆ' ಎಂದು ಪತ್ರದಲ್ಲಿ ಬರೆದಿದ್ದಾರೆ.

'ಬೆಂಗಳೂರು ನಗರದ ಜನಸಂದಣಿ ಮತ್ತು ವಾಹನದಟ್ಟನೆ ಕಡಿಮೆ ಮಾಡುವ ಉದ್ದೇಶದಿಂದ ಬಿಡದಿ -ಹಾರೋಹಳ್ಳಿ ವ್ಯಾಪ್ತಿಯಲ್ಲಿ, 7,481 ಎಕರೆಯಲ್ಲಿ 'ವರ್ಕ್–ಲಿವ್–ಪ್ಲೇ' ಮಾದರಿಯ ಬೃಹತ್ ಉಪನಗರ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ. ಅಂದಾಜು ₹18,000 ಕೋಟಿ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗುತ್ತಿದೆ. ಇಂತಹ ಯೋಜನೆಗೆ ಫಲವತ್ತಾದ ಕೃಷಿ ಭೂಮಿಯೇ ಏಕೆ ಬೇಕು' ಎಂದು ಪ್ರಶ್ನಿಸಿದ್ದಾರೆ.

'ಬಿಡದಿಯ 25 ಹಳ್ಳಿಗಳ ರೈತರು 470 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. 3,500ಕ್ಕೂ ಹೆಚ್ಚು ರೈತರು ಲಿಖಿತ ಆಕ್ಷೇಪ ದಾಖಲಿಸಿದ್ದಾರೆ. ಹೀಗಿದ್ದೂ, ನಿಮ್ಮ ಪಕ್ಷದ ಸರ್ಕಾರದ ಮುಖ್ಯಮಂತ್ರಿಯು ರೈತರ ಜತೆಗೆ ಒಂದೂ ಸಭೆ ನಡೆಸಿಲ್ಲ. ಬದಲಿಗೆ ಅವರ ಪ್ರತಿರೋಧವನ್ನು ಬದಿಗೊತ್ತಿ, ಭೂಸ್ವಾಧೀನದ ಅಧಿಸೂಚನೆ ಹೊರಡಿಸಿದ್ದಾರೆ' ಎಂದು ಅವರು ವಿವರಿಸಿದ್ದಾರೆ.

> **ಪ್ರಧಾನಿ ನರೇಂದ್ರ ಮೋದಿ ಅವರು ಬರಡು ನೆಲದಲ್ಲಿ 7–8 ಟೌನ್‌ಶಿಪ್‌ಗಳನ್ನು ಮಾಡಿದ್ದರು. ಫಲವತ್ತಾದ ಭೂಮಿ ಬಳಸಿಕೊಂಡಿರಲಿಲ್ಲ. ಬಿಡದಿ ಟೌನ್‌ಶಿಪ್ ವಿರುದ್ಧ ಕಾನೂನು ಹೋರಾಟಕ್ಕೆ ಸಿದ್ಧತೆ ನಡೆಯುತ್ತಿದೆ**
> **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಬೃಹತ್ ಕೈಗಾರಿಕಾ ಸಚಿವ

'ಸ್ವಾಧೀನಕ್ಕೆ ಗುರುತಿಸಲಾಗಿರುವ ಈ ಭೂಮಿ ಬಂಜರಲ್ಲ. ಬೆಂಗಳೂರು ನಗರಕ್ಕೆ ಪ್ರತಿದಿನ ಹಾಲು, ತರಕಾರಿ ಮತ್ತು ಹಣ್ಣು ಪೂರೈಸುವ, ತೆಂಗು, ಅಡಿಕೆ ಮತ್ತು ಬಾಳೆ ಬೆಳೆಯುವ ಅತ್ಯಂತ ಫಲವತ್ತಾದ ಭೂಮಿ. ಸಾವಿರಾರು ಗ್ರಾಮೀಣ ಮಹಿಳೆಯರು ಈ ಕೃಷಿ ಮತ್ತು ಸ್ಥಳೀಯ ಅಡಿಕೆ ತಟ್ಟೆ ತಯಾರಿಕಾ ಘಟಕಗಳನ್ನು ನಂಬಿ ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ. ಯೋಜನೆ ವ್ಯಾಪ್ತಿಯಲ್ಲಿಯೇ 1,000 ಎಕರೆಯಷ್ಟು ವಿಸ್ತಾರವಾದ ಬೈರಮಂಗಲ ಕೆರೆ ಇದೆ. ಇಂತಹ ಫಲವತ್ತಾದ ಪ್ರದೇಶವನ್ನು ಕಾಂಕ್ರೀಟ್ ಕಾಡಾಗಿಸುವ ಅಗತ್ಯವೇನಿದೆ' ಎಂದು ಪ್ರಶ್ನಿಸಿದ್ದಾರೆ.

'ಭೂಮಿ ಕಳೆದುಕೊಂಡ ರೈತರು ಅತಂತ್ರರಾಗಿ ಕಾರ್ಪೊರೇಟ್ ವಲಯದ ಅಸಂಘಟಿತ ನೌಕರರಾಗಿ ಬದುಕುವಂತಾಗುತ್ತದೆ. ಮಾರ್ಗಸೂಚಿ ದರಕ್ಕಿಂತ ಕಡಿಮೆ ಪರಿಹಾರ ನೀಡಿ ರೈತರ ಭೂಮಿಯನ್ನು ಕಸಿದುಕೊಳ್ಳಲಾಗುತ್ತಿದೆ. ರಿಯಲ್ ಎಸ್ಟೇಟ್ ಉದ್ಯಮಿಗಳ ಹಿತಾಸಕ್ತಿ ಕಾಯುವ ಈ ಯೋಜನೆ ನ್ಯಾಯಬದ್ಧ ಎಂದು ನಿಮಗೆ ಅನಿಸುತ್ತದೆಯೇ? ಯೋಜನೆ ಸಂಬಂಧಿತ ವಾಸ್ತಾಂಶಗಳನ್ನು ನಿಮ್ಮ ಮುಂದೆ ಇರಿಸಿದ್ದೇನೆ. ಈ ಬಗ್ಗೆ ನಿಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ರೈತರ ಪರವಾಗಿ ನೀವು ಸ್ಪಂದಿಸುವಿರಿ ಎಂಬ ನಂಬಿಕೆ ಇದೆ' ಎಂದಿದ್ದಾರೆ.

ಡಿಕೆಶಿ ಆಸ್ತಿ ₹1,400 ಕೋಟಿ ಹೇಗಾಯ್ತು?: ಎಚ್.ಡಿ.ಕುಮಾರಸ್ವಾಮಿ

ಒಂದನೇ ಪುಟದಿಂದ...

'ಬಿಡದಿ ಟೌನ್‌ಶಿಪ್‌ಗೆ ಪ್ರಧಾನಿ ನರೇಂದ್ರ ಮೋದಿ 'ಗ್ರೀನ್ ಸಿಗ್ನಲ್' ಕೊಟ್ಟಿದ್ದಾರೆಯೋ, ಇಲ್ಲವೋ ಗೊತ್ತಿಲ್ಲ. ಮೋದಿ ಅವರು ಗುಜರಾತ್‌ನಲ್ಲಿ ಬರಡು ಭೂಮಿಯಲ್ಲಿ ಟೌನ್‌ಶಿಪ್ ಮಾಡಿದ್ದಾರೆ. ಡಿಕೆಶಿ ಅವರು ಮಾಡುತ್ತಿರುವ ಟೌನ್‌ಶಿಪ್ ಜಾಗದಲ್ಲಿ ಲಕ್ಷಾಂತರ ತೆಂಗು, ಅಡಿಕೆ ಬೆಳೆ ಇದೆ. ಉಪಯೋಗಕ್ಕೆ ಬಾರದ ಜಾಗದಲ್ಲಿ ಟೌನ್‌ಶಿಪ್ ಮಾಡಿದರೆ ನನ್ನ ಅಭ್ಯಂತರವಿಲ್ಲ' ಎಂದರು.

'ಹಿಂದೆ ಬಿಎಂಐಸಿಪಿ ಎಂಬ ಪ್ರಾಧಿಕಾರ ರಚಿಸಿ, ಅದಕ್ಕೆ ಡಿಕೆಶಿ ಅಧ್ಯಕ್ಷರಾಗಿದ್ದರು. ಬೆಂಗಳೂರು- ಮೈಸೂರು ರಸ್ತೆಯಲ್ಲಿ 1.75 ಲಕ್ಷ ಎಕರೆ ಭೂಮಿಯನ್ನು ರಸ್ತೆ ಮತ್ತು ಟೌನ್‌ಶಿಪ್ ಮಾಡಲು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿದ್ದರು. ಕಳೆದ 30 ವರ್ಷಗಳಲ್ಲಿ ಆ ಯೋಜನೆ ಏನಾಯಿತು?' ಎಂದು ಕೇಳಿದರು.

'ಯೋಜನೆಯು ಎಚ್‌ಡಿಕೆ ಕೂಸು ಎಂದು ಹೇಳಿಕೊಂಡು ಬಿಡದಿ ಟೌನ್‌ಶಿಪ್ ಮಾಡಲು ತರಾತುರಿಯಲ್ಲಿ ಹೊರಟಿದ್ದಾರೆ. ಅಂದು ಇದೇ ಕಾಂಗ್ರೆಸ್ ಎಚ್.ಕೆ. ಪಾಟೀಲರ ನೇತೃತ್ವದಲ್ಲಿ 'ಸತ್ಯಶೋಧನಾ ಸಮಿತಿ' ಮಾಡಿತ್ತು. ಕುಮಾರಸ್ವಾಮಿ ಬೆಂಗಳೂರು ಸುತ್ತಮುತ್ತ ರೈತರ ಭೂಮಿ ಕಬಳಿಸಲು ಹೊರಟಿದ್ದಾರೆ ಎಂದು ಆರೋಪಿಸಿತ್ತು. ರೈತರೊಂದಿಗೆ ಮೂರು ಬಾರಿ ಚರ್ಚಿಸಿ, ಅವರ ಭಾವನೆಗಳಿಗೆ ಸ್ಪಂದಿಸಿ ಯೋಜನೆ ಕೈಬಿಟ್ಟಿದ್ದೆ' ಎಂದು ಹೇಳಿದರು.

ಕುಮಾರಸ್ವಾಮಿ ಪ್ರಮಾಣ ಮಾಡಲಿ: ಬಾಲಕೃಷ್ಣ

'ಕುಮಾರಸ್ವಾಮಿ ತಮ್ಮ ವಿಡಿಯೊ ಸಂದೇಶದಲ್ಲಿ ಅಭಿವೃದ್ಧಿ ಹೊಂದಿದ ಟೌನ್‌ಶಿಪ್‌ನಲ್ಲಿ ರೈತರಿಗೆ ಶೇ 40ರಷ್ಟನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೆ ಅಂದಿದ್ದಾರೆ. ನಾವು ಜನವಾಸದ ಪ್ರದೇಶದಲ್ಲೇ ಶೇ 50ರಷ್ಟು, ವಾಣಿಜ್ಯ ಪ್ರದೇಶದಲ್ಲಿ ಶೇ 45 ಪಾಲು ಕೊಡುತ್ತೇವೆ' ಎಂದು ಬಾಲಕೃಷ್ಣ ತಿಳಿಸಿದರು. ಇದೇ ವೇಳೆ ಅವರು ಕುಮಾರಸ್ವಾಮಿ ಈ ಹಿಂದೆ ನೀಡಿದ್ದ ವಿಡಿಯೊ ಸಂದೇಶದ ಹೇಳಿಕೆ ಬಿಡುಗಡೆ ಮಾಡಿದರು.

ಮುತಾಲಿಕ್ ಸೇರಿ 6 ಮಂದಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಆರ್.ಎನ್. ಶೆಟ್ಟಿ ಕಲ್ಯಾಣಮಂಟಪದಲ್ಲಿ ಶ್ರೀರಾಮಸೇನೆಯ ಮಹಿಳಾ ಘಟಕದ ದುರ್ಗಾ ಸೇನೆಯಿಂದ ಭಾನುವಾರ ನಡೆದ ತ್ರಿಶೂಲ ದೀಕ್ಷಾ ಕಾರ್ಯಕ್ರಮದಲ್ಲಿ ಕಬ್ಬಿಣದ ಆಯುಧ ಪ್ರದರ್ಶಿಸಿ, ಮಹಿಳೆಯರಿಗೆ ತ್ರಿಶೂಲ ಆಕಾರದ ಆಯುಧ ನೀಡಿದ ಹಾಗೂ ದ್ವೇಷ ಭಾಷಣ ಮಾಡಿದ ಆರೋಪದ ಮೇಲೆ ಪ್ರಮೋದ ಮುತಾಲಿಕ್ ಸೇರಿ ಆರು ಮಂದಿ ವಿರುದ್ಧ ಉಪನಗರ ಠಾಣಾ ಪೊಲೀಸರು ಸುಮೊಟೊ ಪ್ರಕರಣ ದಾಖಲಿಸಿದ್ದಾರೆ.

ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಹಾಗೂ ಇತರರು ಪೂರ್ವಾನುಮತಿ ಪಡೆಯದೆ, ಅಕ್ರಮವಾಗಿ ಕಾರ್ಯಕ್ರಮ ನಡೆಸಿದ್ದಾರೆ. ಅಲ್ಲದೆ ತಮ್ಮ ಭಾಷಣದಲ್ಲಿ ಧರ್ಮಗಳ ನಡುವೆ ವೈರತ್ವ, ದ್ವೇಷ ಉಂಟಾಗುವ ರೀತಿ ಮಾತನಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ವಿ.ವಿ ಕುಲಪತಿಗಳು ಭಾಗಿ

ಕುಲಪತಿಗಳು ಕ್ಷಮೆ ಕೇಳಲಿ: ಸತೀಶನ್

ತಿರುವನಂತಪುರ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಮೂವರು ಕುಲಪತಿಗಳ ವಿರುದ್ಧ ಕೇರಳಂ ಮುಖ್ಯಮಂತ್ರಿ ವಿ.ಡಿ ಸತೀಶನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಕ್ಷಮೆಯಾಚಿಸುವಂತೆ ಸೂಚಿಸಿದ್ದಾರೆ.



ವಿ.ಡಿ ಸತೀಶನ್

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಈ ಕಾರ್ಯಕ್ರಮದಲ್ಲಿ ಭಾಷಣ ಮಾಡಿದ್ದರು.

ಭಾನುವಾರ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿರುವ ಮುಖ್ಯಮಂತ್ರಿ, ' ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಭಾಗಿಯಾದ ಮೂವರು ಕುಲಪತಿಗಳು ರಾಜ್ಯದ ಜನರ ಬಳಿ ಕ್ಷಮೆಯಾಚಿಸಬೇಕು' ಎಂದಿದ್ದಾರೆ.

ತಿರುವನಂತಪುರದಲ್ಲಿ ಆರ್‌ಎಸ್‌ಎಸ್ ಶತಮಾನೋತ್ಸವ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೇರಳ ವಿಶ್ವವಿದ್ಯಾಲಯ, ಮಹಾತ್ಮ ಗಾಂಧಿ ವಿಶ್ವ ವಿದ್ಯಾಲಯ, ಮಲಯಾಳಂ ವಿಶ್ವವಿದ್ಯಾಲಯದ ಕುಲಪತಿಗಳು ಪಾಲ್ಗೊಂಡಿದ್ದರು.

'ಆರ್‌ಎಸ್‌ಎಸ್‌ನ ಕಾರ್ಯಕ್ರಮದಲ್ಲಿ ಕುಲಪತಿಗಳು ಭಾಗವಹಿಸಿದ್ದು ಕೇರಳದ ಶೈಕ್ಷಣಿಕ ಸಂಪ್ರದಾಯಕ್ಕೆ ವಿರುದ್ಧವಾದುದು ಮತ್ತು ಅವರ ಹುದ್ದೆಯ ಘನತೆಗೆ ತಕ್ಕುದಲ್ಲ' ಎಂದು ಅವರು ಹೇಳಿದ್ದಾರೆ.

'ಕೋಮುವಾದವನ್ನು ತೀವ್ರವಾಗಿ ಪ್ರಚೋದಿಸುವ ಭಾಗವತ್ ಅವರು ಭಾಷಣ ಮಾಡಿದ್ದ ಕಾರ್ಯಕ್ರಮದಲ್ಲಿ ಕುಲಪತಿಗಳು ಪಾಲ್ಗೊಂಡಿದ್ದನ್ನು ಅತ್ಯಂತ ಗಂಭೀರವಾಗಿ ನೋಡಲಾಗುತ್ತಿದೆ. ಅವರು ಗಂಭೀರವಾದ ತಪ್ಪೆಸಗಿದ್ದಾರೆ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

'ತೀವ್ರ ಕೋಮುವಾದವನ್ನು ಪ್ರೇರೇಪಿಸುವ ಪ್ರಯತ್ನವನ್ನು ಯಾರೇ ಮಾಡಿದರೂ ಸಹಿಸಲಾಗದು' ಎಂದು ಇದೇ ವೇಳೆ ಅವರು ಎಚ್ಚರಿಸಿದ್ದಾರೆ.

ಸರ್ಕಾರ ಸಂಘಪರಿವಾರಕ್ಕೆ ಶರಣಾಗಿದೆಯೇ?

'ಆರ್‌ಎಸ್‌ಎಸ್ ಮುಖ್ಯಸ್ಥರಿದ್ದ ಕಾರ್ಯಕ್ರಮದಲ್ಲಿ ಕುಲಪತಿಗಳು ಭಾಗಿ ಆಗಿರುವುದನ್ನು ತೀವ್ರವಾಗಿ ಖಂಡಿಸಿರುವ ಕೇರಳಂ ವಿರೋಧ ಪಕ್ಷದ ನಾಯಕ ಪಿಣರಾಯಿ ವಿಜಯನ್, ಸಂಘಪರಿವಾರಕ್ಕೆ ಸರ್ಕಾರ ಶರಣಾದಂತಿದೆ' ಎಂದು ಹರಿಹಾಯ್ದಿದ್ದಾರೆ.

ಪಿಣರಾಯಿ ವಿಜಯನ್

'ರಾಜ್ಯದ ಉನ್ನತ ಶಿಕ್ಷಣದಲ್ಲಿ ಸಂಘಪರಿವಾರದ ಪ್ರಭಾವವನ್ನು ವಿಸ್ತರಿಸುವ ಪ್ರಯತ್ನ ಇದು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

'ಜಾತ್ಯತೀತ ಕೇರಳಂನಲ್ಲಿ ಇಂತಹ ಬೆಳವಣಿಗೆ ನಡೆದಿರುವುದು ಅತ್ಯಂತ ಗಂಭೀರ ಮತ್ತು ಆತಂಕಕಾರಿ. ಸಂಘಪರಿವಾರದ ಕಾರ್ಯಸೂಚಿಗಳನ್ನು ವಿಶ್ವವಿದ್ಯಾಲಯಗಳಲ್ಲಿ ಹೇರುವ ಪ್ರಯತ್ನ ಇದು ಎಂಬ ಅಭಿಪ್ರಾಯ ಎಲ್ಲೆಡೆ ಕೇಳಿಬರುತ್ತಿದೆ' ಎಂದಿದ್ದಾರೆ.

PHYSICS — ಪಿಯುಸಿ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷಾ ದಿಕ್ಸೂಚಿ

Chapter – 1

ELECTRIC CHARGES AND FIELDS

7. In the given figure q_A = -256 C, q_B = 299 C and q_C = 81 C. Calculate net electric field along DA.



(.....Contd)

Electric field at D due to q_A,

$$E_1 = \frac{1}{4\pi \epsilon_0}\frac{q_A}{AD^2} = \frac{9\times 10^9 \times 256}{(3.2\times 10^{-2})^2}$$
$$= 225 \times 10^{13}\ NC^{-1} \text{ along DA}$$



Electric field at D due to q_B,

$$E_2 = \frac{1}{4\pi \epsilon_0}\frac{q_B}{BD^2} = \frac{9\times10^9 \times 299}{(2.4\times10^{-2})^2}$$
$$= 467.2 \times 10^4\ NC^{-1} \text{ along DF}$$

Electric field at D due to q_C,

$$E_3 = \frac{1}{4\pi \epsilon_0}\frac{q_C}{CD^2} = \frac{9\times10^9 \times 81}{(1.8\times10^{-2})^2}$$
$$= 225 \times 10^{13}\ NC^{-1} \text{ along DA}$$

∴ Net electric field along DA = $E_1 + E_3$
$= 2 \times 225 \times 10^{13}\ NC^{-1}$
$= 4.5 \times 10^{15}\ NC^{-1}$

8. A copper ball of density 8.6 g cm^{-3} and 1 cm in diameter is immersed in oil of density 0.8 g cm^{-3}. What is the charge on the ball, if it remains just suspended in oil electric field of intensity 3600 Vm^{-1} acting in the upward direction? *(Electric force on the ball should be equal to the observed weight of the ball for the ball to remain just suspended in oil)*

Soln:- Observed weight of ball = actual weight of ball – weight of oil displaced

$$W_0 = \frac{4}{3}\pi R^3 \rho g - \frac{4}{3}\pi R^3 \sigma g$$



$$W_0 = \frac{4}{3}\pi R^3(\rho - \sigma)g$$
$$= \frac{4}{3}\pi(5\times10^{-3})^3 \times (8600 - 800) \times 9.8$$
$$= \frac{4}{3}\pi(5\times10^{-3})^3 \times 7800 \times 9.8 \quad \ldots(i)$$

Electric force on the ball F = qE
= q x 3600 .... (ii)

Equating (i) and (ii),
qE = W_0

$$q \times 3600 = \frac{4}{3}\pi(5\times10^{-3})^3 \times 7800 \times 9.8$$
$$\Rightarrow q = 1.1 \times 10^{-5} C.$$

FILL IN THE BLANKS

1. Gold leaf electroscope is used to detect __________ present on a body.
Ans:- electric charge

2. The electrostatic force between two charges is maximum in________.
Ans:- a vacuum

3. In case of a positive source charge, the electric field will be directed radially ____________ from the charge
Ans:- outward,

4. The electric field lines crowd where the electric field is ______________. .
Ans:- strong,

5. The total electric flux through a closed surface enclosing electric dipole is___________.
Ans:- zero

6. The charge transferred to a ___________ is readily gets distributed over its entire surface.
Ans:- conductor

7. The total charge of the isolated system is always _________.
Ans:- Conserved

8. The centres of negative charges and of positive charges of _________ molecules do not coincide.
Ans:- polar

9. Electric flux is a __________ quantity.
Ans:- scalar

10. Electric dipole moment is a __________ quantity.
Ans:- vector

9. Sketch roughly the electric field lines for a thin, circular and uniformly positively charged disc of finite radius.

Ans:- The field lines are uniformly distributed over the surface of the disc.

These lines diverge far away from the disc such that when extended backward (shown as dotted lines) they intersect at the centre of the disc. ***(Contd)***

18 ಸಾವಿರ ಮಂದಿಗೆ 'ಹೃದಯ ಜ್ಯೋತಿ'

ಹೃದಯಾಘಾತಕ್ಕೆ ಒಳಗಾದವರನ್ನು ಪ್ರಾಣಾಪಾಯದಿಂದ ಪಾರು ಮಾಡಿದ ತುರ್ತು ಚಿಕಿತ್ಸೆ • ನಟ ಪುನೀತ್ ಸ್ಮರಣಾರ್ಥ ಯೋಜನೆ

• ವರುಣ ಹೆಗಡೆ

ಬೆಂಗಳೂರು: ತೀವ್ರ ಹೃದಯಾಘಾತದಿಂದ ಸಾವು ಬದುಕಿನ ನಡುವೆ ಹೋರಾಟ ಮಾಡುತ್ತಿರುವವರಿಗೆ 'ಡಾ. ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ' ಯೋಜನೆ ಬೆಳಕಾಗಿದ್ದು, ಮೂರು ವರ್ಷಗಳಲ್ಲಿ 18,804 ಮಂದಿಗೆ ತುರ್ತು ಮತ್ತು ಜೀವ ರಕ್ಷಕ ಚಿಕಿತ್ಸೆ ಒದಗಿಸಲಾಗಿದೆ.

ದೈಹಿಕ ಶ್ರಮವಿಲ್ಲದ ಜಡ ಜೀವನಶೈಲಿ, ಕೆಲಸದ ಒತ್ತಡ, ಅನಾರೋಗ್ಯಕರ ಆಹಾರ ಪದ್ಧತಿ, ಧೂಮಪಾನ, ನಿದ್ದೆಯ ಕೊರತೆ ಸೇರಿ ವಿವಿಧ ಕಾರಣಗಳಿಂದ ಹೃದಯದ ಕಾಯಿಲೆ ಹೆಚ್ಚಳವಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಹೃದಯಾಘಾತದಿಂದ ಮೃತಪಡುವವರ ಸಂಖ್ಯೆಯೂ ಏರಿಕೆಯಾಗುತ್ತಿದೆ. ಆರೋಗ್ಯವಂತ ವ್ಯಕ್ತಿಗಳು ಸಹ ಹೃದಯ ಸ್ತಂಭನದಿಂದ ಕೊನೆಯುಸಿರು ಎಳೆಯುತ್ತಿದ್ದಾರೆ.

ಯುವಜನರು ಸಹ ಹೃದಯಾಘಾತದಿಂದ ಜೀವ ಕಳೆದುಕೊಳ್ಳುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ಈ ರೀತಿ ಮರಣ ತಡೆಯಲು ರಾಜ್ಯ ಸರ್ಕಾರ 2023ರ ಮಾರ್ಚ್‌ನಲ್ಲಿ ಪ್ರಾರಂಭಿಸಿದ ಈ ಯೋಜನೆ, ಹೃದಯ ಚಿಕಿತ್ಸೆಯ ಮೂಲಕ ಸಾವಿರಾರು ಮಂದಿಯನ್ನು ಪ್ರಾಣಾಪಾಯದಿಂದ ಪಾರು ಮಾಡಿದೆ.

ವ್ಯಕ್ತಿಗೆ ಹೃದಯಾಘಾತ ಸಂಭವಿಸಿದ ನಂತರದ ಒಂದು ಗಂಟೆ ಜೀವ ಉಳಿಸುವ ಅಮೂಲ್ಯ ಸಮಯವಾಗಿರುತ್ತದೆ. ಆದ್ದರಿಂದ ಈ ಅವಧಿಯಲ್ಲಿ ತಾಲ್ಲೂಕು ಮಟ್ಟದಲ್ಲಿಯೇ ಚಿಕಿತ್ಸೆ ಒದಗಿಸಲು, ನಟ ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ ಯೋಜನೆಯನ್ನು ಪ್ರಾರಂಭಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಪ್ರಾಯೋಗಿಕವಾಗಿ ಪರಿಚಯಿಸಲಾಗಿದ್ದ ಯೋಜನೆಯನ್ನು, 2024ರ ಮಾರ್ಚ್‌ನಲ್ಲಿ ಎರಡನೇ ಹಂತದಲ್ಲಿ ರಾಜ್ಯದಾದ್ಯಂತ ವಿಸ್ತರಿಸಲಾಗಿತ್ತು. ಮೂರು ವರ್ಷಗಳ ಅವಧಿಯಲ್ಲಿ ಯೋಜನೆಯಡಿ 11.78 ಲಕ್ಷ ಮಂದಿಗೆ ಉಚಿತವಾಗಿ ಹೃದಯ ತಪಾಸಣೆ ನಡೆಸಲಾಗಿದೆ.

ರಾಜ್ಯದಾದ್ಯಂತ ಚಿಕಿತ್ಸೆ: ಈ ಯೋಜನೆಯಡಿ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗಳ ಜತೆಗೆ ಖಾಸಗಿ ಆಸ್ಪತ್ರೆಗಳನ್ನೂ ಒಳಗೊಂಡ ಜಾಲವನ್ನು ಆರೋಗ್ಯ ಇಲಾಖೆ ರೂಪಿಸಿದೆ. ಹೃದಯಾಘಾತಕ್ಕೆ ಒಳಗಾದವರಿಗೆ ಯೋಜನೆಯಡಿ ನೋಂದಾಯಿತ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಒದಗಿಸಿ, ಹೃದಯ ನಾಳದ ಬ್ಲಾಕ್ ತೆರವುಗೊಳಿಸಲು ಚುಚ್ಚುಮದ್ದನ್ನು ನೀಡಲಾಗುತ್ತಿದೆ. ಬಳಿಕ ಕ್ಯಾಥ್‌ಲ್ಯಾಬ್ ಇರುವ ಆಸ್ಪತ್ರೆಗಳಿಗೆ ಕಳಿಸಲಾಗುತ್ತಿದೆ.

'ಹಬ್ ಮತ್ತು ಸ್ಪೋಕ್' ಮಾದರಿಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದ್ದು, 86 ಆಸ್ಪತ್ರೆಗಳು ಸ್ಪೋಕ್ ಆಸ್ಪತ್ರೆಗಳಾಗಿ ಗುರುತಿಸಲ್ಪಟ್ಟಿವೆ. 10 ಆಸ್ಪತ್ರೆಗಳಲ್ಲಿ 3ನೇ ಹಂತದ ಚಿಕಿತ್ಸೆ ನೀಡಲಾಗುತ್ತಿದೆ.

'ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯನ್ನು ಕಾರ್ಯಾಚರಣೆಯ ಕೇಂದ್ರಗಳನ್ನಾಗಿ ಬಳಸಿಕೊಂಡು, ಸೇವೆ ನೀಡಲಾಗುತ್ತಿದೆ. ತೃತೀಯ ಹಂತದ ಚಿಕಿತ್ಸೆಗೆ ಪ್ರಕರಣಗಳನ್ನು 'ಹಬ್' ಆಸ್ಪತ್ರೆಗಳಾಗಿ ನೋಂದಾಯಿಸಿರುವ ಜಯದೇವ ಹೃದ್ರೋಗ ಸಂಸ್ಥೆ ಸೇರಿ ವಿವಿಧ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ರವಾನಿಸಲಾಗುತ್ತದೆ' ಎಂದು ಇಲಾಖೆ ಅಧಿಕಾರಿ ತಿಳಿಸಿದರು.

ಹೃದಯಾಘಾತಕ್ಕೆ ನಾನಾ ಕಾರಣ

ಡಾ. ನಟರಾಜ್ ಶೆಟ್ಟಿ

'ವ್ಯಾಯಾಮ ಇಲ್ಲದ ಜೀವನ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಹೃದಯ ಸಂಬಂಧಿ ಕಾಯಿಲೆಗಳು ಈಗ ಯುವಜನರಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಆರೋಗ್ಯ ಕಡೆಗಣನೆಯೇ ಇದಕ್ಕೆ ಮುಖ್ಯ ಕಾರಣ. ಅಧಿಕ ರಕ್ತದೊತ್ತಡ, ಮಧುಮೇಹ, ಸ್ಥೂಲಕಾಯ, ಧೂಮಪಾನ, ಜಿಮ್‌ಗಳಲ್ಲಿ ಅವೈಜ್ಞಾನಿಕ ಕಸರತ್ತು, ಮಾದಕ ವಸ್ತು ಸೇವನೆ, ಒತ್ತಡದ ಜೀವನ, ವಾಯುಮಾಲಿನ್ಯ ಕೂಡ ಹೃದಯಾಘಾತಕ್ಕೆ ಕಾರಣವಾಗುತ್ತಿದೆ' ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಹೃದ್ರೋಗ ತಜ್ಞ ಡಾ.ಎಚ್.ಎಸ್. ನಟರಾಜ್ ಶೆಟ್ಟಿ ತಿಳಿಸಿದರು.

'ನಿಯಮಿತ ಆರೋಗ್ಯ ತಪಾಸಣೆ, ದೈಹಿಕವಾಗಿ ಸಕ್ರಿಯವಾಗಿರುವುದು, ರಕ್ತದೊತ್ತಡ ಮತ್ತು ಮಧುಮೇಹವನ್ನು ನಿಯಂತ್ರಣದಲ್ಲಿಡುವುದು, ತಂಬಾಕು ಸೇವನೆಯಿಂದ ದೂರವಿರುವುದು, ಉತ್ತಮ ಜೀವನ ಶೈಲಿ ಅಳವಡಿಕೆ ಸೇರಿ ವಿವಿಧ ಕ್ರಮಗಳ ಮೂಲಕ ಹೃದಯ ರಕ್ತನಾಳದ ಕಾಯಿಲೆಗಳ ಅಪಾಯವನ್ನು ಗಣನೀಯವಾಗಿ ಕಡಿಮೆ ಮಾಡಬಹುದು' ಎಂದು ಹೇಳಿದರು.

12.26 ಲಕ್ಷ ಇಸಿಜಿ

ಯೋಜನೆಯಡಿ ಹೃದ್ರೋಗ ಪತ್ತೆಗೂ ಆದ್ಯತೆ ನೀಡಲಾಗಿದೆ. ಮೂರು ವರ್ಷಗಳಲ್ಲಿ 12.26 ಲಕ್ಷ ಮಂದಿಗೆ ಇಸಿಜಿ ಪರೀಕ್ಷೆ (ಎಲೆಕ್ಟ್ರೋಕಾರ್ಡಿಯೋಗ್ರಾಮ್) ಮಾಡಲಾಗಿದೆ. ಹೃದಯಾಘಾತದ ಅಪಾಯ ಇದ್ದಲ್ಲಿ ಪ್ರಕರಣವನ್ನು ತಜ್ಞ ವೈದ್ಯರಿಗೆ ಶಿಫಾರಸು ಮಾಡಲಾಗುತ್ತಿದೆ. ತಜ್ಞ ವೈದ್ಯರು ರೋಗಿಯ ಚಿಕಿತ್ಸೆ ಬಗ್ಗೆ ನಿರ್ಧರಿಸುತ್ತಿದ್ದಾರೆ.

ಹೃದಯಾಘಾತಕ್ಕೆ ಒಳಗಾದವರ ಚಿಕಿತ್ಸೆಗೆ 'ಟೆನೆಕ್ಟ್ ಪ್ಲಸ್' ಚುಚ್ಚುಮದ್ದನ್ನು ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಪೂರೈಕೆ ಮಾಡಲಾಗಿದೆ. ಹೃದಯಾಘಾತಕ್ಕೆ ಒಳಗಾದವರಿಗೆ ಇಸಿಜಿ ಪರೀಕ್ಷೆ ನಡೆಸಿ, ಚುಚ್ಚುಮದ್ದು ಅಗತ್ಯವಿದ್ದಲ್ಲಿ ಒದಗಿಸಲಾಗುತ್ತಿದೆ.

'ಆರ್. ಅಶೋಕ ಕುಬೇರನ ಪುತ್ರನೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಕುಬೇರನ ಪುತ್ರನೇ? ಆತನ ಆಸ್ತಿ ಸಂಪಾದನೆಯ ಬಗ್ಗೆ ಮೊದಲು ತನಿಖೆ ನಡೆಯಲಿ' ಎಂದು ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ಆಕ್ರೋಶ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ಕಮಿಷನ್ ಮಿನಿಸ್ಟರ್' ಎಂದಿರುವ ಅಶೋಕ ಅವರ ಹೇಳಿಕೆಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ' ಶಿವಕುಮಾರ್ ಅವರಿಗೆ ಇನ್ನೂ ರಾಜಕೀಯ ಭವಿಷ್ಯವಿದೆ. ರಾಜ್ಯದಲ್ಲಿ ಒಳ್ಳೆಯ ಕೆಲಸ ಮಾಡಬೇಕು ಎಂದು ಹೊರಟಿದ್ದಾರೆ. ಶಿವಕುಮಾರ್ ಅವರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಅಶೋಕ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಬಗ್ಗೆ ಏಕವಚನದಲ್ಲಿ ಮಾತನಾಡುವುದನ್ನು ಅಶೋಕ ನಿಲ್ಲಿಸಬೇಕು' ಎಂದರು.

'ಅಶೋಕ ಅವರೇ, ನೀನೇನು ಕುಬೇರನ ಅಥವಾ ಟಾಟಾ-ಬಿರ್ಲಾ ಮಗನಾ, ನೀನು ಮಂತ್ರಿ ಆದ ಮೇಲೆಯೇ ತಾನೇ ಇಷ್ಟೊಂದು ಆಸ್ತಿ ಮಾಡಿದ್ದು. ನಾನು ಎಲ್ಲೂ ಹಣವನ್ನು ಪಡೆದಿಲ್ಲ ಎಂದು ಪ್ರಮಾಣ ಮಾಡಲಿ' ಎಂದು ಏಕವಚನದಲ್ಲೇ ಬಾಲಕೃಷ್ಣ ಪ್ರಶ್ನಿಸಿದರು.

'ಅಶೋಕ ಬೆಂಗಳೂರು ಉಸ್ತುವಾರಿಯಾಗಿದ್ದಾಗ ಕಸದ ಸಮಸ್ಯೆಗೆ ಯಾವುದೇ ತೀರ್ಮಾನ ಮಾಡಲಿಲ್ಲ. ಕಸದ ವಿಲೇವಾರಿಗೆ ಸರಿಯಾದ ತೀರ್ಮಾನ ಮಾಡಿದ್ದರೆ, ಚುನಾವಣೆಯಲ್ಲಿ ಹೀಗೆ ಸೋಲುತ್ತಿರಲಿಲ್ಲ. ಬೆಂಗಳೂರಿನಿಂದ ಹೊರಗೆ ಅಭಿವೃದ್ಧಿ ಮಾಡಿ ಎಂದು ಇವರೇ ಭಾಷಣ ಮಾಡುತ್ತಾರೆ, ಈಗ ನಾವು ಹೊರವಲಯದಲ್ಲಿ ಟೌನ್‌ಶಿಪ್ ಮಾಡಲು ಹೋದರೆ ತರಲೆ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಡಿಕೆಶಿ, ನಾನು ಮೂಲ ಕಾಂಗ್ರೆಸಿಗರು'

ಜಿ.ಪರಮೇಶ್ವರ

ತುಮಕೂರು: 'ನಾನು ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಾಮಾನ್ಯ ಕಾರ್ಯಕರ್ತರಾಗಿ ಕಾಂಗ್ರೆಸ್‌ನಲ್ಲಿ ಕೆಲಸ ಆರಂಭ ಮಾಡಿ, ಈಗ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇವೆ. ನಾವಿಬ್ಬರೂ ಮೂಲ ಕಾಂಗ್ರೆಸ್ ಕಾರ್ಯಕರ್ತರು. ಜೋಡೆತ್ತುಗಳಂತೆ ಕೆಲಸ ಮಾಡಿ ಸರ್ಕಾರವನ್ನು ಇನ್ನಷ್ಟು ಬಲಪಡಿಸುತ್ತೇವೆ' ಎಂದು ಉಪಮುಖ್ಯಮಂತ್ರಿ ಜಿ.ಪರಮೇಶ್ವರ ಅಭಿಪ್ರಾಯಪಟ್ಟರು.

ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಭಾನುವಾರ ಕೊರಟಗೆರೆಗೆ ಭೇಟಿ ನೀಡಿದ ಅವರನ್ನು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ದೂರಿಯಾಗಿ ಸ್ವಾಗತಿಸಿ ಅಭಿನಂದಿಸಿದರು.

'ಕೆಪಿಸಿಸಿ ಸಾರಥ್ಯ ವಹಿಸಿಕೊಂಡಿರುವ ಬಿ.ಕೆ.ಹರಿಪ್ರಸಾದ್ ಕೂಡ ಮೂಲ ಕಾಂಗ್ರೆಸಿಗರು. ಪಕ್ಷವನ್ನು ಸದೃಢವಾಗಿ ಬಲಗೊಳಿಸಲಿದ್ದಾರೆ. ಕಾರ್ಯಕರ್ತರು ಉತ್ಸಾಹದಿಂದ ಕೆಲಸ ಮಾಡಲು ಶಕ್ತಿ ತುಂಬಲಿದ್ದಾರೆ' ಎಂದರು.

'ಎಲ್ಲ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನಿಂದ ಕೆಲಸ ಮಾಡಲು ಈಗಾಗಲೇ ಸೂಚನೆ ನೀಡಲಾಗಿದೆ. ಅಭಿವೃದ್ಧಿಯೇ ನಮ್ಮ ಜಪವಾಗಲಿದೆ. ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವುದಾಗಿ' ಹೇಳಿದರು.

'ಕಾಂಗ್ರೆಸ್ ತತ್ವ, ಸಿದ್ಧಾಂತ ಆಧಾರದಲ್ಲಿ ಜನಪರ ಆಡಳಿತ ನೀಡುವ ಮೂಲಕ 2028ರಲ್ಲೂ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಬದ್ಧರಾಗಿದ್ದೇವೆ' ಎಂದರು.

ಖರ್ಗೆ, ಸಿ.ಎಂ ಭೇಟಿಯಾದ ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭಾನುವಾರ ಪ್ರತ್ಯೇಕವಾಗಿ ಭೇಟಿ ಮಾಡಿದ ಶಾಸಕ ಜಮೀರ್ ಅಹಮದ್‌ಖಾನ್, ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಗೆ ಸಂಬಂಧಿಸಿ ತಮ್ಮ ವಿರುದ್ಧದ ಆರೋಪಗಳಿಗೆ ಸ್ಪಷ್ಟನೆ ನೀಡಿದ್ದಾರೆ ಎಂದು ಗೊತ್ತಾಗಿದೆ. ಇದೇ ವೇಳೆ ಸಚಿವ ಸ್ಥಾನಕ್ಕೂ ಬೇಡಿಕೆ ಇಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಖರ್ಗೆ ಅವರನ್ನು ಸದಾಶಿವ ನಗರದ ನಿವಾಸದಲ್ಲಿ ಹಾಗೂ ಮುಖ್ಯಮಂತ್ರಿಯನ್ನು ಕುಮಾರಕೃಪಾ ಅತಿಥಿ ಗೃಹದಲ್ಲಿ ಜಮೀರ್ ಭೇಟಿ ಮಾಡಿದರು. ಈ ಭೇಟಿಯ ಸಂದರ್ಭದಲ್ಲಿ, ದಾವಣಗೆರೆ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿ, ಕಾಂಗ್ರೆಸ್ ಅಭ್ಯರ್ಥಿ ಸೋಲಿಸಲು ಯತ್ನಿಸಿದರು ಎಂಬ ತಮ್ಮ ವಿರುದ್ಧದ ಆರೋಪಕ್ಕೆ ಸ್ಪಷ್ಟನೆ ನೀಡಿದರು ಎನ್ನಲಾಗಿದೆ.

'ಮುಸ್ಲಿಂ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ಸಿಗದಿದ್ದಕ್ಕೆ ಬೇಸರ ಆಗಿರುವುದು ನಿಜ. ಆದರೆ, ಅಭ್ಯರ್ಥಿ ಆಯ್ಕೆ ಬಳಿಕ ಪಕ್ಷ ಆಯ್ಕೆ ಮಾಡಿದ ಅಭ್ಯರ್ಥಿಯನ್ನು ಬೆಂಬಲಿಸಿ, ಗೆಲ್ಲಿಸುವಂತೆ ಸಮುದಾಯದ ಮುಖಂಡರಿಗೆ ತಿಳಿಸಿದ್ದೇನೆಯೇ ಹೊರತು ಯಾವುದೇ ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ. ಈ ವಿಚಾರವಾಗಿ ವೈರಲ್ ಆಗಿರುವ ನನ್ನ ಸಂಭಾಷಣೆ ಎನ್ನಲಾದ ಆಡಿಯೊ ಕೂಡ ನನ್ನದಲ್ಲ, ನಕಲಿ' ಎಂದು ಅಧ್ಯಕ್ಷರು ಹಾಗೂ ಮುಖ್ಯಮಂತ್ರಿಗೆ ಸ್ಪಷ್ಟಪಡಿಸಿದರು ಎಂದೂ ಗೊತ್ತಾಗಿದೆ.

ಚಿಟಿಕೆ ಸುದ್ದಿ

'ಇನ್ನು ಮುಂದೆ ಶಿವಕುಮಾರ್ ಕೃಪ'



ಪ್ರಲ್ಹಾದ ಜೋಶಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ವಿಡಂಬನಾ ಪೋಸ್ಟರ್

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಚೇರಿಗಾಗಿ ಕುಮಾರ ಕೃಪ ಅತಿಥಿಗೃಹದ ನವೀಕರಣವನ್ನು ವಿಡಂಬನೆ ಮಾಡಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಕುಮಾರ ಕೃಪ ಕಟ್ಟಡದ ಎರಡು ಚಿತ್ರಗಳನ್ನು ಪೋಸ್ಟ್ ಮಾಡಿರುವ ಅವರು, ಒಂದರ ಮೇಲೆ 'ಕುಮಾರ ಕೃಪ' ಎಂದು ಬರೆದಿದ್ದಾರೆ. ಇನ್ನೊಂದರ ಮೇಲೆ, 'ಇನ್ನು ಮುಂದೆ ಶಿವಕುಮಾರ್ ಕೃಪ' ಎಂದು ಬರೆದಿದ್ದಾರೆ. ಜತೆಗೆ, 'ಐತಿಹಾಸಿಕ ಕುಮಾರ ಕೃಪ ಗೆಸ್ಟ್ ಹೌಸ್ ನೆನಪಷ್ಟೆ..!' ಎಂದು ಚಿತ್ರಕ್ಕೆ ವಿವರಣೆ ಬರೆದಿದ್ದಾರೆ.

ರ‍್ಯಾಂಕಿಂಗ್: ಕೃಷಿ ವಿಶ್ವವಿದ್ಯಾಲಯಕ್ಕೆ 7ನೇ ಸ್ಥಾನ

ಬೆಂಗಳೂರು: ಐಐಆರ್‌ಎಫ್ ಸಂಸ್ಥೆಯು ಅತ್ಯುತ್ತಮ ವಿಶ್ವವಿದ್ಯಾಲಯ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ನೀಡುವ ರ‍್ಯಾಂಕಿಂಗ್ ಪಟ್ಟಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ 7ನೇ ಸ್ಥಾನ ದೊರೆತಿದೆ.

ಇಂಡಿಯನ್ ಇನ್‌ಸ್ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಮ್‌ವರ್ಕ್ ಸಂಸ್ಥೆಯು ದೇಶದ 5 ಸಾವಿರಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳನ್ನು ವೈಜ್ಞಾನಿಕವಾಗಿ ಅವಲೋಕಿಸಿತ್ತು. ಸಂಶೋಧನಾ ಸಾಧನೆ, ಬೋಧಕ ಸಿಬ್ಬಂದಿ ಗುಣಮಟ್ಟ, ಉದ್ಯೋಗಾವಕಾಶ, ಉದ್ಯಮಗಳೊಂದಿಗೆ ಸಹಭಾಗಿತ್ವ, ನವೋದ್ಯಮಗಳಿಗೆ ಪ್ರೋತ್ಸಾಹ ಇತ್ಯಾದಿಗಳನ್ನು ಆಧರಿಸಿ ರ‍್ಯಾಂಕಿಂಗ್ ನೀಡಿದೆ.

'ವಿಜ್ಞಾನಿಗಳು, ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳ ಶ್ರಮದಿಂದ ವಿಶ್ವವಿದ್ಯಾಲಯಕ್ಕೆ ಮತ್ತೊಂದು ಗರಿ ಸಿಕ್ಕಿದೆ. ರೈತ ಸಮುದಾಯದ ನೆರವೂ ಸಾಧನೆಗೆ ಕಾರಣವಾಗಿದೆ' ಎಂದು ಕುಲಪತಿ ಎಸ್.ವಿ.ಸುರೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

'ಯಾವುದೇ ಕಾರಣಕ್ಕೂ ಗ್ಯಾರಂಟಿ ನಿಲ್ಲಿಸುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರದ ಹೆಮ್ಮೆಯ ಗ್ಯಾರಂಟಿ ಯೋಜನೆಗಳಾದ 'ಗೃಹಲಕ್ಷ್ಮಿ' ಮತ್ತು 'ಗೃಹಜ್ಯೋತಿ' ಯೋಜನೆ ಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಈ ಬಗ್ಗೆ ವಿರೋಧ ಪಕ್ಷಗಳು ಹಬ್ಬಿಸುತ್ತಿರುವ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಕೆಲವರು ಸತ್ತವರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಬ್ಯಾಂಕ್ ಖಾತೆ ತೆರೆದು ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಹೀಗಾಗಿ ಗ್ಯಾರಂಟಿ ಯೋಜನೆ ಫಲಾನುಭವಿಗಳ ದೃಢೀಕರಣಕ್ಕಾಗಿ, ಅವರ ಹೆಸರು, ವಿಳಾಸ, ಖಾತೆ ಸಂಖ್ಯೆ ಖಚಿತಪಡಿಸಿಕೊಳ್ಳಲು ಮತ್ತೊಮ್ಮೆ ಅರ್ಜಿ ಸಲ್ಲಿಸಲು ಹೇಳಿದ್ದೇವೆ. ಅದರ ಹೊರತು ಯೋಜನೆಗಳನ್ನು ನಿಲ್ಲಿಸಲು ಅಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'ಎಲ್ಲ ಗ್ಯಾರಂಟಿ ಯೋಜನೆಗಳು ಶೇಕಡಾ ನೂರಕ್ಕೆ ನೂರರಷ್ಟು ಮುಂದುವರಿಯುತ್ತವೆ. ಯಾರೂ ಆತಂಕಪಡುವ ಅವಶ್ಯಕತೆ ಇಲ್ಲ' ಎಂದೂ ಹೇಳಿದ್ದಾರೆ.

'ಅನರ್ಹರನ್ನು ಮಾತ್ರ ಕೈಬಿಡುತ್ತೇವೆ'



ಕೆ.ಜೆ. ಜಾರ್ಜ್

ಬೆಂಗಳೂರು: 'ಗ್ಯಾರಂಟಿ ಯೋಜನೆಯಿಂದ ಅನರ್ಹರನ್ನು ಮಾತ್ರ ಕೈಬಿಡುತ್ತೇವೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭಾನುವಾರ ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿರೋಧ ಪಕ್ಷದವರು ಗ್ಯಾರಂಟಿ ಯೋಜನೆ ಘೋಷಣೆ ಮಾಡಿದಾಗ ಸ್ವಾಗತಿಸಿರಲಿಲ್ಲ. ಈ ಯೋಜನೆಗಳನ್ನು ಜಾರಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಟೀಕಿಸಿದ್ದರು. ಆದರೆ, ನಮ್ಮ ಸರ್ಕಾರ ಯೋಜನೆ ಜಾರಿ ಮಾಡಿದ್ದಲ್ಲದೇ ಯಶಸ್ವಿಯಾಗಿ ಮುಂದುವರಿಸಿದೆ' ಎಂದರು.

'ಯಾವುದೇ ಯೋಜನೆಯನ್ನು ನಾವು ನಿಲ್ಲಿಸುವುದಿಲ್ಲ. ಪರಿಷ್ಕರಣೆಯಾದ ಮೇಲೆ ವಿರೋಧ ಪಕ್ಷದವರ ಆರೋಪಕ್ಕೆ ಉತ್ತರ ನೀಡುತ್ತೇವೆ. ಯಾರು ಅರ್ಹರಿಲ್ಲವೊ ಅವರನ್ನು ಯೋಜನೆಯಿಂದ ಕೈಬಿಡುತ್ತೇವೆ ಅಷ್ಟೇ. ಅರ್ಹರಿಗೆ ಯೋಜನೆ ಎಂದಿನಂತೆ ಸಿಗಲಿವೆ. ಇದು ಆರ್ಥಿಕವಾಗಿ ಹೊರೆಯಲ್ಲ. ಸಚಿವ ಸಂಪುಟದಲ್ಲಿ ಈ ಕುರಿತು ಚರ್ಚಿಸಿ ನಿರ್ಧಾರ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ನಾವು ಪರಿಷ್ಕರಣೆ ಮಾಡಿದ ನಂತರ ಈ ಕುರಿತು ಮಾಹಿತಿ ನೀಡುತ್ತೇವೆ' ಎಂದರು.

ಯಾರು ಅರ್ಹರಿದ್ದಾರೋ ಅವರಿಗೆ ಕೊಡಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಮೂರು ವರ್ಷದಿಂದ ಇವರದ್ದೇ ಸರ್ಕಾರ ಇತ್ತಲ್ಲವೇ? ಗ್ಯಾರಂಟಿ ಕೊಡುವಾಗ ಅರ್ಹತೆ, ಅನರ್ಹತೆಯನ್ನು ಯಾಕೆ ಯೋಚಿಸಲಿಲ್ಲ?
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಗೃಹಜ್ಯೋತಿ, ಗೃಹಲಕ್ಷ್ಮಿಗೆ ಮರು ಅರ್ಜಿ; ಆಡಳಿತ ವೈಫಲ್ಯಕ್ಕೆ ಸಾಕ್ಷಿ'

ಡಿ.ವಿ. ಸದಾನಂದಗೌಡ

ಗದಗ: 'ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆಗಳಿಗೆ ಮರು ಅರ್ಜಿ ಕರೆಯಲು ಮುಂದಾಗಿರುವುದು ಆಡಳಿತ ವೈಫಲ್ಯಕ್ಕೆ ಸಾಕ್ಷಿ. ರಾಜ್ಯ ಸರ್ಕಾರ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ' ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಆರೋಪಿಸಿದರು.

'ಯಾವುದೇ ಯೋಜನೆಗಳಿಗೆ ಖರ್ಚು ಮಾಡಲು ಸರ್ಕಾರದಲ್ಲಿ ಹಣ ಇಲ್ಲ. ಹೀಗಾಗಿಯೇ ಯೋಜನೆಗಳಿಗೆ ಹೊಸ ರೂಪ ಕೊಡಲು ಹೊರಟಿದ್ದಾರೆ. ಗೃಹಲಕ್ಷ್ಮಿ ಯೋಜನೆ ಅಡಿ ಮೃತಪಟ್ಟವರ ಹೆಸರಿನಲ್ಲಿ ಬೇರೆಯವರು ಹಣ ಪಡೆಯುತ್ತಿದ್ದರೆ, ತಹಶೀಲ್ದಾರ್‌ಗಳ ಮೂಲಕ ಪಟ್ಟಿ ಪಡೆದು ಸುಲಭವಾಗಿ ಪತ್ತೆ ಮಾಡಬಹುದು. ಅದಕ್ಕೆ ಹೊಸದಾಗಿ ಅರ್ಜಿ ಕರೆಯುವ ಅಗತ್ಯ ಇಲ್ಲ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಬಿಡದಿ ಟೌನ್‌ಶಿಪ್ ವಿಷಯದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೈತರ ಮೇಲೆ ಸವಾರಿ ಮಾಡುವುದು ಸರಿಯಲ್ಲ. ಇದು ಅವರ ಕಾರ್ಯಕ್ಷೇತ್ರಕ್ಕೆ ಬರುವುದರಿಂದ ಇದರಲ್ಲಿ ಅವರ ಸ್ವಾರ್ಥ ಅಡಗಿದೆ' ಎಂದರು.

'ಮುಖ್ಯಮಂತ್ರಿ ಅವರು ತಮ್ಮ ಗೃಹ ಕಚೇರಿಗಾಗಿ ಪಾರಂಪರಿಕ ಕಟ್ಟಡಗಳ ಪಟ್ಟಿಯಲ್ಲಿರುವ ಕುಮಾರ ಕೃಪ ಅತಿಥಿಗೃಹದ ಮುಖ್ಯಕಟ್ಟಡವನ್ನು ನವೀಕರಣ ಮಾಡಲು ಮುಂದಾಗಿರುವುದು ಸರಿಯಲ್ಲ. ಅವರು ಎಷ್ಟು ದಿನ ಮುಖ್ಯಮಂತ್ರಿಯಾಗಿರುತ್ತಾರೆ ಗೊತ್ತಿಲ್ಲ. ಪಾರಂಪರಿಕ ಕಟ್ಟಡ ಹಾಳು ಮಾಡುವುದು ಇಂದಿರಾಗಾಂಧಿ ಅವರ ಸರ್ವಾಧಿಕಾರಿ ಆಡಳಿತದಿಂದ ಬಂದ ಬಳುವಳಿ' ಎಂದು ದೂರಿದರು.

ಕೃಷಿ ಕಾಯಕ

ಪ್ರಜಾವಾಣಿ ಚಿತ್ರ: ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ ತಾಲ್ಲೂಕಿನ ಹಲಗಾ ಗ್ರಾಮದ ಬಳಿಯ ಜಮೀನಿನಲ್ಲಿ ರೈತರೊಬ್ಬರು ಎತ್ತುಗಳ ಕೊರತೆಯಿಂದಾಗಿ ಮಹಿಳೆಯರ ನೆರವಿನಿಂದಲೇ ಎಡೆಕುಂಟೆ ಹೊಡೆದರು

'ಎಸ್‌ಐಆರ್: ಮತದಾನದ ಹಕ್ಕು ರಕ್ಷಿಸಿ'

ಬೆಂಗಳೂರು: 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ದಾಖಲೆಗಳ ಕೊರತೆಯಿಂದ ಯಾರ ಹೆಸರನ್ನೂ ಮತದಾರರ ಪಟ್ಟಿಯಿಂದ ತೆಗೆಯದಂತೆ ಕ್ರಮವಹಿಸಬೇಕು. ಮತದಾನದ ಹಕ್ಕನ್ನು ರಕ್ಷಿಸಬೇಕು' ಎಂದು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಸಮಿತಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.

ಈ ಬಗ್ಗೆ ಸಿ.ಎಂ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆಯಲಾಗಿದೆ. 'ಮತದಾರರಾಗಿ ಉಳಿಯಲು ಈ ಬಾರಿ ಹಲವು ದಾಖಲೆಗಳನ್ನು ಕೇಳಲಾಗುತ್ತಿದೆ. ದಲಿತರು, ಬಡವರು, ಮಾಜಿ ದೇವದಾಸಿಯರು ಹಾಗೂ ಅನಕ್ಷರಸ್ಥರ ಬಳಿ ಚುನಾವಣಾ ಆಯೋಗ ಕೇಳುವ ಬಹುತೇಕ ದಾಖಲೆಗಳು ಇರುವುದಿಲ್ಲ. ಇದರಿಂದ ಬಹುತೇಕರು ಮತದಾರರ ಪಟ್ಟಿಯಿಂದ ಹೊರಗುಳಿಯುವ ಅಪಾಯವಿದೆ. ಇದರಿಂದ ಸರ್ಕಾರಿ ಸೌಲಭ್ಯಗಳು ಕೈತಪ್ಪುವ ಸಾಧ್ಯತೆಯಿದೆ. ಆದ್ದರಿಂದ ಈ ವರ್ಗದವರಿಗಾಗುವ ಹಾನಿ ತಡೆಯಲು ರಾಜ್ಯ ಸರ್ಕಾರವು ನಮ್ಮ ರಕ್ಷಣೆಗೆ ಅವಶ್ಯವಾದ ದಾಖಲೆಗಳು ಬೇಗನೆ ಸಿಗುವಂತೆ ಕ್ರಮವಹಿಸಬೇಕು' ಎಂದು ಸಂಘದ ಗೌರವಾಧ್ಯಕ್ಷ ಯು.ಬಸವರಾಜ, ಅಧ್ಯಕ್ಷೆ ಜಿ. ಹುಲಿಗೆಮ್ಮ ಹಾಗೂ ಪ್ರಧಾನ ಕಾರ್ಯದರ್ಶಿ ಬಿ. ಮಾಳಮ್ಮ ಆಗ್ರಹಿಸಿದ್ದಾರೆ.

'ಚುನಾವಣಾ ಆಯೋಗ ನಿಗದಿಪಡಿಸಿದ 11 ದಾಖಲೆಗಳ ಪೈಕಿ ಒಂದು ದಾಖಲೆಯನ್ನೂ ಒದಗಿಸಲು ಸಾಧ್ಯವಿಲ್ಲವೊ ಅಂತಹವರಿಗೆ, ಜನನ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ, ವಾಸದ ದೃಢೀಕರಣ ಪತ್ರ ಸೇರಿ ಅಗತ್ಯ ದಾಖಲೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ನಿಯಮಗಳನ್ನು ಸರಳಗೊಳಿಸಬೇಕು. ಸುಲಭವಾಗಿ ಮತ್ತು ಶೀಘ್ರವಾಗಿ ದಾಖಲೆಗಳನ್ನು ರಾಜ್ಯ ಸರ್ಕಾರವೇ ಒದಗಿಸಲು ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಇನ್ನು ಖಾಲಿ ಹುದ್ದೆ ಭರ್ತಿ ಪರ್ವ

ಒಂದನೇ ಪುಟದಿಂದ...

'ಜೂನ್ 30ರೊಳಗೆ ಬರುವ ಎಲ್ಲ ಪ್ರಸ್ತಾವಗಳನ್ನು ಸೇರಿಸಿ ವೇಳಾಪಟ್ಟಿ ತಯಾರಿಸಿ, ಆಯೋಗದ ಅನುಮೋದನೆ ಪಡೆದು ಬಿಡುಗಡೆ ಮಾಡಲಾಗುವುದು. ಆರು ತಿಂಗಳ ಒಳಗೆ ಗ್ರೂಪ್ 'ಸಿ' ಹುದ್ದೆಯ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಹೀಗೆ ಮಾಡುವ ಮೂಲಕ ವರ್ಷಕ್ಕೆ ಎರಡು ಬಾರಿ ಗ್ರೂಪ್ 'ಸಿ' ಹುದ್ದೆಗಳಿಗೆ ನೇಮಕಾತಿ ನಡೆಸಬಹುದು' ಎಂದರು.

ಹೊಸ ತಂತ್ರಾಂಶ: ನೇಮಕಾತಿ ಪ್ರಕ್ರಿಯೆ ಸುಗಮ ಮತ್ತು ಸರಳಗೊಳಿಸಲು ಇ-ಆಡಳಿತದ ಸಹಯೋಗದಲ್ಲಿ ಹೊಸ ತಂತ್ರಾಂಶ ಅಭಿವೃದ್ಧಿಗೊಳಿಸುವ ಕೆಲಸವೂ ನಡೆಯುತ್ತಿದೆ. ಪರೀಕ್ಷಾ ಪೂರ್ವ ಮತ್ತು ನಂತರದ ಎಲ್ಲ ಪ್ರಕ್ರಿಯೆಗಳನ್ನು ನಡೆಸಲು, ಡಿಜಿಟಲ್ ಮೌಲ್ಯಮಾಪನ ಹೀಗೆ ಇತರ ಆಯ್ಕೆಗಳಿಗೆ ಹೊಸ ತಂತ್ರಾಂಶದಲ್ಲಿ ಅವಕಾಶ ಇರಲಿದೆ. ಹೊಸ ಮಾದರಿಯ ಒಎಂಆರ್ ಶೀಟ್ ಪರಿಚಯಿಸಲು ಕೂಡಾ ಉದ್ದೇಶಿಸಿದ್ದೇವೆ. ಅಗತ್ಯ ಆರ್ಥಿಕ ನೆರವು ನೀಡುವುದಾಗಿ ಆರ್ಥಿಕ ಇಲಾಖೆ ಕೂಡಾ ಒಪ್ಪಿದೆ' ಎಂದರು.

'ಆಯೋಗದಲ್ಲಿ ಶೇ 50ರಷ್ಟು ಸಿಬ್ಬಂದಿ ಕೊರತೆಯಿದೆ. ಈ ಕಾರಣಕ್ಕೆ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿದೆ. ಆಯೋಗದ ಸಿಬ್ಬಂದಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ನಗರಪಾಲಿಕೆಗಳ ಚುನಾವಣೆ ಹಾಗೂ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕೆಲಸಕ್ಕೆ ಬಳಸಿಕೊಳ್ಳದಂತೆ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಜಿಬಿಎ ಮುಖ್ಯ ಆಯುಕ್ತರು ಮತ್ತು ಜಿಬಿಎ ವ್ಯಾಪ್ತಿಯ ಎಲ್ಲ ಐದು ಪಾಲಿಕೆಗಳ ಆಯುಕ್ತರಿಗೆ ಪತ್ರ ಬರೆದು ಮನವಿ ಮಾಡಲಾಗಿದೆ' ಎಂದೂ ತಿಳಿಸಿದರು.

ಎಷ್ಟು ಹುದ್ದೆಗಳ ನೇಮಕಾತಿಗೆ ವೇಳಾಪಟ್ಟಿ

ಕೆಇಎ

ಇಲಾಖೆ	ಹುದ್ದೆಗಳ ಸಂಖ್ಯೆ (ಗ್ರೂಪ್ 'ಸಿ')
ಪೊಲೀಸ್ ಕಾನ್‌ಸ್ಟೆಬಲ್ (ಡಿಎಆರ್)	1,600
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್)	800
ಜಲಸಂಪನ್ಮೂಲ	122
ಪ್ರವಾಸೋದ್ಯಮ	18
ಕೈಮಗ್ಗ	22

ಕೆಪಿಎಸ್‌ಸಿ

ಇಲಾಖೆ	ಹುದ್ದೆಗಳ ಸಂಖ್ಯೆ
ಜಲಸಂಪನ್ಮೂಲ (ಎಇಇ- ಮೆಕ್ಯಾನಿಕಲ್)	3
ಸಮಾಜ ಕಲ್ಯಾಣ (ವಾರ್ಡನ್–ಮಹಿಳೆ)	31
ಜಲಸಂಪನ್ಮೂಲ (ಎಇಇ- ಸಿವಿಲ್)	27
ಸಮಾಜ ಕಲ್ಯಾಣ (ವಾರ್ಡನ್–ಪುರುಷ)	251
ನಗರ ಮತ್ತು ಗ್ರಾಮಾಂತರ ಯೋಜನೆ (ವಿವಿಧ ಹುದ್ದೆಗಳು)	121
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ	2
ಪುರಾತತ್ವ ವಸ್ತುಸಂಗ್ರಹಾಲಯ ಮತ್ತು ಪರಂಪರೆ	5

ವೇಳಾಪಟ್ಟಿಯಂತೆ ನೇಮಕಾತಿ: 'ಮುಖ್ಯ ಕಾರ್ಯದರ್ಶಿ ನೀಡಿರುವ ನಿರ್ದೇಶನದಂತೆ ನೇಮಕಾತಿ ಪ್ರಕ್ರಿಯೆ ನಡೆಸಲು ನಾವು ಈಗಾಗಲೇ ವೇಳಾಪಟ್ಟಿ ತಯಾರಿಸಿದ್ದೇವೆ. ಗೃಹ ಇಲಾಖೆಯಿಂದ ಬಂದಿರುವ ಕಾನ್‌ಸ್ಟೆಬಲ್ (ಡಿಎಆರ್) 1,600 ಹುದ್ದೆಗಳು ಮತ್ತು ವಿವಿಧ ಇಲಾಖೆಗಳ ಒಟ್ಟು 962 ಗ್ರೂಪ್ 'ಸಿ' ಹುದ್ದೆಗಳ ನೇಮಕಾತಿಗೆ ವೇಳಾಪಟ್ಟಿ ಸಿದ್ಧಪಡಿಸಿದ್ದೇವೆ. ಸೋಮವಾರದ (ಜೂನ್ 15) ಒಳಗೆ ಬರುವ ಪ್ರಸ್ತಾವಗಳಿಗೆ ಇದೇ 20ರಂದು ಅಧಿಸೂಚನೆ ಹೊರಡಿಸುತ್ತೇವೆ. ಈ ಪ್ರಸ್ತಾವಗಳಿಗೆ ಜೂನ್ 23ರಿಂದ ಜುಲೈ 18ರವರೆಗೆ ಅರ್ಜಿ ಆಹ್ವಾನಿಸಿ, ಪರೀಕ್ಷೆ ನಡೆಸಲು ವೇಳಾಪಟ್ಟಿ ಸಿದ್ಧಪಡಿಸಿದ್ದೇವೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದರು.

'ಜೂನ್ 15ರಿಂದ ಆಗಸ್ಟ್ 23ರವರೆಗೆ ಸ್ವೀಕೃತವಾಗುವ ನೇಮಕಾತಿ ಪ್ರಸ್ತಾವಗಳಿಗೆ ಸೆ. 1ರಂದು ಅಧಿಸೂಚನೆ ಹೊರಡಿಸಲು ಹಾಗೂ ಸೆ. 3ರಿಂದ 30ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ಪರೀಕ್ಷೆ ನಡೆಸಲು ವೇಳಾಪಟ್ಟಿ ತಯಾರಿಸಿದ್ದೇವೆ. ಇದಕ್ಕೆ ಅನುಗುಣವಾಗಿ ಪ್ರಸ್ತಾವಗಳನ್ನು ಕಳುಹಿಸಿದರೆ ಕಾಲಮಿತಿಯಲ್ಲಿ ನೇಮಕಾತಿ ಪ್ರಕ್ರಿಯೆ ಮುಗಿಸಬಹುದು' ಎಂದೂ ಹೇಳಿದರು.

'ದಲಿತ ಉಪ ಮುಖ್ಯಮಂತ್ರಿಗೆ ಗೌರವ ನಿರಾಕರಣೆ'



ಛಲವಾದಿ ನಾರಾಯಣ ಸ್ವಾಮಿ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಾಹೀರಾತುಗಳಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಚಿತ್ರವನ್ನಷ್ಟೇ ಪ್ರಕಟಿಸಿ, ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಅವರ ಚಿತ್ರ ಕೈಬಿಟ್ಟಿರುವುದಕ್ಕೆ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಕಾಂಗ್ರೆಸ್ ದಲಿತ ವಿರೋಧಿ ಎಂಬುದನ್ನು ಇದು ಮತ್ತೊಮ್ಮೆ ಸಾಬೀತುಪಡಿಸಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಅಧಿಕಾರದ ವ್ಯವಸ್ಥೆಯೊಳಗೆ ಇನ್ನೂ ಜೀವಂತವಾಗಿರುವ ಸುಪ್ತ ಅಸ್ಪೃಶ್ಯತೆ ಹಾಗೂ ದಲಿತರ ಬಗೆಗಿನ ಕೀಳರಿಮೆಯನ್ನು ಇತ್ತೀಚಿನ ಕೆಲ ಘಟನೆಗಳು ಬಹಿರಂಗಗೊಳಿಸಿವೆ' ಎಂದಿದ್ದಾರೆ.

'ಇತ್ತೀಚೆಗೆ ದಲಿತ ಸಮುದಾಯದ ಸ್ವಾಮೀಜಿಗಳಿಗೆ ವಿಧಾನಸೌಧ ಪ್ರವೇಶ ನಿರಾಕರಿಸಿ, ಗೇಟ್‌ನಿಂದಲೇ ತಳ್ಳಾಡಿ ಹೊರಹಾಕಲಾಗಿತ್ತು. ಇದು ಕೇವಲ ವ್ಯಕ್ತಿಗಳ ಮೇಲಿನ ಅವಮಾನವಲ್ಲ, ಇದು ಪ್ರಜಾಪ್ರಭುತ್ವದ ದೇವಾಲಯದಲ್ಲಿಯೇ ಪ್ರದರ್ಶಿಸಲಾದ ಸಾಮಾಜಿಕ ಅಸ್ಪೃಶ್ಯತೆಯ ಪರಮಾವಧಿ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮುಖ್ಯಮಂತ್ರಿ ಅವರ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದಿಂದ ದಲಿತ ಸಮುದಾಯದ ಸ್ವಾಮೀಜಿಗಳನ್ನು ಉದ್ದೇಶಪೂರ್ವಕವಾಗಿ ದೂರವಿ ಡಲಾಗಿತ್ತು. ಹಿಂದಿನ ಆಡಳಿತಾವಧಿಯಲ್ಲಿ ಉಪ ಮುಖ್ಯಮಂತ್ರಿ ಅವರಿಗೆ ದೊರೆಯುತ್ತಿದ್ದ ಗೌರವ, ಪ್ರಾಮುಖ್ಯ ಮತ್ತು ಆಡಳಿತಾತ್ಮಕ ಪ್ರಭಾವವನ್ನು ಈಗಿನ ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಅವರಿಗೆ ಏಕೆ ನೀಡುತ್ತಿಲ್ಲ' ಎಂದು ಪ್ರಶ್ನಿಸಿದ್ದಾರೆ.

ಅಧ್ಯಾಪಕರಿಗೆ ವಾಸಿಯಾಗದ ಕಾಯಿಲೆ ಸಂಕಷ್ಟ

ಒಂದನೇ ಪುಟದಿಂದ...

'ವಿಶೇಷ ಪ್ರಕರಣಗಳ ವರ್ಗಾವಣೆಯನ್ನು ಹಲವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ನಕಲಿ ಅಂಗವಿಕಲ ಪ್ರಮಾಣಪತ್ರ, ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸಿ, ವರ್ಗಾವಣೆ ಪಡೆಯುತ್ತಿದ್ದಾರೆ. ಇದರಿಂದ ನೈಜ ಅಭ್ಯರ್ಥಿಗಳಿಗೆ ಇಂತಹ ಕೋಟಾಗಳ ಪ್ರಯೋಜನ ಸಿಗುತ್ತಿಲ್ಲ. ಕಾಲೇಜು ಶಿಕ್ಷಣ ಇಲಾಖೆಯ ವಿಶೇಷ ಅಧಿಕಾರಿಗಳ ಹುದ್ದೆಯಲ್ಲಿ ಬೇರೂರಿರುವ ಕೆಲ ಅಧ್ಯಾಪಕರ ಸಹಕಾರ ಇಂಥವರಿಗೆ ಸಿಗುತ್ತಿದೆ. ಈ ಕುರಿತು ಸೂಕ್ತ ತನಿಖೆ ನಡೆಸಬೇಕು' ಎಂದು ಒತ್ತಾಯಿಸುತ್ತಾರೆ ಅಧ್ಯಾಪಕ ಸುನಿಲ್ ಕುಮಾರ್.

2 ತಿಂಗಳು ವಿಸ್ತರಣೆಗೆ ಒತ್ತಾಯ

ಸರ್ಕಾರಿ ಪದವಿ ಕಾಲೇಜುಗಳ ಅಧ್ಯಾಪಕರ ವರ್ಗಾವಣೆಗೆ ಸರ್ಕಾರ 2021 ರವರೆಗೂ ಸೂಕ್ತ ನಿಯಮಗಳನ್ನೇ ರೂಪಿಸಿರಲಿಲ್ಲ. 2009ರ ನಂತರ ವರ್ಗಾವಣಾ ಪ್ರಕ್ರಿಯೆಗಳು ಸಂಪೂರ್ಣ ಸ್ಥಗಿತವಾಗಿದ್ದವು. 2021ರಲ್ಲಿ ನಿಯಮಗಳನ್ನು ರೂಪಿಸಿ, 2022ರ ಏಪ್ರಿಲ್‌ನಲ್ಲಿ ವರ್ಗಾವಣೆಗೆ ಚಾಲನೆ ನೀಡಲಾಗಿತ್ತು.

2023ರ ಆಗಸ್ಟ್– ಸೆಪ್ಟೆಂಬರ್‌ನಲ್ಲಿ ಎರಡು ಬಾರಿ ವರ್ಗಾವಣೆ ಮಾಡಲಾಗಿತ್ತು. ಅಂದು ವಿಶೇಷ ಪ್ರಕರಣದ ಅಡಿ ವರ್ಗವಾಗಿದ್ದ ಅಧ್ಯಾಪಕರು ಮತ್ತೆ ಅರ್ಜಿ ಸಲ್ಲಿಸಲು (ಕನಿಷ್ಠ 3 ವರ್ಷ) 2 ತಿಂಗಳು ವ್ಯತ್ಯಾಸವಾಗುತ್ತದೆ. ಅದಕ್ಕಾಗಿ ವರ್ಗಾವಣೆ ಪ್ರಕ್ರಿಯೆಯನ್ನು ಎರಡು ತಿಂಗಳು ಮುಂದೂಡಬೇಕು. ಇಲ್ಲವೇ, 2 ತಿಂಗಳ ನಂತರವೇ ವರ್ಗಾವಣೆ ಆದೇಶ ಪತ್ರ ನೀಡಬೇಕು ಎಂದು ಕೆಲ ಅಧ್ಯಾಪಕರು ಆಯುಕ್ತರನ್ನು ಒತ್ತಾಯಿಸಿದ್ದಾರೆ.

'ಮಹಾರಾಣಿ' ಮುಕ್ತ ಪ್ರವೇಶಕ್ಕೆ ಪತ್ರ

ಒಂದನೇ ಪುಟದಿಂದ...

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಮತ್ತು ನೃಪತುಂಗ ವಿಶ್ವವಿದ್ಯಾಲಯದ ಅಧ್ಯಾಪಕರನ್ನು ನಿಯಮಾನುಸಾರ ವರ್ಗಾವಣೆ ಮಾಡಿ, ಖಾಲಿಯಾದ ಆ ಸ್ಥಳಗಳನ್ನು ರಾಜ್ಯದ ಇತರೆ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರಿಗೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಬೇಕು. ವಿಭಾಗ ವಾರು ವಿದ್ಯಾರ್ಥಿಗಳ ಸಂಖ್ಯೆ, ಕಾರ್ಯಭಾರದ ಆಧಾರದ ಮೇಲೆ ಅಧ್ಯಾಪಕರನ್ನು ಮರುಹೊಂದಾಣಿಕೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಎಸ್.ಸಿ, ಎಸ್.ಟಿ ಅಧ್ಯಾಪಕರ ಸಂಘ ಒತ್ತಾಯಿಸಿದೆ.

ಅಂಬಲಪಾಡಿ ಬೈಪಾಸ್‌ನ ಹದಗೆಟ್ಟ ರಸ್ತೆಯಲ್ಲಿ ನೀರು ನಿಂತು ವಾಹನ ದಟ್ಟಣೆ

ದ.ಕ., ಉಡುಪಿ ಜಿಲ್ಲೆ: ಜೋರು ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು/ಉಡುಪಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮುಂಗಾರು ಚುರುಕುಗೊಂಡಿದ್ದು ಭಾನುವಾರ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಹಲವು ಕಡೆಗಳಲ್ಲಿ ಬೆಳಿಗ್ಗೆ ಗುಡುಗಿನಿಂದ ಕೂಡಿದ ಮಳೆಯಾಗಿದ್ದು ಉಡುಪಿ ಜಿಲ್ಲೆಯಾದ್ಯಂತ ಶನಿವಾರ ರಾತ್ರಿಯಿಂದ ಭಾನುವಾರ ಮಧ್ಯಾಹ್ನದವರೆಗೂ ಬಿರುಸಿನ ಮಳೆಯಾಗಿದೆ.

ಮಂಗಳೂರು ನಗರದಲ್ಲಿ ಮಧ್ಯಾಹ್ನದವರೆಗೆ ಜೋರಾಗಿದ್ದು ನಂತರ ಸ್ವಲ್ಪ ಬಿಸಿಲು ಕಾದಿದೆ. ಸಂಜೆಯಿಂದ ಮೋಡ ಮುಸುಕಿದ ವಾತಾವರಣ ಇತ್ತು.

ಉಡುಪಿ ನಗರದಲ್ಲಿ ಭಾನುವಾರ ಜೋರು ಮಳೆಯಾಗಿದೆ –ಪ್ರಜಾವಾಣಿ ಚಿತ್ರ

ಉಡುಪಿ ಜಿಲ್ಲೆಯ ಬ್ರಹ್ಮಾವರ, ಕುಂದಾಪುರ, ಬೈಂದೂರು, ಕಾಪು, ಹೆಬ್ರಿ, ಕಾರ್ಕಳ ವ್ಯಾಪ್ತಿಯಲ್ಲೂ ಉತ್ತಮ ಮಳೆಯಾಗಿದೆ. ಬಿರುಸಿನ ಮಳೆಯಿಂದಾಗಿ ಉಡುಪಿ ನಗರ ವ್ಯಾಪ್ತಿಯಲ್ಲಿ ವಿವಿಧೆಡೆ ರಸ್ತೆಗಳಲ್ಲಿ ಮಳೆ ನೀರು ನಿಂತಿತ್ತು. ಅಂಬಲಪಾಡಿ ಬೈಪಾಸ್‌ನ ಹದಗೆಟ್ಟ ರಸ್ತೆಯಲ್ಲಿ ಮಳೆ ನೀರು ನಿಂತು ವಾಹನ ದಟ್ಟಣೆ ಉಂಟಾಯಿತು.

ಭಾನುವಾರ ಬೆಳಿಗ್ಗೆ ಎಂಟು ಗಂಟೆಗೆ ಕೊನೆಗೊಂಡ 24 ತಾಸುಗಳಲ್ಲಿ ಕುಂದಾಪುರದಲ್ಲಿ 3.6 ಸೆಂ.ಮೀ, ಉಡುಪಿಯಲ್ಲಿ 5.3 ಸೆಂ.ಮೀ, ಬೈಂದೂರಿನಲ್ಲಿ 3.8 ಸೆಂ.ಮೀ, ಬ್ರಹ್ಮಾವರದಲ್ಲಿ 3.6 ಹಾಗೂ ಕಾಪುವಿನಲ್ಲಿ 5.7 ಸೆಂ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

₹19 ಲಕ್ಷ ಕೋಟಿ ಹೂಡಿಕೆ ನಿರೀಕ್ಷೆ: ವೈಷ್ಣವ್

ಹೆಚ್ಚಲಿದೆ ಮೆಮೊರಿ ಚಿಪ್ ತಯಾರಿಕೆ

ನವದೆಹಲಿ (ಪಿಟಿಐ): 'ದೇಶದಲ್ಲಿ ಹೆಚ್ಚಿನ ಕಂಪನಿಗಳು ಮೆಮೊರಿ ಚಿಪ್‌ಗಳ ತಯಾರಿಕೆಯನ್ನು ಆರಂಭಿಸುವ ನಿರೀಕ್ಷೆ ಇದೆ' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಹೊಸ ಕಂಪನಿಗಳು ಮೆಮೊರಿ ಚಿಪ್‌ಗಳ ತಯಾರಿಕೆಗೆ ಹೂಡಿಕೆ ಮಾಡಲಿವೆ. ಅಲ್ಲದೆ, ಈಗಾಗಲೇ ಇರುವ ಕಂಪನಿಗಳು ಉತ್ಪಾದನೆ ಪ್ರಮಾಣವನ್ನು ಹೆಚ್ಚಿಸಲಿವೆ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಕಳೆದ ಕೆಲವು ತಿಂಗಳಿನಿಂದ ಹೆಚ್ಚಿನ ಬೆಲೆ ಮತ್ತು ಜಾಗತಿಕ ಮಟ್ಟದಲ್ಲಿನ ಪೂರೈಕೆ ಸಮಸ್ಯೆಯಿಂದಾಗಿ ಮೆಮೊರಿ ಚಿಪ್‌ಗಳ ಲಭ್ಯತೆಗೆ ಸಮಸ್ಯೆ ಉಂಟಾಗಿದೆ. ಹೀಗಾಗಿ ಮೆಮೊರಿ ಕಾರ್ಡ್ ಮತ್ತು ಸುಧಾರಿತ ಚಿಪ್‌ಗಳಿಗೆ ಬೇಡಿಕೆ ಹೆಚ್ಚಿದೆ. ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ಪೂರೈಸಲು ತಯಾರಕರು ಹೂಡಿಕೆ ಪ್ರಮಾಣವನ್ನು ಹೆಚ್ಚಿಸಿದ್ದಾರೆ. ಚಿಪ್‌ಗಳ ಬೆಲೆ ಏರಿಕೆಯಿಂದ ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಸೇರಿದಂತೆ ವಿವಿಧ ಎಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದನಾ ವೆಚ್ಚದಲ್ಲಿ ಏರಿಕೆಯಾಗಿದೆ.

ಜಾಗತಿಕ ಮಟ್ಟದಲ್ಲಿ ಮೆಮೊರಿ ಚಿಪ್‌ಗಳ ಬೇಡಿಕೆ- ಪೂರೈಕೆ ನಡುವೆ ಅಸಮತೋಲನ ಉಂಟಾಗಿದೆ. ಹೆಚ್ಚಿನ ಘಟಕಗಳನ್ನು ಸ್ಥಾಪಿಸುವ ಮೂಲಕ ಕೊರತೆಯನ್ನು ತುಂಬಲಾಗುತ್ತಿದೆ

ಅಶ್ವಿನಿ ವೈಷ್ಣವ್, ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ

ಮೆಮೊರಿ ಚಿಪ್‌ಗಳ ತಯಾರಿಕಾ ಘಟಕದಲ್ಲಿ ಅತಿ ಹೆಚ್ಚಿನ ಹೂಡಿಕೆ ಖಂಡಿತ ಆಗಲಿದೆ. ಕೃತಕ ಬುದ್ಧಿಮತ್ತೆ ದತ್ತಾಂಶ ಕೇಂದ್ರಗಳಿಗೆ ಉನ್ನತ ಮಟ್ಟದ ಮೆಮೊರಿ ಚಿಪ್‌ಗಳ ಅಗತ್ಯವಿದೆ. ಆದರೆ, ಇದೇ ಮೊದಲ ಬಾರಿಗೆ ಚಿಪ್‌ಗಳಿಗೆ ಹೆಚ್ಚಿನ ಕೊರತೆ ಉಂಟಾಗಿದೆ ಎಂದು ಹೇಳಿದ್ದಾರೆ.

ಅತಿ ಶೀಘ್ರದಲ್ಲಿ ದತ್ತಾಂಶ ಕೇಂದ್ರಗಳ ಮೇಲಿನ ಹೂಡಿಕೆಯು ದೇಶದಲ್ಲಿ ₹19 ಲಕ್ಷ ಕೋಟಿಗೂ (200 ಬಿಲಿಯನ್ ಡಾಲರ್) ಹೆಚ್ಚಾಗಬಹುದು ಎಂದು ಹೇಳಿದ್ದಾರೆ.

ದೇಶದ ದತ್ತಾಂಶ ಕ್ಷೇತ್ರದಲ್ಲಿ ಹೆಚ್ಚಿನ ಪ್ರತಿಭಾವಂತರಿದ್ದಾರೆ. ಕಳೆದ ದಶಕದಲ್ಲಿ 2 ಲಕ್ಷ ಕಿ.ಮೀ ಗೂ ಹೆಚ್ಚು ಗ್ರಿಡ್ ಅನ್ನು ನಿರ್ಮಿಸಲಾಗಿದ್ದು, ಇದು ಹೆಚ್ಚು ಸದೃಢವಾಗಿದೆ. ನವೀಕರಿಸಬಹುದಾದ ಇಂಧನವು ಅತಿ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿದೆ. ಈ ಅಂಶಗಳು ಭಾರತಕ್ಕೆ ದತ್ತಾಂಶ ಕೇಂದ್ರಗಳನ್ನು ಬರುವಂತೆ ಆಕರ್ಷಣೆ ಮಾಡುತ್ತಿವೆ ಎಂದಿದ್ದಾರೆ.

ಹೂಡಿಕೆದಾರರ ಕೈಹಿಡಿದ 'ಸಣ್ಣ ಉಳಿತಾಯ'

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಷೇರು ಹೂಡಿಕೆ v/s ಸಣ್ಣ ಉಳಿತಾಯ – ನಿಮಗೆ ಸರಿ ಹೊಂದುವುದು ಯಾವುದು?

ಹೂಡಿಕೆಯ ಮಾನದಂಡ	ಷೇರು ಮಾರುಕಟ್ಟೆ/ಮ್ಯೂಚುವಲ್ ಫಂಡ್ (ಈಕ್ವಿಟಿ)	ಸಣ್ಣ ಉಳಿತಾಯ ಯೋಜನೆಗಳು (ಅಂಚೆ ಕಚೇರಿ)
ಪ್ರಸ್ತುತ ಸ್ಥಿತಿ (ಕಳೆದ 2 ವರ್ಷ)	ನಿರಾಶಾದಾಯಕ (ನಿಫ್ಟಿ 100 ಸೂಚ್ಯಂಕ ಶೇ -0.15ರಷ್ಟು ನಷ್ಟದಲ್ಲಿದೆ)	ಉತ್ತಮ ಗಳಿಕೆ (ರಿಸ್ಕ್ ಇಲ್ಲದೆ ಶೇ 7.1ರಿಂದ 8.2ರಷ್ಟು ಸ್ಥಿರ ಗಳಿಕೆ)
ಬಂಡವಾಳದ ಸುರಕ್ಷತೆ	ಮಾರುಕಟ್ಟೆಯ ರಿಸ್ಕ್ ಇರುತ್ತದೆ. ಕಂಪನಿಗಳ ಗಳಿಕೆ ಮತ್ತು ಮಾರುಕಟ್ಟೆ ಏರಿಳಿತ ಆಧರಿಸಿರುತ್ತದೆ	ಶೇ 100ರಷ್ಟು ಸುರಕ್ಷಿತ. ಕೇಂದ್ರ ಸರ್ಕಾರವೇ ಇದಕ್ಕೆ ಗ್ಯಾರಂಟಿ ನೀಡುವುದರಿಂದ ಬಂಡವಾಳ ನಷ್ಟದ ಭಯವಿಲ್ಲ
ದೀರ್ಘಾವಧಿ ಲಾಭ (10-20 ವರ್ಷ)	ಭರ್ಜರಿ ಗಳಿಕೆ (ಶೇ 11ರಿಂದ ಶೇ 17ರವರೆಗೆ). ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸಲು ಅನುಕೂಲ	ಸ್ಥಿರ ಹಾಗೂ ಸೀಮಿತ ಲಾಭ (ಶೇ 7 ರಿಂದ ಶೇ 8.2). ಬಂಡವಾಳ ಸುರಕ್ಷಿತವಾಗಿಡಲು ಸೂಕ್ತ
ಹಣದ ನಗದೀಕರಣ (ಲಿಕ್ವಿಡಿಟಿ)	ಅತ್ಯಂತ ಸುಲಭ. ತುರ್ತು ಸಂದರ್ಭದಲ್ಲಿ ಕೇವಲ 2 ದಿನಗಳಲ್ಲಿ ಹೂಡಿಕೆಯನ್ನು ಹಿಂಪಡೆದು ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಳ್ಳಬಹುದು	ಕಠಿಣ ಲಾಕ್-ಇನ್ ಅವಧಿ. ಪಿಪಿಎಫ್ (15 ವರ್ಷ), ಸುಕನ್ಯಾ ಸಮೃದ್ಧಿ (21 ವರ್ಷ) ಇರುವುದರಿಂದ ಮಧ್ಯದಲ್ಲಿ ಹಣ ಪಡೆಯುವುದು ಕಷ್ಟ. ಆದರೆ ಅಲ್ಪಾವಧಿ ಹೂಡಿಕೆಗಳೂ ಅಂಚೆ ಕಚೇರಿಯಲ್ಲಿವೆ
ತೆರಿಗೆ ವಿನಾಯಿತಿ	ದೀರ್ಘಾವಧಿ ಬಂಡವಾಳ ಲಾಭದ ತೆರಿಗೆ (ಎಲ್‌ಟಿಸಿಜಿ) ವಿನಾಯಿತಿ ಮಿತಿ ಹೆಚ್ಚಿರುತ್ತದೆ ಮತ್ತು ನಿಯಮಗಳು ಅನುಕೂಲಕರವಾಗಿವೆ	ಪಿಪಿಎಫ್ ಮತ್ತು ಸುಕನ್ಯಾ ಸಮೃದ್ಧಿ ಹೊರತುಪಡಿಸಿ, ಉಳಿದ ಯೋಜನೆಗಳ ಬಡ್ಡಿಯ ಮೇಲೆ ನಿಮ್ಮ ಆದಾಯ ತೆರಿಗೆ ಸ್ಲ್ಯಾಬ್ ಪ್ರಕಾರ ತೆರಿಗೆ
ಹಣದುಬ್ಬರ ಮೀರುವ ಶಕ್ತಿ	ಸುದೀರ್ಘ ಅವಧಿಯಲ್ಲಿ ದೇಶದ ಹಣದುಬ್ಬರ ದರ ಮೀರಿ ಲಾಭ ಕೊಡುತ್ತದೆ	ಹಣದುಬ್ಬರ ಶೇ 6 ಇದ್ದಾಗ, ಶೇ 7.5 ಬಡ್ಡಿ ಸಿಕ್ಕರೆ ನೈಜ ಲಾಭ ಕೇವಲ ಶೇ 1.5
ಹೂಡಿಕೆಗೆ ಸುವರ್ಣ ಸಮಯ?	ಹೌದು. ಮಾರುಕಟ್ಟೆ ಕುಸಿದಿರುವುದರಿಂದ ಉತ್ತಮ ಷೇರುಗಳು ರಿಯಾಯಿತಿ ದರದಲ್ಲಿ ಸಿಗುತ್ತಿದ್ದು, ಎಸ್ಐಪಿ (ಎಸ್‌ಐಪಿ) ಮಾಡಲು ಇದುವೇ ಸಕಾಲ	ಹೌದು. ಮಾರುಕಟ್ಟೆಯಲ್ಲಿ ಬಡ್ಡಿದರ ಕಡಿತದ ಮುನ್ಸೂಚನೆ ಇದ್ದರೂ ಸರ್ಕಾರ ಸದ್ಯಕ್ಕೆ ಗರಿಷ್ಠ ದರ ಕಾಯ್ದುಕೊಂಡಿರುವುದರಿಂದ ಈಗಲೇ ಹಣ ಹೂಡಬಹುದು

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಬೇಗ ಶ್ರೀಮಂತರಾಗಬಹುದು ಎಂಬ ಲೆಕ್ಕಾಚಾರ ಸದ್ಯಕ್ಕೆ ತಲೆಕೆಳಗಾಗಿದೆ. ಕಳೆದ ಎರಡು ವರ್ಷಗಳಿಂದ ಮಾರುಕಟ್ಟೆಯ ಏರಿಳಿತ ನೋಡಿ ಹೂಡಿಕೆದಾರರು ಕಂಗೆಟ್ಟಿದ್ದಾರೆ. ಈ ನಡುವೆ, ಯಾವುದೇ ರಿಸ್ಕ್ ಇಲ್ಲದ ಸರ್ಕಾರಿ ಸಣ್ಣ ಉಳಿತಾಯ ಯೋಜನೆಗಳು ಷೇರು ಮಾರುಕಟ್ಟೆಗಿಂತಲೂ ಹೆಚ್ಚಿನ ಲಾಭ ತಂದುಕೊಟ್ಟಿವೆ! ಹಾಗಾದರೆ, ಷೇರು ಮಾರುಕಟ್ಟೆಯನ್ನು ಕೈಬಿಟ್ಟು ಅಂಚೆ ಕಚೇರಿ ಯೋಜನೆಗಳಲ್ಲೇ ಹಣ ಹೂಡಬೇಕೇ?

ಷೇರು ಮಾರುಕಟ್ಟೆಯ ಪ್ರಮುಖ ಸೂಚ್ಯಂಕಗಳಾದ ನಿಫ್ಟಿ-100, ನಿಫ್ಟಿ ಮಿಡ್‌ಕ್ಯಾಪ್-150 ಮತ್ತು ನಿಫ್ಟಿ ಸ್ಮಾಲ್‌ಕ್ಯಾಪ್-250 ಕಳೆದ ಎರಡು ವರ್ಷಗಳಲ್ಲಿ ತೀರಾ ಸಾಧಾರಣ ಗಳಿಕೆ ನೀಡಿವೆ. ಇದೇ ಅವಧಿಯಲ್ಲಿ ಹಿರಿಯ ನಾಗರಿಕರ ಉಳಿತಾಯ ಯೋಜನೆ ಮತ್ತು ಸುಕನ್ಯಾ ಸಮೃದ್ಧಿ ಯೋಜನೆಗಳು ಶೇ 8.2ರಷ್ಟು ಸ್ಥಿರ ಗಳಿಕೆ ನೀಡಿ ಹೂಡಿಕೆದಾರರ ಮುಖದಲ್ಲಿ ನಗೆ ಮೂಡಿಸಿವೆ. ಇದರೊಂದಿಗೆ ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ) ಶೇ 7.70ರಷ್ಟು, ಅಂಚೆ ಕಚೇರಿ 5 ವರ್ಷದ ಅವಧಿ ಠೇವಣಿ ಮತ್ತು ಕಿಸಾನ್ ವಿಕಾಸ್ ಪತ್ರ ತಲಾ ಶೇ 7.50ರಷ್ಟು ಹಾಗೂ ಪಿಪಿಎಫ್ ಶೇ 7.1ರಷ್ಟು ಬಡ್ಡಿ ನೀಡುತ್ತಿವೆ. ವಿಶೇಷವೆಂದರೆ, ಸರ್ಕಾರವು 2025ರ ಜನವರಿಯಿಂದ ಈ ಯೋಜನೆಗಳ ಬಡ್ಡಿದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡಿರುವುದು ಹೂಡಿಕೆದಾರರಿಗೆ ದೊಡ್ಡ ವರವಾಗಿದೆ.

ಯಾರಿಗೆ ಸಣ್ಣ ಉಳಿತಾಯ ಸೂಕ್ತ?: ಸಣ್ಣ ಉಳಿತಾಯದ ಯೋಜನೆಗಳು ಮುಖ್ಯವಾಗಿ ಸ್ಥಿರತೆ ಮತ್ತು ಬಂಡವಾಳದ ಸುರಕ್ಷತೆಯನ್ನು ಬಯಸುವ ಸಾಂಪ್ರದಾಯಿಕ ಹೂಡಿಕೆದಾರರಿಗೆ ಸೂಕ್ತವಾಗಿವೆ. ಉದಾಹರಣೆಗೆ, ವಿಶ್ರಾಂತ ಜೀವನ ನಡೆಸುತ್ತಿರುವ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಶೇ 8.2ರಷ್ಟು ಬಡ್ಡಿ ನೀಡುವ ಹಿರಿಯ ನಾಗರಿಕರ ಉಳಿತಾಯ ಯೋಜನೆ (ಎಸ್‌ಸಿಎಸ್‌ಎಸ್) ಅತ್ಯುತ್ತಮ ಆಯ್ಕೆ. ಹೆಣ್ಣುಮಕ್ಕಳನ್ನು ಹೊಂದಿರುವ ಪೋಷಕರು ಮಗಳ ಶಿಕ್ಷಣ ಮತ್ತು ಮದುವೆಯ ಉದ್ದೇಶಕ್ಕಾಗಿ ಸಂಪೂರ್ಣ ತೆರಿಗೆ ಮುಕ್ತ ಗಳಿಕೆ ನೀಡುವ ಸುಕನ್ಯಾ ಸಮೃದ್ಧಿ ಯೋಜನೆ ಆಯ್ದುಕೊಳ್ಳಬಹುದು. ಹಾಗೆಯೇ, ಹಳೆಯ ತೆರಿಗೆ ಪದ್ಧತಿಯಡಿ ಸೆಕ್ಷನ್ 80ಸಿ ವಿನಾಯಿತಿ ಬಯಸುವವರು ಪಿಪಿಎಫ್ ಮತ್ತು ಎನ್‌ಎಸ್‌ಸಿ ಯೋಜನೆಗಳಲ್ಲಿ ಹಣ ಹೂಡಬಹುದು ಹಾಗೂ ನಿಶ್ಚಿತ ಮಾಸಿಕ ಆದಾಯ ಬೇಕಾದವರು ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆ (ಎಂಐಎಸ್) ಮೊರೆ ಹೋಗಬಹುದು.

ಷೇರುಪೇಟೆ, ಮ್ಯೂಚುವಲ್ ಫಂಡ್‌ಗಳು ಕಳಪೆಯಾಗಿದ್ದು ಏಕೆ?: ದೀರ್ಘಾವಧಿಯಲ್ಲಿ ಹಣದುಬ್ಬರ ಪ್ರಮಾಣ ಮೀರಿಸಿ ಲಾಭ ಕೊಡುವ ಸಾಧನಗಳೆಂದರೆ ಷೇರುಪೇಟೆ ಆಧಾರಿತ ಹೂಡಿಕೆಗಳು ಎಂಬ ನಂಬಿಕೆ ಇದೆ. ಆದರೆ ಅಲ್ಪಾವಧಿಯಲ್ಲಿ ಇವುಗಳ ತೀವ್ರ ಏರಿಳಿತ ಹೂಡಿಕೆದಾರರನ್ನು ಕಾಡುತ್ತದೆ. ಭಾರತದ ಪ್ರಮುಖ 100 ಕಂಪನಿಗಳನ್ನು ಪ್ರತಿನಿಧಿಸುವ ನಿಫ್ಟಿ-100 ಸೂಚ್ಯಂಕ ಕಳೆದ ಎರಡು ವರ್ಷಗಳಲ್ಲಿ ಶೇ -0.15ರಷ್ಟು ಗಳಿಕೆ ನೀಡಿದೆ, ನಿಫ್ಟಿ ನೆಕ್ಸ್ಟ್-50 ಸೂಚ್ಯಂಕ ಶೇ -0.38ರಷ್ಟು ಕುಸಿದಿದೆ. ನಿಫ್ಟಿ ಮಿಡ್‌ಕ್ಯಾಪ್-150 (ಶೇ 4.39) ಮತ್ತು ನಿಫ್ಟಿ ಸ್ಮಾಲ್‌ಕ್ಯಾಪ್ 250 (ಶೇ 1.12) ಕೂಡ ನಿರಾಶಾದಾಯಕವಾಗಿವೆ.

ಮ್ಯೂಚುವಲ್ ಫಂಡ್‌ಗಳ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಮಾರ್ನಿಂಗ್‌ಸ್ಟಾರ್ ಸಂಸ್ಥೆಯ ದತ್ತಾಂಶದ ಪ್ರಕಾರ, ಲಾರ್ಜ್ ಕ್ಯಾಪ್, ಫ್ಲೆಕ್ಸಿಕ್ಯಾಪ್ ಮತ್ತು ಮಲ್ಟಿಕ್ಯಾಪ್ ಫಂಡ್‌ಗಳು ಕಳೆದ ಒಂದು ವರ್ಷದಲ್ಲಿ ನಷ್ಟ ಉಂಟುಮಾಡಿವೆ ಮತ್ತು ಎರಡು ವರ್ಷಗಳ ಅವಧಿಯಲ್ಲಿ ಯಾವುದೇ ಪ್ರಮುಖ ಮ್ಯೂಚುವಲ್ ಫಂಡ್ ವಿಭಾಗವೂ ಶೇ 6ಕ್ಕಿಂತ ಹೆಚ್ಚಿನ ವಾರ್ಷಿಕ ಲಾಭ ನೀಡಿಲ್ಲ, ಅಂದರೆ ಪ್ರಸ್ತುತ ಬ್ಯಾಂಕ್‌ನ ನಿಶ್ಚಿತ ಠೇವಣಿಗಿಂತಲೂ ಇವುಗಳ ಗಳಿಕೆ ಕಳಪೆಯಾಗಿದೆ.

ಕಳೆದ 2 ವರ್ಷಗಳ ಅಂಕಿ-ಅಂಶಗಳನ್ನು ನೋಡಿ ಷೇರು ಮಾರುಕಟ್ಟೆಯಿಂದ ದೂರ ಓಡಬೇಕಾಗಿಲ್ಲ. ಏಕೆಂದರೆ ಈಕ್ವಿಟಿ ಎಂಬುದು ಅಲ್ಪಾವಧಿಯ ಆಟವಲ್ಲ, ಅದು ಸುದೀರ್ಘ ಪಯಣ. ಇತಿಹಾಸವನ್ನು ಗಮನಿಸಿದರೆ ದೀರ್ಘಾವಧಿಯಲ್ಲಿ ಈಕ್ವಿಟಿಗಳನ್ನು ಸೋಲಿಸಲು ಯಾರಿಂದಲೂ ಸಾಧ್ಯವಾಗಿಲ್ಲ.

ಉದಾಹರಣೆಗೆ, ನಿಫ್ಟಿ-100 ಸೂಚ್ಯಂಕವು ಕಳೆದ 10 ವರ್ಷಗಳಲ್ಲಿ ಶೇ 11.99 ಮತ್ತು 20 ವರ್ಷಗಳಲ್ಲಿ ಶೇ 10.64ರಷ್ಟು ವಾರ್ಷಿಕ ಲಾಭ ನೀಡಿದೆ. ಅಂದರೆ 20 ವರ್ಷಗಳ ಹಿಂದೆ ಯಾರಾದರೂ ₹1 ಲಕ್ಷ ಹೂಡಿಕೆ ಮಾಡಿದ್ದರೆ ಇಂದು ಅದರ ಮೌಲ್ಯ ₹9.04 ಲಕ್ಷ ಆಗಿರುತ್ತಿತ್ತು. ಅದೇ ರೀತಿ ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕ 20 ವರ್ಷಗಳಲ್ಲಿ ವಾರ್ಷಿಕವಾಗಿ ಶೇ 13.67ರಷ್ಟು ಲಾಭ ನೀಡಿದ್ದು, ಅಂದು ತೊಡಗಿಸಿದ ₹1 ಲಕ್ಷ ಇಂದು ಬರೋಬ್ಬರಿ ₹13 ಲಕ್ಷ ಆಗಿರುತ್ತಿತ್ತು. ಈ ಸುದೀರ್ಘಾವಧಿಯ ಲಾಭವನ್ನು ಸಣ್ಣ ಉಳಿತಾಯ ಯೋಜನೆಗಳಿಗೆ ಹೋಲಿಸಿದರೆ ಷೇರು ಮಾರುಕಟ್ಟೆಯೇ ಸ್ಪಷ್ಟ ವಿಜೇತನಾಗುತ್ತದೆ.

ಹೂಡಿಕೆದಾರರ ಜಾಣ್ಮೆ ಎಲ್ಲಿದೆ?: ಕಳೆದ 2 ವರ್ಷಗಳ ದತ್ತಾಂಶ ನೋಡಿ ಷೇರು ಮಾರುಕಟ್ಟೆಯಿಂದ ದೂರ ಸರಿಯುವ ನಿರ್ಧಾರಕ್ಕೆ ಬರುವುದು ತಪ್ಪು. ಸಣ್ಣ ಉಳಿತಾಯ ಯೋಜನೆಗಳು ಕಷ್ಟಕಾಲದ ಸ್ನೇಹಿತನಂತೆ ಕಾರ್ಯನಿರ್ವಹಿಸುತ್ತವೆ ಮತ್ತು ಮಾರುಕಟ್ಟೆ ಕುಸಿದಾಗಲೂ ಸ್ಥಿರ ಹಾಗೂ ಖಚಿತ ಆದಾಯ ನೀಡುತ್ತವೆ. ಆದರೆ ದೀರ್ಘಾವಧಿಯಲ್ಲಿ ದೊಡ್ಡ ಮೊತ್ತದ ಸಂಪತ್ತನ್ನು ಸೃಷ್ಟಿಸಲು ಈಕ್ವಿಟಿ ಅನಿವಾರ್ಯ. ಆದ್ದರಿಂದ, ಒಂದೇ ಕಡೆ ಹಣ ಹಾಕುವ ಬದಲು, ಎರಡೂ ಕಡೆ ಸಮತೋಲಿತವಾಗಿ ಹಣವನ್ನು ಹಂಚಿಕೆ ಮಾಡುವುದೇ ಜಾಣತನ.

ವಾಹನಗಳಿಗೆ ಸಂಪೂರ್ಣ ಎಥೆನಾಲ್ ಬಳಕೆಗೆ ಕೇಂದ್ರ ಸರ್ಕಾರ ಅಸ್ತು.. ಭಾರತದಲ್ಲಿ ಇದು ಕಾರ್ಯಸಾಧುವೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕರ್ನಾಟಕಕ್ಕೆ ಐದು ಪಟ್ಟು ಹೆಚ್ಚು ತೆರಿಗೆ ಹಂಚಿಕೆ: ನಿರ್ಮಲಾ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: 'ಕಾಂಗ್ರೆಸ್ ನೇತೃತ್ವದ ಯುಪಿಎ ಆಡಳಿತದ ಅವಧಿಗೆ ಹೋಲಿಸಿದರೆ ಕರ್ನಾಟಕಕ್ಕೆ ಕೇಂದ್ರ ಸರ್ಕಾರದಿಂದ ಐದು ಪಟ್ಟಿಗಿಂತಲೂ ಹೆಚ್ಚು ತೆರಿಗೆ ಹಂಚಿಕೆ ಮಾಡಲಾಗಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಭಾನುವಾರ ಪಟ್ಟಣದ ಹೊರ ವಲಯದ ಚೆನ್ನೈ ಕೈಗಾರಿಕಾ ಕಾರಿಡಾರ್ ಎಸ್‌ಟಿಆರ್‌ಆರ್ ವೀಕ್ಷಿಸಿದರು. ಬಳಿಕ ನಡೆದ ಮಾಧ್ಯಮ ಸಂವಾದಲ್ಲಿ ಮಾತನಾಡಿ, 'ಕರ್ನಾಟಕಕ್ಕೆ ಕೇಂದ್ರದಿಂದ ಅನ್ಯಾಯವಾಗುತ್ತಿದೆ' ಎಂಬ ರಾಜ್ಯ ಸರ್ಕಾರದ ಆರೋಪವನ್ನು ತಳ್ಳಿ ಹಾಕಿದರು.

'ಕರ್ನಾಟಕಕ್ಕೆ ಇದುವರೆಗೆ ₹4 ಲಕ್ಷ ಕೋಟಿ ತೆರಿಗೆ ಪಾಲು ನೀಡಲಾಗಿದೆ. ಬಂಡವಾಳ ಹೂಡಿಕೆ ಯೋಜನೆಗಳಿಗೆ 50 ವರ್ಷಗಳ ಅವಧಿಯ ₹18 ಸಾವಿರ ಕೋಟಿ ಬಡ್ಡಿರಹಿತ ಸಾಲ ಮಂಜೂರು ಮಾಡಲಾಗಿದೆ' ಎಂದು ಹೇಳಿದರು.

'ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗಾಗಿ ₹63 ಸಾವಿರ ಕೋಟಿ ಅನುದಾನ ನೀಡಲಾಗಿದೆ. ಇದರಡಿ 8,100 ಕಿ.ಮೀ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ. ರೈಲ್ವೆ ಮೂಲಸೌಕರ್ಯ ಅಭಿವೃದ್ಧಿಗೆ ₹7,700 ಕೋಟಿ ಹಾಗೂ ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್ ಯೋಜನೆಗೆ ₹7 ಸಾವಿರ ಕೋಟಿ ನೀಡಲಾಗಿದೆ' ಎಂದು ಮಾಹಿತಿ ನೀಡಿದರು.

'ನವೀಕರಿಸಬಹುದಾದ ಇಂಧನ ಯೋಜನೆಗಳಿಗಾಗಿ ₹1,354 ಕೋಟಿ ಮಂಜೂರು ಮಾಡಲಾಗಿದೆ. ಕೊಪ್ಪಳ, ಗದಗ ಜಿಲ್ಲೆಗಳು ಮುಂದಿನ ವರ್ಷದ ಜೂನ್ ವೇಳೆಗೆ ಹಸಿರು ಇಂಧನ ಕೇಂದ್ರಗಳಾಗಿ ರೂಪುಗೊಳ್ಳಲಿವೆ' ಎಂದು ತಿಳಿಸಿದರು.

ಮೊಟ್ಟೆ ಧಾರಣೆ (ಎನ್‌ಇಸಿಸಿ)

	ಬೆಂಗಳೂರು	ಮೈಸೂರು:
100 ಕ್ಕೆ	₹690	₹710
12 ಕ್ಕೆ	₹94	

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹420-689
ದ್ವಿತಳಿ (ಬಿ.ವಿ)	₹371-818

ಟಾಟಾ: ದಾನ ಕಾರ್ಯಕ್ಕೆ ಹೆಚ್ಚು ಹಣ

ನವದೆಹಲಿ (ಪಿಟಿಐ): ಮನುಕುಲಕ್ಕೆ ಒಳಿತಾಗುವ ಕಾರ್ಯಗಳಿಗಾಗಿ ಟಾಟಾ ಟ್ರಸ್ಟ್ಸ್ ಪ್ರಸಕ್ತ ಹಣಕಾಸು ವರ್ಷದಲ್ಲಿ ₹2,000 ಕೋಟಿ ವೆಚ್ಚ ಮಾಡಲಿದೆ ಎಂದು ಅದರ ಸಿಇಒ ಸಿದ್ಧಾರ್ಥ ಶರ್ಮಾ ಹೇಳಿದ್ದಾರೆ. ಇದು ಹಿಂದಿನ ವರ್ಷದಲ್ಲಿ ಮಾಡಿದ ವೆಚ್ಚಕ್ಕಿಂತ ಹೆಚ್ಚಿನದಾಗಿದೆ.

ಟಾಟಾ ಟ್ರಸ್ಟ್ಸ್‌ನಲ್ಲಿನ ಕೆಲವು ಗೊಂದಲಗಳ ಬಗ್ಗೆ ಮಾತ್ರ ಮಾಧ್ಯಮಗಳು ಗಮನ ನೀಡುತ್ತಿವೆ ಎಂದು ಅವರು ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಟಾಟಾ ಸನ್ಸ್‌ನಲ್ಲಿನ ಹೆಚ್ಚಿನ ಷೇರುಗಳನ್ನು ಹೊಂದಿರುವ ನಾವು, ನಮಗೆ ಸಿಗುವ ಲಾಭಾಂಶದ ಮೊತ್ತವನ್ನು ದಾನ ಕಾರ್ಯಗಳಿಗೆ, ಮನುಕುಲಕ್ಕೆ ಒಳ್ಳೆಯದನ್ನು ಮಾಡುವ ಕೆಲಸಗಳಿಗೆ ವಿನಿಯೋಗ ಮಾಡುತ್ತೇವೆ. ಈ ಕೆಲಸಗಳು ಸಮಾಜದ ಅಂಚಿನಲ್ಲಿರುವವರನ್ನು ಮುಂದಕ್ಕೆ ತರಲು, ದೇಶವನ್ನು ಕಟ್ಟಲು ನೆರವಾಗುತ್ತವೆ. 122 ವರ್ಷಗಳಿಂದ ಈ ಕೆಲಸ ನಡೆದುಬಂದಿದೆ' ಎಂದಿದ್ದಾರೆ.

2025-26ನೆಯ ಸಾಲಿನಲ್ಲಿ ಟಾಟಾ ಟ್ರಸ್ಟ್ಸ್ ಮೂಲಕ ₹1,600 ಕೋಟಿ ಮೊತ್ತದ ಇಂತಹ ಕೆಲಸಗಳು ಆಗಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಿಶ್ವದರ್ಜೆಯ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಲು ಟಾಟಾ ಟ್ರಸ್ಟ್ಸ್ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯೊಂದರ ಜೊತೆ ಸಹಭಾಗಿತ್ವವನ್ನು ಅಂತಿಮಗೊಳಿಸುತ್ತಿದೆ. ದೇಶದ ಮಧ್ಯಭಾಗದಲ್ಲಿ ಅತ್ಯಾಧುನಿಕ ಆಸ್ಪತ್ರೆ ನಿರ್ಮಾಣಕ್ಕೆ ನೆರವು ನೀಡುತ್ತಿದೆ ಎಂದು ತಿಳಿಸಿದ್ದಾರೆ.

ಒಮಾನ್: ಭಾರತೀಯನ ಸಾವು

ದುಬೈ (ಪಿಟಿಐ): ಒಮಾನ್‌ನ ಡುಕ್ಮ್ ಬಂದರಿನಲ್ಲಿರುವ ಹಡಗೊಂದರಲ್ಲಿದ್ದ ಭಾರತದ ವ್ಯಕ್ತಿಯೊಬ್ಬರು ಅನಾರೋಗ್ಯದಿಂದಾಗಿ ಮೃತಪಟ್ಟಿದ್ದಾರೆ.

'ಮೃತಪಟ್ಟಿರುವ ನಿಶಾಂತ್ ಉಯಿರ್‌ನಾಥನ್ ಅವರ ಮೃತದೇಹವನ್ನು ಸ್ವದೇಶಕ್ಕೆ ತರಲು ಪ್ರಯತ್ನಿಸಲಾಗುತ್ತಿದೆ' ಎಂದು ಮಸ್ಕತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಭಾನುವಾರ ಹೇಳಿದೆ. ಆದರೆ ಸಾವಿಗೆ ನಿಖರ ಕಾರಣವನ್ನು ತಿಳಿಸಿಲ್ಲ.

ಹಡಗಿನ ಎಂಜಿನ್ ವೈಫಲ್ಯ: 11 ಭಾರತೀಯರ ರಕ್ಷಣೆ

ದುಬೈ (ಪಿಟಿಐ): ಹಡಗಿನ ಎಂಜಿನ್ ವೈಫಲ್ಯದಿಂದಾಗಿ ಒಮನ್ ಕರಾವಳಿಯಲ್ಲಿ ಸಿಲುಕಿದ್ದ 11 ಮಂದಿ ಭಾರತೀಯ ಸಿಬ್ಬಂದಿಯನ್ನು ರಕ್ಷಿಸಲಾಗಿದೆ. ಇನ್ನೂ ಮೂರು ಮಂದಿಗಾಗಿ ರಕ್ಷಣಾ ಕಾರ್ಯ ಮುಂದುವರಿದಿದೆ.

ಭಾರತೀಯ ಧ್ವಜ ಹೊಂದಿರುವ ವಾಣಿಜ್ಯ ನೌಕೆ ವಿರಾಟ್ 1ರಲ್ಲಿ ಘಟನೆ ನಡೆದಿದೆ ಎಂದು ಮಸ್ಕತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಭಾನುವಾರ ತಿಳಿಸಿದೆ.

'ರಕ್ಷಣಾ ಕಾರ್ಯಚರಣೆಯ ಮೇಲೆ ನಿಗಾ ವಹಿಸಲಾಗಿದೆ. 11 ಜನರನ್ನು ಎಂ.ವಿ ಜಬಾಲಿ ಅಲಿ 9 ಹಡಗಿನಲ್ಲಿ ಸ್ಥಳಾಂತರಿಸಲಾಗಿದೆ. ಇನ್ನುಳಿದವರನ್ನು ಶೀಘ್ರದಲ್ಲಿ ರಕ್ಷಿಸಲಾಗುವುದು' ಎಂದು ರಾಯಭಾರ ಕಚೇರಿ ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ತಿಳಿಸಿದೆ.

ಬೈರೂತ್ ಮೇಲೆ ಇಸ್ರೇಲ್ ದಾಳಿ

ಜರುಸಲೇಂ(ಎಪಿ): ಪಶ್ಚಿಮ ಏಷ್ಯಾದಲ್ಲಿನ ಯುದ್ಧ ನಿಲ್ಲಿಸುವ ಸಂಬಂಧ ಪ್ರಯತ್ನಗಳು ಮುಂದುವರಿಯುತ್ತಿರುವ ನಡುವೆಯೇ, ಲೆಬನಾನ್‌ನಲ್ಲಿನ ಹಿಜ್ಬುಲ್ಲಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಇಸ್ರೇಲ್ ಪಡೆಗಳು ಭಾನುವಾರ ದಾಳಿ ನಡೆಸಿವೆ.

ರಾಜಧಾನಿ ಬೈರೂತ್‌ನಲ್ಲಿ ದಟ್ಟ ಹೊಗೆ ಕಾಣಿಸಿಕೊಂಡಿತ್ತು. ಬೈರೂತ್‌ನ ಐದು ಮಹಡಿ ಅಪಾರ್ಟ್‌ಮೆಂಟ್ ಮೇಲೆ ದಾಳಿ ನಡೆದಿದ್ದು, ಮೊದಲ ಎರಡು ಮಹಡಿಗಳಿಗೆ ಭಾರಿ ಹಾನಿಯಾಗಿದೆ. ಭಯಭೀತ ಜನರು ಸುರಕ್ಷಿತ ಸ್ಥಳ ಅರಸಿ ಓಡಿಹೋಗುತ್ತಿರುವುದು ಕಂಡುಬಂತು.

'ಇಸ್ರೇಲ್‌ನ ಉತ್ತರ ಭಾಗ ಗುರಿಯಾಗಿಸಿ ಹಿಜ್ಬುಲ್ಲಾ ಸಂಘಟನೆ ದಾಳಿ ನಡೆಸಿತ್ತು. ಅದಕ್ಕೆ ಪ್ರತಿಯಾಗಿ ಈ ದಾಳಿಗಳನ್ನು ನಡೆಸಲಾಗಿದೆ' ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಚೇರಿ ಹೇಳಿದೆ.

ತಾತ್ಕಾಲಿಕ ಕದನ ವಿರಾಮ ಜಾರಿಗೆ ಬಂದ ನಂತರವೂ ಕಳೆದ ವಾರ ಬೈರೂತ್ ಸಮೀಪದ ವಸತಿ ಪ್ರದೇಶಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿತ್ತು. ಇದು ಇರಾನ್ ಮತ್ತು ಇಸ್ರೇಲ್ ನಡುವೆ ಮತ್ತೆ ಕಾಳಗಕ್ಕೆ ಕಾರಣವಾಗಿತ್ತು.

ಲೆಬನಾನ್ ರಾಜಧಾನಿ ಬೈರೂತ್‌ನ ವಸತಿಪ್ರದೇಶವೊಂದರ ಮೇಲೆ ಇಸ್ರೇಲ್ ಪಡೆಗಳು ಭಾನುವಾರ ದಾಳಿ ನಡೆಸಿವೆ ಎಎಫ್‌ಪಿ ಚಿತ್ರ

ತಕ್ಕ ಉತ್ತರ ನಿಶ್ಚಿತ: ಇರಾನ್

ಟೆಹರಾನ್(ಎಎಫ್‌ಪಿ): ಬೈರೂತ್‌ನ ದಕ್ಷಿಣ ಭಾಗದ ಪ್ರದೇಶಗಳ ಮೇಲೆ ದಾಳಿ ನಡೆಸಿರುವ ಇಸ್ರೇಲ್‌ಗೆ ತಕ್ಕ ಉತ್ತರ ನೀಡದೇ ಇರುವುದಿಲ್ಲ ಎಂದು ಇರಾನ್ ಸೇನೆಯ ಅಧಿಕಾರಿಯೊಬ್ಬರು ಭಾನುವಾರ ಎಚ್ಚರಿಕೆ ನೀಡಿದ್ದಾರೆ.

'ಈ ಯುದ್ಧಾಪರಾಧಗಳಿಗೆ ಉತ್ತರ ನೀಡುತ್ತೇವೆ. ಇದರಲ್ಲಿ ಯಾವುದೇ ಸಂಶಯ ಬೇಡ' ಎಂದು ಸೇನೆಯ ಡೆಪ್ಯುಟಿ ಕಮಾಂಡರ್ ಬ್ರಿಗೇಡಿಯರ್ ಜನರಲ್ ಮೊಹಮ್ಮದ್ ಜಾಫರ್ ಅಸಾದಿ ಹೇಳಿದ್ದಾರೆ.

ಜಿ-7 ಶೃಂಗಸಭೆ ವಿರೋಧಿಸಿ ಜಿನೀವಾದಲ್ಲಿ ಬೃಹತ್ ಪ್ರತಿಭಟನೆ

ಜಿನೀವಾ (ಎಪಿ): ಶ್ರೀಮಂತ ರಾಷ್ಟ್ರಗಳ ಒಕ್ಕೂಟವಾದ ಜಿ-7 ಶೃಂಗಸಭೆಯನ್ನು ವಿರೋಧಿಸಿ ಇಲ್ಲಿ ಭಾನುವಾರ ಬೃಹತ್ ಪ್ರತಿಭಟನೆ ನಡೆಯಿತು. ಸೋಮವಾರದಿಂದ ಶೃಂಗಸಭೆ ನಡೆಯಲಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ವಿವಿಧ ದೇಶಗಳ ನಾಯಕರು ಭಾಗಿಯಾಗಲಿದ್ದಾರೆ.

ಪರಿಸರವಾದಿಗಳು, ಸ್ತ್ರೀವಾದಿಗಳು, ಸಾಮ್ರಾಜ್ಯಶಾಹಿಯ ವಿರೋಧಿಗಳು, ಸ್ವತಂತ್ರ ಮಾಧ್ಯಮದ ಪ್ರತಿಪಾದಕರು, ಪ್ಯಾಲೆಸ್ಟೀನ್ ಹಕ್ಕುಗಳ ಹೋರಾಟಗಾರರು ಇಲ್ಲಿನ ಕೆರೆಯ ಪಕ್ಕದ ಉದ್ಯಾನದಿಂದ ಇಡೀ ಪಟ್ಟಣದಾದ್ಯಂತ ಬೃಹತ್ ಮೆರವಣಿಗೆ ನಡೆಸಿದರು.

ಆರ್ಥಿಕ ಅಸಮಾನತೆ, ರಷ್ಯಾ-ಉಕ್ರೇನ್ ಸಂಘರ್ಷ, ಕೊಲ್ಲಿ ರಾಷ್ಟ್ರಗಳ ಯುದ್ಧದ ವಿಚಾರವನ್ನು ಶೃಂಗಸಭೆಯಲ್ಲಿ ಚರ್ಚಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದ್ದಾರೆ.

ಫ್ರಾನ್ಸ್‌ನ ರೆಸಾರ್ಟ್ ಪಟ್ಟಣವೆಂದೇ ಖ್ಯಾತಿ ಪಡೆದಿರುವ 'ಎವಿಯಾನ್-ಲೇನ್-ಬೈನ್ಸ್'ನಲ್ಲಿ ಸೋಮವಾರದಿಂದ ಮೂರು ದಿನಗಳ ಕಾಲ ಜಿ-7 ಶೃಂಗಸಭೆ ನಡೆಯಲಿದೆ. ಸಭೆಗೂ ಮುನ್ನ ಬೃಹತ್ ಪ್ರತಿಭಟನೆ ನಡೆದ ಕಾರಣ, ಫ್ರಾನ್ಸ್ ಹಾಗೂ ನೆರೆ ರಾಷ್ಟ್ರ ಸ್ವಿಟ್ಜರ್ಲೆಂಡ್ ಅಧಿಕಾರಿಗಳು ಕೇಂದ್ರದ ಸುತ್ತ ಸಾವಿರಾರು ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಿದ್ದಾರೆ.

ಅಮೆರಿಕ ಬದ್ಧತೆ ಪ್ರಶ್ನಿಸಿದ ಇರಾನ್

ಒಂದನೇ ಪುಟದಿಂದ...

ಈಗ, ಲೆಬನಾನ್ ಮೇಲಿನ ಇಸ್ರೇಲ್ ದಾಳಿ ವಿಚಾರ ಮುಂದಿಟ್ಟುಕೊಂಡು ಇರಾನ್ ಈ ಒಪ್ಪಂದಕ್ಕೆ ತಕರಾರು ಎತ್ತಿದ್ದರೆ, ಸರ್ಕಾರವನ್ನು ಬೆಂಬಲಿಸುವ ಪ್ರತಿಭಟನಕಾರರಿಂದಲೂ ಇದಕ್ಕೆ ವಿರೋಧ ವ್ಯಕ್ತವಾಗಿದೆ.

ಟೆಹರಾನ್‌ಗೆ ಭೇಟಿ: ಈ ನಡುವೆ, ಇರಾನ್ ಜೊತೆ ಮಾತುಕತೆ ನಡೆಸಿ, ಶಾಂತಿ ಒಪ್ಪಂದವನ್ನು ಅಂತಿಮಗೊಳಿಸುವುದಕ್ಕಾಗಿ ಕತಾರ್‌ನ ಸಂಧಾನಕಾರರು ಭಾನುವಾರ ಟೆಹರಾನ್‌ಗೆ ಬಂದಿಳಿದಿದ್ದಾರೆ.

'ನಿರ್ಧಾರ ಇಲ್ಲ': 'ದೇಶದಲ್ಲಿನ ರಾಜಕೀಯ ಪರಿಸ್ಥಿತಿ, ಕಾನೂನು ಹಾಗೂ ತಾಂತ್ರಿಕ ಅಂಶಗಳನ್ನು ಪರಿಗಣಿಸಿ ತಜ್ಞರ ಮಟ್ಟದಲ್ಲಿ ಪರಾಮರ್ಶೆಗಳು ನಡೆಯುತ್ತಿವೆ. ಹೀಗಾಗಿ, ಅಮೆರಿಕದೊಂದಿಗಿನ ಶಾಂತಿ ಒಪ್ಪಂದದ ಚೌಕಟ್ಟಿನ ಕುರಿತು ಯಾವುದೇ ಅಂತಿಮ ನಿರ್ಧಾರ ಕೈಗೊಂಡಿಲ್ಲ' ಎಂದು ಮೂಲಗಳನ್ನು ಉಲ್ಲೇಖಿಸಿ ಇರಾನ್‌ನ ಫಾರ್ಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಅಂತಿಮ ಕರಡು ಸಿದ್ಧಪಡಿಸಿರುವ ಇರಾನ್

ದುಬೈ: ಅಮೆರಿಕದೊಂದಿಗೆ ಮಾಡಿಕೊಳ್ಳಲಿರುವ ಒಪ್ಪಂದದ ಅಂತಿಮ ಕರಡುವನ್ನು ಇರಾನ್ ಸಿದ್ಧಪಡಿಸಿದ್ದಾಗಿ ಹಿರಿಯ ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

ಅಣ್ವಸ್ತ್ರ ಕಾರ್ಯಕ್ರಮದಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳುವುದು, ಹಡಗುಗಳ ಸಂಚಾರಕ್ಕೆ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವುದು ಸೇರಿ ಹಲವಾರು ಅಂಶಗಳನ್ನು ಕರಡು ಒಳಗೊಂಡಿದೆ. ಎರಡೂ ದೇಶಗಳು ಒಪ್ಪಿದ ಬಳಿಕ 60 ದಿನಗಳಲ್ಲಿ ಒಪ್ಪಂದವನ್ನು ಅಂತಿಮಗೊಳಿಸುವ ಕುರಿತು ಚರ್ಚೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಕರಡು: ಪ್ರಮುಖ ಅಂಶಗಳು ಈ ರೀತಿ ಇವೆ

ಹೊರ್ಮುಜ್ ಜಲಸಂಧಿ:
- ಎಲ್ಲ ವಾಣಿಜ್ಯ ಹಡಗುಗಳ ಸಂಚಾರಕ್ಕೆ ಹೊರ್ಮುಜ್ ಜಲಸಂಧಿಯನ್ನು ಇರಾನ್ ತಕ್ಷಣವೇ ಮುಕ್ತಗೊಳಿಸುವುದು. ಇರಾನ್‌ನ ಬಂದರುಗಳ ಮೇಲೆ ವಿಧಿಸಿರುವ ನಿರ್ಬಂಧವನ್ನು ಅಮೆರಿಕ ತೆರವುಗೊಳಿಸಬೇಕು. ಈ ಪ್ರಕ್ರಿಯೆಯನ್ನು ಒಪ್ಪಂದಕ್ಕೆ ಸಹಿ ಹಾಕಿದ 30 ದಿನಗಳ ಒಳಗಾಗಿ ಪೂರ್ಣಗೊಳಿಸಬೇಕು

ಹಣಕಾಸು:
- ಒಪ್ಪಂದ ಅಂತಿಮಗೊಳ್ಳುವವರೆಗೆ ಇರಾನ್ ಮೇಲೆ ಅಮೆರಿಕ ಯಾವುದೇ ರೀತಿಯ ಹೊಸ ನಿರ್ಬಂಧಗಳನ್ನು ಹೇರಬಾರದು
- ಅಂತಿಮ ಒಪ್ಪಂದಕ್ಕೆ ಸಹಿ ಹಾಕಿದ ನಂತರ, ಅಮೆರಿಕ ಹಾಗೂ ವಿಶ್ವಸಂಸ್ಥೆ ವಿಧಿಸಿರುವ ಎಲ್ಲ ನಿರ್ಬಂಧಗಳನ್ನು ಎಲ್ಲರಿಗೂ ಒಪ್ಪಿತವಾದ ಕಾಲಮಿತಿಯೊಳಗಾಗಿ ತೆರವು ಮಾಡಬೇಕು
- ಇರಾನ್ ತನ್ನ ತೈಲ ಮಾರಾಟ ಮಾಡಿ, ಆದಾಯ ಗಳಿಸುವುದಕ್ಕೆ ಅನುಕೂಲವಾಗುಂತೆ ಅಮೆರಿಕ ವಿಧಿಸಿರುವ ನಿರ್ಬಂಧವನ್ನು ತೆಗೆದು ಹಾಕಬೇಕು
- ಇರಾನ್‌ಗೆ ಸೇರಿದ 25 ಶತಕೋಟಿ ಡಾಲರ್ (ಅಂದಾಜು ₹2,377 ಕೋಟಿ) ಮೌಲ್ಯದ ಸ್ವತ್ತುಗಳನ್ನು ಅಮೆರಿಕ ಮುಟ್ಟುಗೋಲು ಹಾಕಿಕೊಂಡಿದ್ದು, ಇವುಗಳನ್ನು ಬಿಡುಗಡೆ ಮಾಡಬೇಕು
- ಅಮೆರಿಕ ತನ್ನ ಮಿತ್ರ ರಾಷ್ಟ್ರಗಳ ಸಮನ್ವಯದೊಂದಿಗೆ ಇರಾನ್‌ನ ಪುನರ್‌ಅಭಿವೃದ್ಧಿ ಮತ್ತು ಪುನರ್‌ನಿರ್ಮಾಣಕ್ಕೆ ಯೋಜನೆ ರೂಪಿಸಿಸಬೇಕು. ಈ ಕುರಿತು 60 ದಿನಗಳಲ್ಲಿ ಮಾತುಕತೆ ನಡೆಸಿ, ಒಮ್ಮತಕ್ಕೆ ಬರಬೇಕು

ಅಣ್ವಸ್ತ್ರ:
- ಅಣ್ವಸ್ತ್ರಗಳ ತಯಾರಿಕೆ ಅಥವಾ ಖರೀದಿಯನ್ನು ಇರಾನ್ ಕೈಬಿಡಲಿದೆ
- ಅಂತಿಮ ಒಪ್ಪಂದಕ್ಕೆ ಒಳಪಟ್ಟಂತೆ, ಇರಾನ್ ತನ್ನ ಅಣ್ವಸ್ತ್ರ ಕಾರ್ಯಕ್ರಮದಲ್ಲಿ 'ಯಥಾಸ್ಥಿತಿ' ಕಾಪಾಡಲಿದೆ. ಅಂದರೆ, ಯುರೇನಿಯಂ ಸಮೃದ್ಧೀಕರಣ ಮತ್ತು ಇದಕ್ಕೆ ಸಂಬಂಧಿಸಿದ ಸೌಲಭ್ಯಗಳ ವಿಸ್ತರಣೆ ಕೈಬಿಡಲಿದೆ

ಟ್ರಂಪ್‌ಗೆ 80 ವರ್ಷ: ಸಮರ ಕಲೆಗಳ ಪ್ರದರ್ಶನ ಆಯೋಜನೆ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ 80ನೇ ಜನ್ಮ ದಿನಾಚರಣೆ ಪ್ರಯುಕ್ತ ಸಮರ ಕಲೆಗಳ ಪ್ರದರ್ಶನ ಹಾಗೂ ಮನರಂಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.

ಡೊನಾಲ್ಡ್ ಟ್ರಂಪ್

ಶ್ವೇತಭವನದ ದಕ್ಷಿಣದಲ್ಲಿರುವ ಹುಲ್ಲುಹಾಸಿನಲ್ಲಿ ವಿಶೇಷ ಅಂಕಣ ನಿರ್ಮಿಸಲಾಗಿದ್ದು, ಭಾರತೀಯ ಕಾಲಮಾನದಂತೆ ಸೋಮವಾರ 'ಅಲ್ಟಿಮೇಟ್ ಫೈಟಿಂಗ್ ಚಾಂಪಿಯನ್‌ಷಿಪ್' (ಯುಎಫ್‌ಸಿ) ಸ್ಪರ್ಧೆಗಳು ನಡೆಯಲಿವೆ.

ಮುಂದಿನ ತಿಂಗಳು ಅಮೆರಿಕದ 250ನೇ ಸ್ವಾತಂತ್ರ್ಯೋತ್ಸವ ನೆರವೇರಲಿದೆ. ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ 17 ತಿಂಗಳು ಕಳೆದಿವೆ. ಇದರ ಅಂಗವಾಗಿಯೂ 'ಯುಎಫ್‌ಸಿ ಫ್ರೀಡಂ 250' ಹೆಸರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಐದು ದೇಶಗಳ ಜಟ್ಟಿಗಳು ತಮ್ಮ ಕಸರತ್ತು ಪ್ರದರ್ಶಿಸಲಿದ್ದು, 4 ಸಾವಿರ ಆಹ್ವಾನಿತ ಪ್ರೇಕ್ಷಕರು ಈ ಕಾಳಗಗಳನ್ನು ಕಣ್ತುಂಬಿಕೊಳ್ಳಲಿದ್ದಾರೆ. ಜನರಿಗೆ ಟಿಕೆಟ್‌ಗಳನ್ನು ಮಾರಾಟ ಮಾಡಿಲ್ಲ. ಆದರೆ, ಪಂದ್ಯಗಳನ್ನು ಪ್ಯಾರಾಮೌಂಟ್ ಸುದ್ದಿವಾಹಿನಿಯಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಯುಎಫ್‌ಸಿ ಚಾಂಪಿಯನ್ ಇಲಿಯಾ ಟೊಪೋರಿಯಾ ಹಾಗೂ ಮಾಜಿ ಚಾಂಪಿಯನ್ ಜಸ್ಟಿನ್ ಗೇಜಿ ಅವರು ಈ ಸಮರ ಕಲೆ ಸ್ಪರ್ಧೆಯ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಈ ಕಾರ್ಯಕ್ರಮಕ್ಕೆ 60 ಮಿಲಿಯನ್ ಡಾಲರ್‌ಗಿಂತಲೂ ಅಧಿಕ (ಅಂದಾಜು ₹570 ಕೋಟಿ) ವೆಚ್ಚ ಮಾಡುತ್ತಿರುವುದಾಗಿ ಯುಎಫ್‌ಸಿ ಹೇಳಿದೆ.

ಭಾರತವು ಈಗ ಕೇವಲ ಗ್ರಾಹಕನಲ್ಲ, ಸಮಸ್ಯೆಗೆ ಪರಿಹಾರ ಒದಗಿಸುವ ರಾಷ್ಟ್ರ

ನೀಸ್ (ಫ್ರಾನ್ಸ್): 'ಭಾರತವು ಇನ್ನು ಮುಂದೆ ಕೇವಲ ಗ್ರಾಹಕನಲ್ಲ, ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ರಾಷ್ಟ್ರವಾಗಲಿದೆ' ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುವೆಲ್ ಮ್ಯಾಕ್ರನ್ ಜೊತೆಗೆ ಇಲ್ಲಿ ನಡೆದ 'ಭಾರತ್ ಇನ್ನೋವೇಟ್ಸ್' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವೀನ್ಯತೆ ಹಾಗೂ ತಂತ್ರಜ್ಞಾನದ ಮೂಲಕ ಜಗತ್ತಿನ ಸುಸ್ಥಿರ ಭವಿಷ್ಯಕ್ಕಾಗಿ ಭಾರತವು ಪರಿಹಾರ ಒದಗಿಸಲಿದೆ' ಎಂದು ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ಭಾರತದ ಪ್ರಮುಖ ಸ್ಟಾರ್ಟ್‌ಅಪ್ ಹಾಗೂ ಫ್ರಾನ್ಸ್ ಹಾಗೂ ಇತರೆ ರಾಷ್ಟ್ರಗಳ ಉದ್ಯಮಿಗಳು ಭಾಗಿಯಾಗಿದ್ದರು.

'ಭಾರತ್ ಇನ್ನೋವೇಟ್ಸ್' ಕಾರ್ಯಕ್ರಮವು ಜಾಗತಿಕ ನಾವೀನ್ಯತೆಯ ಮುಂದಿನ ಅಧ್ಯಾಯವನ್ನು ಭಾರತದೊಂದಿಗೆ ಕೈ ಜೋಡಿಸಲು ಮುಕ್ತ ಆಹ್ವಾನವಾಗಿದೆ. ಮಾನವೀಯತೆಗೆ ಪ್ರಯೋಜನವಾಗುವಂತಹ ಪರಿಹಾರಗಳನ್ನು ದೇಶದ ಯುವ ಸಂಶೋಧಕರು ಕಂಡುಹಿಡಿಯಲಿದ್ದಾರೆ' ಎಂದು ತಿಳಿಸಿದ್ದಾರೆ.

'ಉನ್ನತ ತಂತ್ರಜ್ಞಾನ, ರಕ್ಷಣೆ ಹಾಗೂ ಸಂಶೋಧನಾ ಕ್ಷೇತ್ರ ಸೇರಿದಂತೆ ದೇಶದ ಪ್ರಮುಖ ಕ್ಷೇತ್ರಗಳಲ್ಲಿ ಹಲವು ಸುಧಾರಣೆಗಳನ್ನು ಜಾರಿಗೆ ತಂದಿರುವುದನ್ನು ಪ್ರಸ್ತಾಪಿಸಿದ ಅವರು, ಭಾರತದಲ್ಲಿ ಸುಧಾರಣಾ ಎಕ್ಸ್‌ಪ್ರೆಸ್ ನಿಲ್ಲುವುದಿಲ್ಲ, ಅದು ನಿರಂತರವಾಗಿ ನಡೆಯಲಿದೆ' ಎಂದು ವಿವರಿಸಿದ್ದಾರೆ.

ಫ್ರಾನ್ಸ್‌ನಲ್ಲಿ ನಡೆದ ಭಾರತ್ ಇನ್ನೋವೇಟ್ಸ್ ಕಾರ್ಯಕ್ರಮದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರನ್ನು ಅಪ್ಪಿಕೊಂಡ ಕ್ಷಣ –ಪಿಟಿಐ ಚಿತ್ರ

ಭಾರತೀಯ ನಾವಿಕರ ಸಾವಿನ ಕುರಿತು ಕೇಂದ್ರದ ಮೌನದ ಬಗ್ಗೆ ರಾಹುಲ್ ಗಾಂಧಿ ಕಿಡಿ

'ಮೋದಿ ಅಮೆರಿಕದ ನಿಷ್ಠಾವಂತ ಸೇವಕ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ನಿಷ್ಠಾವಂತ ಸೇವಕನಂತೆ ವರ್ತಿಸುತ್ತಿದ್ದು, ಅವರು ಹೇಳಿದ್ದನ್ನು ಕೇಳಿಸಿಕೊಳ್ಳುತ್ತಾ ಆದೇಶಗಳನ್ನು ಪಾಲಿಸುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಟೀಕಿಸಿದ್ದಾರೆ.



ರಾಹುಲ್ ಗಾಂಧಿ

ಒಮಾನ್ ಕರಾವಳಿಯಲ್ಲಿ ನಡೆದ ದಾಳಿಯಲ್ಲಿ ಭಾರತದ ಮೂವರು ನಾವಿಕರು ಮೃತಪಟ್ಟಿದ್ದಕ್ಕೆ ಸಂಬಂಧಿಸಿದಂತೆ ಅಮೆರಿಕ ನೀಡಿದ ಹೇಳಿಕೆಯನ್ನು ಖಂಡಿಸಿ, ಮೋದಿ ವಿರುದ್ಧ 'ಎಕ್ಸ್'ನಲ್ಲಿ ರಾಹುಲ್ ಈ ರೀತಿ ಟೀಕಾ ಪ್ರಹಾರ ಮಾಡಿದ್ದಾರೆ.

'ಅಮೆರಿಕ ನಡೆಸಿದ ದಾಳಿಯಲ್ಲಿ ಭಾರತದ ಮೂವರು ನಾವಿಕರು ಮೃತಪಟ್ಟರೂ ಆ ಬಗ್ಗೆ ವಿಷಾದವಾಗಲಿ, ಕ್ಷಮೆಯಾಗಲಿ ಅಮೆರಿಕ ಕೇಳಲಿಲ್ಲ. ಬದಲಿಗೆ ನಿರಂತರವಾಗಿ ಆದೇಶಗಳನ್ನು ನೀಡುತ್ತಿದೆ. "ನಮ್ಮ ಮಿಲಿಟರಿ ಆದೇಶಗಳನ್ನು ಪಾಲಿಸಿ-ಉಲ್ಲಂಘನೆಯನ್ನು ಸಹಿಸಲಾಗುವುದಿಲ್ಲ" ಎಂದು ಅಮೆರಿಕ ಹೇಳಿದೆ. ಯಾವುದೇ ಸಾರ್ವಭೌಮತ್ವ ರಾಷ್ಟ್ರವೂ ಇಂಥ ಮಾತನ್ನು ಸಹಿಸುವುದಿಲ್ಲ. ಆದರೆ ನಮ್ಮ ಪ್ರಧಾನಿ ಈ ಹೇಳಿಕೆಗಳನ್ನು ಕೇಳಿಯೂ ಮೌನವಾಗಿದ್ದಾರೆ' ಎಂದೂ ರಾಹುಲ್ ಟೀಕಿಸಿದ್ದಾರೆ.

'ರಾಜಿಯಾದ ಪ್ರಧಾನಿಗಳು ದೇಶದ ಗೌರವವನ್ನು ಕಾಪಾಡುವುದಿಲ್ಲ. ಏಕೆಂದರೆ ಅವರು ನಮ್ಮ ದೇಶವನ್ನು ಅವಮಾನಿಸುವವರಿಗೆ ಬದ್ಧರಾಗಿರುತ್ತಾರೆ' ಎಂದೂ ಆರೋಪಿಸಿದ್ದಾರೆ.

ಒಮಾನ್‌ನ ಡುಕ್ಮ್ ಬಂದಿರಿನಲ್ಲಿ ಬಂದಿಳಿದ ಹಡಗಿನಲ್ಲಿ ಭಾರತೀಯ ವ್ಯಕ್ತಿಯೊಬ್ಬರು ಆರೋಗ್ಯ ಸಮಸ್ಯೆಯಿಂದ ಮೃತಪಟ್ಟ ವಿಚಾರವನ್ನೂ ರಾಹುಲ್ ಪ್ರಸ್ತಾಪಿಸಿದ್ದು, 'ರಾಜಿಯಾದ ಪ್ರಧಾನಿಯ ಆಡಳಿತದಲ್ಲಿ ಭಾರತೀಯರಾಗಿರುವುದು ಎಂದರೆ ಶೋಚನೀಯ ಸ್ಥಿತಿಗೆ ತಲುಪುವುದು ಎಂದರ್ಥ. ವಿದೇಶಿ ಶಕ್ತಿಗಳು ನಮ್ಮ ನಾಗರಿಕರನ್ನು ಕೊಲ್ಲುತ್ತಿದ್ದರೆ, ನಮ್ಮ ಸರ್ಕಾರ ಅವರ ಆದೇಶಗಳನ್ನು ಪಾಲಿಸುತ್ತಾ ನಮ್ಮವರನ್ನು ಕೊಳೆಯಲು ಬಿಟ್ಟಿದೆ' ಎಂದೂ ಕಿಡಿಕಾರಿದ್ದಾರೆ.

ಜತೆಗೆ ವಾಣಿಜ್ಯ ಹಡಗಿನಲ್ಲಿ ಕ್ಯಾಪ್ಟನ್ ಆಗಿರುವ ಭಾರತೀಯ ವ್ಯಕ್ತಿಯೊಬ್ಬರು ತಮ್ಮ ಸಹ ಅಧಿಕಾರಿಯ ಶವ ಕೊಳೆತು ಹೋಗುತ್ತಿದೆ ಎಂದಿದ್ದಾರೆ ಎಂದು ಉಲ್ಲೇಖಿಸಿರುವ ಪೋಸ್ಟ್ ಒಂದನ್ನೂ ರಾಹುಲ್ ಟ್ಯಾಗ್ ಮಾಡಿದ್ದು, ಈ ಭಾರತೀಯನನ್ನು ತಕ್ಷಣವೇ ಮರಳಿ ಕರೆತನ್ನಿ' ಎಂದೂ ಆಗ್ರಹಿಸಿದ್ದಾರೆ.

> ಭಾರತೀಯ ನಾವಿಕರು ಮೃತಪಟ್ಟು ಮೂರು ದಿನ ಕಳೆದರೂ ಮೋದಿ ಅವರಿಂದ ಈವರೆಗೆ ಯಾವುದೇ ಸಾರ್ವಜನಿಕ ಹೇಳಿಕೆಯಾಗಲಿ ಕನಿಷ್ಠ ಸಂತಾಪದ ಸಂದೇಶವಾಗಲಿ ಬಂದಿಲ್ಲ. ದೇಶವನ್ನು ತಲೆಬಾಗಲು ಬಿಡುವುದಿಲ್ಲ ಎಂದು ನೀವು (ಮೋದಿ) ಮಾತನಾಡುತ್ತೀರಿ. ಆದರೆ, ಭಾರತದ ಜಾಗತಿಕ ನಿಲುವು ಮತ್ತು ಸಾರ್ವಭೌಮತೆಯನ್ನು ನೀವು ತಳಮಟ್ಟಕ್ಕೆ ಇಳಿಸಿದ್ದೀರಿ ಎಂಬುದಕ್ಕೆ ಬೇರೆ ಯಾವ ಸಾಕ್ಷಿಯ ಅಗತ್ಯವೂ ಇಲ್ಲ.
>
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

> ಅಮೆರಿಕದ ದಾಳಿಯಿಂದ ಭಾರತೀಯ ನಾವಿಕರು ಮೃತಪಟ್ಟಿರುವ ವಿಚಾರದಲ್ಲಿ ಮೋದಿ ಸರ್ಕಾರ ಮೌನ ವಹಿಸಿರುವುದು ನಾಚಿಕೆಗೇಡಿನ ಸಂಗತಿ. ಸಾವಿನ ಬಗ್ಗೆ ವಿಷಾದ ತೋರುವುದನ್ನು ಬಿಟ್ಟು ಅಮೆರಿಕ ಬೆದರಿಕೆ ಹಾಕುವ ಧಾಟಿಯಲ್ಲಿ ಮಾತನಾಡಿದೆ. ಭಾರತವು ತನ್ನ ಸಾರ್ವಭೌಮತ್ವವನ್ನು ರಕ್ಷಿಸಿಕೊಳ್ಳಬಲ್ಲ ಸಮರ್ಥ ಸ್ವತಂತ್ರ್ಯ ರಾಷ್ಟ್ರ ಎಂದು ಅಮೆರಿಕಕ್ಕೆ ಗೊತ್ತು ಮಾಡಿಸುವ ಅಗತ್ಯವಿದೆ. ಆದರೆ ನಮ್ಮ 'ರಾಜಿಯಾದ ಪ್ರಧಾನಿ' ದೇಶದ ಸಾರ್ವಭೌಮತೆ ಮತ್ತು ನಾಗರಿಕರು ಇಬ್ಬರನ್ನೂ ರಕ್ಷಿಸುವಲ್ಲಿ ವಿಫಲರಾಗಿದ್ದಾರೆ.
>
> **ಪ್ರಿಯಾಂಕಾ ಗಾಂಧಿ ವಾದ್ರಾ,** ಕಾಂಗ್ರೆಸ್ ಸಂಸದೆ

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ವ್ಯಾಪಾರ

Business to Business

Business

ಶೂನ್ಯದಿಂದ ಶೂನ್ಯದವರೆಗೆ. ನೊಂದವರ ಜನ ಸೇವಾ ಟ್ರಸ್ಟ್ (ರೀ) ಶೇಷಾದ್ರಿಪುರಂ ಬೆಂಗಳೂರು. ಗೋಲ್ಡ್ ಚಿಟ್ ಫಂಡ್ 1ಲಕ್ಷದಿಂದ - 5 ಲಕ್ಷ , 10ಲಕ್ಷದವರಿಗೆ ಮತ್ತು 1 ಲಕ್ಷದಿಂದ - 5 ಲಕ್ಷದವರಿಗೆ , ಸ್ವಂತ ಮನೆ, ಮತ್ತು ಬಿಸಿನೆಸ್, ಲೋನ್ ಕೂಡಲಾಗುವುದು. ಸಂಪರ್ಕಿಸಿ : 9036316959

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಿಮ್ಮ ನೆಚ್ಚಿನ ತಾರೆಯರನ್ನು ಆಯ್ಕೆ ಮಾಡಿ

4ನೇ ಆವೃತ್ತಿ
ಜೂನ್ 19ಕ್ಕೆ

CASAGRAND
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಗೆ ದಿನಗಣನೆ ಪ್ರಾರಂಭವಾಗಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಈ ತಾಂತ್ರಿಕ ವಿಭಾಗಗಳಲ್ಲಿ ಸಾರ್ವಜನಿಕ ಮತ ಹಾಕುವಿಕೆಗೆ ಅವಕಾಶ ಇರುವುದಿಲ್ಲ.

ಸಿನಿಮಾಗಳು ನಡೆಯುವುದೇ ಪ್ರೇಕ್ಷಕರಿಂದ ಮತ್ತು ಸಿನಿಮಾ ನಿರ್ಮಾಣಗೊಳ್ಳುವುದೂ ಪ್ರೇಕ್ಷಕರಿಗಾಗಿಯೇ. ಹೀಗಾಗಿ ಸಾಮಾನ್ಯ ಪ್ರೇಕ್ಷಕರು ತಮ್ಮ ನೆಚ್ಚಿನ ತಾರೆಯರನ್ನು ಆಯ್ಕೆ ಮಾಡುವ ಅವಕಾಶವನ್ನು 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಮೊದಲ ಆವೃತ್ತಿಯಿಂದಲೂ ನೀಡುತ್ತ ಬಂದಿದೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಮತ ಚಲಾಯಿಸಿ ತಮ್ಮ ನೆಚ್ಚಿನ ತಾರೆಯರನ್ನು ಆಯ್ಕೆ ಮಾಡಬಹುದು. ಈಗಾಗಲೇ ಮತ ಹಾಕಲು ಅವಕಾಶ ಕಲ್ಪಿಸಲಾಗಿದ್ದು, ಜೂನ್.17ರವರೆಗೆ ಅವಕಾಶವಿರುತ್ತದೆ.

ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಮತ ಚಲಾಯಿಸಬಹುದು. ಇಲ್ಲವಾದರೆ ಪ್ರಜಾವಾಣಿ ವೆಬ್‌ಸೈಟ್ (https://pvca.prajavani.net/cinesamman/season4) ಪ್ರವೇಶಿಸಿಯೂ ಮತ ಹಾಕಬಹುದು. ಜೂನ್ 19ರಂದು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಜೇತರ ಘೋಷಣೆಯಾಗಲಿದೆ.

ವೋಟ್ ಮಾಡಿ

ನಿಮ್ಮ ನೆಚ್ಚಿನ ನಟ, ನಟಿ, ಸಿನಿಮಾ ಹಾಗೂ ಹಾಡಿಗೆ ವೋಟ್ ಮಾಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ದೊಡ್ಮನ್ಸನ ಟ್ರೇಲರ್ ಬಿಡುಗಡೆ

ಶರತ್ ಕೃಷ್ಣ ನಿರ್ದೇಶಿಸಿ, ನಾಯಕನಾಗಿ ನಟಿಸಿರುವ 'ದೊಡ್ಮನ್ಸ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮುಗ್ಧ ಪ್ರೇಮಕಥೆ ಹೊಂದಿರುವ ಚಿತ್ರ ವೇದಿಕ್ ಕಾಸ್ಮೋಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣಗೊಂಡಿದೆ.

'ಈ ಹಿಂದೆ ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು ಎಂಬ ಮಾತಿತ್ತು. ಈಗ ಸಾಲ ಕೊಡಲು ಬೇಕಾದಷ್ಟು ಬ್ಯಾಂಕ್‌ಗಳಿವೆ. ಆದರೆ ನಟನೆ ಮಾಡಬೇಕು ಎಂದು ಹೊರಟಾಗ ಎದುರಾಗುವ ಸಮಸ್ಯೆಗಳೇನು ಎಂಬುದನ್ನು ಸ್ವತಃ ಅನುಭವಿಸಿದ್ದೇನೆ. ಮನೆ ಕಟ್ಟುವುದು, ಮದುವೆಯಾಗುವುದಕ್ಕಿಂತ ಕಷ್ಟದ ಕೆಲಸವಿದು. ಕುಟುಂಬದವರು, ಗೆಳೆಯರ ಸಹಕಾರದಿಂದ ಸಿನಿಮಾ ಬಿಡುಗಡೆ ಹಂತಕ್ಕೆ ಬಂದಿದೆ. ಜೂ.19ರಂದು ಚಿತ್ರ ತೆರೆ ಕಾಣಲಿದೆ' ಎಂದರು ನಿರ್ದೇಶಕ.

ರೇಷ್ಮಾ, ಶಿಲ್ಪಾ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಆ್ಯಕ್ಷನ್, ಮಾಸ್ ಅಂಶಗಳ ಜತೆಗೆ ಒಂದು ಮುಗ್ಧ ಪ್ರೇಮಕಥೆ ಚಿತ್ರದಲ್ಲಿದೆ ಎಂಬುದು ಟ್ರೇಲರ್‌ನಿಂದ ಗೊತ್ತಾಗುತ್ತಿದೆ. ಬಲ ರಾಜವಾಡಿ, ಹುಲಿ ಕಾರ್ತಿಕ್ ಮುಂತಾದವರು ಚಿತ್ರದಲ್ಲಿದ್ದಾರೆ. ❖

ರೇಷ್ಮಾ

ಸೆಟ್ಟೇರಿತು ಶ್ರುತಿ 175ನೇ ಸಿನಿಮಾ

ನಟಿ ಶ್ರುತಿ ಅವರ 175ನೇ ಚಿತ್ರ 'ಮದರ್' ಇತ್ತೀಚೆಗಷ್ಟೇ ಸೆಟ್ಟೇರಿದೆ. ವಿನೋದ್ ಪ್ರಭಾಕರ್, ನಾಗತಿಹಳ್ಳಿ ಚಂದ್ರಶೇಖರ್ ಚಿತ್ರಕ್ಕೆ ಕ್ಲಾಪ್ ಮಾಡಿ ತಂಡಕ್ಕೆ ಹಾರೈಸಿದರು. ಚಿತ್ರಕ್ಕೆ ರಾಕೇಶ್ ನಿರ್ದೇಶನವಿದೆ.

'ಮದರ್' ಎಂಬ ಪದದಲ್ಲಿಯೇ ತುಂಬ ಶಕ್ತಿಯಿದೆ. ಮಂಡ್ಯದ ಅನಕ್ಷರಸ್ಥ ಮಹಿಳೆ ಸಂಸಾರ ಕಾಪಾಡುವುದಕ್ಕೆ ಹೋರಾಟ ಮಾಡುವುದೇ ಕಥೆ. ಶ್ರುತಿ ಅವರು ಇಲ್ಲಿ ಗಟ್ಟಿಗಿತ್ತಿಯಾಗಿ ಕಾಣಿಸುತ್ತಾರೆ' ಎಂದರು ನಿರ್ದೇಶಕ.

'ಎಲ್ಲ ಸಿನಿಮಾಗಳಿಗಿಂತ ಇದು ನನಗೆ ವಿಶೇಷ. ನನ್ನನ್ನು ಚಿತ್ರರಂಗಕ್ಕೆ ಕರೆತಂದ ರಾಜ್‌ಕುಮಾರ್ ಅವರನ್ನು ನೆನಪಿಸಿಕೊಳ್ಳುತ್ತೀನಿ. ಇಷ್ಟು ವರ್ಷ ನಾನು ಚಿತ್ರರಂಗದಲ್ಲಿ ಇರುವುದಕ್ಕೆ ಕಾರಣ ದಿವಂಗತ ದ್ವಾರಕೀಶ್ ಅಣ್ಣ' ಎಂದರು ಶ್ರುತಿ.

ಆರತಿ ಹಾಗೂ ಸತೀಶ್ ಚಂದ್ರ ಬಂಡವಾಳ ಹೂಡುತ್ತಿದ್ದಾರೆ. ಚಿರಂಜೀವಿ, ಪ್ರಸನ್ನ ಶೆಟ್ಟಿ, ಅರ್ಚನಾ ಹೆಗ್ಡೆ, ಅಭಯ್ ಪುನೀತ್, ಗೀತಾಂಜಲಿ, ಹಿಮಶ್ರೀ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಅಂಜನ್ ಸಂಗೀತ, ಯು.ಅಶ್ವಿನ್ ಛಾಯಾಚಿತ್ರಗ್ರಹಣ, ವಸಂತ್ ಸಂಕಲನ, ನಾಗಾರ್ಜುನ ಶರ್ಮಾ ಸಾಹಿತ್ಯವಿದೆ. ❖

'ಗೀಕ್' ಪೋಸ್ಟರ್ ಬಿಡುಗಡೆ

ಪ್ರವೀಣ್ ತೇಜ್, ಚೈತ್ರಾ ಆಚಾರ್ ನಟನೆಯ 'ಗೀಕ್' ಚಿತ್ರದ ಪೋಸ್ಟರ್, ಟೈಟಲ್ ಟೀಸರ್ ಬಿಡುಗಡೆಗೊಂಡಿವೆ. ಅಶ್ವಿನಿ ಪುನೀತ್ ರಾಜ್‌ಕುಮಾರ್ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದ್ದಾರೆ. ಚಿತ್ರಕ್ಕೆ ಡಿ.ಹರಿ ಪ್ರಕಾಶ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಮೊಬೈಲ್ ಸಂಬಂಧಿತ ಆ್ಯಪ್‌ಗಳು ಹಾಗೂ ಡೇಟಾ ದುರುಪಯೋಗಪಡಿಸಿಕೊಳ್ಳುತ್ತಿರುವುದು ಕುರಿತ ಕಥಾಹಂದರವಿದೆ. ಸಸ್ಪೆನ್ಸ್-ಥ್ರಿಲ್ಲರ್ ಜಾನರ್‌ನ ಸಿನಿಮಾ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ' ಎಂದಿದೆ ಚಿತ್ರತಂಡ. ಚೈತ್ರಾ ಆಚಾರ್, ಕಿರಣ್ ಶ್ರೀನಿವಾಸ್, ವಿರಾನಿಕಾ ಶೆಟ್ಟಿ ಪ್ರಮುಖ ಭೂಮಿಕೆಯಲ್ಲಿರುವ ಈ ಚಿತ್ರಕ್ಕೆ ಸಂದೀಪ್ ನಾಗರಾಜ್ ಹಾಗೂ ಪ್ರಿಯಾಂಕಾ ಬಂಡವಾಳ ಹೂಡಿದ್ದಾರೆ. ಕೀರ್ತನ್ ಪೂಜಾರಿ ಛಾಯಾಚಿತ್ರಗ್ರಹಣ, ಜೋ ಕೋಸ್ಟಾ ಸಂಗೀತ ಸಂಯೋಜನೆ, ಶಶಾಂಕ್ ನಾರಾಯಣ ಸಂಕಲನವಿದೆ.

ಪ್ರವೀಣ್ ತೇಜ್

Fashion Partner: TRENDS
Mobility Partner: Akshaya Motors
Banking Partner: ಕೆನರಾ ಬ್ಯಾಂಕ್ Canara Bank – Together We Can
Wardrobe Partner: MALLESHWARAM Sudarshan Silks
Mobile Partner: HUMAN MOBILE DEVICES HMD
Knowledge Partner: GM UNIVERSITY DAVANAGERE; INSIGHTSIAS
Travel Partner: ಅಡಿಗಾಸ್ ಯಾತ್ರಾ
Associate Sponsors: Amruth – ಅಮೃತ್ ಆರ್ಗ್ಯಾನಿಕ್ ಫರ್ಟಿಲೈಸರ್ಸ್; ಒಡ್ಕರ್ – ನಂಬಿಕೆ. ನಿರಂತರ.; The Janatha Co-operative Bank Ltd., Malleswaram, Bangalore; KAYAM TABLET – Ayurvedic Medicine; Bindu
Audit Partner: EY
Television Partner: Z ಕನ್ನಡ

ಟಿಎಂಸಿ: ಬಂಡಾಯ ಬಣದತ್ತ ಮತ್ತಿಬ್ಬರ ಒಲವು

ಭಿನ್ನಮತೀಯರ ಸಂಖ್ಯೆ 22ಕ್ಕೆ ಏರಿಕೆ: ಕಾಕೋಲಿ ಘೋಷ್
• ದೆಹಲಿಗೆ ತೆರಳಿರುವ ಸಯೋನಿ, ಮಾಲಾ ರಾಯ್

ಕೋಲ್ಕತ್ತ (ಪಿಟಿಐ): ಟಿಎಂಸಿಯಲ್ಲಿ ಬಂಡಾಯ ಮತ್ತಷ್ಟು ತೀವ್ರಗೊಂಡಿದೆ.

'ಟಿಎಂಸಿಯ ಮತ್ತಿಬ್ಬರು ಸಂಸದರು ಬಂಡಾಯ ಬಣಕ್ಕೆ ಸೇರಲಿದ್ದಾರೆ' ಎಂದು ಭಿನ್ನಮತೀಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ಭಾನುವಾರ ಹೇಳಿದ್ದಾರೆ. ಈ ಮೂಲಕ ಲೋಕಸಭೆಯಲ್ಲಿ ಟಿಎಂಸಿ ಬಂಡಾಯ ಸಂಸದರ ಸಂಖ್ಯೆ 22ಕ್ಕೆ ಏರಿಕೆಯಾಗಲಿದೆ.

ನವದೆಹಲಿಗೆ ತೆರಳುವ ಮುನ್ನ ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕಾಕೋಲಿ ಅವರು, '22 ಸಂಸದರು ನಮ್ಮ ಜೊತೆಗಿದ್ದಾರೆ. ನಮ್ಮ ಜೊತೆಗೆ ಬಂದಿರುವ ಮತ್ತಿಬ್ಬರು ಸಂಸದರ ಹೆಸರನ್ನು, ಅವರು ಬಂಡಾಯ ಬಣಕ್ಕೆ ಔಪಚಾರಿಕ ವಾಗಿ ಸೇರ್ಪಡೆಯಾದ ಬಳಿಕ ಬಹಿರಂಗ ಪಡಿಸಲಾಗುತ್ತದೆ' ಎಂದು ಹೇಳಿದರು.

ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಸಹ ಬಂಡಾಯ ಸಂಸದರ ಸಭೆಯಲ್ಲಿ ಭಾಗಿಯಾಗುವ ನಿರೀಕ್ಷೆಯಿತ್ತು. ಆದರೆ ಸರ್ಕಾರಿ ಕಾರ್ಯಕ್ರಮದ ಕಾರಣಕ್ಕೆ ಅವರು ದೆಹಲಿಗೆ ಪ್ರಯಾಣಿಸಿಲ್ಲ ಎಂದು ಮೂಲಗಳು ಹೇಳಿವೆ.

ಟಿಎಂಸಿಯ ಒಟ್ಟು 28 ಲೋಕಸಭಾ ಸದಸ್ಯರಲ್ಲಿ 20 ಮಂದಿ ಈ ಹಿಂದೆಯೇ ಬಂಡಾಯ ಬಣದಲ್ಲಿದ್ದರು.

ಸಯೋನಿ ಘೋಷ್, ಮಾಲಾ ರಾಯ್ ದೆಹಲಿಗೆ: ಸಂಸದರಾದ ಸಯೋನಿ ಘೋಷ್ ಮತ್ತು ಮಾಲಾ ರಾಯ್ ಅವರು ಕೂಡ ದೆಹಲಿಗೆ ಭೇಟಿ ನೀಡಿದ್ದಾರೆ. ದೆಹಲಿ ಭೇಟಿಯ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಲು ಘೋಷ್ ನಿರಾಕರಿಸಿದರು.

ಭೂಪೇಂದ್ರ ಯಾದವ್ ಭೇಟಿ: ಲೋಕಸಭಾ ಸ್ಪೀಕರ್ ಅವರ ಭೇಟಿಗೆ ಮುಂಚಿತವಾಗಿ ತಮ್ಮ ಕಾರ್ಯತಂತ್ರವನ್ನು ಅಂತಿಮಗೊಳಿಸಲು, ಟಿಎಂಸಿಯ ಬಂಡಾಯ ಸಂಸದರು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರನ್ನು ಅವರ ನಿವಾಸದಲ್ಲಿ ಭಾನುವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

'ಬಂಡಾಯ ಸಂಸದರು ಮತ್ತು ಶಾಸಕರ ಮನವಿಯಂತೆ ಅವರ ಬಣದಲ್ಲೇ ಉಳಿಯಲು ನಿರ್ಧರಿಸಿದ್ದೇನೆ' ಎಂದು ಮಮತಾ ಬ್ಯಾನರ್ಜಿ ಆಪ್ತರಾಗಿದ್ದ ಸುದೀಪ್ ಬಂಡೋಪಾಧ್ಯಾಯ ಅವರು ಭಾನುವಾರ ಹೇಳಿದ್ದಾರೆ.

'ಲೋಕಸಭಾ ಸ್ಪೀಕರ್ ಅವರಿಗೆ ನೀಡಲಾಗುವ ಪತ್ರಕ್ಕೆ ಸಹಿ ಮಾಡಿಲ್ಲ. ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಸಮ್ಮುಖದಲ್ಲಿಯೇ ಸಹಿ ಮಾಡುತ್ತೇನೆ' ಎಂದು ಅವರು ತಿಳಿಸಿದ್ದಾರೆ.

ಅಭಿಷೇಕ್ ವಿಚಾರಣೆ: ಪಶ್ಚಿಮ ಬಂಗಾಳ ವಿಪಕ್ಷ ನಾಯಕನ ಆಯ್ಕೆ ಕುರಿತು ಸ್ಪೀಕರ್‌ಗೆ ಸಲ್ಲಿಸಿರುವ ಪ್ರಸ್ತಾವದಲ್ಲಿ ಶಾಸಕರ ಸಹಿ ನಕಲು ಮಾಡಿರುವ ಆರೋಪಕ್ಕೆ ಸಂಬಂಧಿಸಿ ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು ಸಿಐಡಿ ಮುಂದೆ ಎರಡನೇ ಸುತ್ತಿನ ವಿಚಾರಣೆಗೆ ಭಾನುವಾರ ಹಾಜರಾಗಿದ್ದರು.

ಟಿಎಂಸಿ ನಾಯಕ ಕುನಾಲ್ ಘೋಷ್ ಕೂಡ ವಿಚಾರಣೆಗೆ ಹಾಜರಾಗಿದ್ದರು.

ಸ್ಪೀಕರ್‌ಗೆ ಅಭಿಷೇಕ್ ಪತ್ರ

'ಟಿಎಂಸಿಯ ಯಾವುದೇ ಪ್ರತ್ಯೇಕ ಬಣಕ್ಕೆ ಮಾನ್ಯತೆ ನೀಡಬಾರದು' ಎಂದು ಆಗ್ರಹಿಸಿ, ಲೋಕಸಭೆಯಲ್ಲಿ ಟಿಎಂಸಿಯ ಸಂಸದೀಯ ಪಕ್ಷದ ನಾಯಕ ಅಭಿಷೇಕ್ ಬ್ಯಾನರ್ಜಿ ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.

'ಅಖಿಲ ಭಾರತ ತೃಣಮೂಲ ಕಾಂಗ್ರೆಸ್ (ಎಐಟಿಸಿ) ಅನ್ನು ಅಧಿಕೃತವಾಗಿ ಪ್ರತಿನಿಧಿಸುವ ನಾಯಕ ಮತ್ತು ಸಚೇತಕರನ್ನು ಪರಿಗಣಿಸಬೇಕು. ಬಂಡಾಯ ಸಂಸದರ ಯಾವುದೇ ಮನವಿ ಪರಿಗಣಿಸುವ ಮುನ್ನ ನಮ್ಮ ವಾದವನ್ನು ಮಂಡಿಸಲು ಅವಕಾಶ ನೀಡಬೇಕು' ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ನ್ಯಾಷನಲಿಸ್ಟ್ ಸಿಟಿಜನ್ ಪಕ್ಷದೊಂದಿಗೆ ಟಿಎಂಸಿ ಬಂಡಾಯ ಬಣ ವಿಲೀನ

ನವದೆಹಲಿ (ಪಿಟಿಐ): ಟಿಎಂಸಿ ಭಿನ್ನಮತೀಯ ಸಂಸದರು ತಮ್ಮ ಬಣವನ್ನು 'ನ್ಯಾಷನಲಿಸ್ಟ್ ಸಿಟಿಜನ್ ಪಕ್ಷ'ದೊಂದಿಗೆ (ಎನ್‌ಸಿಪಿ) ವಿಲೀನ ಮಾಡಿರುವುದಾಗಿ ಭಾನುವಾರ ಘೋಷಿಸಿದ್ದಾರೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿ ಮಾಡಿ, ಸದನದಲ್ಲಿ ಪ್ರತ್ಯೇಕ ಆಸನ ವ್ಯವಸ್ಥೆ ಮಾಡುವಂತೆ ಮನವಿ ಮಾಡಿದ್ದಾರೆ. ಸ್ಪೀಕರ್ ಅವರೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಬಂಡಾಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್, 'ಪ್ರತ್ಯೇಕ ಬಣಕ್ಕೆ ಮಾನ್ಯತೆ ನೀಡುವಂತೆ ಕೋರಿ ಮೂರನೇ ಎರಡರಷ್ಟು ಟಿಎಂಸಿ ಸಂಸದರು ಮನವಿಯನ್ನು ಸಲ್ಲಿಸಿದ್ದೇವೆ' ಎಂದು ಹೇಳಿದರು.

'ಬಂಡಾಯ ಸಂಸದರ ಗುಂಪನ್ನು ತ್ರಿಪುರಾದ ಪ್ರಾದೇಶಿಕ ಪಕ್ಷವಾದ 'ನ್ಯಾಷನಲಿಸ್ಟ್ ಸಿಟಿಜನ್ ಪಕ್ಷ'ದೊಂದಿಗೆ ವಿಲೀನ ಮಾಡಿದ್ದೇವೆ. ನಿಜವಾದ ಟಿಎಂಸಿಯನ್ನು ನ್ಯಾಯಾಲಯ ನಿರ್ಧರಿಸಲಿದೆ' ಎಂದು ಸಂಸದ ಸುದೀಪ್ ಬಂಡೋಪಾಧ್ಯಾಯ ತಿಳಿಸಿದರು.

ಟಿಎಂಸಿಯಲ್ಲಿ ಸಾಂಸ್ಥಿಕ ಬದಲಾವಣೆ

ಆಂತರಿಕ ಭಿನ್ನಮತ ಹೆಚ್ಚಾಗಿರುವ ಕಾರಣ ಟಿಎಂಸಿ ಸಾಂಸ್ಥಿಕ ಬದಲಾವಣೆಯನ್ನು ಮಾಡಿದೆ. ತೃಣಮೂಲ ಯುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಯೋನಿ ಘೋಷ್ ಅವರ ಸ್ಥಾನಕ್ಕೆ ಅರ್ನಬ್ ಬ್ಯಾನರ್ಜಿ ಅವರನ್ನು ಮತ್ತು ಪಕ್ಷದ ಮಹಿಳಾ ಘಟಕದ ಅಧ್ಯಕ್ಷರಾಗಿದ್ದ ಮಾಲಾ ರಾಯ್ ಸ್ಥಾನಕ್ಕೆ ಶಾಸಕಿ ಅಲೀಫ್ ಅಹಮದ್ ಅವರನ್ನು ನೇಮಿಸಿದೆ. ಉತ್ತರ ಕೋಲ್ಕತ್ತ ಸಂಘಟನಾ ಜಿಲ್ಲೆಯ ಅಧ್ಯಕ್ಷರಾಗಿದ್ದ ಹಿರಿಯ ನಾಯಕ ಸುದೀಪ್ ಬಂಡೋಪಾಧ್ಯಾಯ ಅವರ ಸ್ಥಾನಕ್ಕೆ ಕುನಾಲ್ ಘೋಷ್ ಅವರನ್ನು ನೇಮಿಸಲಾಗಿದೆ. ಇವರೆಲ್ಲಾ ಮಮತಾ ಬ್ಯಾನರ್ಜಿ ಅವರಿಗೆ ಆಪ್ತರಾಗಿದ್ದಾರೆ.

ಪಾಕ್ ಜೊತೆ ಮಾತುಕತೆ: ಹೊಸಬಾಳೆ ಹೇಳಿಕೆ ಸಮರ್ಥಿಸಿದ ಭಾಗವತ್

ತಿರುವನಂತಪುರ (ಪಿಟಿಐ): ಆರ್‌ಎಸ್‌ಎಸ್ ನಾಯಕ ದತ್ತಾತ್ರೇಯ ಹೊಸಬಾಳೆ ಅವರ 'ಪಾಕಿಸ್ತಾನದ ಜೊತೆ ಮಾತುಕತೆ ನಡೆಸುವ ಮಾರ್ಗ ಸದಾ ತೆರೆದಿರಬೇಕು' ಎಂಬ ಹೇಳಿಕೆಯನ್ನು ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಅವರು ಸಮರ್ಥಿಸಿಕೊಂಡಿದ್ದಾರೆ.

ಹೊಸಬಾಳೆ ಅವರು ಕಳೆದ ತಿಂಗಳು ನೀಡಿದ್ದ ಹೇಳಿಕೆಗೆ ಸಂಬಂಧಿಸಿದಂತೆ ಆರ್‌ಎಸ್‌ಎಸ್‌ನ ನಿಲುವು ಏನು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಭಾಗವತ್, ಸಂಘಟನೆಯು ಪಾಕಿಸ್ತಾನದ ವಿಚಾರದಲ್ಲಿ ಸರ್ಕಾರದ ನೀತಿಯನ್ನು ಪಾಲಿಸಲಿದೆ ಎಂದು ಹೇಳಿದ್ದಾರೆ.

ಆರ್‌ಎಸ್‌ಎಸ್‌ನ ಶತಮಾನೋತ್ಸವದ ಅಂಗವಾಗಿ ನಡೆದ ಸಂವಾದದಲ್ಲಿ ಮಾತನಾಡಿದ ಅವರು, 'ಭಾರತ ವಿಭಜನೆಯಾಗಬಾರದಿತ್ತು ಎಂಬ ಅಭಿಪ್ರಾಯ ಹೊಂದಿರುವ ಸಾಕಷ್ಟು ಜನರು ಪಾಕಿಸ್ತಾನದಲ್ಲಿದ್ದಾರೆ. ಅಲ್ಲಿನ ಅನೇಕ ಪತ್ರಕರ್ತರು ಆರ್‌ಎಸ್‌ಎಸ್ ಮತ್ತು ಅದರ ಕಾರ್ಯಗಳನ್ನು ಶ್ಲಾಘಿಸುತ್ತಾರೆ. ಪಾಕಿಸ್ತಾನ ವಿರೋಧಿ ಮತ್ತು ದ್ವಿರಾಷ್ಟ್ರ ಸಿದ್ಧಾಂತದ ವಿರುದ್ಧ ನಿಲುವು ಹೊಂದಿರುವವರೂ ಇದ್ದಾರೆ' ಎಂದು ಹೇಳಿದ್ದಾರೆ.

'ನಾವು ಹಿಟ್ಲರ್ ಮನಸ್ಥಿತಿಯವರಲ್ಲ. ಕೆಲವೊಂದು ಬಾಗಿಲುಗಳನ್ನು ಸದಾ ತೆರೆದಿಡುವ ಅಗತ್ಯವಿದೆ. ಅನ್ಯಾಯ, ದಬ್ಬಾಳಿಕೆ ಸೋಲಿಸಿ ಒಳ್ಳೆಯ ವಿಚಾರ ಉಳಿಸಿಕೊಳ್ಳಬೇಕು. ಆರ್‌ಎಸ್‌ಎಸ್‌ಗೆ ತನ್ನದೇ ಆದ ವಿದೇಶಾಂಗ ನೀತಿ ಇಲ್ಲ. ಅದು ಕೇಂದ್ರ ಸರ್ಕಾರವನ್ನು ಅನುಸರಿಸಲಿದೆ ಎಂದು ಒತ್ತಿ ಹೇಳಿದರು.

ನಕಲಿ ಪ್ರಶ್ನೆಪತ್ರಿಕೆ ಮಾರಾಟ: ನಾಲ್ವರ ಸೆರೆ

ಮುಜಾಫರ್‌ಪುರ (ಬಿಹಾರ) (ಪಿಟಿಐ): ನೀಟ್-ಯುಜಿ ಸೇರಿದಂತೆ ವಿವಿಧ ಪರೀಕ್ಷೆಗಳ ನಕಲಿ ಪ್ರಶ್ನೆಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದ ಆರೋಪದಲ್ಲಿ ನಾಲ್ವರನ್ನು ಬಿಹಾರ ಪೊಲೀಸರು ಬಂಧಿಸಿದ್ದಾರೆ.

ಬಂಧಿತರನ್ನು ಹರ್ಷ್, ಅಮನ್ ಕುಮಾರ್, ಕನ್ಹಯ್ಯ ಕುಮಾರ್, ಹರ್ಷ್ ಕನೋಡಿಯಾ ಎಂದು ಗುರುತಿಸಲಾಗಿದೆ.

ಇದೇ ಪ್ರಕರಣದಲ್ಲಿ ಇತ್ತೀಚೆಗೆ ಬಂಧನಕ್ಕೀಡಾಗಿರುವ ಮನೀಶ್ ಝಾ ಎಂಬಾತ ನೀಡಿದ ಮಾಹಿತಿ ಆಧರಿಸಿ, ಇವರನ್ನು ಬಂಧಿಸಿ, ಮೂರು ಮೊಬೈಲ್ ವಶಪಡಿಸಿಕೊಳ್ಳಲಾಗಿದೆ. ನೀಟ್ ಸೇರಿದಂತೆ ಇನ್ನಿತರ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಲಭ್ಯವಿವೆ ಎಂದು ಆರೋಪಿಗಳು ನಂಬಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸಂಖ್ಯಾಬಲ ಹೆಚ್ಚಿಸಿಕೊಳ್ಳಲು ಎನ್‌ಡಿಎ ಕಸರತ್ತು

ಸಾಂವಿಧಾನಿಕ ತಿದ್ದುಪಡಿ ಮಸೂದೆ ಅಂಗೀಕಾರಕ್ಕೆ 3ನೇ ಎರಡರಷ್ಟು ಬಹುಮತ ಬೇಕು

ನವದೆಹಲಿ (ಪಿಟಿಐ): ಸಂಸತ್‌ನ ಎರಡೂ ಸದನಗಳಲ್ಲಿ ಮೂರನೇ ಎರಡರಷ್ಟು ಬಹುಮತ ಪಡೆಯಲು ಎನ್‌ಡಿಎ ಪಾಳಯ ತನ್ನ ಪ್ರಯತ್ನ ಮುಂದುವರಿಸಿದೆ. ಮಹತ್ವದ ಸಾಂವಿಧಾನಿಕ ತಿದ್ದುಪಡಿ ಮಸೂದೆಗಳನ್ನು ಅಂಗೀಕರಿಸುವುದಕ್ಕೆ ಈ ಬಹುಮತ ಅಗತ್ಯ. ಈ ಕಾರಣಕ್ಕೆ, ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಬಳಿಕ ಟಿಎಂಸಿಯಲ್ಲಿ ಭುಗಿಲೆದ್ದಿರುವ ಬಂಡಾಯವು ಎನ್‌ಡಿಎಗೆ ನೆರವಾಗಲಿದೆ.

ಇತ್ತೀಚೆಗೆ ಮುಕ್ತಾಯಗೊಂಡಿರುವ ರಾಜ್ಯಸಭಾ ಚುನಾವಣೆಯು, ಮೇಲ್ಮನೆಯಲ್ಲಿ ಮೂರನೇ ಎರಡರಷ್ಟು ಬಹುಮತದ ಗಡಿ ದಾಟುವುದಕ್ಕೆ ಎನ್‌ಡಿಎಗೆ ಅನುಕೂಲ ಮಾಡಿದೆ. ಆದರೆ, ಟಿಎಂಸಿ ಬಂಡಾಯ ಸಂಸದರ ಬೆಂಬಲದ ಹೊರತಾಗಿ ಲೋಕಸಭೆಯಲ್ಲಿ 3ನೇ ಎರಡಷ್ಟು ಬಹುಮತ ಎನ್‌ಡಿಎಗೆ ಇನ್ನೂ ಮರೀಚಿಕೆ ಎನಿಸಲಿದೆ.

ಸಾಂವಿಧಾನಿಕ ತಿದ್ದುಪಡಿ ಮಸೂದೆಗಳನ್ನು ಲೋಕಸಭೆಯಲ್ಲಿ ಅಂಗೀಕರಿಸುವುದಕ್ಕೆ 363 ಸಂಸದರ ಬೆಂಬಲ ಅಗತ್ಯ. ಲೋಕಸಭೆಯಲ್ಲಿ ಟಿಎಂಸಿಯ 20 ಸಂಸದರು ಪ್ರತ್ಯೇಕ ಗುಂಪು ರಚಿಸಿಕೊಂಡಿದ್ದು, ಎನ್‌ಡಿಎಗೆ ಬೆಂಬಲ ಸೂಚಿಸಲು ಒಲವು ವ್ಯಕ್ತಪಡಿಸಿದ್ದಾರೆ. ಈ ಸದಸ್ಯರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಸೋಮವಾರ ಭೇಟಿ ಮಾಡಿ, ಟಿಎಂಸಿಯಿಂದ ತಾವು ಹೊರಬರುತ್ತಿರುವ ಕುರಿತ ಪತ್ರವನ್ನು ಅವರಿಗೆ ಸಲ್ಲಿಸಲಿದ್ದಾರೆ. ಈ ಬೆಳವಣಿಗೆ ಬಳಿಕ, ಲೋಕಸಭೆಯಲ್ಲಿ ಎನ್‌ಡಿಎ ಸಂಖ್ಯೆ 313ರ ಗಡಿ ತಲುಪಬಹುದು.

ರಾಜ್ಯಸಭೆ: ರಾಜ್ಯಸಭೆಯಲ್ಲಿ ಸದ್ಯ ಎನ್‌ಡಿಎ ಸದಸ್ಯ ಬಲ ಸದ್ಯ 148. ಜಾರ್ಖಂಡ್ ಮತ್ತು ಮಿಜೋರಾಂನಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಗೆಲ್ಲಲಿದೆ.

ಟಿಎಂಸಿಯ ಮೂವರು ಸಂಸದರು ರಾಜೀನಾಮೆ ನೀಡಿರುವ ಕಾರಣ, ಪಶ್ಚಿಮ ಬಂಗಾಳದಿಂದ ರಾಜ್ಯಸಭೆಗೆ ನಡೆಯುವ ಉಪಚುನಾವಣೆಯಲ್ಲಿ ಈ ಮೂರೂ ಸ್ಥಾನಗಳನ್ನು ಎನ್‌ಡಿಎ ಸುಲಭವಾಗಿ ಗೆಲ್ಲಬಹುದಾಗಿದೆ. ಇದರೊಂದಿಗೆ ಅದರ ಸಂಖ್ಯಾಬಲ 154ಕ್ಕೆ ಏರಲಿದೆ.

ಆಗ, ರಾಜ್ಯಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತಕ್ಕಾಗಿ ಎನ್‌ಡಿಎ ಪಾಳಯಕ್ಕೆ 9 ಸ್ಥಾನಗಳ ಕೊರತೆ ಉಂಟಾಗಲಿದೆ. ಟಿಎಂಸಿಯ ಮತ್ತಷ್ಟು ರಾಜ್ಯಸಭಾ ಸಂಸದರು ರಾಜೀನಾಮೆ ನೀಡುವ ಸಾಧ್ಯತೆ ಇರುವುದರಿಂದ, ಬಹುಮತಕ್ಕೆ ಬೇಕಾದ 163 ಸ್ಥಾನ ಹೊಂದುವುದು ಎನ್‌ಡಿಎಗೆ ಸಾಧ್ಯವಾಗಬಹುದು.

ಆದರೆ, ಉತ್ತರ ಪ್ರದೇಶದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಎನ್‌ಡಿಎಯ 10 ಸಂಸದರ ಅಧಿಕಾರಾವಧಿ ನವೆಂಬರ್‌ನಲ್ಲಿ ಅಂತ್ಯವಾಗಲಿದೆ. ಪ್ರಸಕ್ತ ವಿಧಾನಸಭೆಯಲ್ಲಿ ಸಮಾಜವಾದಿ ಪಕ್ಷವು ಹೊಂದಿರುವ ಸದಸ್ಯರ ಸಂಖ್ಯೆಯ ದೃಷ್ಟಿಯಿಂದ ನೋಡಿದಾಗ, ಆ ಪಕ್ಷವು ಮುಂಬರುವ ರಾಜ್ಯಸಭಾ ಚುನಾವಣೆಯಲ್ಲಿ ತನ್ನ ಸ್ಥಾನಗಳ ಸಂಖ್ಯೆ ಹೆಚ್ಚಿಸಿಕೊಳ್ಳುವುದು ಖಚಿತ.

ಇನ್ನೊಂದೆಡೆ, ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಸದಸ್ಯ ಬಲ 64ಕ್ಕೆ ಇಳಿದಿದೆ. ಮೈತ್ರಿಕೂಟದಿಂದ ಡಿಎಂಕೆ ಹೊರನಡೆದ ಕಾರಣ 8 ಸದಸ್ಯರ ಸಂಖ್ಯೆ ಕಡಿಮೆಯಾಗಿದೆ. ಎಎಪಿಯ ಮೂವರು ಸಂಸದರು 'ಇಂಡಿಯಾ'ದಿಂದ ಅಂತರ ಕಾಯ್ದುಕೊಂಡಿದ್ದಾರೆ.

ವೈಎಸ್‌ಆರ್ ಕಾಂಗ್ರೆಸ್ ಮತ್ತು ಬಿಜೆಡಿ ಕ್ರಮವಾಗಿ 7 ಹಾಗೂ 6 ಸ್ಥಾನಗಳನ್ನು ಹೊಂದಿವೆ. ಇವುಗಳಲ್ಲದೇ, ಎಂಡಿಎಂಕೆ ಪಕ್ಷವು ಎನ್‌ಡಿಎ ಹಾಗೂ 'ಇಂಡಿಯಾ' ಪೈಕಿ ಯಾವ ಪಾಳಯಕ್ಕಾದರೂ ಬೆಂಬಲ ವ್ಯಕ್ತಪಡಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಸಂಸದರ ಸಭೆ ನಡೆಸಿದ ಉದ್ಧವ್ ಠಾಕ್ರೆ

ಉದ್ಧವ್ ಠಾಕ್ರೆ

ಮುಂಬೈ (ಪಿಟಿಐ): ಶಿವಸೇನಾದ (ಯುಬಿಟಿ) ಕೆಲ ಸಂಸದರು ಪಕ್ಷಾಂತರಗೊಳ್ಳಲಿದ್ದಾರೆ ಎಂಬ ವದಂತಿಗಳ ನಡುವೆ, ಪಕ್ಷದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಲೋಕಸಭಾ ಸದಸ್ಯರ ಸಭೆ ನಡೆಸಿದ್ದಾರೆ.

ಇಲ್ಲಿನ ಬಾಂದ್ರಾ ಪೂರ್ವ ಪ್ರದೇಶದಲ್ಲಿರುವ ಠಾಕ್ರೆ ಅವರ ನಿವಾಸ 'ಮಾತೋಶ್ರೀ'ಯಲ್ಲಿ ಭಾನುವಾರ ಮಧ್ಯಾಹ್ನ ಸಭೆ ನಡೆದಿದ್ದು, ನಾಲ್ವರು ಸಂಸದರು ಖುದ್ದು ಭಾಗವಹಿಸಿದ್ದಾರೆ. ಮತ್ತೆ ನಾಲ್ವರು ವರ್ಚುವಲ್ ಮೂಲಕ ಹಾಜರಾಗಿದ್ದಾರೆ. ಒಬ್ಬರು ಠಾಕ್ರೆ ಅವರೊಂದಿಗೆ ದೂರವಾಣಿ ಕರೆ ಮಾಡಿ ಮಾತನಾಡಿದ್ದಾರೆ. 'ಆಪರೇಷನ್ ಟೈಗರ್'ನಡಿ ಕೆಲ ಸಂಸದರು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಆಡಳಿತಾರೂಢ ಶಿವಸೇನಾ ಪಕ್ಷಕ್ಕೆ ಸೇರಬಹುದು ಎಂಬ ವದಂತಿ ಹಬ್ಬಿತ್ತು.

ಆರು ಮಂದಿ ಸೆರೆ; ಸ್ಪರ್ಧಾತ್ಮಕ ಪರೀಕ್ಷೆಗೆ ಸೂಕ್ತ ವ್ಯವಸ್ಥೆ ಮಾಡಿಲ್ಲವೆಂದು ಆಕ್ರೋಶ

ರೈಲು ತಡೆಗೆ ಯತ್ನ: ಗಾಳಿಯಲ್ಲಿ ಗುಂಡು

ಪಟ್ನಾ (ಪಿಟಿಐ): 'ಅಬಕಾರಿ ಇಲಾಖೆಯ ಪರೀಕ್ಷೆಗೆ ತೆರಳಲು ಅನುಕೂಲವಾಗುವಂತೆ ರೈಲುಗಳ ವ್ಯವಸ್ಥೆ ಮಾಡಿಲ್ಲ' ಎಂದು ಆರೋಪಿಸಿ ಅಭ್ಯರ್ಥಿಗಳು ಪಟ್ನಾ ಹೊರವಲಯದ ಪಾಟಲಿಪುತ್ರ ನಿಲ್ದಾಣದಲ್ಲಿ ರೈಲುಗಳ ಸಂಚಾರ ತಡೆಗೆ ಶನಿವಾರ ಮಧ್ಯರಾತ್ರಿ ಯತ್ನಿಸಿದ್ದಾರೆ. ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಅಶ್ರುವಾಯು ಶೆಲ್ ಸಿಡಿಸಿ, ಲಾಠಿ ಪ್ರಹಾರ ನಡೆಸಿದ್ದಾರೆ.

'ಭಾನುವಾರ ನಿಗದಿಯಾಗಿದ್ದ ಪರೀಕ್ಷೆಗೆ ಅಭ್ಯರ್ಥಿಗಳನ್ನು ಕರೆದೊಯ್ಯಲು ರೈಲುಗಳ ಕೊರತೆ ಉಂಟಾಗಿದೆ. ಇದರಿಂದ ಸಮಯಕ್ಕೆ ಸರಿಯಾಗಿ ಗಮ್ಯಸ್ಥಾನವನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಕೂಡಲೇ, ವಿಶೇಷ ರೈಲುಗಳ ವ್ಯವಸ್ಥೆ ಮಾಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

'ಅಭ್ಯರ್ಥಿಗಳು ಎಂದು ಹೇಳಿಕೊಂಡ 200ಕ್ಕೂ ಹೆಚ್ಚು ಯುವಕರು ಶನಿವಾರ ಮಧ್ಯರಾತ್ರಿ ರೈಲುಗಳನ್ನು ತಡೆದು ಪ್ರತಿಭಟಿಸಲು ಮುಂದಾದರು. ಹಳಿಗಳ ಮೇಲೆ ಮಲಗಿದ್ದರು. ಬೆಳಗಿನ ಜಾವ 2 ಗಂಟೆ ಸುಮಾರಿಗೆ ವಿಶೇಷ ರೈಲು ಬಂದರೂ ಪ್ರತಿಭಟನಕಾರರು ಹಳಿಗಳಿಂದ ಎದ್ದೇಳಲಿಲ್ಲ. ಅವರನ್ನು ಚದುರಿಸಲು ಪ್ರಯತ್ನಿಸಿದಾಗ ಕಲ್ಲು ತೂರಾಟ ನಡೆಸಿದರು. ಹೀಗಾಗಿ, ಅಶ್ರುವಾಯು ಶೆಲ್ ಸಿಡಿಸುವ ಜತೆಗೆ ಲಾಠಿ ಪ್ರಹಾರ ನಡೆಸಲಾಯಿತು. 3 ಗಂಟೆಗೆ ಪರಿಸ್ಥಿತಿ ಸಹಜಸ್ಥಿತಿಗೆ ಬಂತು' ಎಂದು ರೈಲ್ವೆ ರಕ್ಷಣಾ ಪಡೆಯ ಉಸ್ತುವಾರಿ ಇನ್‌ಸ್ಪೆಕ್ಟರ್ ಜನರಲ್ ಅಮರೇಶ್ ಕುಮಾರ್ ತಿಳಿಸಿದ್ದಾರೆ.

'ವಿಧ್ವಂಸಕ ಕೃತ್ಯದಲ್ಲಿ ಭಾಗಿಯಾದ ಆರೋಪದಡಿ ಆರು ಮಂದಿಯನ್ನು ಬಂಧಿಸಲಾಗಿದೆ. ಉಳಿದವರ ಪತ್ತೆ ಕಾರ್ಯ ನಡೆಯುತ್ತಿದೆ. ಪರೀಕ್ಷೆಯನ್ನು ರದ್ದುಗೊಳಿಸುವ ಉದ್ದೇಶದಿಂದಲೇ ರೈಲು ತಡೆ ನಡೆಸಲು ಮುಂದಾಗಿದ್ದರೆಂದು ತೋರುತ್ತದೆ ' ಎಂದು ಅವರು ತಿಳಿಸಿದ್ದಾರೆ.

ಬಿಹಾರದ ಪಟ್ನಾ ನಿಲ್ದಾಣದಲ್ಲಿ ಸೇರಿದ್ದ ಅಭ್ಯರ್ಥಿಗಳು —ಪಿಟಿಐ ಚಿತ್ರ

ಸ್ಪರ್ಧಾತ್ಮಕ ಪರೀಕ್ಷೆಯ ಮುನ್ನಾದಿನ ನಡೆದಿರುವ ಈ ಘಟನೆ ದುರದೃಷ್ಟಕರ. ಯುವಕರು ಸಭ್ಯತೆ ಮೀರಬಾರದು
ಬಿಜೇಂದ್ರ ಪ್ರಸಾದ್ ಯಾದವ್, ಬಿಹಾರ ಉಪಮುಖ್ಯಮಂತ್ರಿ

ಡ್ರಾ ಪಂದ್ಯದಲ್ಲಿ ಬ್ರೆಜಿಲ್, ಮೊರಾಕ್ಕೊ

ಅಗ್ರ ಹತ್ತರೊಳಗಿನ ತಂಡಗಳ ಸೆಣಸಾಟ • ಸೋಲು ತಪ್ಪಿಸಿದ ವಿನೀಷಿಯಸ್ ಗೋಲು

ನಿರ್ಣಾಯಕ ಗೋಲು ಗಳಿಸಿ ಪಂದ್ಯ ಡ್ರಾ ಆಗಲು ಕಾರಣರಾದ ಬ್ರೆಜಿಲ್ ತಂಡದ ವಿನೀಷಿಯಸ್ ಜೂನಿಯರ್ ಎಎಫ್‌ಪಿ ಚಿತ್ರ

ಲಾಸ್ ಏಂಜಲೀಸ್ (ಎಎಫ್‌ಪಿ/ ಎಪಿ): ಮೊರಾಕ್ಕೊ ವಿರುದ್ಧ ತನ್ನ ಪಂದ್ಯವನ್ನು ಡ್ರಾ ಮಾಡಿಕೊಳ್ಳಬೇಕಾದರೆ ಐದು ಬಾರಿಯ ಚಾಂಪಿಯನ್ಸ್ ಬ್ರೆಜಿಲ್ ತಂಡಕ್ಕೆ ವಿನೀಷಿಯಸ್ ಜೂನಿಯರ್ ಅವರ ಕಾಲ್ಚಳಕದ ಮೋಡಿ ಅಗತ್ಯವಾಯಿತು. ಶನಿವಾರ ರಾತ್ರಿ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ನಡೆದ ಫಿಫಾ ವಿಶ್ವಕಪ್ ಟೂರ್ನಿಯ 'ಸಿ' ಗುಂಪಿನ ಮೊದಲ ಪಂದ್ಯ 1–1 ಡ್ರಾ ಆಯಿತು..

ಪ್ರಬಲ ಬ್ರೆಜಿಲ್ ಮತ್ತು 2022ರಲ್ಲಿ ಸೆಮಿಫೈನಲ್ ತಲುಪಿದ್ದ ಮೊರಾಕ್ಕೊ ನಡುವಣ ಪಂದ್ಯ ಕುತೂಹಲ ಮೂಡಿಸಿತ್ತು. ವಿಶ್ವ ಕ್ರಮಾಂಕದಲ್ಲಿ ಕ್ರಮವಾಗಿ ಆರು ಮತ್ತು ಏಳನೇ ಸ್ಥಾನ ಪಡೆದಿರುವ ಈ ಎರಡು ತಂಡಗಳು ನಿರೀಕ್ಷೆಗೆ ತಕ್ಕಂತೆ ಗುಣಮಟ್ಟದ ಆಟವಾಡಿದವು. 48 ತಂಡಗಳು ಆಡುತ್ತಿರುವ ಈ ವಿಶ್ವಕಪ್‌ನ ಮೊದಲ ಸುತ್ತಿನಲ್ಲಿ ಅಗ್ರ 10ರೊಳಗಿನ ಎರಡು ತಂಡಗಳು ಇದೇ ಮೊದಲ ಬಾರಿ ಎದುರಾಗಿದ್ದವು.

ಮೊರಾಕ್ಕೊ ಆರಂಭದಲ್ಲಿ ಒತ್ತಡ ಹೇರಿತು. 30 ನಿಮಿಷಗಳಲ್ಲಿ 12 ಬಾರಿ ಗೋಲಿನತ್ತ ಮುನ್ನುಗ್ಗಿತು. ಇಸ್ಮಾಯಿಲ್ ಸೈಬರಿ ಅವರು 21ನೇ ನಿಮಿಷ ಜಾಣ್ಮೆಯ ಸ್ಕೂಪ್‌ನೊಡನೆ ಬ್ರೆಜಿಲ್ ಗೋಲ್ ಕೀಪರ್ ಆಲಿಸನ್ ಬೆಕರ್ ಅವರನ್ನು ವಂಚಿಸಿ ತಂಡಕ್ಕೆ ಮುನ್ನಡೆ ಒದಗಿಸಿದರು.

ಇಸ್ಮಾಯಿಲ್ ಸೈಬರಿ

ಆದರೆ 11 ನಿಮಿಷಗಳ ನಂತರ ಸ್ಕೋರ್ ಸಮನಾಯಿತು. ಎಡಗಡೆಯಿಂದ ನಡೆದ ದಾಳಿಯಲ್ಲಿ ವಿನೀಷಿಯಸ್ ಅವರು ಬ್ರುನೊ ಗಿಮಾರೇಸ್ ಅವರೊಡನೆ ಚೆಂಡನ್ನು ಮುನ್ನಡೆಸಿಕೊಂಡು ಬಂದರು. ನೀಲ್ ಎಲ್ ಅವನೊಯಿ ಅವರ ಕಾವಲನ್ನು ಭೇದಿಸಿದ ವಿನೀಷಿಯಸ್ ಬಲಗಾಲಿನಲ್ಲಿ ಮಿಂಚಿನಂತೆ ಒದ್ದ ಚೆಂಡು ಗೋಲ್‌ಕೀಪರ್ ಯಾಸಿನೆ ಬೌನೊ ಅವರು ಚಾಚಿದ ಕೈಗಳ ಹತ್ತಿರದಿಂದ ವೇಗವಾಗಿ ಗೋಲಿನೊಳಗೆ ನುಗ್ಗಿತು. ಇದು 25 ವರ್ಷ ವಯಸ್ಸಿನ ತಾರೆಗೆ ಹತ್ತನೇ ಅಂತರರಾಷ್ಟ್ರೀಯ ಗೋಲು.

24 ವರ್ಷಗಳ ಹಿಂದೆ ಕೊನೆಯ ಬಾರಿ ಟ್ರೋಫಿ ಎತ್ತಿಹಿಡಿದಿದ್ದ ಬ್ರೆಜಿಲ್ ಈಗ ದಾಖಲೆಯ ಆರನೇ ಬಾರಿ ಚಾಂಪಿಯನ್ ಆಗಲು ಯತ್ನಿಸುತ್ತಿದೆ. ಆದರೆ ಇದಕ್ಕಾಗಿ ಕಾರ್ಲೊ ಆ್ಯನ್ಸೆಲೊಟ್ಟಿ ಮಾರ್ಗದರ್ಶನದ ತಂಡ ಸಾಕಷ್ಟು ಶ್ರಮ ಹಾಕಬೇಕೆಂಬುದು ಶನಿವಾರದ ಪಂದ್ಯದಲ್ಲಿ ಶ್ರುತಪಟ್ಟಿತು.

'ಇದು ಕಠಿಣ ಪಂದ್ಯವಾಗಿತ್ತು. ವಿಶೇಷವಾಗಿ ಆರಂಭದಲ್ಲಿ. ತಂಡ ಆಡುತ್ತಿದ್ದ ರೀತಿ ನೋಡಿದರೆ ನಮ್ಮ ತಂಡದ ಆಟಗಾರರು 'ನರ್ವಸ್' ಆದಂತೆ ಕಂಡಿತು' ಎಂದು ಆ್ಯನ್ಸೆಲಾಟಿ ಪ್ರತಿಕ್ರಿಯಿಸಿದರು. ಆದರೆ ನಾವು ಎದೆಗುಂದಬೇಕಿಲ್ಲ ಎಂದೂ ಹೇಳಿದರು.

'ಡ್ರಾ'ದಿಂದ ತೃಪ್ತಿಯಾಗಿದೆ. ಅದರೆ ನಾವು ಭ್ರಮಾಲೋಕದಲ್ಲಿ ಇಲ್ಲ' ಎಂಬುದು ಮೊರಾಕ್ಕೊದ ಕೋಚ್ ಮೊಹಮದ್ ವಾಬಿ ಅವರ ಪ್ರತಿಕ್ರಿಯೆಯಾಗಿತ್ತು.

ಕ್ರೀಡಾಂಗಣದಲ್ಲಿದ್ದ ಸುಮಾರು 80,663 ಪ್ರೇಕ್ಷಕರಲ್ಲಿ ಬ್ರೆಜಿಲ್‌ನ ಹಳದಿ ಬಣ್ಣವೇ ಎದ್ದುಕಾಣುತಿತ್ತು. ಕೇವಲ ಐದು ಭಾಗಗಳಲ್ಲಿ ಮೊರಾಕ್ಕೊದ ಅಭಿಮಾನಿಗಳು ಬಹುಸಂಖ್ಯೆಯಲ್ಲಿದ್ದರು.

ಪಂದ್ಯಗಳು

ಸ್ವೀಡನ್	V/s	ಟ್ಯುನೀಶಿಯಾ
ಸೋಮವಾರ ಬೆಳಿಗ್ಗೆ 7.30		
ಸ್ಪೇನ್	V/s	ಕೇಪ್ ವೆರ್ಡೆ
ಸೋಮವಾರ ರಾತ್ರಿ 9.30		
ಬೆಲ್ಜಿಯಂ	V/s	ಈಜಿಪ್ಟ್
ಸೋಮವಾರ ರಾತ್ರಿ 12.30		
ಸೌದಿ ಅರೇಬಿಯಾ	V/s	ಉರುಗ್ವೆ
ಮಂಗಳವಾರ ನಸುಕಿನ ಜಾವ3.30		
ಇರಾನ್	V/s	ನ್ಯೂಜಿಲೆಂಡ್
ಮಂಗಳವಾರ ಬೆಳಿಗ್ಗೆ 6.30		

ಲೈವ್: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೆಎಸ್ ಆ್ಯಪ್

ಮೊದಲ ಪಂದ್ಯದ ಅಜೇಯ ದಾಖಲೆ

ಬ್ರೆಜಿಲ್ ತಂಡ ವಿಶ್ವಕಪ್‌ನ ಮೊದಲ ಪಂದ್ಯಗಳಲ್ಲಿ 21ನೇ ಬಾರಿ ಅಜೇಯವಾಗಿ ಉಳಿಯಿತು. ಇದರಲ್ಲಿ 17 ಗೆಲುವುಗಳು ಸೇರಿವೆ. 1934ರಲ್ಲಿ ತನ್ನ ಮೊದಲ ಪಂದ್ಯವನ್ನು ಸ್ಪೇನ್‌ಗೆ ಸೋತ ನಂತರ ತನ್ನ ಮೊದಲ ಪಂದ್ಯಗಳಲ್ಲಿ ಅಜೇಯವಾಗುಳಿದಿರುವುದು ಗಮನಾರ್ಹ.

1930ರಲ್ಲಿ ಆರಂಭವಾದ ಫಿಫಾ ವಿಶ್ವಕಪ್‌ನ ಈವರೆಗಿನ ಎಲ್ಲಾ ಆವೃತ್ತಿಗಳಲ್ಲಿ ಆಡಿರುವ ಏಕಮಾತ್ರ ತಂಡವೆಂಬ ಹೆಗ್ಗಳಿಕೆ ಬ್ರೆಜಿಲ್‌ನದ್ದು.

ನೆಸ್ಟೊರಿ ಇರಾನ್ಕುಂಡ, ಕಾನರ್ ಮೆಟ್‌ಕಾಫ್ ಕಾಲ್ಚಳಕ

ಆಸ್ಟ್ರೇಲಿಯಾಗೆ ಮಣಿದ ಟರ್ಕಿ

ಗೋಲು ಗಳಿಸಿದ ಸಂಭ್ರಮದಲ್ಲಿ ಕಾನರ್ ಮೆಟ್‌ಕಾಫ್ (ಬಲ) ಎಎಫ್‌ಪಿ ಚಿತ್ರ

ವ್ಯಾಂಕೂವರ್ (ಕೆನಡಾ), (ಎಪಿ): ನೆಸ್ಟೊರಿ ಇರಾನ್ಕುಂಡ ಮತ್ತು ಕಾನರ್ ಮೆಟ್‌ಕಾಫ್ ಅವರು ಗಳಿಸಿದ ಗೋಲುಗಳ ನೆರವಿನಿಂದ ಆಸ್ಟ್ರೇಲಿಯಾ ತಂಡ ಶನಿವಾರ ರಾತ್ರಿ ನಡೆದ ಫಿಫಾ ವಿಶ್ವಕಪ್ 'ಡಿ' ಗುಂಪಿನ ಪಂದ್ಯದಲ್ಲಿ 2–0 ಗೋಲುಗಳಿಂದ ಟರ್ಕಿ ತಂಡವನ್ನು ಸೋಲಿಸಿತು.

24 ವರ್ಷಗಳ ಬಳಿಕ ವಿಶ್ವಕಪ್ ಟೂರ್ನಿಗೆ ಮರಳಿದ್ದ ಟರ್ಕಿಗೆ ಆ ಸಂಭ್ರಮ ಆಚರಿಸುವ ಕನಸು ಈಡೇರಲಿಲ್ಲ. 'ಸಾಕರೂಸ್' (ಆಸ್ಟ್ರೇಲಿಯಾ) ಗೋಲ್ ಕೀಪರ್ ಪ್ಯಾಟ್ರಿಕ್ ಬೀಚ್ ಅವರು ಟರ್ಕಿಯ ಎಂಟು ಬಾರಿ ಗೋಲು ಅವಕಾಶಗಳನ್ನು ತಡೆದು ಗೆಲುವಿಗೆ ಕಾಣಿಕೆ ನೀಡಿದರು. ಫಿಫಾ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ ಈ ಪಂದ್ಯಕ್ಕೆ ಪ್ರೇಕ್ಷಕರಾಗಿದ್ದರು.

ಆಸ್ಟ್ರೇಲಿಯಾಕ್ಕೆ ಇದು ಸತತ ಆರನೇ ಹಾಗೂ ಒಟ್ಟಾರೆ ಏಳನೇ ವಿಶ್ವಕಪ್ ಟೂರ್ನಿಯಾಗಿದೆ. 2022ರಲ್ಲಿ ಸೆಮಿಫೈನಲ್ ತಲುಪಿ ಇತಿಹಾಸ ನಿರ್ಮಿಸಿದ್ದ ಟರ್ಕಿ ತಂಡ ನಂತರದ ಐದು ವಿಶ್ವಕಪ್ ಟೂರ್ನಿಗಳಿಗೆ ಅರ್ಹತೆ ಪಡೆಯಲು ವಿಫಲವಾಗಿತ್ತು. ಈ ಬಾರಿ ಪ್ಲೇಆಫ್‌ನಲ್ಲಿ ಕೊಸೊವೊ ತಂಡವನ್ನು ಸೋಲಿಸಿ ಅರ್ಹತೆ ಗಿಟ್ಟಿಸಿತ್ತು.

20 ವರ್ಷ ವಯಸ್ಸಿನ ನೆಸ್ಟೊರಿ ಅವರು 27ನೇ ನಿಮಿಷ ಮೂವರು ರಕ್ಷಣೆ ಆಟಗಾರರನ್ನು ವಂಚಿಸಿ ಕೆಳಮಟ್ಟದ ಹೊಡೆತದಲ್ಲಿ ಗೋಲು ಗಳಿಸಿದರು. ಅವರು ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾದ ಅತಿ ಕಿರಿಯ ಸ್ಕೋರರ್ ಎನಿಸಿದರು.

ಕೆಲವೇ ನಿಮಿಷಗಳ ಬಳಿಕ ಟರ್ಕಿಯ ಅಬ್ದುಲ್ ಕರೀಂ ಬರ್ದಾಕಿ ಅವರ ಉತ್ತಮ ಯತ್ನವನ್ನು ಬೀಚ್ ಅವರು ಅಮೋಘವಾಗಿ ತಡೆದರು. 57ನೇ ನಿಮಿಷ ದೊರೆತ ಮತ್ತೊಂದು ಸುವರ್ಣ ಅವಕಾಶದಲ್ಲಿ ಅರ್ದಾ ಗುಲೆರ್ ಅವರ ಉತ್ತಮ ಪ್ರಯತ್ನವನ್ನೂ ಬೀಚ್ ತಡೆದರು. ಟರ್ಕಿ ಕೊನೆಯ ಬಾರಿ ವಿಶ್ವಕಪ್‌ನಲ್ಲಿ ಆಡಿದಾಗ ಪ್ರತಿಭಾನ್ವಿತ ಆಟಗಾರ ಗುಲೆರ್ ಇನ್ನೂ ಹುಟ್ಟಿರಲಿಲ್ಲ.

ಪಂದ್ಯದ ಬಹುಪಾಲು ನಿಯಂತ್ರಣ ಸಾಧಿಸಿದರೂ ಟರ್ಕಿ ತಂಡವು ಗೋಲು ಹೊಡೆಯಲು ವಿಫಲವಾಯಿತು.

ಕತಾರ್ ಎದುರು ಗೆಲುವು ಕೈಚೆಲ್ಲಿದ ಸ್ವಿಟ್ಜರ್ಲೆಂಡ್

ಹೈಟಿ ವಿರುದ್ಧ ಗೆದ್ದ ಸ್ಕಾಟ್ಲೆಂಡ್

ಸ್ಕಾಟ್ಲೆಂಡ್ ತಂಡದ ಜಾನ್ ಮೆಕ್‌ಜಿನ್ ಎಎಫ್‌ಪಿ ಚಿತ್ರ

ಬಾಸ್ಟನ್ (ಎಎಫ್‌ಪಿ): ವಿಶ್ವಕಪ್ ಟೂರ್ನಿಯಲ್ಲಿ 28 ವರ್ಷಗಳ ನಂತರ ಆಡಿದ ಸ್ಕಾಟ್ಲೆಂಡ್ ತಂಡ ತನ್ನ ಪುನರಾಗಮನದ ಸಂಭ್ರಮವನ್ನು ಹೈಟಿ ತಂಡದ ವಿರುದ್ಧ 1–0 ಗೆಲುವಿನೊಡನೆ ಆಚರಿಸಿತು. ಇದು ಸ್ಕಾಟ್ಲೆಂಡ್ ತಂಡಕ್ಕೆ 1990ರ (ಇಟಲಿ ವಿಶ್ವಕಪ್) ಬಳಿಕ ದೊರೆತ ಮೊದಲ ಜಯ.

1998ರಲ್ಲಿ ಕೊನೆಯ ಬಾರಿ ವಿಶ್ವಕಪ್ ಆಡಿದ್ದ ಸ್ಕಾಟ್ಲೆಂಡ್ ಶನಿವಾರ ಬಾಸ್ಟನ್ ಹೊರವಲಯ ಫಾಕ್ಸ್‌ಬರೊದಲ್ಲಿರುವ ಜಿಲಾಟ್ ಕ್ರೀಡಾಂಗಣದಲ್ಲಿ ನಡೆದ ಸಿ ಗುಂಪಿನ ಪಂದ್ಯದಲ್ಲಿ ತೀವ್ರ ಹೋರಾಟ ನಡೆಸಿ ಜಯಗಳಿಸಿತು. ಹೈಟಿ ತಂಡ 1974ರ ನಂತರ ಇದೇ ಮೊದಲ ಬಾರಿ ವಿಶ್ವಕಪ್ ಕಣಕ್ಕಿಳಿದಿತ್ತು.

ಪಂದ್ಯಕ್ಕೆ ಸ್ಕಾಟ್ಲೆಂಡ್‌ನ ಬೆಂಬಲಿಗರ ಪಡೆ 'ಟಾರ್ಟನ್ ಆರ್ಮಿ' ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿತ್ತು. ಸ್ಕಾಟ್ ಪಡೆ ಆರಂಭದಲ್ಲಿಯೇ ಒತ್ತಡ ಹೇರುವ ಯತ್ನ ನಡೆಸಿತು. ಮಿಡ್‌ಫೀಲ್ಡ್ ತಾರೆ ಸ್ಕಾಟ್ ಮೆಕ್‌ಟಾಮಿನೆ ಅವರು 17ನೇ ನಿಮಿಷ ಉತ್ತಮ ಅವಕಾಶವೊಂದರಲ್ಲಿ ಗೋಲಿನತ್ತ ಹೊಡೆದ ಚೆಂಡು ಗೋಲುಗಂಬಕ್ಕೆ ಹೊಡೆದು ಆಚೆಹೋಯಿತು. ಆದರೆ 28ನೇ ನಿಮಿಷ ಆಸ್ಟನ್ ವಿಲಾಕ್ಕೆ ಆಡುವ ಮಿಡ್‌ಫೀಲ್ಡರ್ ಜಾನ್ ಮೆಕ್‌ಜಿನ್ ನಿರ್ಣಾಯಕ ಗೋಲು ಗಳಿಸಿದರು.

ದಿಟ್ಟ ರಕ್ಷಣೆಯ ಆಟವಾಡಿದ ಹೈಟಿಯ ಎದುರು ಸ್ಕಾಟ್ಲೆಂಡ್ ತಂಡಕ್ಕೆ ಮುನ್ನಡೆ ಹೆಚ್ಚಿಸಲಾಗಲಿಲ್ಲ.

ಡ್ರಾ ಪಂದ್ಯದಲ್ಲಿ ಕತಾರ್–ಸ್ವಿಸ್

ಕ್ಯಾಲಿಫೋರ್ನಿಯಾದ ಸಾಂಟಾ ಕ್ಲಾರಾದಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ತಂಡದ ಜಯದ ಕನಸು ಕೈತಪ್ಪಿತು.

ಬ್ರೀಲ್ ಎಂಬೊಲೊ ಅವರು ಮೊದಲಾರ್ಧದಲ್ಲಿ 'ಪೆನಾಲ್ಟಿ'ಯನ್ನು ಪರಿವರ್ತಿಸಿ ಸ್ವಿಸ್ ಪಡೆಗೆ ಮುನ್ನಡೆ ಒದಗಿಸಿದ್ದರು. ಆದರೆ ಮೀರೊ ಮುಹಿಮ್ ಅವರು ಇಂಜುರಿ ಅವಧಿಯಲ್ಲಿ (90 + 4) ಉಡುಗೊರೆ ಗೋಲಿನಿಂದ ಕತಾರ್ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಜರ್ಮನಿಗೆ ಮಣಿದ ಕ್ಯುರಸಾವೊ

ಜರ್ಮನಿ ತಂಡವು ಫಿಫಾ ಫುಟ್‌ಬಾಲ್ ವಿಶ್ವಕಪ್‌ನಲ್ಲಿ ಪದಾರ್ಪಣೆಯ ಪಂದ್ಯವಾಡಿದ ಕ್ಯುರಸಾವೊ ತಂಡದ ವಿರುದ್ಧ ಭಾನುವಾರ 7–1ರಿಂದ ನಿರಾಯಾಸ ಗೆಲುವು ಸಾಧಿಸಿತು.

ಸಂಘಟಿತ ಆಟವಾಡಿದ ಜರ್ಮನಿ ತಂಡದ ಆಟಗಾರರು ಪಂದ್ಯದುದ್ದಕ್ಕೂ ಪಾರಮ್ಯ ಮೆರೆದರು. ಫಿಲಿಕ್ಸ್ ಮೆಚಾ (6ನೇ ನಿ.), ನಿಕೊ ಶ್ಲಾಟರ್‌ಬೆಕ್ (38ನೇ ನಿ.), ಜಮಾಲ್ ಮುಸಿಯಾಲಾ (47ನೇ ನಿ.), ನಥಾನಿಯಲ್ ಬ್ರೌನ್ (68ನೇ ನಿ.) ಹಾಗೂ ಡೇನಿಝ್ (78ನೇ ನಿ.) ಹಾಗೂ ಕೈಹವರ್ಟ್ಸ್ (88ನೇ ನಿ.) ತಲಾ ಒಂದು ಗೋಲು ಹೊಡೆದರು.

ಪುಟ್ಟರಾಷ್ಟ್ರ ಕ್ಯುರಸಾವೊ ತಂಡದ ಲಿವಾನೊ ಕಮೆನೆನ್ಸಿಯಾ (21ನೇ ನಿ.) ಏಕೈಕ ಗೋಲು ದಾಖಲಿಸಿದರು.

ಟಿ20 ವಿಶ್ವಕಪ್: ಭಾರತದ ವನಿತೆಯರಿಗೆ ಶರಣಾದ ಪಾಕಿಸ್ತಾನ • ಹರ್ಮನ್, ರಿಚಾ ಮಿಂಚು

ಸ್ಮೃತಿ ಬ್ಯಾಟಿಂಗ್ ಸೊಬಗು; ದೀಪ್ತಿ ಸ್ಪಿನ್ ಬೆರಗು

ಭಾರತ ತಂಡದ ಆಟಗಾರ್ತಿಯರ ಸಂಭ್ರಮ ಎಎಫ್‌ಪಿ ಚಿತ್ರ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ವನಿತೆಯರು ಪಾಕಿಸ್ತಾನ ತಂಡದ ಎದುರು ತಮ್ಮ ಪ್ರಾಬಲ್ಯವನ್ನು ಮುಂದುವರಿಸಿದರು.

ಭಾನುವಾರ ನಡೆದ ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಸ್ಮೃತಿ ಮಂದಾನ ಅವರ ಅಮೋಘ ಅರ್ಧಶತಕ ಮತ್ತು ಸ್ಪಿನ್ನರ್ ದೀಪ್ತಿ ಶರ್ಮಾ ಅವರ ಕೈಚಳಕದ ಬಲದಿಂದ ಪಾಕ್ ತಂಡವನ್ನು 64 ರನ್‌ಗಳಿಂದ ಮಣಿಸಿತು. ಇದರೊಂದಿಗೆ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ತಂಡವು ಆರಂಭದಲ್ಲಿ ಆಘಾತ ಅನುಭವಿಸಿತ್ತು. ಕೇವಲ 18 ರನ್‌ಗಳಿಗೆ ಎರಡು ವಿಕೆಟ್ ಪತನವಾಗಿದ್ದವು. ಶಫಾಲಿ ವರ್ಮಾ (6ರನ್) ಮತ್ತು ಜೆಮಿಮಾ ರಾಡ್ರಿಗಸ್ (1 ರನ್) ಅವರು ಪೆವಿಲಿಯನ್‌ಗೆ ಮರಳಿದ್ದರು. ಈ ಹಂತದಲ್ಲಿ ಸ್ಮೃತಿ ಅವರೊಂದಿಗೆ ಸೇರಿಕೊಂಡ ಹರ್ಮನ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 91 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 170 ರನ್ ಗಳಿಸಿತು. ಈ ಗುರಿಯನ್ನು ಬೆನ್ನಟ್ಟಿದ ಪಾಕಿಸ್ತಾನ ತಂಡವು 17 ಓವರ್‌ಗಳಲ್ಲಿ 106 ರನ್‌ಗಳಿಗೆ ಆಲೌಟ್ ಆಯಿತು.

ಮುನೀಬಾ ಅಲಿ ಮತ್ತು ಗುಲ್ ಫಿರೋಜಾ ಅವರು ಮೊದಲ ವಿಕೆಟ್‌ಗೆ 38 ರನ್ ಗಳಿಸಿ ಉತ್ತಮ ಆರಂಭ ನೀಡಿದ್ದರು. ಆದರೆ ದೀಪ್ತಿ (4–0–10–5) ಅವರ ಮೋಡಿಯ ಮುಂದೆ ಪಾಕ್ ತಂಡವು ಕುಸಿಯಿತು. ಇನ್ನೊಂದು ಬದಿಯಿಂದ ಶ್ರೀಚರಣಿ (21ಕ್ಕೆ3) ಕೂಡ ಮಿಂಚಿದರು. ಸಾಂದರ್ಭಿಕ ಬೌಲರ್ ಶಫಾಲಿ ಕೂಡ ಒಂದು ವಿಕೆಟ್ ಗಳಿಸಿದರು.

ಸ್ಮೃತಿ–ಹರ್ಮನ್ ಜೊತೆಯಾಟ: ಕಳೆದ ಕೆಲವು ಪಂದ್ಯಗಳಲ್ಲಿ ಭಾರತದ ಆರಂಭಿಕ ಜೋಡಿ ಶಫಾಲಿ ಮತ್ತು ಸ್ಮೃತಿ ಅವರು ಉತ್ತಮವಾಗಿ ಆಡಿಲ್ಲ. ಆ ವೈಫಲ್ಯ ಈ ಪಂದ್ಯದಲ್ಲಿಯೂ ಮುಂದುವರಿಯಿತು. ಮೊದಲ ಓವರ್‌ನಲ್ಲಿಯೇ ಸಾದಿಯಾ ಇಕ್ಬಾಲ್ ಎಸೆತವನ್ನು ಆಡುವ ಭರದಲ್ಲಿ ಶಫಾಲಿ ಅವರು ಮುನೀಬಾಗೆ ಕ್ಯಾಚ್ ಆದರು.

ಆದರೆ ಸ್ಮೃತಿ ಒಳ್ಳೆಯ ಲಯದಲ್ಲಿದ್ದರು. ಕ್ರೀಸ್‌ಗೆ ಬಂದ ಜೆಮಿಮಾ ಆಟಕ್ಕೆ ಕುದುರಿಕೊಳ್ಳಲು ಕಷ್ಟಪಟ್ಟರು. ಅವರು ಏಕಾಗ್ರತೆ ಸಾಧಿಸುವ ಪ್ರಯತ್ನದಲ್ಲಿ ತಾಸ್ಮಿಯಾ ರುಬಾಬ್ ಅವರ ಫುಲ್ಲರ್ ಎಸೆತವನ್ನು ಲೆಗ್‌ಸೈಡ್ ಆಡಿದರು. ಆದರೆ ಬ್ಯಾಟ್ ಮೇಲಿನ ಅಂಚಿಗೆ ಅಪ್ಪಳಿಸಿದ ಚೆಂಡು ನಥಾಲಿಯಾ ಪರ್ವೇಜ್ ಕೈಸೇರಿತು. ಪವರ್‌ಪ್ಲೇ ಅಂತ್ಯಕ್ಕೂ ಮುನ್ನವೇ ಎರಡು ವಿಕೆಟ್ ಉರುಳಿದವು.

ಸ್ಮೃತಿ ಜೊತೆಗೂಡಿದ ಹರ್ಮನ್ ವಿಕೆಟ್ ಪತನಕ್ಕೆ ತಡೆಯೊಡ್ಡಿದರು. ಇಬ್ಬರೂ ಎಚ್ಚರಿಕೆಯಿಂದ ರನ್ ಕಲೆಹಾಕಿದರು. ಎಡಗೈ ಬ್ಯಾಟರ್ ಸ್ಮೃತಿ 9 ಬೌಂಡರಿ ಮತ್ತು 2 ಸಿಕ್ಸರ್ ಸಿಡಿಸಿದರು. ಹರ್ಮನ್ ತಾಳ್ಮೆಯ ಆಟವಾಡಿದರು. ನಾಲ್ಕು ಬೌಂಡರಿ ಮಾತ್ರ ಗಳಿಸಿದರು. 14ನೇ ಓವರ್‌ನವರೆಗೂ ಅವರ ಜೊತೆಯಾಟ ಮುಂದುವರಿಯಿತು. ರಮೀನ್ ಶಮೀಮ್ ಅವರ ಬೌಲಿಂಗ್‌ನಲ್ಲಿ ಸ್ಮೃತಿ ಔಟಾದರು. ಜೊತೆಯಾಟ ಮುರಿಯಿತು. ಭಾರತಿ ಫೂಲ್ಮಾಲಿ ಕೂಡ ಬೇಗ ನಿರ್ಗಮಿಸಿದರು. ಹರ್ಮನ್‌ಪ್ರೀತ್ ಅವರೂ ಅರ್ಧಶತಕ ಪೂರೈಸಲು ಸಾಧ್ಯವಾಗಲಿಲ್ಲ.

ರಿಚಾ ಘೋಷ್ 17 ಎಸೆತಗಳಲ್ಲಿ 34 ರನ್ ಗಳಿಸಿ ತಂಡದ ಮೊತ್ತ ಹೆಚ್ಚಲು ಉಪಯುಕ್ತ ಕಾಣಿಕೆ ನೀಡಿದರು. 200ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ ಅವರು 5 ಬೌಂಡರಿ ಮತ್ತು 1 ಸಿಕ್ಸರ್ ಹೊಡೆದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 170 (ಸ್ಮೃತಿ ಮಂದಾನ 68, ಹರ್ಮನ್‌ಪ್ರೀತ್ ಕೌರ್ 36, ರಿಚಾ ಘೋಷ್ 34, ದೀಪ್ತಿ ಶರ್ಮಾ ಔಟಾಗದೇ 12; ಸಾದಿಯಾ ಇಕ್ಬಾಲ್ 41ಕ್ಕೆ2, ಫಾತೀಮಾ ಸನಾ 33ಕ್ಕೆ2). ಪಾಕಿಸ್ತಾನ: 17 ಓವರ್‌ಗಳಲ್ಲಿ 106 (ಮುನೀಬಾ ಅಲಿ 41, ಗುಲ್ ಫಿರೋಜಾ 12, ಆಯೆಷಾ ಜಫರ್ 12, ಅಲಿಯಾಝ್ಝಾ ರಿಯಾಝ್ 18; ದೀಪ್ತಿ ಶರ್ಮಾ 10ಕ್ಕೆ, ಶ್ರೀಚರಣಿ 21ಕ್ಕೆ3, ಶಫಾಲಿ ವರ್ಮಾ 22ಕ್ಕೆ1).

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಹಸ್ತಲಾಘವ ಮಾಡದ ಆಟಗಾರ್ತಿಯರು

ಭಾರತ ಮತ್ತು ಪಾಕಿಸ್ತಾನ ತಂಡಗಳ ಆಟಗಾರ್ತಿಯರು ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿಯೂ ಹಸ್ತಲಾಘವ ಮಾಡಲಿಲ್ಲ.

ಪಹಲ್ಗಾಮ್‌ನಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿಯನ್ನು ಖಂಡಿಸಿ ಹೋದ ವರ್ಷ ನಡೆದಿದ್ದ ಕ್ರಿಕೆಟ್ ಟೂರ್ನಿಗಳಲ್ಲಿ ಭಾರತ ತಂಡವು ಪಾಕ್ ಆಟಗಾರರ ಹಸ್ತಲಾಘವ ಮಾಡಿರಲಿಲ್ಲ. ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡಗಳು ಪಾಕ್ ಎದುರಾದ ಪಂದ್ಯಗಳಲ್ಲಿ ಈ ನೀತಿ ಅನುಸರಿಸಿದ್ದವು. ಇದೀಗ ಅದೇ ನೀತಿಯನ್ನು ಹರ್ಮನ್ ಬಳಗವು ಮುಂದುವರಿಸಿದೆ.

ಭಾನುವಾರ ಟಾಸ್ ಸಂದರ್ಭದಲ್ಲಿ ನಾಯಕಿ ಹರ್ಮನ್‌ಪ್ರೀತ್ ಅವರು ಪಾಕ್ ನಾಯಕಿ ಫಾತೀಮಾ ಸನಾ ಅವರ ಕೈಕುಲುಕಲಿಲ್ಲ.

ಫಿರ್ದೋಸ್ ಬ್ಯಾಟಿಂಗ್: ಬಾಂಗ್ಲಾ ಗೆಲುವು

ಫಿರ್ದೋಸ್ ಎಎಫ್‌ಪಿ ಚಿತ್ರ

ಬರ್ಮಿಂಗ್‌ಹ್ಯಾಮ್: ಜೂವೆರಿಯಾ ಫಿರ್ದೋಸ್ (50; 33ಎ, 4X7, 6X2) ಅವರ ಅರ್ಧಶತಕದ ಬಲದಿಂದ ಬಾಂಗ್ಲಾದೇಶ ತಂಡವು ಟಿ20 ಕ್ರಿಕೆಟ್ ಮಹಿಳಾ ವಿಶ್ವಕಪ್ ಪಂದ್ಯದಲ್ಲಿ ನೆದರ್ಲೆಂಡ್ಸ್ ಎದುರು 6 ವಿಕೆಟ್‌ಗಳಿಂದ ಜಯಿಸಿತು.

ಎಜ್‌ಬಾಸ್ಟನ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ ತಂಡವು ಬಾಬೆಟ್ ಡಿ ಲೀಡ್ (50 ರನ್) ಬ್ಯಾಟಿಂಗ್ ಬಲದಿಂದ 8 ವಿಕೆಟ್‌ಗಳಿಗೆ 139 ರನ್ ಗಳಿಸಿತು. ಅದಕ್ಕುತ್ತರವಾಗಿ ಬಾಂಗ್ಲಾ ತಂಡವು 19.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 141 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ನೆದರ್ಲೆಂಡ್ಸ್: 20 ಓವರ್‌ಗಳಲ್ಲಿ 8ಕ್ಕೆ139 (ಬಾಬೆಟ್ ಡಿ ಲೀಡ್ 50, ಹೀದರ್ ಸೀಗರ್ಸ್ 16, ಮರೂಫಾ ಅಖ್ತರ್ 31ಕ್ಕೆ2) ಬಾಂಗ್ಲಾದೇಶ: 19.1 ಓವರ್‌ಗಳಲ್ಲಿ 4ಕ್ಕೆ141 (ಜೂವೆರಿಯಾ ಫಿರ್ದೋಸ್ 50, ದಿಲಾರಾ ಅಖ್ತರ್ 26, ಶರ್ಮಿನ್ ಅಖ್ತರ್ ಔಟಾಗದೇ 37, ಶೊರ್ನಾ ಅಖ್ತರ್ ಔಟಾಗದೇ 18, ಕ್ಯಾರೊಲಿನ್ ಡಿ ಲೇಂಗ್ 27ಕ್ಕೆ2) ಫಲಿತಾಂಶ: ಬಾಂಗ್ಲಾದೇಶಕ್ಕೆ 6 ವಿಕೆಟ್‌ಗಳಿಗೆ ಜಯ.

ಕಿವೀಸ್‌ಗೆ ವಿಂಡೀಸ್ ಆಘಾತ

ಮ್ಯಾಂಚೆಸ್ಟರ್ (ಎಪಿ): ಶೆಮೇನ್ ಕ್ಯಾಂಪ್‌ಬೆಲ್ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ವೆಸ್ಟ್ ಇಂಡೀಸ್ ತಂಡವು ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಎದುರು ಜಯಭೇರಿ ಬಾರಿಸಿತು.

ಶನಿವಾರ ತಡರಾತ್ರಿ (ಭಾರತೀಯ ಕಾಲಮಾನ) ನಡೆದ ಬಿ ಗುಂಪಿನ ಪಂದ್ಯದಲ್ಲಿ ವಿಂಡೀಸ್ ವನಿತೆಯರು 7 ವಿಕೆಟ್‌ಗಳಿಂದ ಗೆದ್ದರು.

ಟಾಸ್ ಗೆದ್ದ ವಿಂಡೀಸ್ ಫೀಲ್ಡಿಂಗ್ ಮಾಡಿತು. ನ್ಯೂಜಿಲೆಂಡ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 162 ರನ್ ಗಳಿಸಿತು. ಅದಕ್ಕುತ್ತರವಾಗಿ ವೆಸ್ಟ್ ಇಂಡಿಸ್ ತಂಡವು 19.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 163 ರನ್ ಗಳಿಸಿತು. ಹೇಯಲಿ ಮ್ಯಾಥ್ಯೂಸ್ (48; 37ಎ) ಮತ್ತು ಶೆಮೇನ್ (ಔಟಾಗದೇ90; 62ಎ, 4X7, 6X3) ತಂಡದ ಗೆಲುವಿಗೆ ಬಲ ತುಂಬಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 6ಕ್ಕೆ162 (ಇಸಾಬೆಲಾ ಗೇಝ್ 39, ಸೋಫಿ ಡಿವೈನ್ 22, ಬ್ರೂಕ್ ಹಾಲಿಡೇ 40, ಮ್ಯಾಡಿ ಗ್ರೀನ್ ಔಟಾಗದೇ 35, ಅಲಿಯಾ ಅಲೈನ್ 27ಕ್ಕೆ4) ವೆಸ್ಟ್ ಇಂಡೀಸ್: 19.5 ಓವರ್‌ಗಳಲ್ಲಿ 3ಕ್ಕೆ163 (ಹೈಯಲಿ ಮ್ಯಾಥ್ಯೂಸ್ 48, ಶೆಮೇನ್ ಕ್ಯಾಂಪ್‌ಬೆಲ್ ಔಟಾಗದೇ 90, ಜೆಸ್ ಕೆರ್ 17ಕ್ಕೆ2)

ಫಲಿತಾಂಶ: ವೆಸ್ಟ್ ಇಂಡೀಸ್ ತಂಡಕ್ಕೆ 7 ವಿಕೆಟ್ ಜಯ.

ಕರುಣ್‌ಗೆ ಕೋಸ್ಟಲ್ ಕಿಂಗ್ಸ್ ನಾಯಕತ್ವ

ಪ್ರಜಾವಾಣಿ ವಾರ್ತೆ

ಮಂಗಳೂರು: ಜೂನ್ 20ರಿಂದ ನಡೆಯಲಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡದ ನಾಯಕತ್ವವನ್ನು ಬ್ಯಾಟರ್ ಕರುಣ್ ನಾಯರ್ ಅವರಿಗೆ ವಹಿಸಲಾಗಿದೆ. ಉಪನಾಯಕನಾಗಿ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಸೋಮವಾರ ಇಲ್ಲಿ ಆಯೋಜಿಸಿದ್ದ ಜರ್ಸಿ ಬಿಡುಗಡೆ ಕಾರ್ಯಕ್ರಮದಲ್ಲಿ ತಂಡದ ನಾಯಕ ಮತ್ತು ಉಪನಾಯಕನನ್ನು ಘೋಷಿಸಲಾಯಿತು.

ಮಂಗಳೂರು ಡ್ರ್ಯಾಗನ್ಸ್ ತಂಡ ಕಳೆದ ಬಾರಿ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು. ಶ್ರೇಯಸ್ ನೇತೃತ್ವದ ಮಂಗಳೂರು ತಂಡ ಫೈನಲ್‌ನಲ್ಲಿ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಜಯ ಸಾಧಿಸಿತ್ತು. ಈ ಬಾರಿ ಕೋಸ್ಟಲ್ ಕಿಂಗ್ಸ್‌ನ ಮೊದಲ ಪಂದ್ಯ ಜೂನ್ 21ರಂದು ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಮೈಸೂರಿನಲ್ಲಿ ನಡೆಯಲಿದೆ.

ಜರ್ಸಿ ಬಿಡುಗಡೆ ಕಾರ್ಯಕ್ರಮದಲ್ಲಿ ಕೆಎಸ್‌ಸಿಎ ಗೌರವ ಖಜಾಂಚಿ ಬಿ.ಎನ್ ಮಧುಕರ್, ವ್ಯವಸ್ಥಾಪನಾ ಸಮಿತಿ ಸದಸ್ಯ ಅವಿನಾಶ್ ವೈದ್ಯ, ಮಂಗಳೂರು ವಲಯದ ಅಧ್ಯಕ್ಷ ಡಾ.ಶ್ರೀಕಾಂತ್ ರೈ, ನಟ ರೂಪೇಶ್ ಶೆಟ್ಟಿ, ನಾಯಕ ಕರುಣ್ ನಾಯರ್ ಮತ್ತು ಉಪನಾಯಕ ಶ್ರೇಯಸ್ ಹಾಗೂ ಮಾನ್ಯತಾ ಡೆವಲಪರ್ಸ್ ಮಾಲೀಕ ವಿನೋದ್ ನಾಯ್ಡು ಪಾಲ್ಗೊಂಡಿದ್ದರು.

ಪ್ರೊ ಲೀಗ್ ಹಾಕಿ: ನೆದರ್ಲೆಂಡ್ಸ್ ಎದುರು ಭಾರತಕ್ಕೆ ಸೋಲು

ರಾಟರ್‌ಡ್ಯಾಮ್ (ಪಿಟಿಐ): ಅನುಭವಿ ಮಿಡ್‌ಫೀಲ್ಡರ್ ಮನ್‌ಪ್ರೀತ್ ಸಿಂಗ್ ಅವರು ಭಾರತ ತಂಡದ ಪರ ದಾಖಲೆಯ 412ನೇ ಪಂದ್ಯ ಆಡಿದರು. ಆದರೆ, ಹರ್ಮನ್‌ಪ್ರೀತ್ ಸಿಂಗ್ ಪಡೆಯು ಎಫ್‌ಐಎಚ್ ಪುರುಷರ ಪ್ರೊ ಲೀಗ್ ಹಾಕಿ ಟೂರ್ನಿಯ ಯುರೋಪ್ ಲೆಗ್‌ನ ಪಂದ್ಯದಲ್ಲಿ ಭಾನುವಾರ 2–3ರಿಂದ ಆತಿಥೇಯ ನೆದರ್ಲೆಂಡ್ಸ್‌ಗೆ ಮಣಿಯಿತು.

ಮನ್‌ಪ್ರೀತ್ ಸಿಂಗ್

ನೆದರ್ಲೆಂಡ್ಸ್ ತಂಡದ ಮೈಲ್ಸ್ ಬುಕೆನ್ಸ್ (3ನೇ ನಿ.), ಕೋಯೆನ್ ಬೈಜೆನ್ (23ನೇ ನಿ.) ಹಾಗೂ ಟಿಮ್‌ಜೆನ್ ರೆಯೆಂಗಾ (40ನೇ ನಿ.) ತಲಾ ಒಂದು ಗೋಲು ಹೊಡೆದು ಗೆಲುವಿನಲ್ಲಿ ಮಿಂಚಿದರು. ಭಾರತ ತಂಡದ ದಿಲ್‌ಪ್ರೀತ್ ಸಿಂಗ್ (9ನೇ ನಿ.) ಹಾಗೂ ಸುಖಜೀತ್ ಸಿಂಗ್ (33ನೇ ನಿ.) ತಲಾ ಒಂದು ಗೋಲು ಗಳಿಸಿ, ನಿಕಟ ಪೈಪೋಟಿ ಒಡ್ಡಿದರು.

'ಹಾಕಿ ಇಂಡಿಯಾ'ದ ಅಧ್ಯಕ್ಷರೂ ಆಗಿರುವ ದಿಲೀಪ್ ಟಿರ್ಕೆ ಅವರು ರಾಷ್ಟ್ರೀಯ ತಂಡದ ಪರ 412 ಪಂದ್ಯಗಳಲ್ಲಿ ಆಡಿದ್ದಾರೆ. ಮನ್‌ಪ್ರೀತ್ ಅವರು ಇದೀಗ ಆ ದಾಖಲೆಯನ್ನು ಸರಿಗಟ್ಟಿದರು.

ನ್ಯೂ ಲಕ್ಕಿ ಸ್ಟಾರ್ ಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ನ್ಯೂ ಲಕ್ಕಿ ಸ್ಟಾರ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ 4–3ರಿಂದ ಆ್ಯಕ್ಟಿವ್ ಯೂನಿಯನ್ ಎಫ್‌ಸಿ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ನ್ಯೂ ಲಕ್ಕಿ ತಂಡದ ಉದಯ್ ಕುಮಾರ್ ಎ. (6ನೇ ಹಾಗೂ 40ನೇ ನಿ.) ಅವಳಿ ಗೋಲು ಹೊಡೆದರೆ, ಈಥನ್ ಎ. ಜೇಕಬ್ (17ನೇ ನಿ.) ಹಾಗೂ ನಿಯಾನ್ ಥಂಪನ್ (24ನೇ ನಿ.) ತಲಾ ಒಂದು ಗೋಲು ಗಳಿಸಿದರು.

ಆ್ಯಕ್ಟಿವ್ ಯೂನಿಯನ್ ತಂಡದ ರೋಹನ್ ಭುಜೇಲ್ (15ನೇ ಹಾಗೂ 20ನೇ ನಿ.) ಹಾಗೂ ಲಿಖಾ ಸ್ಕೈ (42ನೇ ನಿ.) ಹೋರಾಟ ತೋರಿದರು.

ಇತರ ಪಂದ್ಯಗಳಲ್ಲಿ ಜ್ಯುಪಿಟರ್ ಎಫ್‌ಸಿ ತಂಡವು 3–1 ಗೋಲುಗಳಿಂದ ಬೆಂಗಳೂರು ಬಾಯ್ಸ್ ಎಫ್‌ಸಿ ವಿರುದ್ಧ ಹಾಗೂ ವಿನಾಯಕ ಎಫ್‌ಸಿ ತಂಡವು 1–0ಯಿಂದ ತಿಲಕ್ ಮೆಮೊರಿಯಲ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿದವು.

ಧೀರಜ್‌ಗೆ ಸ್ವರ್ಣ 'ಡಬಲ್'

ಆರ್ಚರಿ: ರಿಕರ್ವ್ ಮಿಶ್ರ ವಿಭಾಗದಲ್ಲಿ ಕುಂಕುಮ್ ಮಿಂಚು

ಭಾರತದ ಕುಂಕುಮ್ ಮೊಹಾದ್ ಮತ್ತು ಧೀರಜ್ ಬೊಮ್ಮದೇವರ

ಅಂತಾಲಿಯಾ (ಪಿಟಿಐ): ಭಾರತದ ಧೀರಜ್ ಬೊಮ್ಮದೇವರ ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಆರ್ಚರಿ ಸ್ಟೇಜ್ 3 ಸ್ಪರ್ಧೆಯಲ್ಲಿ 'ಚಿನ್ನ ಡಬಲ್' ಸಾಧನೆ ಮಾಡಿದರು.

ಇದೇ ಮೊದಲ ಬಾರಿ ವಿಶ್ವ ಆರ್ಚರಿಯ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದರು. ಅಲ್ಲದೇ ಮಿಶ್ರ ರಿಕರ್ವ್ ತಂಡ ವಿಭಾಗದಲ್ಲಿ 17 ವರ್ಷ ವಯಸ್ಸಿನ ಕುಂಕುಮ್ ಮೊಹದ್ ಅವರೊಂದಿಗೆ ಬಂಗಾರದ ಸಾಧನೆ ಮಾಡಿದರು.

ಭಾನುವಾರ ನಡೆದ ಪುರುಷರ ವೈಯಕ್ತಿಕ ವಿಭಾಗದಲ್ಲಿ 7–3ರಿಂದ ದಕ್ಷಿಣ ಕೊರಿಯಾದ ವಿರುದ್ಧ ಧೀರಜ್ ಜಯಿಸಿದರು. ಮಿಶ್ರ ರಿಕರ್ವ್ ತಂಡ ವಿಭಾಗದಲ್ಲಿ 5-1ರಿಂದ ದಕ್ಷಿಣ ಕೊರಿಯಾದ ಕಿಮ್ ಜೆ ಡಿಯೊಕ್ ಮತ್ತು ಒಹ ಯೆ ಜಿನ್ ವಿರುದ್ಧ ಜಯಿಸಿತು.

ಸ್ಪರ್ಧೆಯುದ್ದಕ್ಕೂ ಉತ್ತಮ ನಿಖರ ಗುರಿ ಕಟ್ಟುವಲ್ಲಿ ಧೀರಜ್ ಮತ್ತು ಕುಂಕುಮ್ ಯಶಸ್ವಿಯಾದರು. ಅಪಾರ ಏಕಾಗ್ರತೆ ಮತ್ತು ತಾಳ್ಮೆಯಿಂದ ಹೊಂದಾಣಿಕೆಯ ಮೂಲಕ ಪಾಯಿಂಟ್ಸ್ ಕಲೆಹಾಕಿದರು.

17 ವರ್ಷದ ಕುಂಕುಮ್ ಅವರು ತಮ್ಮ ವಯಸ್ಸಿಗೆ ಮೀರಿದ ಪರಿಪಕ್ವತೆ ತೋರಿಸಿದರು. ಎದುರಾಳಿಯನ್ನು ಮಣಿಸುವಲ್ಲಿ ಚಾಣಾಕ್ಷತೆ ಮೆರೆದರು.

'ಪೂರ್ತಿ ಆತ್ಮವಿಶ್ವಾಸದಿಂದ ಇದ್ದೆ. ಪೂರ್ಣ ಪ್ರಕ್ರಿಯೆ ಮೇಲೆ ನನ್ನ ಗಮನ ಇತ್ತು. ಎದುರಾಳಿ ಎಂಬುದರ ಬಗ್ಗೆ ಯೋಚನೆ ಇರಲಿಲ್ಲ. ಈ ಚಿನ್ನದ ಪದಕವು ಆತ್ಮಬಲವನ್ನು ವೃದ್ಧಿಸಿದೆ' ಎಂದು ಕುಂಕುಮ್ ಹೇಳಿದರು.

ಹೋದ ತಿಂಗಳು ಶಾಂಘೈನಲ್ಲಿ ನಡೆದಿದ್ದ ವಿಶ್ವಕಪ್ ಆರ್ಚರಿಯಲ್ಲಿ ಕುಂಕುಮ್, ದೀಪಿಕಾ ಕುಮಾರಿ ಮತ್ತು ಅಂಕಿತಾ ಭಕತ್ ಅವರು ಇದ್ದ ತಂಡವು ಸೆಮಿಫೈನಲ್‌ನಲ್ಲಿ 10 ಸಲ ಒಲಿಂಪಿಕ್ಸ್ ಚಾಂಪಿಯನ್ ಆಗಿದ್ದ ಕೊರಿಯಾ ತಂಡವನ್ನು ಮಣಿಸಿತ್ತು. ಫೈನಲ್‌ನಲ್ಲಿ ಚಿನ್ನ ಗೆದ್ದಿತ್ತು. ಇದೇ ವರ್ಷ ಅಂತರರಾಷ್ಟ್ರೀಯ ಆರ್ಚರಿಗೆ ಪದಾರ್ಪಣೆ ಮಾಡಿರುವ ಕುಂಕುಮ್ ಅವರಿಗೆ ವಿಶ್ವ ಕೂಟಗಳಲ್ಲಿ ಎರಡನೇ ಚಿನ್ನ ಇದಾಗಿದೆ.

24 ವರ್ಷದ ಧೀರಜ್ ಅವರು ಕೂಡ ಸಮಚಿತ್ತದ ಪ್ರದರ್ಶನ ನೀಡಿದರು. 2024ರ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಚಿನ್ನ ಜಯಿಸಿದ್ದ ಕಿಮ್ ಅವರ ಸ್ಪರ್ಧೆಯನ್ನು ಧೀರಜ್ ಮೆಟ್ಟಿ ನಿಂತರು.

ವೈಯಕ್ತಿಕ ವಿಭಾಗದಲ್ಲಿ ಧೀರಜ್ ಅವರು ಪ್ಯಾರಿಸ್ ಒಲಿಂಪಿಕ್ ಕೂಟದ ಕಂಚಿನ ಪದಕ ವಿಜೇತರಾಗಿದ್ದ ಎದುರಾಳಿಯನ್ನು ಮಣಿಸಿದರು.

'ದಾಖಲೆ'ಯ ಬೆಳ್ಳಿ ಗೆದ್ದ ಪಾರುಲ್ ಚೌಧರಿ

ನವದೆಹಲಿ (ಪಿಟಿಐ): ಭಾರತದ ಪಾರುಲ್ ಚೌಧರಿ ಅವರು ಫ್ರಾನ್ಸ್‌ನ ನೀಸ್ ನಗರದಲ್ಲಿ ಶನಿವಾರ ನಡೆದ 'ಮೀಟಿಂಗ್ ನೀಕಾಯಾ 2026' ಕೂಟದ ಮಹಿಳೆಯರ 5,000 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಜಯಿಸಿದರು. 15 ನಿಮಿಷ, 04.26 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು ಸ್ವಲ್ಪದಲ್ಲಿಯೇ ಚಿನ್ನದ ಪದಕ ತಪ್ಪಿಸಿಕೊಂಡರು. ಆದರೆ, ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ಪಾರುಲ್ ಚೌಧರಿ

ಇಥಿಯೋಪಿಯಾದ ಬೆರೆಕಾ ಸೆನಿಯಾ ಮೊಹಮ್ಮದ್ (15 ನಿ., 03.85 ಸೆ.) ಕೂಟ ದಾಖಲೆಯೊಂದಿಗೆ ಸ್ವರ್ಣಕ್ಕೆ ಕೊರಳೊಡ್ಡಿದರು. ಆತಿಥೇಯ ರಾಷ್ಟ್ರದ ಅಲೆಸಿಯಾ ಝೂಬೊ (15 ನಿ., 16.83 ಸೆ.) ಕಂಚಿನ ಪದಕ ತಮ್ಮದಾಗಿಸಿಕೊಂಡರು. ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಟೂರ್ ಕಂಚು ಮಟ್ಟದ ಕೂಟವು ಈ ಬಾರಿ ಸ್ವರ್ಣ ಮಹೋತ್ಸವ ಆಚರಿಸಿಕೊಂಡಿತು.

ಈ ಸಾಧನೆಯೊಂದಿಗೆ ಪಾರುಲ್ ಅವರು ಜಪಾನ್‌ನ ಐಚಿ–ನಗೊಯಾ ನಗರದಲ್ಲಿ ಸೆಪ್ಟೆಂಬರ್– ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೂ ಅರ್ಹತೆ ಪಡೆದುಕೊಂಡರು. ಚೀನಾದ ಹ್ಯಾಂಗ್‌ಝೌನಲ್ಲಿ 2022ರಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಅವರು ಚಿನ್ನ ಜಯಿಸಿದ್ದರು.

ಉತ್ತರ ಪ್ರದೇಶದ 31 ವರ್ಷ ವಯಸ್ಸಿನ ಓಟಗಾರ್ತಿ ಮಹಿಳೆಯರ 3,000 ಮೀ. ಸ್ಟೀಪಲ್‌ಚೇಸ್‌ನಲ್ಲೂ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ.

ಹರ್ಡಲ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ ಉತ್ತಮಪಡಿಸಿಕೊಂಡ ತೇಜಸ್: ಮಹಾರಾಷ್ಟ್ರದ ಅಥ್ಲೀಟ್ ತೇಜಸ್ ಶಿರ್ಸೆ ಅವರು ಲೂಧಿಯಾನಾದಲ್ಲಿ ನಡೆದ ಇಂಡಿಯನ್ ಅಥ್ಲೆಟಿಕ್ಸ್ ಸರಣಿ 9ರಲ್ಲಿ ಪುರುಷರ 110 ಮೀ. ಹರ್ಡಲ್ಸ್‌ನಲ್ಲಿ ಶನಿವಾರ 13.27 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಅದರೊಂದಿಗೆ, ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.



ತೇಜಸ್ ಶಿರ್ಸೆ

ರಿಲಯನ್ಸ್ ಫೌಂಡೇಶನ್ ಅನ್ನು ಪ್ರತಿನಿಧಿಸಿದ್ದ 24 ವರ್ಷ ವಯಸ್ಸಿನ ತೇಜಸ್ ಅವರು ಕಾಮನ್‌ವೆಲ್ತ್ ಗೇಮ್ಸ್ ಕೂಟಕ್ಕೂ ಅರ್ಹತೆ ಪಡೆದುಕೊಂಡರು. ಅವರು 2024ರಲ್ಲಿ 13.41 ಸೆಕೆಂಡುಗಳಲ್ಲಿ ಗುರಿ ತಲುಪಿ, ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು.